

ಡ್ರ್ಯಾಗನ್ಸ್ ಮಹಾಗೋಡೆಯೊಳಗೆ...

ಎಂ. ವೆಂಕಟಸ್ವಾಮಿ



ಪ್ರ ವಾ ಸ ಕ ಥ ನ



ಡ್ರ್ಯಾಗನ್ಸ್ ಮಹಾಗೋಡೆಯೊಳಗೆ

(ಚೀನಾ ಪ್ರವಾಸ ಕಥನ)

ಎಂ. ವೆಂಕಟಸ್ವಾಮಿ

JAGRUTHI PRINTERS

ಜಾಗೃತಿ ಪ್ರಿಂಟರ್ಸ್

56/i-6, ನರಸಿಂಹಯ್ಯ ಗಾರ್ಡನ್, ಕೊಟ್ಟಿಗೆಪಾಳ್ಯ,
ಮಾಗಡಿ ಮುಖ್ಯರಸ್ತೆ, ಬೆಂಗಳೂರು-560 091.

"**DRAGONS MAHAGODEYOLAGE**" - A travelogue by **M. Venkataswamy**, published by **Nidasale P. Rajiv** on behalf of **Jagruthi Printers**, No.56/1-6, Narasimaiah Garden, Kottigepalya, Magadi Main Road, Bangalore-560 091.

First Edition : 2007 **Price : Rs. 90.00** **Pages : 184**

Paper Used : 70 GSM NS Maplitho

© ಲೇಖಕರದು

ಮೊದಲನೆಯ ಮುದ್ರಣ : 2007

ಪ್ರತಿಗಳು : 1000

ಬೆಲೆ : ರೂ. 90.00

ಮುಖಪುಟ : ಪುಂಡಲೀಕ ಕಲ್ಲಿಗನೂರು

ಗೌರವ ಸಂಪಾದಕರು : ನಿಡಸಾಲೆ ಪುಟ್ಟಸ್ವಾಮಯ್ಯ

ಪ್ರಕಾಶಕರು :
ಜಾಗೃತಿ ಪ್ರಿಂಟರ್ಸ್
56/1-6, ನರಸಿಂಹಯ್ಯ ಗಾರ್ಡನ್,
ಕೊಟ್ಟಿಗೆಪಾಳ್ಯ, ಮಾಗಡಿ ಮುಖ್ಯರಸ್ತೆ,
ಬೆಂಗಳೂರು-560 091.

ಅಕ್ಷರ ಜೋಡಣೆ ಮತ್ತು ಮುದ್ರಣ :
ಜಾಗೃತಿ ಪ್ರಿಂಟರ್ಸ್
56/1-6, ನರಸಿಂಹಯ್ಯ ಗಾರ್ಡನ್,
ಕೊಟ್ಟಿಗೆಪಾಳ್ಯ, ಮಾಗಡಿ ಮುಖ್ಯರಸ್ತೆ,
ಬೆಂಗಳೂರು-560 091.
ಫೋನ್ : 23583850

ಲೇಖಕರ ಪರಿಚಯ

ಭೂವಿಜ್ಞಾನಿ, ಕವಿ ಮತ್ತು ಲೇಖಕರಾಗಿ ಹೆಸರು ಮಾಡಿರುವ ಎಂ.ವೆಂಕಟಸ್ವಾಮಿ ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲೂಕಿನ ಬ್ಯಾಟರಾಯನಹಳ್ಳಿಯಲ್ಲಿ ನವೆಂಬರ್ 06, 1955ರಲ್ಲಿ ಜನಿಸಿದರು. ಇವರು ಪ್ರಪಂಚ ಪ್ರಖ್ಯಾತ ಕೋಲಾರ ಚಿನ್ನದ ಗಣಿಗಳ 'ಲಿಟ್ಲ್ ಇಂಗ್ಲೆಂಡ್', ಖ್ಯಾತಿ ಮತ್ತು ಚಿನ್ನದ ಗಣಿಗಳ ಕಾರ್ಮಿಕರ ಬವಣೆಗಳನ್ನು ಹತ್ತಿರದಿಂದ ನೋಡಿದವರು. ಬಿ.ಎಸ್ಸಿವರೆಗೂ ಕೆ.ಜಿ.ಎಫ್‌ನ ಪ್ರಥಮ ದರ್ಜೆ ಕಾಲೇಜಿನಲ್ಲಿ ಮತ್ತು ಎಂ.ಎಸ್ಸಿ (ಭೂವಿಜ್ಞಾನದಲ್ಲಿ) ಬೆಂಗಳೂರಿನಲ್ಲಿ ಮುಗಿಸಿ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಸಂಸ್ಥೆ (ಜಿ.ಎಸ್.ಐ) ಸೇರಿ ಭಾರತದಾದ್ಯಂತ ಓಡಾಡಿ ಅಪಾರ ಅನುಭವ ಪಡೆದಿದ್ದಾರೆ.

ಇದೇ ಹಿನ್ನಲೆಯಲ್ಲಿ ಚೀನಾ ದೇಶಕ್ಕೂ ಹೋಗಿ ಬಂದಿದ್ದಾರೆ. ಚೀನಾ ದೇಶದಲ್ಲಿ ಒಂದು ತಿಂಗಳ ಕಾಲ (2004ರಲ್ಲಿ) ಭೂರಾಸಾಯನಿಕ ತಂತ್ರಜ್ಞಾನದಲ್ಲಿ ತರಬೇತಿ ಪಡೆದು ಬಂದಿದ್ದಾರೆ. ಚೀನಾ ಪ್ರವಾಸದಲ್ಲಿ ಚೀನಾ ಮಹಾಗೋಡೆ, ಸ್ವರ್ಗ ದೇವಾಲಯ, ಫರ್‌ಬಿಡನ್ ಸಿಟಿ, ಪೆಕ್ಕಿಂಗ್ ಮ್ಯಾನ್ ಗುಹೆಗಳು, ಮಂಗೋಲಿಯಾದ ಗೋಬಿ ಮರಳುಗಾಡನ್ನು ನೋಡಿ ಬಂದಿದ್ದಾರೆ. ಇದೇ ಹಿನ್ನೆಲೆಯಲ್ಲಿ 'ಡ್ರ್ಯಾಗನ್ಸ್ ಮಹಾಗೋಡೆಯೊಳಗೆ' ಪ್ರವಾಸ ಕಥನ ಗೀತಾಂಜಲಿ ಪಬ್ಲಿಕೇಶನ್ಸ್ ಪ್ರಕಟಿಸಿದೆ. ಒಂದು ದಶಕಕ್ಕಿಂತ ಹೆಚ್ಚು ಕಾಲ ಉತ್ತರ ಮತ್ತು ಈಶಾನ್ಯ ಭಾರತದಲ್ಲಿ ಕೆಲಸ ನಿರ್ವಹಿಸಿದ ಅನುಭವಗಳ ಆಧಾರದ ಮೇಲೆ ರಚಿಸಿದ 'ಅಲೆಮಾರಿಯ ಹೆಜ್ಜೆಗಳು' ಎಂಬ ಪ್ರವಾಸ ಕಥನವನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿದೆ. ಅಸ್ಪೃಶ್ಯರು (ಒಂದು ವಿಶ್ಲೇಷಣೆ) ಎಂಬ ಸಂಶೋಧನಾ ಕೃತಿಯನ್ನು ನವಕರ್ನಾಟಕ ಪಬ್ಲಿಕೇಷನ್ಸ್ ಪ್ರಕಟಿಸಿದೆ.

ಕನ್ನಡದ ಹೆಸರಾಂತ ಪತ್ರಿಕೆಗಳಲ್ಲಿ ಇವರ ಹಲವಾರು ಕತೆ, ಕವನ, ಕಾದಂಬರಿ, ವೈಚಾರಿಕ, ವಿಮರ್ಶೆ ಮತ್ತು ವಿಜ್ಞಾನ ಲೇಖನಗಳು ಪ್ರಕಟವಾಗಿವೆ. ಕೆಲವು ಟಿ.ವಿ ಧಾರಾವಾಹಿಗಳಿಗೆ ಚಿತ್ರಕತೆ ಸಂಭಾಷಣೆ ಬರೆದಿದ್ದಾರೆ. ರೇಡಿಯೊ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕನ್ನಡ, ತೆಲುಗು, ತಮಿಳು, ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳನ್ನು ಬಲ್ಲವರಾಗಿದ್ದಾರೆ. ಕೋಲಾರ ಚಿನ್ನದ ಗಣಿಗಳ ಬಗ್ಗೆ (ಚಾರಿತ್ರಿಕ, ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ಅಧ್ಯಯನ) ಡಿ.ಲಿಟ್ ಸಂಶೋಧನೆ ಮಾಡಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮೇಘಾಲಯ ರಾಜಧಾನಿ ಶಿಲ್ಲಾಂಗ್‌ನಲ್ಲಿ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸಾಹಿತ್ಯ ಚಟುವಟಿಕೆಗಳು :

ಕವನ ಸಂಕಲನ: 1. ಬೆಟ್ಟಗುಡ್ಡಗಳ ಬೋಗುಣಿಯಲ್ಲಿ

ಪ್ರವಾಸ ಕಥನ: 2. ಅಲೆಮಾರಿಯ ಹೆಜ್ಜೆಗಳು, (ಕ.ಪು.ಪ್ರಾ.)

3. ಡ್ರ್ಯಾಗನ್ಸ್ ಮಹಾಗೋಡೆಯೊಳಗೆ, ಗೀತಾಂಜಲಿ ಪಬ್ಲಿಕೇಷನ್ಸ್

ವೈಚಾರಿಕ: 4. ಅಸ್ಪೃಶ್ಯರು (ಒಂದು ಪರಿಶೀಲನೆ), ನವಕರ್ನಾಟಕ ಪಬ್ಲಿಕೇಷನ್ಸ್

ಕಾದಂಬರಿಗಳು: 5. ರೂಪರಾಶಿಯರು

6. ಮೂಡಲ ಮರೆಯಲ್ಲಿ

7. ನೀ ನಡೆವ ದಾರಿಯಲ್ಲಿ

8. ಬೆಂಗಳೂರು–ವೈ2ಕೆ50 (ವೈಜ್ಞಾನಿಕ ಕಾದಂಬರಿ)

9. ಚಂದ್ರನಿಲ್ಲದ ಆಕಾಶ,

10. ಇನ್ನಿಲ್ಲದ ಪ್ರೀತಿ

11. ಭೂಮಿ ತೂಕದ ಹುಡುಗ

ವಿಜ್ಞಾನ: 12. ಸರ್ ಚಾರ್ಲ್ಸ್ ಲಯಲ್ (ಕ.ಪು.ಪ್ರಾ)

13. ಭೂಮಿ ಗುಡುಗಿದಾಗ (ಭೂಕಂಪನಗಳು)

14. ನಮ್ಮ ಹಿಮಾಲಯ

15. ಚಂಡಮಾರುತ

16. ಮಾನವ ಮಿದುಳೆಂಬ ಮಹಾ ಅದ್ಭುತ

17. ಸುನಾಮಿ ಸುತ್ತ (ಕ.ಸಾ.ಪ)

18. ಪೃಥ್ವಿಯ ಯಶೋಗಾಥೆ

19. ಕೋಲಾರ ಚಿನ್ನದ ಗಣಿಗಳು (ಚಾರಿತ್ರಿಕ, ಸಾಂಸ್ಕೃತಿಕ, ಸಾಮಾಜಿಕ – ಆರ್ಥಿಕ ಮತ್ತು ವೈಜ್ಞಾನಿಕ ಅಧ್ಯಯನ) ಡಿ.ಲಿಟ್, ಮಹಾ ಪ್ರಬಂಧ.

ಮೊಬೈಲ್ : 09436705594

ಈ–ಮೇಲ್ : alemarimvs@yahoo.com

ನಿಮ್ಮೊಂದಿಗೆ

ಮನುಷ್ಯನಿಗೆ ಅನುಭವಗಳು ಬಹಳ ಮುಖ್ಯ. 'ದೇಶ ನೋಡು ಕೋಶ ಓದು' ಎನ್ನುತ್ತದೆ ಒಂದು ನಾಣ್ಣುಡಿ. ಚೀನಾ ದೇಶದಲ್ಲಿ ಒಂದು ತಿಂಗಳ ಕಾಲ ಪ್ರವಾಸ ಮಾಡಿದ್ದರಿಂದ 'ಡ್ರ್ಯಾಗನ್ಸ್ ಮಹಾಗೋಡೆಯೊಳಗೆ' ಪ್ರವಾಸ ಕಥನ ಸೃಷ್ಟಿಯಾಗಿದೆ. ಇದರ ಕೆಲವು ಭಾಗಗಳು ಸುಧಾ ವಾರ ಪತ್ರಿಕೆಯಲ್ಲಿ ಮತ್ತು 'ಹಳದಿ ಜನರ ನಾಡಿನಲ್ಲಿ' ಎಂಬ ಶೀರ್ಷಿಕೆಯ ಕೆಳಗೆ ಅಗ್ನಿ ವಾರ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ನಾನು ಉದ್ಯೋಗ ನಿರ್ವಹಿಸುವ ಕೇಂದ್ರ ಸರಕಾರದ ಸಂಸ್ಥೆ 'ಜಿಯಾಲಜಿಕಲ್ ಸರ್ವೇ ಆಫ್ ಇಂಡಿಯಾ' ಇಡೀ ಭಾರತದಲ್ಲಿ ಓಡಾಡಲು ಅವಕಾಶ ಕೊಟ್ಟಿದ್ದಲ್ಲದೆ ನನ್ನನ್ನು ಚೀನಾ ದೇಶಕ್ಕೂ ಕಳುಹಿಸಿಕೊಟ್ಟಿದೆ. ಬರ್ಮಾ, ಪಾಕಿಸ್ಥಾನ, ನೇಪಾಳ ಮತ್ತು ಬಂಗ್ಲಾ ದೇಶಗಳ ಗಡಿಗಳ ಜೊತೆಗೆ ಇಡೀ ಹಿಮಾಲಯ ಮತ್ತು ಭಾರತದ ನೆಲದ ಮೇಲೆಲ್ಲ ಓಡಾಡಿ ಬರೆದಿದ್ದ ನನ್ನ ಅನುಭವಗಳ ಕಥನವನ್ನು ಕನ್ನಡ ಪುಸ್ತಕ ಪ್ರಾಧಿಕಾರ 'ಅಲೆಮಾರಿಯ ಹೆಜ್ಜೆಗಳು' ಹೆಸರಿನಲ್ಲಿ ಪ್ರಕಟಿಸಿತ್ತು.

ಪ್ರಪಂಚದಲ್ಲಿ ಚೀನಾ ದೇಶಕ್ಕೆ ಒಂದು ವಿಶೇಷ ಪರಂಪರೆ ಇದೆ. ತೀರಾ ಇತ್ತೀಚಿನವರಗೆ ಚೀನಾ ದೇಶ ಅನೇಕ ವಿಧಗಳಲ್ಲಿ ನಿಗೂಢ, ಪ್ರಪಂಚಕ್ಕೆ ಬಲು ದೂರವಾಗಿ ಉಳಿದುಕೊಂಡಿತ್ತು. ಅಂತಹ ದೇಶದಲ್ಲಿ ಹೆಜ್ಜೆ ಮೆಟ್ಟಿ ಓಡಾಡುವ, ಅವರ ಜೊತೆಗೆ ಹೃದಯ ಬಿಚ್ಚಿ ಮಾತನಾಡುವ ಅವಕಾಶ ನನಗೆ ಒದಗಿ ಬಂದಿತ್ತು. ಚೀನಾ ಪ್ರಸ್ತುತ ತನ್ನ ಹಳೆ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಂಡು ಇಂದಿನ ಆಧುನಿಕ ಜಗತ್ತಿನ ಜಾಗತೀಕರಣದೊಂದಿಗೆ ದೃಢವಾದ ಹೆಜ್ಜೆಗಳನ್ನಿಟ್ಟು ಸಾಗುತ್ತಿದೆ. ಕೇವಲ ೨೦-೨೫ ವರ್ಷಗಳ ಹಿಂದೆ ಚೀನಾ ಜನರು 'ಗ್ರೇಟ್ ವಾಲ್ ಆಫ್ ಚೈನಾ' ಮಹಾಗೋಡೆಯೊಳಗೆ ಕಣ್ಣುಮುಚ್ಚಿ ಮುದುಡಿ ಕುಳಿತಿದ್ದ ಕಾರಣ ಪ್ರಪಂಚ ಅವರನ್ನು ಪೂರ್ವದ ರೋಗಸ್ಥ ಮನುಷ್ಯನೆಂದು ಹಂಗಿಸಿತ್ತು. ಆದರೆ ಕೇವಲ ಎರಡು ಮೂರು ದಶಕಗಳಲ್ಲಿ ತನ್ನ ಸ್ಪಷ್ಟ ಅಭಿವೃದ್ಧಿಯ ಮುನ್ನೋಟ, ಸರಕಾರ ಮತ್ತು ಜನರ ಶ್ರಮ ಮತ್ತು ಆತ್ಮ ವಿಶ್ವಾಸದಿಂದ ಇಂದು ಅಮೆರಿಕಾ ದೇಶದ ಅಸೂಯೆ ಮತ್ತು ಈರ್ಷ್ಯೆಗೂ ಕಾರಣವಾಗಿದೆ.

ಚೀನಾ ದೇಶದ ಬಗ್ಗೆ ಯಾವುದೇ ರೀತಿಯ ಮಾಹಿತಿಗಳು ಕನ್ನಡದಲ್ಲಿ ತೀರಾ ಅಪರೂಪ ಎನ್ನಬಹುದು. ಚೀನಾ ದೇಶದ ಕೆಲವು ಪ್ರಖ್ಯಾತ ಸಣ್ಣ ಕಥೆಗಳನ್ನು ಆಯ್ಕೆ ಮಾಡಿ ಇತ್ತೀಚೆಗೆ ಗೋಪಾಲ ಕೃಷ್ಣ ಭಟ್ ಅವರು ಸೊಗಸಾಗಿ ಕನ್ನಡಕ್ಕೆ ಅನುವಾದಿಸಿದ್ದು 'ಸಾಂಗ್ ಸೇನ್ ಕುಂಗ್ ನೆಲದಲ್ಲಿ' ಎನ್ನುವ ಏಕೈಕ ಪ್ರವಾಸ ಕಥನವನ್ನು ಪ್ರೋ.ಎಚ್.ಆರ್.ದಾಸೇಗೌಡರು ೧೯೮೯ರಲ್ಲಿ ಪ್ರಕಟಿಸಿದ್ದಾರೆ. ಕಮ್ಯೂನಿಷ್ಟ್ ದೇಶವನ್ನು ಕಟ್ಟಿದ ಮಾಹೋ

ತ್ಸುಂಗ್ ಬಗ್ಗೆ ಇನ್ನಷ್ಟು ಮಾಹಿತಿಗಳು ಕನ್ನಡದಲ್ಲಿ ದೊರಕುತ್ತವೆ. ಅದೇ ಕಮ್ಯೂನಿಷ್ಟ್ ದೇಶ ರಷ್ಯಾದ ಬಗ್ಗೆ ದೊರಕುವಷ್ಟು ಮಾಹಿತಿಗಳು ಚೀನಾ ದೇಶದ ಬಗ್ಗೆ ಕನ್ನಡದಲ್ಲಿ ದೊರಕುವುದಿಲ್ಲ. ಅಮೆರಿಕಾ ಮತ್ತು ಯುರೋಪ್ ದೇಶಗಳ ಬಗ್ಗೆಯಂತೂ ಸಾಕಷ್ಟು ಮಾಹಿತಿ ಕನ್ನಡಕ್ಕೆ ಹರಿದು ಬಂದಿವೆ. ಇತ್ತೀಚೆಗೆ ನಮ್ಮ ರಾಜ್ಯದ ಇಡೀ ಶಾಸಕರ ತಂಡ ಚೀನಾ ಸುತ್ತಿಬಂದ ಹಿನ್ನೆಲೆಯಲ್ಲಿ ಸುಧಾ ವಾರ ಪತ್ರಿಕೆಯಲ್ಲಿ ಕೆಲವು ಲೇಖನಗಳು ಪ್ರಕಟವಾದವು. ಆದರೆ ಅವರು ಚೀನಾ ದೇಶ ನೋಡಿ ಬಂದುದರ ಲಾಭ ಕರ್ನಾಟಕಕ್ಕೆ ಏನೂ ಆಗದು ಎನ್ನುವುದು ಮಾತ್ರ ಕರೆ.

ಚೀನಾಗೆ ಹೋಗುವ ಮುನ್ನ ಮತ್ತು ಚೀನಾದಲ್ಲಿದ್ದಾಗ ಈ ಪ್ರವಾಸ ಕಥನ ಬರೆಯಲು ಸಾಕಷ್ಟು ವಿಚಾರಗಳನ್ನು ಸಂಗ್ರಹ ಮಾಡಿಕೊಂಡಿದ್ದೆ. ಇಲ್ಲಿ ದಾಖಲಾಗಿರುವ ಎಲ್ಲಾ ಅಂಕಿ ಅಂಶಗಳು ಒಂದಲ್ಲಾ ಒಂದು ಕಡೆ ದಾಖಲಾದ ವಿಷಯಗಳೆ ಆಗಿವೆ.

ಚೀನಾ ಮತ್ತು ಭಾರತ ದೇಶಗಳ ಸಮಸ್ಯೆಗಳು ಅನೇಕ ರೀತಿಯಲ್ಲಿ ಹೋಲಿಕೆಯಾಗುವುದರಿಂದ ಅವುಗಳನ್ನು ಪಕ್ಕದಲ್ಲಿಟ್ಟು ನೋಡುವ ಕೆಲಸವನ್ನು ಸ್ವಲ್ಪ ಮಟ್ಟಿಗೆ ಮಾಡಲು ಪ್ರಯತ್ನಿಸಿದ್ದೇನೆ. ಅದು ಎಷ್ಟರ ಮಟ್ಟಿಗೆ ಸಫಲವಾಗಿದೆಯೋ ತಿಳಿದಿಲ್ಲ. ಉಳಿದಿದ್ದನ್ನು ಓದುಗರು ಮತ್ತು ವಿಮರ್ಶಕರೆ ತೀರ್ಮಾನಿಸಬೇಕಿದೆ.


ಕೃತಜ್ಞತೆಗಳು

ಈ ಪ್ರವಾಸ ಕಥನವನ್ನು ಅಗ್ನಿ ವಾರ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸಿದ ಅಗ್ನಿ ಶ್ರೀಧರ್, ಸಂಪಾದಕರಾದ ರಾಜಶೇಖರ್ ಹತಗುಂದಿ, ಮಂಜುನಾಥ್ ಹದ್ದೆ ಮತ್ತು ಸಮಸ್ತ ಅಗ್ನಿ ಓದುಗರಿಗೆ. ಕೆಲವು ಭಾಗಗಳನ್ನು ಪ್ರಕಟಿಸಿದ ಸುಧಾ ವಾರ ಪತ್ರಿಕೆಯ ಸಂಪಾದಕಿ ಸಿ.ಜಿ.ಮಂಜುಳಾ ಅವರಿಗೆ. ಚೀನಾದ ಬಗ್ಗೆ ಕೃತಿಗಳನ್ನು ನೀಡಿದ ಡಾ.ಜೀ.ಆರ್ ಮತ್ತು ಜರಗನಹಳ್ಳಿ ಶಿವಶಂಕರ್ ಅವರಿಗೆ. ನನ್ನ ಹಲವಾರು ಕೃತಿಗಳನ್ನು ಸೊಗಸಾಗಿ ಪ್ರಕಟಿಸುತ್ತಾ ಬಂದಿರುವ ಗೀತಾಂಜಲಿ ಪಬ್ಲಿಕೇಶನ್ಸ್‌ನ ಹಿರಿಯ ಮಿತ್ರರಾದ ನಿಡಸಾಲೆ ಪುಟ್ಟಸ್ವಾಮಯ್ಯ ಅವರಿಗೆ. 'ಡ್ರ್ಯಾಗನ್ಸ್ ಮಹಾಗೋಡೆಯೊಳಗೆ' ಪ್ರವಾಸ ಕಥನವನ್ನು ಅಂದವಾಗಿ ಹೊರ ತಂದಿರುವ ಯುವ ಉದ್ಯಮಿ ನಿಡಸಾಲೆ ವಿಜಯ್ ಮತ್ತು ಸೊಗಸಾದ ಮುಖಪುಟ ರಚಿಸಿರುವ ಗೆಳೆಯ ಪುಂಡಲಿಕ್ ಕಲ್ಲಿಗನೂರ್ ಅವರಿಗೆ. ಉದ್ಯೋಗ ನಿಮಿತ್ತ ಅಲೆದಾಡುತ್ತಿರುವ ನನ್ನ ಅನುಪಚಿತತೆ ಮತ್ತು ಉಪಟಳಗಳನ್ನು ಸಹಿಸಿಕೊಂಡು ಸಹಕಾರ ನೀಡುತ್ತಾ ಬಂದಿರುವ ನನ್ನ ಪತ್ನಿ ಶ್ರೀಮತಿ ಸುಶೀಲ ಮತ್ತು ಮಗನಾದ ಕ್ರಾಂತಿಗೆ.

– **ಎಂ. ವೆಂಕಟಸ್ವಾಮಿ**

ಅಧ್ಯಾಯ

1.	ಮಹಾ ಗೋಡೆಯೊಳಗೆ ಇಣುಕುವ ಮುನ್ನ	1
2.	ವಿಮಾನದಲ್ಲಿ ದೆಹಲಿಗೆ	8
3.	ಮಹಾಗೋಡೆಯ ಕಡೆಗೆ	20
4.	ಬೀಜಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ	30
5.	ಬೀಜಿಂಗ್ ರಸ್ತೆಗಳ ಮೇಲೆ	40
6.	ಸ್ವರ್ಗ ದೇವಾಲಯ	44
7.	ಪೆಕ್ಕಿಂಗ್‌ಮ್ಯಾನ್ ಗುಹೆಗಳು	49
8.	ಗುಹೆ ಮಾನವನ ವೈಜ್ಞಾನಿಕ ಹೆಜ್ಜೆಗಳು	56
9.	ಲಾಂಗ್‌ಫಾಂಗ್ ನಗರದಲ್ಲಿ	60
10.	ಇನ್ನರ್ ಮಂಗೋಲಿಯ	64
11.	ಗೋಬಿ ಮರಳುಗಾಡು	73
12.	ಜಂಗೀಸ್‌ಖಾನ್‌ನ ರಕಸಿಕ್ತ ನಾಡು	83
13.	ಬುದ್ಧನ ಸನ್ನಿಧಿಯಲ್ಲಿ	90
14.	ಮತ್ತೆ ಲಾಂಗ್‌ಫಾಂಗ್‌ನಲ್ಲಿ	94
15.	ಮಹಾ ಗೋಡೆಯ ಮೇಲೆ	99
16.	ಫರ್‌ಬಿಡನ್‌ಸಿಟಿ ಮತ್ತು ಟಿಯನ್‌ಮಿನ್ ಚೌಕ	105
17.	ಚೀನಿಯರ ಕಾರ್ಯದಕ್ಷತೆ	110
18.	ಚೀನಾ ತಿನಿಸುಗಳು ಮತ್ತು ಡೈನಿಂಗ್ ಟೇಬಲ್ ಸುತ್ತ	115
19.	ಶಾಲೆ ಮತ್ತು ಮಕ್ಕಳು	125
20.	ಹೊಸ ತಲೆಮಾರು	129
21.	ಆರೋಗ್ಯ ಮತ್ತು ಸ್ಥೂಲಕಾಯ	134
22.	ನಿರುದ್ಯೋಗ ಮತ್ತು ಭ್ರಷ್ಟತೆ	137
23.	ಲಂಚಭ್ರಷ್ಟರು ಮತ್ತು ಶಿಕ್ಷೆ	140
24.	ಅಂತರಾಷ್ಟ್ರೀಯ ಹೋಟಲ್‌ನಲ್ಲಿ ಒಂದು ಪುಟ್ಟ ಭಾಷಣ	148
25.	ಬೀಜಿಂಗ್ ವಿಮಾನ ನಿಲ್ದಾಣದಲ್ಲಿ	156
26.	ಮಹಾಗೋಡೆಯ ಆರ್ಥಿಕ ಬೆಳವಣಿಗೆ	161
27.	ಬೆಂಗಳೂರಿಗೆ	166





ಮಹಾ ಗೋಡೆಯೊಳಗೆ ಇಣುಕುವ ಮುನ್ನ

It is better to travel 1000 miles than to read 1000 books at one place

ಪ್ರಪಂಚದಲ್ಲಿ ಚೀನಾ ದೇಶಕ್ಕೆ ಒಂದು ವಿಶೇಷ ಪರಂಪರ ಇದೆ. ತೀರಾ ಇತ್ತೀಚಿನವರೆಗೆ ಚೀನಾ ದೇಶ ಅನೇಕ ವಿಧಗಳಲ್ಲಿ ನಿಗೂಢ, ಪ್ರಪಂಚಕ್ಕೆ ಬಲು ದೂರ. ಅಂತಹ ದೇಶದ ನೆಲದ ಮೇಲೆ ಹೆಜ್ಜೆ ಮೆಟ್ಟಿ ಓಡಾಡುವ, ಚೀನಾ ದೇಶದ ಒಳಗೆ ಕಣ್ಣು ತೆರೆದುಕೊಂಡು ನೋಡುವ, ಅವರ ಜೊತೆಗೆ ಹೃದಯ ತೆರೆದುಕೊಂಡು ಮಾತನಾಡುವ ಅವಕಾಶ ದೊರಕುತ್ತಿದ್ದಂತೆ ನಾನು ಹಿಗ್ಗಿಹೋಗಿದ್ದೆ. ಬರ್ಮಾ, ಪಾಕಿಸ್ಥಾನ, ನೇಪಾಳ ಮತ್ತು ಬಂಗ್ಲಾ ದೇಶಗಳ ಗಡಿಗಳ ಜೊತೆಗೆ ಇಡೀ ಹಿಮಾಲಯ ಮತ್ತು ಭಾರತದ ನೆಲದ ಮೇಲೆಲ್ಲ ಓಡಾಡಿ ಬರೆದಿದ್ದ ನನ್ನ ಮೊದಲ ಪ್ರವಾಸ ಕಥನ "ಅಲೆಮಾರಿಯ ಹೆಜ್ಜೆಗಳು" ಕೃತಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿ ನನ್ನ ಅಲೆಮಾರಿತನಕ್ಕೆ ಕುಮ್ಮಕ್ಕು ನೀಡಿತ್ತು. ಇದೇ ಗುಂಗಿನಲ್ಲಿದ್ದಾಗ ಒಂದು ಕಾಲಕ್ಕೆ ಪ್ರಪಂಚದ ನಿಗೂಢ ಮಹಾಗೋಡೆಯ (ಗ್ರೇಟ್ ವಾಲ್ ಆಫ್ ಚೀನಾ) ಒಳಗೆ ಅವಿತುಕೊಂಡಿದ್ದ ಚೀನಾ ದೇಶದ ಪ್ರವಾಸ ಮಾಡುವ ಅವಕಾಶ ದೊರಕಿತು. ನಾನು ಭೂವಿಜ್ಞಾನಿಯಾಗಿ ಎರಡು ದಶಕಗಳಿಂದ ಉದ್ಯೋಗ ನಿರ್ವಹಿಸುತ್ತಿರುವ ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ (ಜಿಎಸ್‌ಐ) ಇಲಾಖೆಯಿಂದಲೆ ಈ ಅವಕಾಶವು ಬಂದಿತ್ತು. ಈ ಪ್ರವಾಸದ ತಯಾರಿಗೆ ಮುನ್ನ ಕೆಲವು ಕೃತಿಗಳನ್ನು ತಿರುವಿ ಹಾಕಿ ಒಂದಷ್ಟು ಮಾಹಿತಿಯನ್ನು ಕಲೆಯಾಕಿದೆ.

* * *

ಚೀನಾ ಪ್ರಪಂಚದಲ್ಲಿಯೇ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶ ಹಾಗೂ ಹೆಚ್ಚು ನೆಲವನ್ನು ಹೊಂದಿರುವ ಮೂರನೇ ದೇಶ. ಪ್ರಪಂಚದ ಜನಸಂಖ್ಯೆಯಲ್ಲಿ ಐದನೇ ಒಂದರಷ್ಟು ಜನ ಚೀನಾದಲ್ಲಿದ್ದಾರೆ. ಏಷಿಯಾದಲ್ಲಿರುವ ಐದನೇ ಒಂದರಷ್ಟು

ಪ್ರದೇಶವನ್ನು ಚೀನಾ ಹೊಂದಿದೆ. ಪ್ರಪಂಚದಲ್ಲಿ ಹೆಚ್ಚು ಪ್ರದೇಶವನ್ನು ಹೊಂದಿರುವ ಇತರ ದೇಶಗಳೆಂದರೆ ರಷ್ಯಾ ಮತ್ತು ಕೆನಡಾ. ಚೀನಾ ಪ್ರಪಂಚದ ಅತಿ ಒಣ ಮರಳುಗಾಡು ಅತಿ ಎತ್ತರ ಪರ್ವತ ಶ್ರೇಣಿಗಳನ್ನು ಮತ್ತು ಫಲವತ್ತಾದ ಫಾರ್ಮ್‌ಲ್ಯಾಂಡನ್ನು ಹೊಂದಿರುವ ದೇಶ. ಚೀನಾದ ಒಟ್ಟು ಭೂ ಪ್ರದೇಶ ೯.೬ ಮಿಲಿಯ ಚದರ ಕಿ.ಮೀಟರುಗಳು ಪೂರ್ವದಿಂದ ಪಶ್ಚಿಮಕ್ಕೆ ೪೮೨೮ ಕಿ.ಮೀ. ಉದ್ದವಿದ್ದರೆ ದಕ್ಷಿಣದಿಂದ ಉತ್ತರಕ್ಕೆ ೪೦೨೩ ಕಿ.ಮೀ. ಅಗಲವಾಗಿದೆ. ಹಿಮಾಲಯಗಳನ್ನು ಉತ್ತರ-ಪಶ್ಚಿಮ ದಿಕ್ಕಿಗೆ ಹಾರುತ್ತಿರುವ ಒಂದು ಹದ್ದು ಎಂದು ತಿಳಿದುಕೊಂಡರೆ ಬಲಗಡೆಯ ರೆಕ್ಕೆ ಚೀನಾದ ಹಿಮಾಲಯ ಪರ್ವತಗಳಾದರೆ ಎಡಗಡೆಯ ರೆಕ್ಕೆ ಭಾರತದ ಹಿಮಾಲಯಗಳಾಗುತ್ತವೆ. ಚೀನಾದ ಮಧ್ಯದಲ್ಲಿರುವ ಟರ್ಫಾನ್ ಎಂಬ ಪ್ರದೇಶ ಸಮುದ್ರ ಮಟ್ಟದಿಂದ ೫೦೫ ಅಡಿಗಳ ಕೆಳಗಿದೆ.



90 ಲಕ್ಷ ಚದರ ಕಿ.ಮೀ. ವಿಸ್ತೀರ್ಣದ ಚೀನಾ ದೇಶದ ನಕ್ಷೆ

ಚೀನಿಯರು ತಮ್ಮ ದೇಶವನ್ನು "ಝೊಂಗೊವ್ರೋ" ಅಂದರೆ ಮಧ್ಯ ದೇಶ ಎಂದು ಕರೆದುಕೊಳ್ಳುತ್ತಾರೆ. ಚೀನಾ ಪ್ರಪಂಚದ ಭೂಪಟದಲ್ಲಿ ಮಧ್ಯದಲ್ಲಿರುವುದೆ ಇದಕ್ಕೆ ಕಾರಣ. "ಚೀನಾ" ಹೆಸರು ಬಂದಿರುವುದು ಅಲ್ಲಿನ ರಾಜರಾದ ಕ್ವಿನ್ ಪರಂಪರೆಯಿಂದ. ಕ್ವಿನ್‌ನಿಂದ ಚಿನ್ ಚೈನಾ ಚೀನಾ ಆಯಿತು ಎನ್ನಲಾಗಿದೆ. ಹೆಚ್ಚು ಜನರು ವಾಸಿಸುತ್ತಿರುವುದು ಚೀನಾದ ಪೂರ್ವ ಮತ್ತು ಉತ್ತರಪೂರ್ವ ಭಾಗಗಳಲ್ಲಿ. ದೊಡ್ಡ ದೊಡ್ಡ ನಗರಗಳು ಮತ್ತು ಫಲವತ್ತಾದ ನೆಲವಿರುವುದು ಈ ಭಾಗಗಳಲ್ಲಿಯೆ. ನೂರಕ್ಕೆ ೭೪ ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದು, ಶೇಕಡ ೨೬ ರಷ್ಟು ಜನರು ನಗರಗಳಲ್ಲಿ ನೆಲಸಿದ್ದಾರೆ. ಹೆಚ್ಚು ಜನಸಂಖ್ಯೆ ಹೊಂದಿರುವ ಬೀಜಿಂಗ್ ಮತ್ತು ಷಾಂಗಾಯ್ ನಗರಗಳು

ಪ್ರಪಂಚದಲ್ಲಿಯೇ ದೊಡ್ಡ ನಗರಗಳು.

ಚೀನಾ ಪ್ರಪಂಚದಲ್ಲಿಯೇ ಅತ್ಯಂತ ಹಳೆಯ ನಾಗರಿಕತೆಯನ್ನು ಹೊಂದಿದ್ದು, ಇಂದಿಗೂ ಅದನ್ನು ತನ್ನ ಪರಂಪರೆಯನ್ನಾಗಿ ಉಳಿಸಿಕೊಂಡು ಬಂದಿದೆ. ಜೊತೆಗೆ ಅದರ ಪ್ರಭಾವ ಅಕ್ಕ ಪಕ್ಕದ ದೇಶಗಳ ಮೇಲೂ ಬೀರಿದೆ. ಜಪಾನ್, ಉತ್ತರ ಕೊರಿಯಾ, ದಕ್ಷಿಣ ಕೊರಿಯಾ, ಹಾಂಗ್‌ಕಾಂಗ್, ಥಾಯ್‌ಲ್ಯಾಂಡ್ ಮತ್ತಿತರ ದೇಶಗಳು ಚೀನಿಯರ ಕಲೆ, ಭಾಷೆ, ಸಾಹಿತ್ಯ, ಧರ್ಮ ಮತ್ತು ತಂತ್ರಜ್ಞಾನವನ್ನು ಪಡೆದುಕೊಂಡಿವೆ. ಚೀನಿಯರು ಮೊದಲಿಗೆ ದಿಕ್ಕು ಸೂಚಿಸುವ ಕಾಂಪಾಸ್, ಫೋರ್ಸ್‌ಲೀನ್, ಉಣ್ಣೆ ಮತ್ತು ಕಾಗದವನ್ನು ಪ್ರಪಂಚಕ್ಕೆ ಕೊಡುಗೆಯಾಗಿ ನೀಡಿದರು.

ಕ್ರಿ.ಶ. ೨೨೧ರ ಹಿಂದೆ ಚೀನಾ ದೇಶ ಅನೇಕ ರಾಜ್ಯಗಳಾಗಿ ಚದುರಿಹೋಗಿತ್ತು. ಕ್ರಿ.ಶ. ೨೨೧ರಲ್ಲಿ ಈ ರಾಜ್ಯಗಳನ್ನೆಲ್ಲ ಒಟ್ಟುಗೂಡಿಸಿದ ಕ್ವಿನ್ ರಾಜರು ಅನಂತರ ಸುಮಾರು ೨೦೦೦ ವರ್ಷಗಳು ಆಳಿದರು. ಈ ಕಾಲದಲ್ಲಿ ಚೀನಾ ದೇಶ ಒಳಗಿನಿಂದ ಅನೇಕ ಬಂಡಾಯಗಳನ್ನು ಮತ್ತು ದೇಶದ ಹೊರಗಿನಿಂದ ಅನೇಕ ಯುದ್ಧಗಳನ್ನು ಎದುರಿಸಿತ್ತು. ಈ ನಡುವೆ ಅನೇಕ ಸಾಮ್ರಾಜ್ಯಗಳು ತಲೆ ಎತ್ತಿದ್ದವು ಮತ್ತು ಬಿದ್ದಿದ್ದವು. ಜೊತೆ ಜೊತೆಗೆ ಹಲವು ನಗರಗಳು ನಿರ್ಮಾಣವಾಗಿದ್ದವು. ಚೀನಾ ಸಂಸ್ಕೃತಿ ಮತ್ತು ಕಲೆ ಅತ್ಯಂತ ಅದ್ಭುತವಾಗಿ ಬೆಳೆದು ನಿಂತಿತ್ತು. ಕಾಲಕಾಲಕ್ಕೆ ಅಕ್ಕಪಕ್ಕದ ಬುಡಕಟ್ಟುಗಳು/ರಾಜರು ಅನೇಕ ಸಲ ಚೀನಾದ ಕೆಲವು ಪ್ರದೇಶಗಳನ್ನು ಆಕ್ರಮಿಸಿಕೊಂಡರೂ ಚೀನಾ ದೇಶದ ಮೇಲೆ ಯಾವ ಪ್ರಭಾವವು ಬೀರಲಿಲ್ಲ.

ಕ್ರಿ.ಶ. ೧೮೦೦ ರಲ್ಲಿ ಚೀನಾ ಸಾಮ್ರಾಜ್ಯ ಸಡಿಲಗೊಂಡು ಕ್ರಿ.ಶ. ೧೯೧೧ರಲ್ಲಿ ಅವರ ಆಡಳಿತವನ್ನು ಬಂಡಾಯಗಾರರು ಕಿತ್ತು ಹಾಕಿದರು. ಕ್ರಿ.ಶ. ೧೯೪೯ರಲ್ಲಿ ಚೀನಾದ ಕಮ್ಯೂನಿಷ್ಟರು ಮೊದಲ ಬಾರಿಗೆ ರಾಷ್ಟ್ರೀಯವಾದಿಗಳನ್ನು ಸೋಲಿಸಿ ದೇಶವನ್ನು ತಮ್ಮ ಕೈಗೆ ತೆಗೆದುಕೊಂಡರು. ಚೀನಾದಿಂದ ಪರಾರಿಯಾದ ರಾಷ್ಟ್ರೀಯವಾದಿಗಳು ತಾಯ್‌ವಾನ್‌ನಲ್ಲಿ ತಮ್ಮ ನೆಲೆಯನ್ನು ಕಂಡುಕೊಂಡರು.

ಚೀನಾದಲ್ಲಿ ಉಚ್ಚನ್ಯಾಯಾಂಗವೆಂದರೆ ಸುಪ್ರೀಮ್ ಪೀಪಲ್ಸ್ ಕೋರ್ಟ್. ರಾಜ್ಯಗಳಲ್ಲಿ ಮತ್ತು ಇನ್ನಿತರ ಪ್ರದೇಶಗಳಲ್ಲೂ ಪೀಪಲ್ಸ್ ಕೋರ್ಟ್‌ಗಳು ಇರುತ್ತವೆ. ಪುರುಷರು ೨೨ ವರ್ಷಗಳಿಗೆ ಮತ್ತು ಮಹಿಳೆಯರು ೨೦ ವರ್ಷಗಳಿಗೆ ಮದುವೆಯಾಗಬೇಕು. ಒಂದು ದಂಪತಿಗೆ ಒಂದೇ ಮಗು. ಚೀನಾದ ಒಟ್ಟು ಜನಸಂಖ್ಯೆಯಲ್ಲಿ ೯೨ ರಷ್ಟು ಜನರು ಹ್ಯಾನ್ ಜನಾಂಗಕ್ಕೆ ಸೇರಿದವರಾದರೆ, ಉಳಿದ ಜನರು ೫೫ ಉಪ ಬುಡಕಟ್ಟುಗಳಿಗೆ ಸೇರಿದವರು.

ಕ್ರಿ.ಶ.೧೯೪೯ರವರೆಗೆ ಚೀನಾದಲ್ಲಿ ಹೆಚ್ಚು ಕುಟುಂಬಗಳು ದೊಡ್ಡ ಕುಟುಂಬಗಳಾಗಿದ್ದವು. ಐದು ತಲೆಮಾರಗಳ ನೂರಕ್ಕಿಂತ ಹೆಚ್ಚು ಜನರು ಕುಟುಂಬದ ಹಿರಿಯರ ಕೆಳಗೆ ಇರುತ್ತಿದ್ದರು. ಇವರಲ್ಲಿ ಹೆಚ್ಚಾಗಿ ಹಣವಂತರು, ವ್ಯಾಪಾರಿಗಳು,

ಜಮೀನುದಾರರು ಮತ್ತು ಉನ್ನತ ಸರಕಾರಿ ಅಧಿಕಾರಗಳೆ ಇರುತ್ತಿದ್ದರು. ಬಡವರ ಹೆಚ್ಚಾಗಿ ತಂದೆ ತಾಯಿ ಮಕ್ಕಳು ಮತ್ತು ಅಜ್ಜ ಅಜ್ಜಿಯರು ಮಾತ್ರ ಇರುತ್ತಿದ್ದರು. ಈ ಎಲ್ಲವೂ ಸಣ್ಣ ಕುಟುಂಬಗಳು.

ಒಂದು ಕಾಲದಲ್ಲಿ ಚೀನಾದಲ್ಲಿ ಜಮೀನುದಾರಿ ಪದ್ಧತಿ ಇದ್ದು ಎಲ್ಲಾ ಭೂಮಿಯು ರಾಜರದು ಮತ್ತು ಜಮೀನುದಾರರದೆ ಆಗಿತ್ತು. ಉಳಿದ ಜನರು ಆ ಭೂಮಿಯ ದುಡಿಯಬೇಕಾಗಿತ್ತು. ಬಂದ ಲಾಭದಲ್ಲಿ ೩೦ ರಿಂದ ೬೦ ರಷ್ಟನ್ನು ರಾಜರು ಮತ್ತ ಜಮೀನುದಾರರಿಗೆ ಕೊಡಬೇಕಾಗಿತ್ತು. ಜೀತ ಪದ್ಧತಿಯೂ ಹೇರಳವಾಗಿತ್ತು. ಕಮ್ಯೂನಿಷ ಸರಕಾರ ಬಂದ ಮೇಲೆ ಅದೆಲ್ಲಾ ನಿಂತುಹೋಯಿತು. ಎಲ್ಲರಿಗೂ ಸಣ್ಣ ಮನೆಗಳ ಮತ್ತು ನೆಲವನ್ನು ನೀಡಲಾಯಿತು. ಅದರಲ್ಲಿ ಬೆಳೆಸಿದ ಧಾನ್ಯ, ಸಾಕಿದ ಪ್ರಾಣಿಗಳನ ಬೇಕಾದಷ್ಟು ಇಟ್ಟುಕೊಂಡು ಉಳಿದಿದ್ದನ್ನು ಅವರು ಮಾರುಕಟ್ಟೆಗಳಲ್ಲಿ ಮಾರಬಹುದಾಗಿತ್ತ ಕ್ರಿ.ಶ. ೧೯೭೯ರಲ್ಲಿ ಎಲ್ಲೆಲ್ಲೂ ಸಹಕಾರ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಬೆಳದಿದ್ದರ ಸರಕಾರಕ್ಕೆ ಇಷ್ಟೆಂದು ನೀಡಿದ ಮೇಲೆ ಉಳಿದಿದ್ದನ್ನು ತಮ್ಮ ಸ್ವಂತ ಉಪಯೋಗ ಇಟ್ಟುಕೊಳ್ಳಬಹುದಾಗಿತ್ತು. ಅದರಲ್ಲಿ ಉಳಿಸಿಕೊಂಡಿದ್ದನ್ನು ಮಾರಿಕೊಳ್ಳಬಹುದಾಗಿತ್ತ ಕಮ್ಯೂನಿಷ್ಟ್ ಸರಕಾರ ಬಂದ ಮೇಲೆ ಎಲ್ಲರಿಗೂ ಬೇಕಾದಷ್ಟು ದವಸ ಧಾನ್ಯ ಮತ್ತ ಬಟ್ಟೆಗಳನ್ನು ನೀಡಲಾಯಿತು. ಪ್ರತಿಯೊಂದು ಮನೆಯಲ್ಲೂ ಒಂದು ಸೈಕಲ್, ಒಂದು ರೇಡಿಯೊ, ಬಟ್ಟೆ ಹೊಲಿಯುವ ಯಂತ್ರ ಮತ್ತು ಮೋಟಾರ್ ಸೈಕಲನ ಇಟ್ಟುಕೊಳ್ಳಬಹುದಾಗಿತ್ತು.

ಹಳೇ ರೀತಿಯ ಮನೆಗಳೆಂದರೆ ಮಣ್ಣು ಮತ್ತು ಇಟ್ಟಿಗೆಗಳಲ್ಲಿ ಕಟ್ಟಿದ ಗೋಡ ಹೆಂಚು ಇಲ್ಲ ಮರದ ಛಾವಣಿಗಳಿಂದ ಕೂಡಿದ ಮನೆಗಳನ್ನು ಕಟ್ಟಲಾಗುತ್ತಿತ್ತು. ಅನಂತ ಕಲ್ಲು ಮಣ್ಣಿನಲ್ಲಿ ಮನೆಗಳನ್ನು ನಿರ್ಮಾಣ ಮಾಡಲಾಯಿತು. ಕೆಲವು ಹಳ್ಳಿಗಳ ಮಹಡಿ ಮನೆಗಳನ್ನು ಕಟ್ಟಿಕೊಡಲಾಗುತ್ತಿತ್ತು. ಹಳ್ಳಿಗಳಲ್ಲಿ ರೈತರು ಹೆಚ್ಚು ಕಾ ದುಡಿಯಬೇಕಾಗಿತ್ತು. ರಾತ್ರಿ ಹೊತ್ತು ರಾಜಕೀಯ ಸಭೆಗಳಲ್ಲಿ ಮತ್ತು ತರಗತಿಗಳ ಪಾಲ್ಗೊಳ್ಳಬೇಕಾಗಿತ್ತು. ಇಲ್ಲಿ ಓದಿನ ಜೊತೆಗೆ ಮುಖ್ಯವಾಗಿ ಕೃಷಿಯ ಬಗ ಹೇಳಿಕೊಡಲಾಗುತ್ತಿತ್ತು. ಜೊತೆಗೆ ಟಿವಿ ಸಿನಿಮಾಗಳನ್ನು ತೋರಿಸಲಾಗುತ್ತಿತ್ತು. ಕೆಲ ಆಟಗಳ ಜೊತೆಗೆ ನಾಟಕ, ಸಂಗೀತದಲ್ಲೂ ಪಾಲ್ಗೊಳ್ಳಬೇಕಾಗಿತ್ತು.

ಕಮ್ಯೂನಿಷ್ಟ್ ಸರಕಾರ ಎಲ್ಲಾ ಧರ್ಮಗಳನ್ನು ಮೂಢನಂಬಿಕೆಗಳೆಂದು ಗುರುತಿ ಯಾವುದಕ್ಕೂ ಪ್ರಧಾನ್ಯತೆ ಕೊಡಬಾರದೆಂದು ಹೇಳುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನ ಹೆಚ್ಚು ಒತ್ತು ನೀಡಿ ಜನರನ್ನು ಪ್ರಲೋಭಿಸುತ್ತಿದೆ. ಕನ್‌ಫ್ಯೂಷಿಯಸ್ ಧರ್ಮ ಹಳೆಯಕಾಲದ ಪದ್ಧತಿಗಳನ್ನು ಹೊಂದಿರುವುದರ ಜೊತೆಗೆ ಮನುಷ್ಯರ ನಡುವೆ ಮೇಲು ಕೀಳ ಎನ್ನುವುದನ್ನು ತೋರಿಸುತ್ತದೆ ಎಂದು ಹೇಳಿ ಅದನ್ನು ನಿರಾಕರಿಸಿತು. ಎಲ್ಲಾ ದೇವಾಲಯಗಳನ್ನು ಸಂಗ್ರಹಾಲಯ ಮತ್ತು ಸಾರ್ವಜನಿಕರ ಉಪಯೋಗಕ್ಕಾಗಿ ಕಛೇರಿ ಶಾಲೆಗಳನ್ನಾಗಿ ಪರಿವರ್ತಿಸಿಬಿಟ್ಟಿತು. ಚರ್ಚ್ ಮತ್ತು ಮಸೀದಿಗಳಿಗೂ ಅದೇ ಗತಿಯಾಗಿತ್ತು

ಕ್ರಿ.ಶ.೧೯೭೦ರ ನಂತರ ಕೆಲವು ಮುಖ್ಯ ದೇವಾಲಯಗಳನ್ನು ಮಾತ್ರ ಹಿಂದಕ್ಕೆ ನೀಡಿ ಉಳಿದವನ್ನು ಸಂಗ್ರಹಾಲಯ ಮತ್ತು ಇತರೆ ಸಾರ್ವಜನಿಕ ಉಪಯೋಗಕ್ಕಾಗಿ ಉಳಿಸಿಕೊಂಡಿತು. ಚೀನಾದಲ್ಲಿ ಮಡಿಕೆಗಳ ಮೇಲೆ ಬಿಡಿಸಿರುವ ಕಲೆ ೭ ಸಾವಿರ ವರ್ಷಗಳ ಹಿಂದಿನದು. ೪ ಸಾವಿರ ವರ್ಷಗಳ ಹಿಂದೆ ತಯಾರಿಸಿದ ಹಿತ್ತಾಳೆ ಮತ್ತು ತಾಮ್ರ ವಸ್ತುಗಳು ದೊರಕಿವೆ. ಚೀನಿ ಭಾಷೆಯಲ್ಲಿ ಬರೆದ ಮೊದಲ ಕಾವ್ಯ "ಕ್ಲಾಸಿಕ್ ಆಫ್ ಸಾಂಗ್ಸ್" ೩೧೦೦ ವರ್ಷಗಳ ಹಳೆಯದು.


ಕ್ರಿ.ಶ. ೧೯೪೯ರ ನಂತರ ಕಮ್ಯೂನಿಷ್ಟ್ ಸರಕಾರ ಹೆಣ್ಣು ಗಂಡೆನ್ನದೆ ಎಲ್ಲರಿಗೂ ವಯಸ್ಕರ ತರಗತಿಗಳನ್ನು ಸ್ಥಾಪಿಸಿತು. ಕ್ರಿ.ಶ. ೧೯೫೦ರಲ್ಲಿ ಚೀನಾ ಭಾಷೆಯಲ್ಲಿನ ಕ್ಲಿಷ್ಟವಾದ (ಕ್ಯಾರೆಕ್ಟರ್ಸನ್ನು) ಚಿಹ್ನೆಗಳನ್ನು ಕಡಿಮೆ ಮಾಡಿ ಸರಳಗೊಳಿಸಿದ ಮೇಲೆ ಚೀನಾ ಭಾಷೆಯನ್ನು ಎಲ್ಲರೂ ಓದಲು ಸಾಧ್ಯವಾಯಿತು. ಕ್ರಿ.ಶ. ೧೯೮೬ರಲ್ಲಿ ಚೀನಾ ಸರಕಾರ ವಿದ್ಯಾಭ್ಯಾಸವನ್ನು ಕಡ್ಡಾಯಗೊಳಿಸಿತು. ಅದರ ಪ್ರಕಾರ ಎಲ್ಲಾ ಮಕ್ಕಳು ಕನಿಷ್ಠ ೯ ವರ್ಷಗಳ ಕಾಲ ಶಾಲೆಯಲ್ಲಿ ಓದಲೇಬೇಕು. ಇಡೀ ದೇಶಕ್ಕೆ ಒಂದೇ ಭಾಷೆ. ಎಲ್ಲಾ ವಿಷಯಗಳೂ ಚೀನಿ ಭಾಷೆಯಲ್ಲೆ. ಕ್ರಿ.ಶ. ೧೯೯೯ರ ನಂತರ ಜಾಗತೀಕರಣದ ಪ್ರಭಾವದಿಂದ ಚೀನಿ ಭಾಷೆಯ ಜೊತೆಗೆ ಇಂಗ್ಲಿಷ್ ಭಾಷೆಯನ್ನು ಪ್ರಾಥಮಿಕ ಹಂತದಿಂದಲೆ ಕಡ್ಡಾಯವಾಗಿ ದೇಶದಾದ್ಯಂತ ಎಲ್ಲಾ ಮಕ್ಕಳಿಗೂ ಕಲಿಸಲಾಗುತ್ತಿದೆ. ಈ ಕಾರಣಕ್ಕಾಗಿ ಅಮೆರಿಕಾ, ಯುರೋಪ್ ಮತ್ತಿತರ ದೇಶಗಳಿಂದ ೩೦ ಸಾವಿರ ಇಂಗ್ಲಿಷ್ ಅಧ್ಯಾಪಕರನ್ನು ಒಮ್ಮೆಲೆ ಚೀನಾ ಕರೆಸಿಕೊಂಡಿತು.

* * *

ಭಾರತ ದೇಶಕ್ಕೂ ಚೀನಾ ದೇಶಕ್ಕೂ ನಿಕಟ ಸಂಬಂಧ ಬೆಳೆದದ್ದು ಬೌದ್ಧಮತದ ಮೂಲಕ. ಅದಕ್ಕೂ ಮುಂಚೆ ಬಹು ಪುರಾತನ ಕಾಲದಿಂದಲೂ ಭೂಮಾರ್ಗದ ಮೂಲಕ ಎರಡು ದೇಶಗಳ ನಡುವೆ ಜನರ ವಲಸೆ ಇದ್ದುದಾಗಿ ಗೊತ್ತಾಗುತ್ತದೆ. ಸಮುದ್ರ ಮೂಲಕ ಚೀನಾದಿಂದ ಭಾರತಕ್ಕೆ ರೇಷ್ಮೆ ಬರುತ್ತಿತ್ತು. ಇಂಡಿಯಾ ದೇಶದ ಉತ್ತರ–ಪೂರ್ವ ರಾಜ್ಯಗಳ ಜನರಲ್ಲಿ ಇಂದಿಗೂ ಮಂಗೋಲಿಯರ ಮೈಲಕ್ಷಣಗಳುಳ್ಳ ಜನರನ್ನು ಹೇರಳವಾಗಿ ಕಾಣಬಹುದು. ಮುಖ್ಯವಾಗಿ ನಾಗಾಲ್ಯಾಂಡ್, ಮಣಿಪುರ, ಮೇಘಾಲಯ, ಅರುಣಾಚಲ ಪ್ರದೇಶ, ಅಸ್ಸಾಂ, ತ್ರಿಪುರ, ಮಿಜೋರಾಂ ರಾಜ್ಯಗಳಲ್ಲಿ ಮತ್ತು ನೇಪಾಳದಲ್ಲೂ ಇವರನ್ನು ನೋಡಬಹುದು. ಪಾರ್–ಕೌ ಎಂಬ ಬಹು ಪುರಾತನ ಚೀನಿ ಲೇಖಕನ ಗ್ರಂಥದಲ್ಲಿ ದಕ್ಷಿಣ ಭಾರತದ ಬಗ್ಗೆ ಕೆಲವು ವಿಶೇಷ ವಿವರಣೆಗಳನ್ನು ನೋಡಬಹುದಾಗಿದೆ. ಪಾರ್–ಕೌ ಹೇಳಿರುವ ಪ್ರಕಾರ ಕ್ರಿ.ಪೂ. ೨ನೇ ಶತಮಾನದ ಪ್ರಾರಂಭದಿಂಥಲೂ ಚೀನಾ ದೇಶಕ್ಕೂ ಇನ್ಸುಲಿಂಡಿಯಾ ಮತ್ತು ದಕ್ಷಿಣ ಭಾರತಕ್ಕೂ ಬೇಕಾದಷ್ಟು ಸಂಪರ್ಕವಿತ್ತೆಂದು ಗೊತ್ತಾಗುತ್ತದೆ. ಸುಮಾರು ಮೂರು ಸಾವಿರ ವರ್ಷಗಳು ಪ್ರಾಚೀನತೆಯುಳ್ಳ ಚಂದ್ರವಳ್ಳಿಯ (ಚಿತ್ರದುರ್ಗದ ಬಳಿ ಇರುವ) ಉತ್ಖನನ ಶೋಧನೆಯಲ್ಲಿ ಕ್ರಿ.ಪೂ. ೧೩೯ರಲ್ಲಿ ಆಳುತ್ತಿದ್ದ ಹ್ಯಾಉಗಿ ಎಂಬ ಚೀನಿ ಚಕ್ರವರ್ತಿಯ ಕಾಲದ ಹಿತ್ತಾಳೆ

ನಾಣ್ಯಗಳು ದೊರಕಿದ್ದವು.

ಬೌದ್ಧ ಮತಾವಲಂಬಿಗಳಾದ ಧರ್ಮಪ್ರಚಾರಕರು ಅಶೋಕನ ಕಾಲದಲ್ಲಿ ಚೀನಾ ದೇಶಕ್ಕೆ ಹೋಗಿ ಬೌದ್ಧಮತವನ್ನು ಪ್ರಸಾರ ಮಾಡಿದ ಮೇಲೆ ಎರಡೂ ದೇಶಗಳ ಕಡೆಯಿಂದ ಸಾವಿರಾರು ವರುಷಗಳ ತನಕ ಪ್ರವಾಸಿಗರು ಹೋಗಿ ಬರುತ್ತಿದ್ದರು. ಚೀನಾ ಮತ್ತು ಭಾರತ ದೇಶಗಳ ಮಧ್ಯ ಏಷ್ಯಾದ ಮೂಲಕ ಎರಡು ಭೂಮಾರ್ಗಗಳಿದ್ದವು. ಈ ಎರಡು ಮಾರ್ಗಗಳು ಬಾಕ್ಟ್ರಿಯಾದಲ್ಲಿ ಅಂದರೆ ಪುರಾತನ ಬಾಲ್ಹಕ ಅಥವಾ ಈಗಿನ ಬಾಲ್ಖ್‌ನಲ್ಲಿ ಸಂಧಿಸುತ್ತಿದ್ದುವು. ಭೂಮಾರ್ಗದ ಜೊತೆಗೆ ಸಮುದ್ರ ಮಾರ್ಗವಾಗಿಯೂ ಪ್ರಯಾಣ ಸಾಗುತ್ತಿತ್ತು. ಇಂಡೋಚೀನಾ, ಜಾವಾ, ಸುಮಾತ್ರಾ, ಮಲಯಾ, ನಿಕೋಬಾರ್ ದ್ವೀಪಗಳ ಮೂಲಕ ಚೀನಾದಿಂದ ಭಾರತಕ್ಕೆ ಸಂಪರ್ಕವಿತ್ತು. ಸಮುದ್ರ ಮಾರ್ಗವಾಗಿ ಬಂದ ಕೆಲವು ಯಾತ್ರಿಕರು ಕೆಲವೊಮ್ಮೆ ಭೂಮಾರ್ಗವಾಗಿ ಹಿಂದಿರುಗುತ್ತಿದ್ದರು. ಮಧ್ಯ ಏಷ್ಯಾ ಹಾಗೂ ಇಂಡೋನೇಷಿಯಾದ ಕೆಲವು ಪ್ರದೇಶಗಳಲ್ಲಿ ಬೌದ್ಧಮತ ಆಗಲೇ ಬೇರೂರಿದ್ದರಿಂದ ಭೂಮಾರ್ಗ, ಜಲಮಾರ್ಗ ಎರಡರಲ್ಲಿಯೂ ಪ್ರವಾಸಿಗಳಿಗೆ ಸಂಘಾರಾಮ ಹಾಗೂ ಭಿಕ್ಷುಗಳಿಂದ ಆಪ್ಯಾಯಮಾನವಾದ ಆತಿಥ್ಯ ದೊರೆಯುತ್ತಿತ್ತು.



ದಕ್ಷಿಣ ಚೀನಾದ ಗ್ವಿಲಿನ್ ಪಟ್ಟಣದ ಹತ್ತಿರ ಇರುವ ಒಂದು ಸುಂದರ ಪ್ರದೇಶ

ಮಹಾಭಾರತದಲ್ಲಿಯೂ ಚೀನಾ ಎಂಬ ಹೆಸರು ಬರುತ್ತದೆ. ನಾಲ್ಕನೆಯ ಶತಮಾನದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಚೀನಾಪಟ್ಟೆ ಎಂಬ ಹೆಸರು ಬರುತ್ತದೆ. ಅಲ್ಲದೆ ಚಂದ್ರಗುಪ್ತಮೌರ್ಯನು ನವನಂದನರನ್ನು ಚಾಣಕ್ಯನ ಸಹಾಯದಿಂದ ಸಂಹಾರ ಮಾಡಿದ್ದ.

ಆಗ ನಡೆದ ಯುದ್ಧದಲ್ಲಿ ಚೀನಾ ದೇಶದ ಅಕ್ಕಪಕ್ಕದ ಹೂಣರ ದೇಶಗಳು ಭಾಗವಹಿಸಿದ್ದವು. ಇಂಡಿಯಾ ದೇಶದಿಂದ ಚೀನಾ ದೇಶಕ್ಕೆ ಹೋದ ಮೊಟ್ಟಮೊದಲ ವಿದ್ವಾಂಸನೆಂದರೆ ಕಶ್ಯಪಮತಂಗ. ಇವರು ಚೀನಾ ದೇಶವನ್ನು ಕ್ರಿ. ಶ. ೬೭ರಲ್ಲಿ ಮುಟ್ಟಿದನು. ಕಶ್ಯಪಮತಂಗನ ಜೊತೆಗೆ ಧರ್ಮರಕ್ಷಕರು ಬೌದ್ಧಾವಶೇಷಗಳನ್ನು ಹೇರಿಕೊಂಡು ಹೋಗಿದ್ದರು. ಇವರ ನಂತರ ಮುಖ್ಯವಾಗಿ ಚೀನಾ ದೇಶಕ್ಕೆ ಹೋದವರೆಂದರೆ ಬುದ್ಧಭದ್ರ, ಜಿನಭದ್ರ, ಕಮಾರಜೀವ, ಪರಮಾರ್ಥ, ಜಿನಗುಪ್ತ ಮತ್ತು ಬೋಧಿಧರ್ಮ. ಬುದ್ಧಭದ್ರ ಕ್ರಿ.ಶ. ೩೯೮ರಲ್ಲಿ ಅಂದರೆ, ಫಾಹಿಯಾನ್ ಇಂಡಿಯಾ ದೇಶದಲ್ಲಿ ಕಾಲಿಡುವುದಕ್ಕೆ ಎರಡು ವರ್ಷಗಳ ಮುಂಚೆ ಚೀನಾ ತಲುಪಿದ್ದನು. ಹೀಗಾಗಿ ಆರನೇ ಶತಮಾನದಲ್ಲಿ ಚೀನಾ ದೇಶದ ಲೊ-ಯಾಂಗ್ ಪ್ರಾಂತವೊಂದರಲ್ಲೇ ಮೂರು ಸಾವಿರ ಬೌದ್ಧ ಭಿಕ್ಷುಗಳೂ ಹತ್ತು ಸಾವಿರ ಭಾರತೀಯ ಸಂಸಾರಗಳೂ ಇದ್ದುವೆಂದು ಹೇಳಲಾಗಿದೆ.

ಭಾರತದಿಂದ ಹೋದ ಬೌದ್ಧ ಸನ್ಯಾಸಿಗಳು ತಮ್ಮೊಡನೆ ಸಂಸ್ಕೃತದ ಕರಡು ಗ್ರಂಥಗಳನ್ನು ತೆಗೆದುಕೊಂಡುಹೋಗಿ ಚೀನಿ ಭಾಷೆಗೆ ಅನುವಾದಿಸಿ ಪ್ರಚಾರ ಮಾಡಿದ್ದರು. ಇನ್ನೂ ಕೆಲವರು ಅಲ್ಲಿಯೆ ಚೀನಿ ಭಾಷೆಯಲ್ಲಿ ಗ್ರಂಥಗಳನ್ನು ರಚಿಸಿದ್ದರು. ಚೀನಾ ದೇಶದಿಂದಲೂ ಅನೇಕ ಯಾತ್ರಿಕರು ಭಾರತ ದೇಶಕ್ಕೆ ಬಂದು ಹೋಗುತ್ತಿದ್ದರು. ಇವರಲ್ಲಿ ಫಾಹಿಯಾನ್, ಸುಂಗ್-ಯುನ್, ಹುಯೆನ್-ತ್ಸಾಂಗ್ ಮತ್ತು ಇ-ತ್ಸಿಂಗ್ ಬಹಳ ಮುಖ್ಯರು. ಇವರು ತಾವು ನೋಡಿದ ಅಂದಿನ ಭಾರತದ ಚಿತ್ರಣಗಳನ್ನು ಯಾವುದೇ ಮುಚ್ಚು ಮರೆಯಿಲ್ಲದೆ ಚಿತ್ರಿಸಿರುವುದು ಅನೇಕ ರೀತಿಯಲ್ಲಿ ಚರಿತ್ರೆಕಾರರಿಗೆ ಸಹಾಯವಾಗಿವೆ.



ವಿಮಾನದಲ್ಲಿ ದೆಹಲಿಗೆ

ಭಾರತ ದೇಶದ ಒಟ್ಟು ಭೂಪ್ರದೇಶ ೩,೨೮,೦೦೦ ಚದರ ಕಿ.ಮೀಟರುಗಳು.

ಚೀನಾದ ಒಟ್ಟು ಭೂಪ್ರದೇಶ ೯,೬೦,೦೦೦ ಚದರ ಕಿ.ಮೀಟರುಗಳು. ಪೂರ್ವದಿಂದ ಪಶ್ಚಿಮಕ್ಕೆ ೪೮೭೮ ಕಿ.ಮೀ. ಉದ್ದ, ದಕ್ಷಿಣದಿಂದ ಉತ್ತರಕ್ಕೆ ೪೦೨೩ ಕಿ.ಮೀ. ಅಗಲ.

ಅಕ್ಟೋಬರ್ ೬, ೨೦೦೪ ರಂದು ಬೆಳಗ್ಗೆ ಹತ್ತು ಗಂಟೆಗೆ ಬೆಂಗಳೂರಿನ ಕುಮಾರಸ್ವಾಮಿ ಬಡಾವಣೆಯಲ್ಲಿರುವ ನಮ್ಮ ಕಛೇರಿ "ವಸುಧಾ ಭವನ"ಕ್ಕೆ ಹೋದ ಕೆಲವೇ ನಿಮಿಷಗಳಲ್ಲಿ ಡೈರೆಕ್ಟರ್ ವಿದ್ಯಾಧರನ್ ಅವರು ಇಂಟರ್‌ಕಾಮ್ ಮೂಲಕ "ವೆಂಕಟಸ್ವಾಮಿ ಬೇಗನೆ ಬನ್ನಿ. ನಿಮ್ಮದು ಮಿನಿಷ್ಟ್ರಿಯಿಂದ ಚೀನಾ ಟ್ರಿಪ್ ಕ್ಲಿಯರ್ ಆಗಿದೆ" ಎಂದರು. ನಾನು ಕೆಲವೇ ಕ್ಷಣಗಳಲ್ಲಿ ಅವರ ಕೋಣೆಯಲ್ಲಿದ್ದೆ. "ದೆಹಲಿಯಿಂದ ಫೋನ್ ಬಂದಿತ್ತು. ಮಧ್ಯಾಹ್ನದೊಳಗೆ ಆರ್ಡರ್ ಫ್ಯಾಕ್ಸ್ ಮೂಲಕ ಬರುತ್ತಂತೆ. ನೀವು ಬೇಗನೆ ಎಲ್ಲಾ ರೆಡಿ ಮಾಡಿಕೊಳ್ಳಿ. ನಾಳೆ ಬೆಳಗ್ಗೇನೆ ನೀವು ದೆಹಲಿಯಲ್ಲಿ ಇರ್ಬೇಕಂತೆ. ಮೊದಲು ನಿಮ್ಮ ಮಿಸಸ್‌ಗೆ ಫೋನ್ ಮಾಡಿ ಹೇಳಿಬಿಡಿ" ಎಂದರು. ನಾನು ಮನೆಗೆ ಫೋನ್ ಮಾಡಿ ತಿಳಿಸಿದೆ. ವಿದ್ಯಾಧರನ್ ಅವರು ಏರ್ ಬುಕ್ಕಿಂಗ್ ಆಫೀಸಿಗೆ ಫೋನ್ ಮಾಡುತ್ತ "ದೆಹಲಿಗೆ ಸಾಯಂಕಾಲ ಹೋಗ್ತೀರೊ ನಾಳೆ ಬೆಳಗ್ಗೆ ಹೋಗ್ತೀರೊ?" ಎಂದರು. "ನಾಳೆ ಬೆಳಗ್ಗೆ ಹೋಗ್ತೀನಿ ಸರ್" ಎಂದೆ. ಅವರು ಬುಕ್ಕಿಂಗ್ ಏಜನ್ಸಿಗೆ ನಾಳೆ ಬೆಳಗ್ಗೆ ೬:೩೦ ರ ವಿಮಾನಕ್ಕೆ ಟಿಕೆಟ್ ತರುವಂತೆ ತಿಳಿಸಿದರು.

ನಾನು ಕಛೇರಿಯಿಂದ ಬ್ಯಾಂಕಿಗೆ ಹೋಗಿ ಸ್ವಲ್ಪ ಹಣ ಡ್ರಾ ಮಾಡಿಕೊಂಡೆ. ಆನಂತರ ಜಯನಗರದ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ಹತ್ತು ಪಾಸ್‌ಪೋರ್ಟ್ ಮತ್ತು ಹತ್ತು ಸ್ಟಾಂಪ್ ಸೈಜು ಫೋಟೋಗಳನ್ನು ತೆಗೆದುಕೊಂಡೆ. ಫೋಟೋಗ್ರಾಫರ್ ನನ್ನ ಖಾಲಿ ಶರ್ಟಿನ ಭಾವ ಚಿತ್ರಕ್ಕೆ ಕಂಪ್ಯೂಟರ್‌ನಲ್ಲಿ ಒಂದು ಕೋಟು ಮತ್ತು ಟೈ ಹಾಕಿಕೊಟ್ಟ. ಅಲ್ಲಿಂದ ಕಛೇರಿಗೆ ಬಂದು ಬೇಕಾಗಿದ್ದ ಫೈಲುಗಳನ್ನು ಮತ್ತು ನಾನು

ಚೀನಾದಲ್ಲಿ ಮಾತನಾಡಬೇಕಿದ್ದ ಲಕ್ಚರ್‌ನ ಸಿಡಿಗಳನ್ನು ತೆಗೆದು ಇಟ್ಟುಕೊಂಡೆ. ಚೀನಾದಲ್ಲಿ ಒಂದು ತಿಂಗಳು ತರಬೇತಿ ಇದ್ದು ನನ್ನ ಹೆಸರು ನಮ್ಮ ವಿಭಾಗದಿಂದ ಮಿನಿಷ್ಟ್ರಿಗೆ ಹೋಗಿದ್ದು ೧೫ ದಿನಗಳ ಮುಂಚೆಯೆ ರೆಡಿಯಾಗಿರುವಂತೆ ನನಗೆ ತಿಳಿಸಲಾಗಿತ್ತು.

ಸಾಯಂಕಾಲ ನಾಲ್ಕು ಗಂಟೆಗೆ ಎಲ್ಲಾ ಕೆಲಸಗಳನ್ನು ಮುಗಿಸಿ ಬ್ರೀಫ್‌ಕೇಸ್‌ನಲ್ಲಿ ನನಗೆ ಬೇಕಾದ ಎಲ್ಲಾ ಸಾಮಾನುಗಳನ್ನು ತೆಗೆದುಕೊಂಡು ಡಿಐಸಿ ವಿ. ವೆಂಕಟೇಶ್ವರರಾವ ಅವರ ಕೋಣೆಗೆ ಹೋದೆ. ಅವರು ಬೆಳಗ್ಗೆಯಿಂದ ಎರಡು ಮೂರು ಸಲ ದೆಹಲಿ ಕಲಕತ್ತಾಗೆ ಫೋನ್ ಮಾಡಿ ಆರ್ಡರ್ ಬಗ್ಗೆ ವಿಚಾರಿಸಿದ್ದರು ಆರ್ಡರ್ ಬಂದಿರಲಿಲ್ಲ. ಇಷ್ಟಕ್ಕೂ ಆರ್ಡರ್ ಬಂದ ಮೇಲೆಯೆ ಎಲ್ಲಾ ವಿಚಾರಗಳು ತಿಳಿಯುತ್ತವೆ. ಚೀನಾದಲ್ಲಿ ಲಾಡ್ಜಿಂಗ್ ಮತ್ತು ಬೋರ್ಡಿಂಗ್ ಯಾರು ವಹಿಸಿಕೊಳ್ಳುತ್ತಾರೆ? ದೆಹಲಿಯಿಂದ ಬೀಜಿಂಗ್‌ಗೆ ಹೋಗಿ ಬರುವುದಕ್ಕೆ ವಿಮಾನದ ವೆಚ್ಚವನ್ನು ಯಾರು ಕೊಡುತ್ತಾರೆ? ಕೈ ಖರ್ಚಿಗೆ ಹಣವನ್ನು ಯಾರು ನೀಡುತ್ತಾರೆ? ಅದು ಡಾಲರ್ ಮೂಲಕ ಕೊಡುತ್ತಾರೊ? ಇಲ್ಲ ಚೀನಿ ಕರನ್ಸಿಯಲ್ಲಿ ಕೊಡುತ್ತಾರೊ ಒಂದೂ ಗೊತ್ತಾಗಲಿಲ್ಲ. ಬೆಂಗಳೂರಿನಿಂದ ದೆಹಲಿಗೆ ಹೋಗಿ ಬರುವುದಕ್ಕೆ ಮಾತ್ರ ಬೆಂಗಳೂರಿನ ಕಛೇರಿಯಲ್ಲಿಯೆ ವಿಮಾನದ ವೆಚ್ಚವನ್ನು ಕೊಡುವುದಾಗಿ ತಿಳಿಸಿದ್ದರು.

ಯಾವುದಕ್ಕೂ ಆರ್ಡರ್ ಬರಲಿ ಎಂದು ಕಾಯುತೊಡಗಿದೆ. ನನ್ನ ಜೊತೆಗೆ ಡಿಐಸಿ ಮತ್ತು ನಾಲ್ಕಾರು ಸಹೋದ್ಯೋಗಿಗಳು ಕಾಯತೊಡಗಿದರು. ಸಾಯಂಕಾಲ ಐದು ಗಂಟೆಯಾದರು ಆರ್ಡರ್ ಬರಲಿಲ್ಲ. ಎಲ್ಲರೂ ಆಗಾಗ ಫ್ಯಾಕ್ಸ್ ಕಡೆಗೆ ನೋಡುತ್ತಿದ್ದರು. ಈ ನಡುವೆ ಬುಕ್ಕಿಂಗ್ ಕಛೇರಿಯಯವರು ಬೆಳಗ್ಗೆ ೬:೩೦ ಕ್ಕೆ ದೆಹಲಿಗೆ ಹೊರಡುವ ವಿಮಾನಕ್ಕೆ ಟಿಕೆಟ್ ತಂದುಕೊಟ್ಟಿದ್ದರು. ನಾಳೆ ಹೋಗುವುದಕ್ಕೆ ಅಗುತ್ತದೊ ಇಲ್ಲವೊ ಗೊತ್ತಾಗಲಿಲ್ಲ. ಇನ್ನೊಂದು ಸಮಸ್ಯೆ ಎಂದರೆ ಚೀನಾದ ರಾಜಧಾನಿ ಬೀಜಿಂಗ್‌ನಲ್ಲಿ ೮ ನೇ ತಾರೀಖಿಗೆ ತರಬೇತಿ ಪ್ರಾರಂಭವಾಗುತ್ತದೆ. ದೆಹಲಿಯಲ್ಲಿ ಪಾಸ್‌ಪೋರ್ಟ್ ಮತ್ತು ವೀಸಾ ಒಂದೆರಡು ದಿನದಲ್ಲಿ ಆಗುತ್ತದೊ ಇಲ್ಲವೊ ಗೊತ್ತಿಲ್ಲ. ದೆಹಲಿಯಲ್ಲಿ ಎಲ್ಲಾ ಕಛೇರಿಗಳಿಗೂ ಮತ್ತು ಎಂಬಸಿಗಳಿಗೆ ಶನಿವಾರ ಮತ್ತು ಭಾನುವಾರ ರಜ.

ನಾಳೆ ಶುಕ್ರವಾರವಾಗಿದ್ದು, ಒಂದು ದಿನದಲ್ಲಿ ಪಾಸ್‌ಪೋರ್ಟ್ ಮತ್ತು ವೀಸಾ ದೊರಕುವುದು ಅಸಾಧ್ಯದ ಕೆಲಸ. ದೆಲ್ಲಿಗೆ ಹೋದ ಮೇಲೆ ಏನೇನು ತೊಂದರೆ ಪಡಬೇಕೋ ಒಳಗೊಳಗೆ ಯೋಚಿಸತೊಡಗಿದೆ. ನನ್ನ ಕೆಲವು ಸಹೋದ್ಯೋಗಿಗಳು ದೆಲ್ಲಿಯಲ್ಲಿ ನೀವು ಭಾರಿ ಓಡಾಡಬೇಕಾಗುತ್ತದೆ. ಯಾವುದಕ್ಕೂ ತಯಾರಾಗಿರಿ ಎಂದು ಎಚ್ಚರಿಕೆ ನೀಡಿದ್ದರು. ನಾನೂ ಮಾನಸಿಕವಾಗಿ ತಯಾರಾಗಿಯೆ ಇದ್ದೆ. ಆದರೆ ಬೆಂಗಳೂರಿನಿಂದ ದೆಹಲಿಗೆ ಹೋಗುವ ದಾರಿಯೆ ಇನ್ನೂ ಸುಗುಮವಾಗಲಿಲ್ಲ.

ಅಂತೂ ಸಾಯಂಕಾಲ ೫:೪೨ಕ್ಕೆ ಫ್ಯಾಕ್ಸ್ ಸಣ್ಣದಾಗಿ ಸದ್ದು ಮಾಡತೊಡಗಿತು. ಎಲ್ಲರೂ ಫ್ಯಾಕ್ಸ್ ಯಂತ್ರದ ಕಡೆಗೆ ನೋಡತೊಡಗಿದರು? ಸದ್ದು ಮಾಡಿದ ಫ್ಯಾಕ್ಸ್

ಯಂತ್ರ ತಣ್ಣಗಾಯಿತು. ಸುತ್ತಲಿದ್ದವರು "ಬರುತ್ತೆ... ಬರುತ್ತೆ..." ಎಂದರು. ಒಂದೆರಡು ನಿಮಿಷಗಳಾದ ಮೇಲೆ ಮತ್ತೆ ಸದ್ದು ಮಾಡುತ್ತ ಫ್ಯಾಕ್ಸ್‌ಯಂತ್ರ ತನ್ನಲ್ಲಿದ್ದ ಪೇಪರನ್ನು ಒಳಕ್ಕೆ ತೆಗೆದುಕೊಂಡು ಏನೇನೋ ಸಿಕ್ರೆಟ್ಟಾಗಿ ಪ್ರಿಂಟ್ ಮಾಡತೊಡಗಿತು. ಅಂತೂ ಕಲಕತ್ತಾದಿಂದ ನನಗೆ ಚೀನಾಗೆ ಹೋಗುವ ಆರ್ಡರ್ ಹೊರಕ್ಕೆ ಬಂದಿತ್ತು.

ಅದರಲ್ಲಿ ಬೆಂಗಳೂರಿನಿಂದ ದೆಹಲಿಗೆ ಹೋಗಿಬರುವ ವೆಚ್ಚವನ್ನು ಬೆಂಗಳೂರು ಕಛೇರಿ ಬರಿಸುವುದಾಗಿ, ದೆಹಲಿಯಿಂದ ಬೀಜಿಂಗ್‌ಗೆ ಹೋಗಿಬರುವ ವೆಚ್ಚವನ್ನು ಕಲಕತ್ತಾ ಕಛೇರಿ ಬರಿಸುವುದಾಗಿ, ಚೀನಾಗೆ ಹೋದನಂತರ ಅಲ್ಲಿ ಊಟ, ವಸತಿ ಮತ್ತು ಓಡಾಡುವ ವೆಚ್ಚವನ್ನು ಚೀನಾ ಸರಕಾರ ವಹಿಸಿಕೊಳ್ಳುವುದಾಗಿ ತಿಳಿಸಲಾಗಿತ್ತು. ಜೊತೆಗೆ ದಿನಕ್ಕೆ ೩೦ ಯುಯಾನ್ (ಚೀನಾ ರೂಪಾಯಿ) ಪಾಕೆಟ್ ಹಣ ಕೊಡುವುದಾಗಿ ತಿಳಿಸಲಾಗಿತ್ತು. ಚೀನಾದ ಕರನ್ಸಿ ಒಂದು ಯುಯಾನ್‌ಗೆ ಭಾರತದ ಎಷ್ಟು ರೂಪಾಯಿಗಳು ಸಮವೆಂದು ಯಾರಿಗೂ ಗೊತ್ತಿರಲಿಲ್ಲ.



ಬೀಜಿಂಗ್‌ನಲ್ಲಿರುವ ಚೀನಾ ದೇಶದ ಚರಿತ್ರೆ ಮತ್ತು ದಂಗೆಯ ವಸ್ತುಸಂಗ್ರಹಾಲಯ

ನಮ್ಮ ಡಿಐಸಿ ಒಂದು ಪತ್ರ ತಯಾರು ಮಾಡಿ ದೆಹಲಿ ಕಛೇರಿಯ ವಿಳಾಸಕ್ಕೆ ಕೊಟ್ಟು "ಎಲ್ಲವೂ ಸುಗಮವಾಗಲಿ" ಎಂದು ಕೈಕುಲುಕಿ ಶುಭ ಕೋರಿದರು. ಜೊತೆಗೆ ವಿದ್ಯಾಧರನ್, ಎಂ.ಎಂ. ಸ್ವಾಮಿ, ಸುಂದರಮೂರ್ತಿ, ಪಾಂಡುರಂಗ, ಜನಾರ್ಧನ್ ಮತ್ತು ನರಸಿಂಹ ಎಲ್ಲರೂ ಬೀಳ್ಕೊಟ್ಟರು. ಕಛೇರಿಯಿಂದ ಹೊರಗೆ ಬಂದಾಗ ಕತ್ತಲಾಗಿದ್ದು ಜೀಪ್ ಡ್ರೈವರ್ ಮಹಾಲಿಂಗ ಹೊರಗೆ ಕಾಯುತ್ತಿದ್ದ. ಜೀಪ್‌ನಲ್ಲಿ ಕುಳಿತುಕೊಂಡು ಮನೆ ಕಡೆಗೆ ಹೋಗುವಂತೆ ಹೇಳಿದೆ. ಮಹಾಲಿಂಗ ಅದುವರೆಗೆ ನಮ್ಮ ಮನೆ ನೋಡಿರಲಿಲ್ಲ. ಉತ್ತರಹಳ್ಳಿ ಮೂಲಕ ರಾಜರಾಜೇಶ್ವರಿ ನಗರದ ಕಡೆಗೆ ಹೋಗುವಂತೆ ದಾರಿ ತೋರಿಸುತ್ತ ಸಾಗಿದೆ. "ಬೆಳಗ್ಗೆ ೬:೩೦ಕ್ಕೆ ವಿಮಾನ, ಎಷ್ಟೊತ್ತಿಗೆ ಮನೆ ಹತ್ತಿರಕ್ಕೆ ಬರ್ತೀಯ?" ಕೇಳಿದೆ. "ನಿಮಗೆ ಎಷ್ಟೊತ್ತಿಗೆ ಬರ್ಬೇಕು ಹೇಳಿ ಸರ್" ಎಂದು ನನ್ನನ್ನೇ ಪ್ರಶ್ನಿಸಿದ. "ವಿಮಾನ ಹೊರಡುವುದಕ್ಕೆ ಒಂದು ಗಂಟೆ ಮುಂಚೆಯಾದರು ವಿಮಾನ ನಿಲ್ದಾಣದಲ್ಲಿ ಇರಬೇಕು. ಮನೆಯಿಂದ ವಿಮಾನ ನಿಲ್ದಾಣಕ್ಕೆ ಹೋಗುವುದಕ್ಕೆ ಮುಕ್ಕಾಲುಗಂಟೆ ಬೇಕಾಗುತ್ತೆ. ನೀನು ನಾಲ್ಕೂವರೆ ಗಂಟೆಗೆ ನಮ್ಮ ಮನೆ ಹತ್ತಿರ

ಬಂದುಬಿಡು" ಎಂದೆ. "ಆಯಿತು. ನಾಲ್ಕು ಗಂಟೆಗೆಲ್ಲ ಬಂದುಬಿಡ್ತೀನಿ ಸರ್." ಎಂದ.

"ಮೊದಲು ಸರಿಯಾಗಿ ದಾರಿ ನೋಡ್ಕೊ" ಎಂದು ದಾರಿಯ ಉದ್ದಕ್ಕೂ ಕೆಲವು ಗುರುತುಗಳನ್ನು ತೋರಿಸುತ್ತ "ನೋಡು ಮಹಾಲಿಂಗ ನಿನ್ನಿಂದ ಬರೋದಕ್ಕೆ ಆಗೂದಿಲ್ಲ ಅಂದರೆ ಈಗ್ಲೆ ಹೇಳ್ಬಿಡು. ಆಮೇಲೆ ಬೆಳಗ್ಗೇನೆ ನನ್ಗೆ ಟೆನ್ಷನ್ ಮಾಡ್ಬೇಡ" ಎಂದೆ. ಯಾಕೆಂದರೆ ಮಹಾಲಿಂಗ ಎಣ್ಣೆಲಿಂಗ ಆಗಿ ಎಷ್ಟೋ ವರ್ಷಗಳಾಗಿದ್ದವು. ಮಹಾಲಿಂಗನನ್ನು ನಂಬಲಾರದೆ ಮತ್ತೆ ಮತ್ತೆ ಕೇಳಿದೆ. ಆದರೆ ಮಹಾಲಿಂಗನು ಮಾತ್ರ "ಸರ್ ನನ್ನ ೨೬ ವರ್ಷ ಸರ್ವೀಸ್‌ನಲ್ಲಿ ಯಾವತ್ತೂ ಡ್ಯೂಟಿಗೆ ತಪ್ಪಿಸಿಕೊಂಡಿಲ್ಲ ಸಾರ್. ನೀವು ನಿಶ್ಚಿಂತೆಯಾಗಿ ಮಲಗಿ ಸಾರ್. ನಾನು ಬಂದು ಬಾಗಿಲು ತಟ್ಟಿ ನಿಮ್ಮನ್ನ ಎಬ್ಬಿಸ್ತೀನಿ ಸಾರ್" ಎಂದು ತಲೆ ಮೇಲೆ ಹೊಡೆದಂತೆ ಹೇಳಿದ. ಈಗ ನಾನು ನಂಬಲೇಬೇಕಾಗಿತ್ತು. ಮನೆಯ ಹತ್ತಿರ ಜೀಪು ಇಳಿದು ಮತ್ತೆ ಕೇಳಿದೆ. ಮತ್ತೆ ಅದೇ ಉತ್ತರ.

ಸಾಯಂಕಾಲ ಮಾರುತಿ ಕಾರಿನಲ್ಲಿ ಸುಶೀಲ ಜೊತೆಗೆ ರಾಜರಾಜೇಶ್ವರಿನಗರದ ಶಾಪಿಂಗ್ ಕಾಂಪ್ಲೆಕ್ಸ್‌ಗೆ ಹೋಗಿ ಒಂದಷ್ಟು ಔಷಧಿಗಳನ್ನು ತೆಗೆದುಕೊಂಡೆ. ಅನಂತರ ಅಲ್ಲಿಂದ ಗೊತ್ತಿರುವ ಡಾಕ್ಟರ್ ಶಾಪಿಗೆ ಹೋಗಿ ನನ್ನ ರಕ್ತದ ಗುಂಪು ಯಾವುದೆಂದು ತಿಳಿಸಬೇಕೆಂದು ಕೋರಿದೆ. ಯಾಕೆಂದರೆ ಆದುವರೆಗೂ ನನ್ನ ರಕ್ತದ ಗುಂಪು ಯಾವುದೆಂದು ನನಗೆ ಗೊತ್ತಿರಲಿಲ್ಲ. ಹೊರದೇಶಕ್ಕೆ ಹೋಗುವಾಗ ಮೆಡಿಕಲ್ ಸರ್ಟಿಫಿಕೇಟ್ ಇರಬೇಕೆಂದು ಸಹಪಾಠಿಗಳು ತಿಳಿಸಿದ್ದರು. ಮೆಡಿಕಲ್ ಸರ್ಟಿಫಿಕೇಟ್ ಆ ಮೇಲೆ ನೋಡೋಣ ಸದ್ಯಕ್ಕೆ ರಕ್ತದ ಗುಂಪಾದರು ತಿಳಿದಿರಲಿ ಎಂದುಕೊಂಡು ವೈದ್ಯರ ಹತ್ತಿರ ಹೋಗಿದ್ದೆ.

ಬೆರಳನ್ನು ಸೂಜಿಯಿಂದ ಚುಚ್ಚಿದ ವೈದ್ಯರು "ನಿಮ್ಮದು ತುಂಬಾ ತಿಕ್ಕು ಸ್ಕಿನ್" ಎಂದರು. "ತಿಕ್ಕು ಸ್ಕಿನ್ನಾದರೆ ತುಂಬಾ ಅಡ್ವಾಂಟೇಜ್ ಇರುತ್ತಂತೆ" ಎಂದೆ. ವೈದ್ಯರು ನಗುತ್ತಾ ರಕ್ತವನ್ನು ಪರೀಕ್ಷಿಸಿ ಎಬಿ + (ಪಾಜಿಟೀವ್) ಎಂದರು. ಸುಶೀಲ "ನಮ್ಮ ಮಗ್ನದು ಅದೇ ಗುಂಪು" ಎಂದಳು. ಮಧ್ಯ ನಾನು ಚೀನಾಗೆ ಹೋಗುತ್ತಿರುವ ವಿಷಯವನ್ನು ಸುಶೀಲ ವೈದ್ಯರಿಗೆ ಹೇಳಿದ್ದರಿಂದ, ವೈದ್ಯರು ಫೀಸು ಪಡೆದುಕೊಂಡು "ವಿಷ್ ಯು ಏ ಹ್ಯಾಪಿ ಬಾನ್ ವಾಹೇಜ್" ಎಂದರು.

ಮನೆಗೆ ಬಂದು ಊಟ ಮಾಡಿ ಬಟ್ಟೆಗಳನ್ನು, ಇನ್ನಿತರ ವಸ್ತುಗಳನ್ನು ಒಂದು ಸೂಟುಕೇಸು ಮತ್ತು ಒಂದು ಬ್ರೀಫ್‌ಕೇಸಿನಲ್ಲಿ ತುಂಬಿಸಿಟ್ಟು ಬೆಳಗ್ಗೆ ಬೇಗನೆ ಏಳಲು ಮಲಗಿಕೊಂಡುಬಿಟ್ಟೆ. ಬೆಳಗ್ಗೆ ನಾಲ್ಕು ಗಂಟೆಗೆಲ್ಲ ಅಲಾರಮ್ ಇಟ್ಟಿದ್ದರೂ ಅದಕ್ಕಿಂತ ಮುಂಚೆಯೆ ಎದ್ದು ಬಿಸಿ ನೀರಿನಲ್ಲಿ ಸ್ನಾನಮಾಡಿ ತಯಾರಾಗಿ ಕುಳಿತುಕೊಂಡೆ. ಮುಂಜಾನೆಯೆ ಎಲ್ಲಾದರೂ ಪ್ರಯಾಣವಿದ್ದರೆ ನನಗೆ ರಾತ್ರಿಯೆಲ್ಲ ಸರಿಯಾಗಿ ನಿದ್ದೆಯೇ ಬರುತ್ತಿರಲಿಲ್ಲ. ನಾಲ್ಕೂವರೆ ಗಂಟೆಗೆ ಬಾಗಿಲು ತೆಗೆದು ಹೊರಕ್ಕೆ ಬಂದು ನೋಡಿದೆ.

ಮನೆ ಮುಂದೆ ವಿದ್ಯುತ್ ದೀಪಗಳ ಬೆಳಕು ಸಾಕಷ್ಟಿದ್ದರೂ ಸುತ್ತಲು ಕತ್ತಲು ಆವರಿಸಿತ್ತು.

ನಾನು ಜಿಎಸ್ಐ (ಜಿಯಾಲಜಿಕಲ್ ಸರ್ವೇ ಆಫ್ ಇಂಡಿಯಾ)ಗೆ ಸೇರಿದಾಗಿನಿಂದ ಜೀಪು, ಬಸ್ಸು, ರೈಲು ಮತ್ತು ವಿಮಾನಗಳಲ್ಲಿ ಅದೆಷ್ಟು ಸಾವಿರ ಕಿ.ಮೀ. ದಾರಿಯನ್ನು ಸವೆಸಿದ್ದೇನೋ ಲೆಕ್ಕವಿಟ್ಟಿಲ್ಲ. ಈಗಲೂ ಜೀಪಿನಲ್ಲಿ ವರ್ಷಕ್ಕೆ ಕನಿಷ್ಟ ೨೦೦೦೦ ರಿಂದ ೨೫೦೦೦ ಕಿ.ಮೀ. ದೂರ ಪ್ರಯಾಣ ಮಾಡುತ್ತಿದ್ದೇನೆ. ಬೆಳಗಿನ ಜಾವ ೪:೪೫ ಗಂಟೆಗೆ ಸುಶೀಲ ಮತ್ತು ಕ್ರಾಂತಿ ಕೂಡ ಎದ್ದು ಹೊರಗೆ ಬಂದು ಕಾಯತೊಡಗಿದರು. ಮಹಾಲಿಂಗ ಅಲಿಯಾಸ್ ಎಣ್ಣೆಲಿಂಗ ಬರಲೇ ಇಲ್ಲ. ಅದೋ ಬಂದ? ಇದೋ ಬಂದ? ಎನ್ನುತ್ತ ವಾಹನಗಳ ಶಬ್ದ ಬರುವ ಕಡೆಗೆಲ್ಲ ಮೂವರು ನೋಡುತ್ತಿದ್ದೆವು. ಸಮಯ ೫ ಗಂಟೆಯಾದರೂ ಬರಲಿಲ್ಲ. ಈಗ ನನಗೆ ಏನು ಮಾಡಬೇಕೋ ಗೊತ್ತಾಗಲಿಲ್ಲ. ನಮ್ಮ ಮನೆಯಲ್ಲಿ ಮಾರುತಿ ಕಾರಿದ್ದರೂ ನನ್ನ ಮಗ ಇನ್ನೂ ಡ್ರೈವಿಂಗ್ ಕಲಿತಿರಲಿಲ್ಲ. ೬:೩೦ಕ್ಕೆ ಬೆಂಗಳೂರು ನಿಲ್ದಾಣದಿಂದ ವಿಮಾನ ಟೇಕ್ ಆಫ್ ಮಾಡಲಿದ್ದು, ಮನೆಯಿಂದ ವಿಮಾನ ನಿಲ್ದಾಣಕ್ಕೆ ಹೋಗಲು ಕಡಿಮೆಯೆಂದರೂ ೪೦ ನಿಮಿಷಗಳಾದರು ಬೇಕು.

"ಏನು ದಾಡಿ ನಿಮ್ಮ ಡ್ರೈವರ್ ಇಷ್ಟೊಂದು ಬೇಜವಾಬ್ದಾರಿ?" ಕ್ರಾಂತಿ ಹೇಳಿದ. "ಏನೋ ತೊಂದರೆ ಆಗಿರಬೇಕು. ಇಲ್ಲ ಅಂದರೆ ಬಂದುಬಿಡ್ತಾಯಿದ್ದ" ಎಂದೆ ನಮ್ಮ ಇಲಾಖೆಯ ಗುಟ್ಟು ಬಿಡದೆ. ಅಷ್ಟರಲ್ಲಿ ಎದುರು ಮನೆಯಲ್ಲಿದ್ದ ಲೋಕೇಶ್ ಅವರ ಪತ್ನಿ ಶ್ರೀಮತಿ ನೇತ್ರಾವತಿ ಬಾಗಿಲು ತೆಗೆದುಕೊಂಡು ಹೊರಗೆ ಬಂದಿದ್ದರು. ಇನ್ನು ಯೋಚಿಸಿ ಪ್ರಯೋಜನ ಇಲ್ಲವೆಂದು ಸುಶೀಲಳಿಗೆ, ನೇತ್ರಾವತಿಗೆ ವಿಷಯ ತಿಳಿಸುವಂತೆ ಹೇಳಿದೆ. ಸುಶೀಲ ನೇತ್ರಾವತಿಗೆ ತಿಳಿಸಿದ್ದೆ ಅವರ ಗಂಡ ಲೋಕೇಶ್ ಐದೇ ನಿಮಿಷಗಳಲ್ಲಿ ಕಾರನ್ನು ಕಾಂಪೌಂಡಿನಿಂದ ಹೊರಗೆ ತಂದಿದ್ದರು. ಮನಸ್ಸಿಗೆ ಸ್ವಲ್ಪ ನಿರಾಳವಾಯಿತು.

೫:೦೫ ಗಂಟೆಗೆ ಮನೆಬಿಟ್ಟ ನಾವು ಅರ್ಧಗಂಟೆಯಲ್ಲಿ ವಿಮಾನ ನಿಲ್ದಾಣದ ಹತ್ತಿರ ಇದ್ದೆವು. ವಿಮಾನ ಬಿಡಲು ಇನ್ನೂ ೫೦ ನಿಮಿಷ ಇತ್ತು. ನಾನು ಲೋಕೇಶ್ ಅವರಿಗೆ ವಂದನೆಗಳನ್ನು ತಿಳಿಸಿ, ಸುಶೀಲ ಮತ್ತು ಕ್ರಾಂತಿಯ ಕೈಗಳನ್ನು ಕುಲುಕಿ ನಿಲ್ದಾಣದ ಗೇಟಿನ ಒಳಕ್ಕೆ ನಡೆದೆ. ಐಸಿ-೮೦೪ ಸಂಖ್ಯೆಯ ಎ೩೨೦ ವಿಮಾನ ಸರಿಯಾಗಿ ೬:೩೦ಕ್ಕೆ ಬೆಂಗಳೂರಿನ ವಿಮಾನ ನಿಲ್ದಾಣನಿಂದ ಗಗನಕ್ಕೆ ಹಾರಿತು. ಹಾರವ ವಿಮಾನದಲ್ಲಿಯೆ ಬೆಳಗಿನ ಉಪಹಾರ ಮುಗಿಸಿ ಸ್ವಲ್ಪ ಸಮಯವಾಗಿದ್ದೆ ೮:೫೦ಕ್ಕೆ ದೆಹಲಿಯ ನಿಲ್ದಾಣದಲ್ಲಿ ವಿಮಾನ ನಿಧಾನವಾಗಿ ಇಳಿಯಿತು. ನಾನು ಲಗೇಜ್ ತೆಗೆದುಕೊಂಡು ಹೊರಬರುತ್ತಿದ್ದಂತೆ ಒಬ್ಬ ಯುವಕ "ಜಿಎಸ್ಐ" ಹೆಸರಿನ ಪ್ಲಕಾರ್ಡ್ ಇಟ್ಟುಕೊಂಡು ನಿಂತಿದ್ದ. ಅವನ ಹತ್ತಿರಹೋಗಿ "ಆ ಕಡೆ ಬಾ ಎಂದೆ". ಹತ್ತಿರಕ್ಕೆ ಬಂದ ಆತ ನನ್ನ ಲಗೇಜ್ ತೆಗೆದುಕೊಂಡು ಕಾರಿನ ಕಡೆಗೆ ನಡೆದ.

ಕಾರು ದೆಹಲಿಯ ರಸ್ತೆಗಳಲ್ಲಿ ಚಲಿಸತೊಡಗಿತು. ಆಗಲೆ ನೂರಾರು ಕಾರುಗಳು

ರಸ್ತೆಗಳು ತುಂಬಿ ಹೊರಚೆಲ್ಲಿ ಹೋಗುತ್ತಿರುವಂತೆ ಸಾಗುತ್ತಿದ್ದವು. ಆದರೆ ಬೆಂಗಳೂರಿನ ರಸ್ತೆಗಳಲ್ಲಿ ಕಾಣುವ ಮಣ್ಣು ಧೂಳಾಗಲಿ ವಾಹನಗಳು ಚೆಲ್ಲುವ ವಿಷ ಅನಿಲವಾಗಲಿ ಕಾಣಲಿಲ್ಲ. ಹೊಸ ದೆಹಲಿ ನಿಜವಾಗಿಯೂ ಸುಂದರವಾಗಿ ಕಾಣಿಸುತ್ತಿತ್ತು. ಚಾಲಕನ ಹೆಸರು ಕೇಳಿದಾಗ "ಚಂದ್ರಕಾಂತ್" ಎಂದ. "ಚಂದ್ರಕಾಂತ್ ರಸ್ತೆಗಳಲ್ಲಿ ಹೊಗೆಯೆ ಇಲ್ಲವಲ್ಲ?" ಕೇಳಿದೆ. "ಸರ್ ದೆಹಲಿಯಲ್ಲಿ ಎಲ್ಲಾ ವಾಹನಗಳಿಗೂ ಸಿಎನ್‌ಜಿ (ಕಂಪ್ರೆಸ್ಡ್ ಗ್ಯಾಸ್) ಉಪಯೋಗಿಸ್ತಾರೆ ಸರ್. ಹೊಸ ಕಾರುಗಳಿಗೆ ಮಾತ್ರ ಡೀಸಲ್ ಪೆಟ್ರೋಲ್ ಪಯೋಗಿಸಬಹುದು ಸರ್" ಎಂದ. ಹೊಸ ಕಾರುಗಳನ್ನು ಬಿಟ್ಟು ಆಟೋ ಬಸ್ಸು ಟೆಂಪೋಗಳ ಮೇಲೆ ಸಿಎನ್‌ಜಿ ಎಂದು ಬರೆಯಲಾಗಿತ್ತು. ಬೆಂಗಳೂರಿನಲ್ಲಿ ಇದನ್ನು ತುರ್ತಾಗಿ ಮಾಡಬೇಕಾಗಿದೆ ಎಂದುಕೊಂಡೆ. ಅದರೆ ಮಾಡುವವರು ಯಾರು? ದೆಲ್ಲಿಯಲ್ಲಿ ಪ್ರಸ್ತುತ ೨೭ ಲಕ್ಷ ವಾಹನಗಳಿದ್ದರೂ ವಾಯುಮಾಲಿನ್ಯ ತೀರ ಕಡಿಮೆಯಾಗಿದೆ.

ಅರ್ಧಗಂಟೆ ದಾರಿ ಸವೆದಿದ್ದ ಮಧ್ಯದಲ್ಲಿ ನಮ್ಮ ದೆಹಲಿ ಕಛೇರಿಯ ರಾವತ್ ನನ್ನ ಜತೆ ಸೇರಿಕೊಂಡರು. ರಾವತ್ ಹೊರದೇಶಗಳಿಗೆ ಹೋಗುವ ನಮ್ಮ ಇಲಾಖೆಯ ಅಧಿಕಾರಿಗಳಿಗೆ ಅಫಿಷಿಯಲ್ ಪಾಸ್‌ಪೋರ್ಟ್ ಮತ್ತು ವೀಸಾ ಮಾಡಿಕೊಡಲು ಸಹಾಯ ಮಾಡುವ ಪಿಆರೊಓ ಅಧಿಕಾರಿ. ನನ್ನನ್ನು ಪರಿಚಯಿಸಿಕೊಂಡಿದ್ದೆ "ಯಾಕೆ ಇಷ್ಟು ಲೇಟಾಗಿ ಬರ್‍ತಾ ಇದ್ದೀರಾ?" ಕೇಳಿದರು. "ನನಗೆ ಆರ್ಡರ್ ಬಂದಿದ್ದೆ ನೆನ್ನೆ ಸಾಯಂಕಾಲ" ಎಂದೆ. "ಕಳೆದ ತಿಂಗಳು ೨೪ ನಿಮ್ಮದು ಮಿನಿಷ್ಟ್ರಿಯಿಂದ ಕ್ಲಿಯರ್ ಆಯಿತು" ಎಂದರು. "ಮತ್ತೆ ನನಗೆ ಇಷ್ಟು ಲೇಟಾಗಿ ತಿಳಿಸಿದರಲ್ಲ" ಕೇಳಿದೆ "ಅದು ನನಗೆ ಗೊತ್ತಿಲ್ಲ. ನನ್ನ ಕೆಪಾಸಿಟಿಯಲ್ಲಿ ಅದು ಬರುವುದಿಲ್ಲ" ಎಂದರು. ನಿಜವಾಗಿಯೂ ನನಗೆ ಕೋಪ ಸ್ವಲ್ಪ ನೆತ್ತಿಗೇರಿತು. ಆದರೂ ನುಂಗಿಕೊಳ್ಳಲೇಬೇಕಾಯಿತು.

"ನೀವು ಒಬ್ಬರು ಬಂದಿದ್ದೀರಿ. ಇನ್ನೂ ಇಬ್ಬರು ಬಂಧಾಗಳು ಎಲ್ಲಿ?" ರಾವತ್ ಕೇಳಿದರು. ಬಂಧಾಗಳು, ದೆಹಲಿಯ ಕಛೇರಿಗಳಲ್ಲಿ ಸಾಮಾನ್ಯವಾಗಿ ಇತರರ ಬಗ್ಗೆ ವ್ಯಂಗ್ಯವಾಗಿ ಉಪಯೋಗಿಸುವ ಪದ. "ನನಗೆ ಗೊತ್ತಿಲ್ಲ" ಎಂದೆ. ನನ್ನ ಜೊತೆಯಲ್ಲಿ ಇನ್ನಿಬ್ಬರು ಚೀನಾ ಪ್ರವಾಸಕ್ಕೆ ಆಯ್ಕೆಯಾಗಿದ್ದು ಅದರಲ್ಲಿ ನನಗೆ ಮಾತ್ರ ವಿಮಾನದಲ್ಲಿ ಹಾರುವ ಸೌಕರ್ಯ ಇದ್ದು ಇನ್ನಿಬ್ಬರು ಜೂನಿಯರ್ ಅಧಿಕಾರಿಗಳಾಗಿದ್ದು ಅವರು ದೆಹಲಿಗೆ ರೈಲಿನಲ್ಲೆ ಬರಬೇಕಾಗಿತ್ತು. "ಅವರು ಯಾವಾಗ ಬರುತ್ತಾರೊ ಏನೊ? ಎಲ್ಲರೂ ಒಟ್ಟಾಗಿ ಬಂದಿದ್ದರೆ ಒಂದೇ ಸಲ ಮೂವರಿಗೂ ಪಾಸ್‌ಪೋರ್ಟು ವೀಸಾ ಮಾಡಬಹುದಾಗಿತ್ತು". ರಾವತ್ ದೀರ್ಘ ತೆಗೆದರು. ಅಷ್ಟರಲ್ಲಿ ಕಛೇರಿ ಬಂದಿದ್ದು ಕಾರಿನಿಂದ ಇಳಿದು ಮೇಲಿನ ಮಹಡಿಯಲ್ಲಿದ್ದ ನಿರ್ದೇಶಕರಾದ ಬಳ್ಳಾ ಅವರ ಕೋಣೆಗೆ ಹೋದೆವು. ಬಳ್ಳಾ ಅವರಿಗೆ ನನ್ನನ್ನು ಪರಿಚಯಿಸಿಕೊಂಡೆ.

"ನೀವು ಒಬ್ಬರು ಬಂದಿದ್ದೀರಿ. ಇನ್ನಿಬ್ಬರು ಎಲ್ಲಿ?" ಅದೇ ಪ್ರಶ್ನೆ. ನನ್ನದು ಅದೇ ಉತ್ತರ. "ಆಯಿತು ಮಿ.ರಾವತ್ ಇವರನ್ನ ಕರಕೊಂಡೋಗಿ ಇವೊತ್ತೆ ಪಾಸ್‌ಪೋರ್ಟ್ ಕೊಡಿಸಿ. ಉಳಿದವರು ಬಂದ ಮೇಲೆ ನೋಡೋಣ. ಕಲಕತ್ತಾದಲ್ಲಿ ಫುಲ್ ಪ್ಲಡ್ಸಂತೆ.

ಜಗಬಂಧು ಘೋಷ್ ಬಂದರೆ ಇವೊತ್ತು ಸಾಯಂಕಾಲ ಬರಬಹುದು. ಆ ಸಂಜಯ್‌ಕುಮಾರ್‌ದಾಸ್ ಜಯಪುರ್‌ದಿಂದ ಒರಿಸ್ಸಾ ಕಡೆಗೆ ಹೋಗಿದ್ದಾನಂತೆ. ಅವರ್ನ ಸಂಪರ್ಕಿಸೂದಕ್ಕೆ ಟ್ರೈಮಾಡ್ತಾಯಿದ್ದಾರಂತೆ. ಅಲ್ಲೂ ಒಂದೇ ಮಳೆಯಂತೆ. ನೋಡೋಣ ಮೊದಲು ಇವರಿಗೆ ಮಾಡಿಸಿ" ಎಂದರು.

ರಾವತ್ ನನ್ನನ್ನ ತನ್ನ ಕೋಣೆಗೆ ಕರೆದುಕೊಂಡು ಹೋದರು. ನನ್ನ ಲಗೇಜೆಲ್ಲ ಕಾರಿನಲ್ಲೆ ಇತ್ತು. ರಾವತ್ ಅಫಿಷಿಯಲ್ ಪಾಸ್‌ಪೋರ್ಟ್ ಮಾಡುವುದಕ್ಕೆ ನನ್ನ ಕೈಯಲ್ಲಿ ಫಾರ್ಮ್ಸ್ ತುಂಬಿಸಿದರು. ಅನಂತರ ಹಾಗೆ ಹೀಗೆ ಎಂದು ಅಲ್ಲೇ ಸಮಯ ಆಳು ಮಾಡಿ ಬೇಕಂತಲೆ ಕಛೇರಿಯಲ್ಲಿ ಫಾರ್ಮ್ಸ್ ತೆಗೆದುಕೊಳ್ಳುವ ಸಮಯ ಮುಗಿಯುವ ಹೊತ್ತಿಗೆ ಸರಿಯಾಗಿ ನನ್ನನ್ನ ಕರೆದುಕೊಂಡು ಹೋದರು. ಕಾರಣ ಎಲ್ಲರಿಗೂ ಒಟ್ಟಾಗಿ ಮುಗಿಯಲಿ ಎನ್ನುವುದೆ ರಾವತ್ ಉಪಾಯ. ಇದು ಹೀಗೆ ಆಗುತ್ತದೆಂದು ನನಗೆ ಬೆಳಗ್ಗೆಯೆ ರಾವತ್ ಚಟುವಟಿಕೆಗಳಿಂದಲೆ ತಿಳಿದುಹೋಗಿತ್ತು.

* * *

ಅದೇ ಸಾಯಂಕಾಲ ಕಲಕತ್ತಾದಿಂದ ಜಗಬಂಧು ವಿಮಾನದಲ್ಲಿ ಬರುತ್ತಾರೆಂದು ಬಳ್ಳಾ ಅವರು ತಿಳಿಸಿದರು. ಜೊತೆಗೆ ಇಬ್ಬರೂ ಹೋಟಲಿನಲ್ಲಿ ಒಂದೇ ಕೋಣೆಯಲ್ಲಿದ್ದರೆ ಹಣ ಉಳಿಯುತ್ತದೆ ಎಂದು ತಿಳಿಸಿದ್ದರಿಂದ ನಾನು ಅದೇ ಕಾರಿನಲ್ಲಿ ಸಾಯಂಕಾಲ ೮ ಗಂಟೆಗೆ ವಿಮಾನ ನಿಲ್ದಾಣಕ್ಕೆ ಹೋಗಿ ಜಗಬಂಧುವುಗಾಗಿ ಕಾಯತೊಡಗಿದೆ. ಜಗಬಂಧುಗೆ ವಿಮಾನದಲ್ಲಿ ಹಾರುವ ಸೌಕರ್ಯ ಇಲ್ಲದಿದ್ದರೂ ಮೇಲಿನ ಅಧಿಕಾರಿಗಳಿಂದ ವಿಶೇಷ ಸ್ಯಾಂಕ್ಷನ್ ಪಡೆದು ವಿಮಾನದಲ್ಲಿ ಬರುತ್ತಿರುವುದಾಗಿ ತಿಳಿಯಿತು.

ಜಗಬಂಧು ಮತ್ತು ನಾನು ಅಲ್ಲಿಂದ ಕರೋಲ್‌ಬಾಗ್‌ಗೆ ಹೋಗಿ ಹೋಟಲ್‌ನಲ್ಲಿ ಉಳಿದುಕೊಂಡೆವು. ಮರು ದಿನ ಬೆಳಗ್ಗೆ ಶುಕ್ರವಾರ ಹೋಟಲ್‌ನಿಂದ ಕಛೇರಿಗೆ ಹೋಗಿ ಜಗಬಂಧು ಪಾಸ್‌ಪೋರ್ಟ್ ಫಾರ್ಮ್ಸ್ ತುಂಬಿಸಿಕೊಂಡು ರಾವತ್ ಜೊತೆಗೆ ಪಾಸ್‌ಪೋರ್ಟ್ ಕಛೇರಿಗೆ ತಲುಪಿ ಫಾರ್ಮ್‌ಗಳನ್ನು ಕೊಟ್ಟೆವು. ಅನಂತರ ಮಧ್ಯಾಹ್ನ ಊಟ ಮಾಡಿ ಕಛೇರಿಯಲ್ಲಿ ಕಾಲ ಕಳೆದೆವು. ಸಾಯಂಕಾಲ ೫ ಗಂಟೆಗೆ ಪಾಸ್‌ಪೋರ್ಟ್ ಕಛೇರಿಗೆ ಹೋಗಿದ್ದೆ ನಮ್ಮ ಪಾಸ್‌ಪೋರ್ಟ್‌ಗಳು ರೆಡಿಯಾಗಿದ್ದವು.

ಆ ದಿನ ರಾತ್ರಿ ಊಟ ಮಾಡಲು ನಾನು ಮತ್ತು ಜಗಬಂಧು ಹೊರಗೆ ಬರುತ್ತಿದ್ದಂತೆ ಒರಿಸ್ಸಾದ ದಾಸ್ ಬಂದು "ವೆಂಕಟ್‌ಸ್ವಾಮಿ ಸಾಬ್ ಆಫ್ ಹೈ ಕ್ಯಾ?" ಎಂದ. "ಹೌದು ಮಾರಾಯ ನಾನೆ" ಎಂದು ಅವರನ್ನು ಕರೆದುಕೊಂಡು ಊಟಕ್ಕೆ ಹೊರಟೆವು. ನಾಳೆ, ನಾಳಿದ್ದು ಶನಿವಾರ ಮತ್ತು ಭಾನುವಾರವಾಗಿದ್ದು ದೆಹಲಿಯಲ್ಲಿ ನಮಗೇನೂ ಕೆಲಸವಿರಲಿಲ್ಲ. ಕಾರು ತೆಗೆದುಕೊಂಡು ದೆಹಲಿಯೆಲ್ಲ ಸುತ್ತಾಡುವ ಯೋಚನೆ ಬಂದರೂ ಚೀನಾ ಪ್ರವಾಸದ ಕಥೆ ಏನಾಗುತ್ತದೆ ಎನ್ನುವುದು ಗೊತ್ತಿಲ್ಲದೆ ಸುಮ್ಮನಾದೆವು.

ಮೂವರು ಮಾತನಾಡುತ್ತ ಕರೋಲ್‌ಬಾಗ್‌ನ ದಾಬಾ ಒಂದರಲ್ಲಿ ಊಟ ಮಾಡಿ

ಹೋಟಲಿಗೆ ಬಂದೆವು. ದಾರಿಯಲ್ಲಿ ಮನೆಗೆ ಮತ್ತು ವಿದ್ಯಾಧರನ್ ಅವರಿಗೆ ಫೋನು ಮಾಡಿ ವಿಷಯ ತಿಳಿಸಿದೆ. ಮೂವರು ಒಂದೇ ಕೋಣೆಯಲ್ಲಿ ರಾತ್ರಿಯೆಲ್ಲ ಹರಟುತ್ತಾ ಮಲಗಿದೆವು. ಎರಡು ದಿನಗಳು ಅಲ್ಲಿ ಇಲ್ಲಿ ಸುತ್ತಾಡುತ್ತ ಊಟಮಾಡುವುದು, ಮಲಗಿ ನಿದ್ದೆ ಮಾಡುವುದನ್ನೆ ಕೆಲಸ ಮಾಡಿಕೊಂಡಿದ್ದೆವು. ದೆಹಲಿಯಲ್ಲಿ ತಂಡೂರಿ ರೋಟಿ ಮತ್ತು ಸಬ್ಜಿಗಳನ್ನು ತಿನ್ನುವಾಗ ಪದೇ ಪದೇ ಲಖನೌ ನಗರ ಜ್ಞಾಪಕಕ್ಕೆ ಬರುತ್ತಿತ್ತು. ಎಂಬತ್ತರ ದಶಕದಲ್ಲಿ ೫ ವರ್ಷಗಳ ಕಾಲ ನಾನು, ಸುಶೀಲ ಮತ್ತು ಕ್ರಾಂತಿ ಜೊತೆಗೆ ಲಕನೌದಲ್ಲಿದ್ದೆ. ಲಕನೌ ನಿಜವಾಗಿಯೂ ವಂಡರ್‌ಫುಲ್ ಸಿಟಿ. ಅಲ್ಲಿನ ಜನರ ಆಪ್ಯಾಯಮಾನ ಆಥಿತ್ಯ, ಅತಿ ಮೃದುವಾದ ಹಿಂದಿ ಉರ್ದು ಸಮ್ಮಿಶ್ರ ಭಾಷೆಯಾದ ಲಕನೌವಿ, ಗೋಮತಿ ನದಿಯ ಇಕ್ಕೆಲುಬುಗಳಲ್ಲಿ ಕಟ್ಟಿರುವ ಮೊಘಲರ ಐಷಾರಾಮ ಮಹಲುಗಳು, ವಿಪರೀತ ಚಳಿ ಮತ್ತು ವಿಪರೀತ, ಅಲ್ಲಿನ ತಿಂಡಿಗಳು ಇತ್ಯಾದಿ ಪದೇ ಪದೇ ಜ್ಞಾಪಕಕ್ಕೆ ಬರುತ್ತಿದ್ದವು. ಲಖನೌನಲ್ಲಿ ನಾನು, ಸುಶೀಲ ಮತ್ತು ಕ್ರಾಂತಿ ಮೂವರು ಒಳ್ಳೆ ಹಿಂದಿಯನ್ನು ಕಲಿತುಕೊಂಡು ನಿರರ್ಗಳವಾಗಿ ಮಾತನಾಡುತ್ತಿದ್ದೇವೆ. ಸಿನಿಮಾ ದೂರದರ್ಶನ ಎಲ್ಲವೂ ಹಿಂದಿಮಯವಾಗಿತ್ತು.

ಸೋಮವಾರ ಮೂವರು ಬೆಳಗ್ಗೆಯೆ ಕಛೇರಿಗೆ ಹೋಗಿ ಅಲ್ಲಿಂದ ರಾವತ್ ಜೊತೆಗೆ ಚೀನಾ ಎಂಬಸಿಗೆ ಹೋಗಿ ನನ್ನ ಮತ್ತು ಜಗಬಂಧು ವೀಸಾ ಫಾರ್ಮ್‌ಗಳನ್ನು ಕೊಟ್ಟಾಗ ಅಲ್ಲಿದ್ದ ಚೀನಿ ಅಧಿಕಾರಿ "ನಿಮಗೆ ವೀಸಾ ಬೇಕಾದರೆ ಹೆಬೈ ಪ್ರಾವಿನ್ಸ್‌ನಿಂದ ವೀಸಾ ಕ್ಲಿಯರನ್ಸ್ ಸರ್ಟಿಫಿಕೆಟ್ ತರಿಸಿಕೊಡಬೇಕು" ಎಂದು ಅದನ್ನೇ ಒಂದು ಪೇಪರಿನಲ್ಲೂ ಬರೆದುಕೊಟ್ಟುಬಿಟ್ಟ. ರಾವತ್ "ಸದ್ಯಕ್ಕೆ ವೀಸಾ ಅಪ್ಲಿಕೇಷನ್ ತೆಗೆದುಕೊಳ್ಳಿ" ಎಂದರು. ಅಧಿಕಾರಿ ಮತ್ತೊಮ್ಮೆ ಅದನ್ನೇ ಜ್ಞಾಪಿಸಿ ಅಪ್ಲಿಕೇಷನ್ ತೆಗೆದುಕೊಂಡರು. ಚೀನಾದ ಹೆಬೈ ಪ್ರಾವಿನ್ಸ್‌ನಿಂದ ವೀಸಾ ಕ್ಲಿಯರನ್ಸ್ ಪಡೆಯುವುದಾದರೂ ಹೇಗೆ? ರಾವತ್ ತಲೆ ಕೆರೆದುಕೊಂಡರು.

ಅಲ್ಲಿಂದ ಪಾಸ್‌ಪೋರ್ಟ್ ಕಛೇರಿಗೆ ಹೋಗಿ ದಾಸ್ ಪಾಸ್‌ಪೋರ್ಟ್ ಅಪ್ಲಿಕೇಷನ್ ಕೊಟ್ಟು ನಮ್ಮ ಕಛೇರಿಗೆ ಬಂದು ಬಳ್ಳಾ ಅವರಿಗೆ ಹೇಳಿದಾಗ "ಇದು ಒಳ್ಳೆ ಗ್ರಹಚಾರವಾಯಿತಲ್ಲ. ಯಾರನ್ನ ಹಿಡಿಯಬೇಕು? ಹೆಬೈ ಪ್ರಾವಿನ್ಸ್‌ನ ಆಧಿಕಾರಿಗಳನ್ನು ನಾವು ಹೇಗೆ ಸಂಪರ್ಕಿಸುವುದು? ಸಂಪರ್ಕಿಸಿದರು ಪ್ರಯೋಜನವಾಗುತ್ತದೆಯೆ?" ಬಳ್ಳಾ ತಲೆ ಕೆರೆದುಕೊಂಡು ಯೋಚಿಸತೊಡಗಿದರು.

ಸಾಯಂಕಾಲ ೩ ಗಂಟೆಗೆ ನಾವು ಹೋಗುವ ಚೀನಾದ ತರಬೇತಿ ಕೇಂದ್ರದ ಇಬ್ಬರು ಸಂಚಾಲಕರಲ್ಲಿ ಒಬ್ಬರಿಗೆ ಫೋನ್ ಮಾಡಿದೆ. ಅವರು ಹೇಳುವುದು ನನಗೆ, ನಾನು ಹೇಳುವುದು ಅವರಿಗೆ ಅರ್ಥವಾಗಲೇ ಇಲ್ಲ. ನಾನು ವೇಗವಾಗಿ ಮಾತನಾಡಿದರೆ ಅವರು ಒಂದೊಂದೆ ಪದವನ್ನು ಹತ್ತಾರು ಸಕೆಂಡುಗಳ ಅಂತರದಲ್ಲಿ ಚೀನಿ ಆಕ್ಸೆಂಟ್‌ನಲ್ಲಿ ಉಚ್ಚರಿಸತೊಡಗಿದ್ದು ಫೋನ್ ಬಿಲ್ಲು ಒಂದೇ ಸಮನೇ ಏರುತ್ತಿತ್ತು. ಹತ್ತು ನಿಮಿಷಗಳು ಮಾತನಾಡಿದ ಮೇಲೂ ಏನೂ ಪ್ರಯೋಜನವಾಗಲಿಲ್ಲ. ತತ್ ಎಂದು ಫೋನು

ಇಟ್ಟುಬಿಟ್ಟೆ. ಒಂದು ನಿಮಿಷಕ್ಕೆ ೮೦ ರೂಪಾಯಿಗಳಂತೆ ಫೋನು ಬಿಲ್ಲು ಏರಿತ್ತು. ಕಛೇರಿಗೆ ಹೋಗಿ ವಿವರವಾಗಿ ಅದೇ ಅಧಿಕಾರಿಗೆ ಒಂದು ಈ-ಮೇಲ್ ಕೊಟ್ಟೆ. ಅನಂತರ ಮೂವರು ಹೋಟಲ್ ಕಡೆಗೆ ಹೊರಟೆವು. ಆ ಸಾಯಂಕಾಲ ದಾಸ್‌ಗೆ ಪಾಸ್‌ಪೋರ್ಟ್ ಸಿಕ್ಕಿತ್ತು.

ಮರು ದಿನ ಕಛೇರಿಗೆ ಬಂದಾಗ ನನ್ನ ಹೆಸರಿಗೆ ಚೀನಾದಿಂದ ಒಂದು ಈ-ಮೇಲ್ ಬಂದಿದ್ದು ಅದರಲ್ಲಿ ಮೂವರಿಗೂ ಆಡ್ಮಿಷನ್ ಫಾರ್ಮ್‌ಗಳಿದ್ದವು. ಆ ದಿನ ದಾಸ್ ಫಾರ್ಮ್ ತೆಗೆದುಕೊಂಡೋಗಿ ವೀಸಾ ಕಛೇರಿಯಲ್ಲಿ ಕೊಟ್ಟು ಬಂದೆವು. ಆಗಲೂ ಚೀನಾ ಅಧಿಕಾರಿಗಳು ಹೆಬ್ಬೈ ಪ್ರಾವಿನ್ಸ್‌ನಿಂದ ವೀಸಾ ಕ್ಲಿಯರನ್ಸ್ ಸರ್ಟಿಫಿಕೆಟ್ ತರಿಸಿಕೊಡಬೇಕು ಎಂದರು. ಕಛೇರಿಗೆ ಬಂದು ಬಳ್ಳಾ ಅವರಿಗೆ ಮತ್ತೆ ವಿಷಯ ತಿಳಿಸಿದೆವು. ಬಳ್ಳಾ ಅವರು ಕೂಡಲೆ ಚೀನಾಗೆ ಫೋನ್ ಮಾಡಿದರು. ಇನ್ನೊಬ್ಬ ಸಂಚಾಲಕ ಫೋನ್‌ನಲ್ಲಿ "ನಿಮಗೆ ನನ್ನ ಫೋನ್ ಸಂಖ್ಯೆ ಕೊಟ್ಟಿದ್ದು ಯಾರು? ನೀವ್ಯಾಕೆ ನನಗೆ ಫೋನ್ ಮಾಡಿದ್ದು?" ಎಂದು ಬಳ್ಳಾರನ್ನು ಪ್ರಶ್ನಿಸಿದ. ಸುಮಾರು ಹೊತ್ತು ಮಾತನಾಡಿದ ಬಳ್ಳಾ ಅವರು ಫೋನ್ ಇಡುತ್ತ "ನನ್ನನ್ನೇನಾದರು ಚೀನಾಗೆ ಕಳುಹಿಸಿದರೆ ಹೋಗಿ ಕಪಾಳಕ್ಕೆ ಒಂದು ಕೊಡ್ತೀನಿ ಅವನಿಗೆ" ಎಂದರು.

ಅನಂತರ, ಬಳ್ಳಾ ಅವರು "ನಾಳೆ ಪಾರ್ಲಿಮೆಂಟ್ನಲ್ಲಿರುವ ಚೀನಾ ಡೆಸ್ಕ್‌ಗೆ ಹೋಗಿ ವೀಸಾ ಕ್ಲಿಯರನ್ಸ್‌ಗೆ ಪ್ರಯತ್ನಿಸೋಣ" ಎಂದರು. ಮೂವರಿಗೂ ಅಡ್ಮಿಷನ್ ಲೆಟರ್ ಕಳುಹಿಸಿದ ಅಧಿಕಾರಿಗೆ ಹೆಬ್ಬೈ ಪ್ರಾವಿನ್ಸ್‌ನ ವೀಸಾ ಕ್ಲಿಯರನ್ಸ್ ಸರ್ಟಿಫಿಕೆಟ್ ಬಗ್ಗೆ ಈ-ಮೇಲ್ ಕೊಟ್ಟೆ. ಸಾಯಂಕಾಲ ಚೀನಾ ಅಧಿಕಾರಿ ನನಗೊಂದು ಈ-ಮೇಲ್ ಕಳುಹಿಸಿದ್ದರು. ಅದೇ ಪ್ರತಿಯನ್ನು ಭಾರತದಲ್ಲಿರುವ ಚೀನಾ ಎಂಬೆಸಿಗೂ ಕಳುಹಿಸಲಾಗಿತ್ತು. ಅನಂತರ ಮೂವರು ಮಾತನಾಡುತ್ತ ಕರೋಲ್‌ಬಾಗ್‌ನ ಹೋಟಲ್ ಕಡೆಗೆ ಕಾರಿನಲ್ಲಿ ಹೊರಟೆವು.

ದಾರಿಯಲ್ಲಿ ಜಗಬಂಧು "ನಾಳೆ ನಮ್ಮ ಕೆಲಸ ಆಗೋಗುತ್ತೆ ಸ್ವಾಮಿ ಸಾಬ್" ಎಂದರೆ ದಾಸ್ "ಹೌದು! ಸರ್ ನಾಳೆ ನಮ್ಮ ಕೆಲಸ ಖಂಡಿತ ಆಗುತ್ತೆ. ಇಲ್ಲ ಅಂದರೆ ನೀವು ನಾನು ಬರುವುದಕ್ಕೆ ಮುಂಚೇನೆ ಚೀನಾಗೆ ಹೊರಟೋಗ್ಬೇಕಾಗಿತ್ತು" ಎಂದರು. ಜಗಬಂಧು "ಸ್ವಾಮಿ ಸಾಬ್ ಆಫ್ ತು ಹೈ. ಹಮಾರಾ ಕ್ಯಾ ಪ್ರಾಬ್ಲಮ್? ನಮ್ಮನ್ನ ದೆಹಲಿಗೆ ಕರ್ಕೊಂಡು ಬಂದಿದ್ದೀರಿ. ಚೀನಾಗೂ ನೀವೆ ಕರ್ಕೊಂಡು ಹೋಗ್ತೀರಿ" ಎಂದರು. ಇವರ ಮಾತುಗಳಿಂದ ನನಗೆ ಸ್ವಲ್ಪ ಸ್ಫೂರ್ತಿ ಬಂದಿದ್ದರೂ ಈ ಚೀನಿಯರು ನಮ್ಮನ್ನ ಅವರ ದೇಶದ ಒಳಕ್ಕೆ ಬಿಟ್ಟುಕೊಳ್ಳುತ್ತಾರೋ ಇಲ್ಲವೊ ಎನ್ನುವ ಗುಮಾನಿ ಬಂದಿತು.

ಕಲಕತ್ತಾದಲ್ಲಿ ಜಗಬಂಧು ಅವರ ನಿರ್ದೇಶಕರು "ಜಗಬಂಧು ನೀವು ಸುಮ್ಮನೆ ಬಟ್ಟೆ ತೆಗೆದುಕೊಂಡು ದೆಹಲಿ ವಿಮಾನ ನಿಲ್ದಾಣಕ್ಕೆ ಹೋಗ್ಬಿಡು. ಅಲ್ಲಿಗೆ ಸೀನಿಯರ್

ಜಿಯಾಲಜಿಸ್ಟ್ ವೆಂಕಟಸ್ವಾಮಿ ಬಂದಿರ್ತಾರೆ. ಅವರು ನಿಮಗೆ ಎಲ್ಲಾ ಏರ್ಪಾಟು ಮಾಡಿರ್ತಾರೆ" ಅಂತ ಹೇಳಿ ಕಳುಹಿಸಿದರಂತೆ. ಜಗಬಂಧುವಿನ ಈ ಮಾತುಗಳನ್ನು ಕೇಳಿ ಸುಮ್ಮನೆ ನಕ್ಕೆ.

ಮರು ದಿನ ಬೆಳಗ್ಗೆಯೆ ನಾವು ಮೂವರು ಚೀನಾ ಎಂಬೆಸಿಗೆ ಹೋಗಿ ವೀಸಾ ಬಗ್ಗೆ ವಿಚಾರಿಸಿ ನನ್ನ ಹೆಸರಿಗೆ ಬಂದಿದ್ದ ಈ–ಮೇಲ್ ತೋರಿಸಿದೆವು. ಈ–ಮೇಲ್ ನೋಡಿದ ಚೀನಿ ಹೆಣ್ಣು ಮಗಳೊಬ್ಬಳು "ನೀವು ಗೇಟ್ ನಂಬರ್ ೮ ಕ್ಕೆ ಹೋಗಿ. ಅಲ್ಲಿ ಒಬ್ಬ ಅಧಿಕಾರಿ ಇದ್ದಾರೆ. ಅವರು ನಿಮಗೆ ಸಹಾಯ ಮಾಡಬಹುದು" ಎಂದಳು. ನಾವು ಅಲ್ಲಿಂದ ಆಕೆ ಹೇಳಿದ ಗೇಟಿಗೆ ಹೋಗಿ ಅಲ್ಲಿದ್ದ ಒಬ್ಬ ಭಾರತೀಯ ಯುವಕನಿಗೆ ವಿಷಯ ತಿಳಿಸಿದೆವು. ಆತ ನಮ್ಮಲಿದ್ದ ಈ–ಮೇಲ್ ತೆಗೆದುಕೊಂಡು ಹತ್ತು ನಿಮಿಷ ಅಲ್ಲೆ ಕಾಯುವಂತೆ ತಿಳಿಸಿ ಒಳಕ್ಕೆ ಹೋದ. ಸುಮಾರು ಅರ್ಧಗಂಟೆಯಾದ ಮೇಲೆ ನಮ್ಮನ್ನು ಒಳಕ್ಕೆ ಆಹ್ವಾನಿಸಲಾಯಿತು. ಚೀನಾದಿಂದ ಬಂದಿದ್ದ ಪ್ರವಾಸಿಗರ ಗುಂಪೊಂದು ಅಲ್ಲೆಲ್ಲ ಓಡಾಡುತ್ತ ವಿಡಿಯೊ ಕ್ಯಾಮರಾದಲ್ಲಿ ಎಲ್ಲವನ್ನು ಸೆರೆಹಿಡಿಯುತ್ತಿತ್ತು. ಅವರನ್ನು ನೋಡಿದ ನನಗೆ ಚೀನಾದಲ್ಲಿರುವ ಭಾರತೀಯ ಎಂಬೆಸಿ ಬಗ್ಗೆ ಯೋಚನೆ ಬಂದಿತು.



ಗ್ರೇಟ್ ಹಾಲ್ ಆಫ್ ದಿ ಪಿಪಲ್ (ಚೀನಾ ದೇಶದ ಪಾರ್ಲಿಮೆಂಟ್)

ಒಳಕ್ಕೆ ಹೋಗಿದ್ದೆ ನಿಕ್ಕರ್ ಮತ್ತು ಬನಿಯಾನ್‌ನಲ್ಲಿದ್ದ ಚೀನಾದ ಒಬ್ಬ ಕುಳ್ಳನೆ ವ್ಯಕ್ತಿ ನಮ್ಮನ್ನು ಒಂದು ಸಣ್ಣ ಕೋಣೆಯಲ್ಲಿ ಕೂರಿಸಿ, ನಮ್ಮಲ್ಲಿದ್ದ ಆಡ್ಮಿಷನ್ ಲೆಟರುಗಳನ್ನು ತೆಗೆದುಕೊಂಡು "ಇಲ್ಲೇ ಇರಿ" ಎಂದು ಒಳಕ್ಕೆ ಹೋದರು. ಬಹುಶಃ ನಮ್ಮ ಅಡ್ಮಿಷನ್ ಲೆಟರುಗಳನ್ನು ಈ–ಮೇಲ್‌ನಲ್ಲಿ ಚೆಕ್ ಮಾಡಲು ಹೋಗಿರಬೇಕು ಎಂದುಕೊಂಡೆವು. ಅರ್ಧಗಂಟೆಯಲ್ಲಿ ಹಿಂದಕ್ಕೆ ಬಂದ ಆ ಅಧಿಕಾರಿ "ಈ ದಿನ ವೀಸಾ ದೊರಕುವುದಿಲ್ಲ. ನಾಳೆ ಬೆಳಗ್ಗೆ ೯ ಗಂಟೆಗೆ ಬಂದು ವೀಸಾ ತೆಗೆದುಕೊಳ್ಳಿ" ಎಂದರು. ಒಂದು ವಾರದಿಂದ ದೆಹಲಿಯಲ್ಲಿ ನಾಯಿಗಳಂತೆ ಅಲೆಯುತ್ತಿದ್ದ ನಮ್ಮ ಮುಖಗಳ ಮೇಲೆ ಒಮ್ಮೆಲೆ ನಗು ಮೂಡಿತು. ನಮ್ಮ ಅಡ್ಮಿಷನ್ ಲೆಟರುಗಳ ಮೇಲೆ ಒಂದೊಂದು ಮುದ್ರೆಯಾಕಿ ಅದರ

ಮೇಲೆ ಸಹಿಮಾಡಿ "ಇವುಗಳನ್ನು ಮೊದಲನೇ ಗೇಟಿನಲ್ಲಿ ಕೊಡಿ. ನಾನು ಆಗಲೆ ಫೋನ್ ಮಾಡಿದ್ದೀನಿ. ಎಕ್ಸ್‌ಪ್ರೆಸ್ ವೀಸಾ ಕೊಡಿ ಅಂತ ಹೇಳಿ. ಹ್ಯಾಪಿ ಸ್ಟೇ ಇನ್ ಚೀನಾ" ಎಂದು ನನ್ನ ಕೈಕುಲುಕಿ, ಭುಜವನ್ನು ತಟ್ಟಿ ಕಳುಹಿಸಿದರು. ನಾವು ಮೂವರು ಅವರಿಗೆ ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸಿ ಒಂದನೇ ಗೇಟಿಗೆ ಹೋಗಿ ಲೆಟರುಗಳನ್ನು ಕೊಟ್ಟು ಕಛೇರಿಯ ಕಡೆಗೆ ಹೊರಟೆವು.

ಚೀನಾ ಎಂಬೆಸಿಯಿಂದ ಬಂದು ಬಳ್ಳಾ ಅವರಿಗೆ ವಿಷಯ ತಿಳಿಸಿದೆವು. ಅವರು "ಚಲೊ ಅಚ್ಚಾ ಹುವಾ. ಹೌರ್ ಕ್ಯಾ? ತಯಾರಿ ಕರ್ಲೊ" ಎಂದರು. ಹನ್ನೊಂದು ಗಂಟೆಗೆ ವಿಮಾನದ ಟಿಕೆಟ್‌ಗಳನ್ನು ಬ್ಲಾಕ್ ಮಾಡಿ ಅಲ್ಲಿಂದ ಒಂದು ಆಸ್ಪತ್ರೆಗೆ ಹೋಗಿ ಮೆಡಿಕಲ್ ಸರ್ಟಿಫಿಕೆಟ್ ಕೇಳಿದಾಗ "ನಾವ್ಯಾರೂ ಕೊಡುವುದಿಲ್ಲ. ಸಪ್ದರ್‌ಜಂಗ್ ಆಸ್ಪತ್ರೆಗೋಗಿ. ಅಲ್ಲೊಂದು ಮೆಡಿಕಲ್ ಬೋರ್ಡ್ ಇರುತ್ತೆ. ಅಲ್ಲಿ ಮೆಡಿಕಲ್ ಚೆಕ್ ಅಪ್ ನಡೆಸಿದ ಮೇಲೆ ಕೊಡ್ತಾರೆ" ಎಂದರು. ಅದು ಒಂದು ದಿನದ ಕೆಲಸವಲ್ಲ ಒಂದು ವಾರದ ಕೆಲಸ. ಅಲ್ಲಿಂದ ಹಿಂದಕ್ಕೆ ಬಂದೆವು.

ಮತ್ತೆ ಸಾಯಂಕಾಲ ವಿಮಾನ ಟಿಕೆಟ್ ಪಡೆಯಲು ಹೊರಟೆವು. ಆದರೆ ಆ ದಿನ ಬೀಜಿಂಗ್‌ಗೆ ಹೋಗುವ ಯಾವ ದಾರಿಯಲ್ಲೂ ಟಿಕೆಟುಗಳು ಖಾಲಿ ಇರಲಿಲ್ಲ. ದೆಹಲಿಯಿಂದ ಬೀಜಿಂಗ್‌ಗೆ ನೇರವಾಗಿ ವಿಮಾನ ಇಲ್ಲದ ಕಾರಣ ದೆಹಲಿ–ಹಾಂಗ್‌ಕಾಂಗ್, ಇಲ್ಲ ದೆಹಲಿ–ಬ್ಯಾಂಕಾಕ್ ಮೂಲಕ ಹೋಗಬೇಕಾಗಿತ್ತು. ಕೊನೆಗೆ ಮರುದಿನ ೧೫ರಂದು ಬೆಳಗ್ಗೆ ಬ್ಯಾಂಕಾಕ್ ಮೂಲಕ ಏರ್ ಇಂಡಿಯಾ ಮತ್ತು ಕೊಲಲಂಪುರ್ ಏರ್‌ವೇಸ್‌ನಲ್ಲಿ ಟಿಕೆಟ್ ಬ್ಲಾಕ್ ಮಾಡಿಬಂದೆವು.

ಮರುದಿನ ಬೆಳಗ್ಗೆ ವೀಸಾ ತೆಗೆದುಕೊಂಡು ಕಚೇರಿ ತಲುಪಿದೆವು. ರಾವತ್ ಜೊತೆಗೆ ಹೋಗಿ ಏರ್ ಟಿಕೆಟ್ ಪಡೆಯಲು ರಾವತ್‌ಗಾಗಿ ೧೧:೩೦ ಗಂಟೆಯವರೆಗೆ ಕಾದೆವು. ರಾವತ್ ಬಂದಿದ್ದೆ ಕಛೇರಿಯಲ್ಲಿ ಆರ್ಡರ್ ತೆಗೆದುಕೊಂಡು ೧೨ ಗಂಟೆಗೆ ಭಾಮಾ ಮತ್ತು ಲ್ಹಾರಿ ಏಜನ್ಸಿಗೆ ಹೋದೆವು. ನಮ್ಮ ಟಿಕೆಟ್‌ಗಳು ಕನ್‌ಫರ್ಮ್ ಆಗಿರಲಿಲ್ಲ. ಕೊನೆಗೆ ಕಾದು ಕಾದು ಸಾಯಂಕಾಲ ೪:೩೦ ಗಂಟೆಗೆ ಕನ್‌ಫರ್ಮ್ ಆಯಿತು. ಅಲ್ಲೇ ಒಂದಷ್ಟು ಇಂಡಿಯನ್ ಹಣಕೊಟ್ಟು ಯುಎಸ್ ಡಾಲರ್ ಪಡೆದುಕೊಂಡೆವು. ಅಲ್ಲಿಂದ ಹಿಂದಕ್ಕೆ ಬಂದು ಲಗೇಗ್ ಪ್ಯಾಕ್ ಮಾಡಿಕೊಂಡು ರಾತ್ರಿ ೮:೩೦ ಗಂಟೆಗೆ ಹೋಟಲ್ ಖಾಲಿ ಮಾಡಿ ೧೦ ಗಂಟೆಗೆ ವಿಮಾನ ನಿಲ್ದಾಣ ತಲುಪಿದೆವು. ೧೧ ಗಂಟೆಗೆ ಚೆಕ್‌ಆಪ್ ಎಲ್ಲಾ ಮುಗಿದು ವೈಟಿಂಗ್‌ಹಾಲಿನಲ್ಲಿ ಕುಳಿತುಕೊಂಡೆವು.

ಲಗೇಜ್ ಚೆಕ್‌ಅಪ್ ಮಾಡುವಾಗ ನನ್ನ ಪಾಸ್‌ಪೋರ್ಟ್ ನೋಡಿದ ವ್ಯಕ್ತಿಯೊಬ್ಬರು "ಆರ್ ಯು ಫ್ರಂ ಕೆಜಿಎಫ್?" ಎಂದರು. "ಹೌದು!" ಎಂದೆ. "ಐ ಲೈಕ್ ದಟ್ ಪ್ಲೇಸ್. ನಾನು ಚಿಕ್ಕವನಾಗಿದ್ದಾಗ ಅಲ್ಲಿಗೆ ಬರ್ತಾಯಿದ್ದೆ. ನಮ್ಮ ಅಜ್ಜಿ ರಂಗನಾಯಕಮ್ಮ ಅಲ್ಲಿದ್ದರು" ಎನ್ನುತ್ತಿದ್ದಂತೆ. "ನಿಮ್ಮ ತಂದೆ ಮೈನಿಂಗ್‌ನಲ್ಲಿ ಕೆಲಸ ಮಾಡ್ತಾಯಿದ್ದರ?" ಕೇಳಿದೆ.

"ಇಲ್ಲ ನಮ್ಮ ತಂದೆ ನಾನು ಹುಟ್ಟುವುದಕ್ಕೆ ಮುಂಚೇನೆ ದೆಹಲಿಗೆ ಬಂದಬಿಟ್ಟಿದ್ದರು" ನನ್ನ ಹಿಂದೆ ಕ್ಯೂ ಇದ್ದುದ್ದರಿಂದ "ನಾನು ಇನ್ನು ಬರ್ತೀನಿ. ನಿಮ್ಮ ಹೆಸರು?" ಕೇಳಿದೆ. "ವಿಜಯ್‌ಕುಮಾರ್, ವಿಷ್‌ಯು ಆಲ್ ದ ಬೆಸ್ಟ್. ಸಾರಿ ನಿಮಗೆ ವಿಂಡೊ ಸೀಟ್ ಕೊಡುವುದಕ್ಕಾಗಲಿಲ್ಲ" ಎನ್ನುತ್ತ ಕೈಕುಲುಕಿ ಕಳುಹಿಸಿದರು. ಅವರೆ ನಮ್ಮ ಲಗೇಜನ್ನು ದೆಹಲಿಯಿಂದ ಬೀಜಿಂಗ್‌ಗೆ ನೇರವಾಗಿ ಬುಕ್ ಮಾಡಿದ್ದರು.

ಈ ಕೆಜಿಎಫ್ ನಗರ ಕರ್ನಾಟಕದಲ್ಲಿ ಒಂದು ಕಾಲಕ್ಕೆ "ಲಿಟ್ಲ್ ಇಂಗ್ಲೆಂಡ್" ಎಂಬ ಹೆಸರಿನಿಂದ ಪ್ರಪಂಚ ಪ್ರಖ್ಯಾತಿ ಪಡೆದಿತ್ತು. ಕ್ರಿಶ.೧೯೧೨ ರಲ್ಲಿ ಏಷಿಯಾದಲ್ಲಿಯೆ ಮೊದಲ ಬಾರಿಗೆ ಈ ಗಣಿಗಳಿಗೆ ಶಿವನಸಮುದ್ರದಿಂದ ವಿದ್ಯುತ್ತನ್ನು ಜೋಡಿಸಲಾಗಿತ್ತು. ಒಂದು ಕಾಲಕ್ಕೆ ರಾಜ್ಯದಲ್ಲಿಯೆ ಒಳ್ಳೆ ವಿದ್ಯಾಭ್ಯಾಸ ನೀಡುತ್ತಿದ್ದ ವಿದ್ಯಾಲಯಗಳು ಈ ನಗರದಲ್ಲಿದ್ದವು. ಇದೇ ಕೆಜಿಎಫ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಓದಿದ ಹೆಮ್ಮೆ ನನ್ನದು. ಈ ಕಾಲೇಜಿನಲ್ಲಿ ಓದಿದ ವಿದ್ಯಾರ್ಥಿಗಳು ದೇಶದಾದ್ಯಂತ ಎಲ್ಲಾ ಇಲಾಖೆಗಳಲ್ಲೂ ಇದ್ದಾರೆ. ಒಂದು ಕಾಲಕ್ಕೆ ಬೆಂಗಳೂರಿನಲ್ಲಿ ಪ್ರಾರಂಭಗೊಂಡ ಕಾರ್ಖಾನೆಗಳಲ್ಲೆಲ್ಲ ಚಿನ್ನದ ಗಣಿಗಳಲ್ಲಿ ಕೆಲಸ ಮಾಡಿದ ಕಾರ್ಮಿಕರೆ ತುಂಬಿಕೊಂಡಿದ್ದರು. ಕ್ರಿ.ಶ.೧೮೮೦ ರಲ್ಲಿ ಪ್ರಾರಂಭವಾದ ಕೋಲಾರ ಚಿನ್ನದ ಗಣಿಗಳು ೧೨೧ ವರ್ಷಗಳು ಕಾಲ ಒಂದೇ ಸಮನೆ ನಡೆದು ೮೦೦ ಟನ್ನು ಚಿನ್ನವನ್ನು ಉತ್ಪಾದಿಸಿದ್ದವು. ಪ್ರಸ್ತುತ ೮೦೦ ಟನ್ನುಗಳ ಚಿನ್ನದ ಬೆಲೆ ೬೮೦೦೦೦೦೦೦೦೦೦೦ ಕೋಟಿ. ಇದರಲ್ಲಿ ಸುಮಾರು ೬೦೦ ಟನ್ನು ಚಿನ್ನವನ್ನು ಬ್ರಿಟಿಷರು ಇಂಗ್ಲೆಂಡಿಗೆ ದೋಚಿಕೊಂಡು ಹೋದರು.

ಈ ಚಿನ್ನದ ಗಣಿಗಳಿಗೆ ೪ ಸಾವಿರ ವರ್ಷಗಳ ಚರಿತ್ರೆ ಇದೆ. ಈಜಿಪ್ಟ್, ಬೆಬಿಲೋನಿಯಾ ಹಾಗೂ ಸಿಂಧೂ ನಾಗರೀಕ ತೊಟ್ಟಿಲುಗಳಿಗೂ ಇಲ್ಲಿನ ಚಿನ್ನ ಹೋಗಿರುವ ಸೂಚನೆಗಳು ದೊರಕಿವೆ. ರಾಮಾಯಣ, ಮಹಾಭಾರತ, ಕೃಷ್ಣದೇವರಾಯ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲೂ ಚಿನ್ನ ತೆಗೆದಿರುವ ಸೂಚನೆಗಳು ಈ ಪ್ರದೇಶಗಳಲ್ಲಿ ದೊರಕಿವೆ. ಬೈಬಲ್‌ನಲ್ಲಿಯೂ ಈ ಗಣಿಗಳ ಬಗ್ಗೆ ಉಲ್ಲೇಖ ಇದೆಯೆಂದು ಹೇಳಲಾಗುತ್ತದೆ. ಇಲ್ಲಿನ ಛಾಂಪಿಯನ್ ರೀಫ್ ಗಣಿಗಳು ೧೩,೨೫೦ (೩.೨೫ ಕಿ.ಮೀ.) ಅಡಿಗಳ ಆಳ ಇಳಿದಿದ್ದು ಪ್ರಪಂಚದಲ್ಲಿಯೇ ಎರಡನೇ ಅತಿ ಆಳ ಇಳಿದ ಗಣಿಗಳು. ಈ ಗಣಿಗಳನ್ನು "ತಾಯಿ ಗಣಿಗಳೆಂದು ಕರೆಯಲಾಗುತ್ತದೆ". ಪ್ರಪಂಚದಲ್ಲಿ ಅತಿ ಆಳ ಇಳಿದಿರುವ ಗಣಿಗಳೆಂದರೆ ದಕ್ಷಿಣ ಆಫ್ರಿಕಾದ ಜೋಹನ್ಸ್‌ಬರ್ಗ್‌ನ ಕಿಂಬರ್‌ಲೈಟ್ ವಜ್ರ ಗಣಿಗಳು.



ಮಹಾಗೋಡೆಯ ಕಡೆಗೆ

ಚೀನಾ ಪ್ರಪಂಚದಲ್ಲಿಯೆ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶ ಹಾಗೂ ಹೆಚ್ಚು ನೆಲವನ್ನು ಹೊಂದಿರುವ ಮೂರನೇ ದೇಶ. ಪ್ರಪಂಚದ ಜನಸಂಖ್ಯೆಯಲ್ಲಿ ಪ್ರತಿ ಐದನೇ ಮನುಷ್ಯ ಚೀನಾ ದೇಶದವನು. ಚೀನಾಗೆ ೬ ಸಾವಿರ ವರ್ಷಗಳ ಚರಿತ್ರೆ ಇದೆ ಎಂದು ಚೀನಿಯರು ಹೇಳಿಕೊಳ್ಳುತ್ತಾರೆ.

೧೫.೧೦.೨೦೦೪ ರ ಬೆಳಗಿನ ಜಾವ ೦.೫೦ ಗಂಟೆಗೆ ಐಸಿ ೮೫೫ ವಿಮಾನ ಸರಿಯಾದ ಸಮಯಕ್ಕೆ ಆಕಾಶಕ್ಕೆ ಹಾರಿತು. ನಾವಿದ್ದ ವಿಮಾನ ಲಖನೌ, ಅಲಹಾಬಾದ್, ವಾರಣಾಸಿ ನಗರಗಳ ಮೇಲೆ ಒಂದು ಗಂಟೆಗೆ ೧೧೦೦ ಕಿ.ಮೀ. ವೇಗದಲ್ಲಿ ಸಾಗುತ್ತಿತ್ತು. ಮೊದಲಿಗೆ ವಿಮಾನ ನೆಲದಿಂದ ೧೦,೦೦೦ ಮೀ.ಗಳ ಮೇಲೆ ಹಾರತೊಡಗಿ ಹೊರಗಡೆ ಗಾಳಿ ವಿಮಾನಕ್ಕೆ ಎದುರಾಗಿ ೧೫೦ ಕಿ.ಮೀ. ವೇಗದಲ್ಲಿ ಬೀಸುತ್ತಿತ್ತು. ದೆಹಲಿ–ಬ್ಯಾಂಕಾಕ್ ಮಧ್ಯ ૩೦೦೦ ಕಿ.ಮೀ. ದೂರವಿದ್ದು ವಿಮಾನ ೪ ಗಂಟೆ ಸಮಯ ತೆಗೆದುಕೊಳ್ಳುವುದಾಗಿ ತಿಳಿಯಿತು. ಬೆಳಗಿನ ಜಾವ ೧:૩೦ ಕ್ಕೆ ವಿಮಾನದ ಒಳಗೆ ದೀಪಗಳನ್ನು ಬೆಳಗಿಸುತ್ತಾ ಎಲ್ಲರನ್ನೂ ಎಬ್ಬಿಸಿ ಎರಡು ರೌಂಡ್ ಹಾಟ್ ಮತ್ತು ಸಾಫ್ಟ್ ಡ್ರಿಂಕ್ಸ್ ನೀಡಲಾಯಿತು. ನಾನು ಒಂದು ಪೆಗ್ ವಿಸ್ಕಿ ತೆಗೆದುಕೊಂಡೆ. ಜಗಬಂಧು ಮತ್ತು ದಾಸ್ ಇಬ್ಬರೂ ಸಾಫ್ಟ್ ಡ್ರಿಂಕ್ಸ್‌ಗೆ ತೃಪ್ತಿಯಾದರು. ಇಬ್ಬರನ್ನೂ ಗಮನಿಸಿದ ಗಂಡು ಗಗನಸಖ "ಆಶ್ಚರ್ಯ" ಎಂದ. "ದಾಸ್ ನಾವೆಲ್ಲ ಅಫಿಷಿಯಲ್ಸ್" ಎಂದಿದ್ದೆ ಜಗಬಂಧು "ಐಸಾ ನಹಿ ಬೋಲ್ನ. ಇದರ್ ಬಹುತ್ ಅಫಿಷಿಯಲ್ಸ್ ಹೈ" ಎಂದರು. ಸಮಯ ૩:೫೦. ಆಕಾಶದಲ್ಲಿ ಸಣ್ಣಗೆ ಒಂದು ತಿಳಿಯಾದ ಕಿತ್ತಲೆ ಬಣ್ಣದ ಗೆರೆಯೊಂದು ಕಾಣಿಸಿಕೊಂಡಿತು. ಅಷ್ಟೊತ್ತಿಗೆ ಊಟಮಾಡಿ ಎಲ್ಲರೂ ತೂಕಡಿಸುತ್ತಿದ್ದರು. ೧೦ ನಿಮಿಷಗಳಲ್ಲಿ ತಿಳಿ ಕಿತ್ತಲೆ ಬಣ್ಣ ನಿಧಾನವಾಗಿ ಕೆಂಪು ಗೆರೆಯಾಗಿ ಕಾಣಿಸಿಕೊಂಡು ಭೂಮಿ ಮತ್ತು ಆಕಾಶದ ನಡುವೆ ಒಂದು ಪ್ರತ್ಯೇಕ ಗೆರೆ ಕಾಣಿಸಿಕೊಂಡಿತು. ಆಗ ವಿಮಾನ ૩೫ ಸಾವಿರ ಅಡಿಗಳ ಮೇಲೆ ಹಾರುತ್ತಿತ್ತು.

ಬೆಳಗ್ಗೆ ಬ್ಯಾಂಕಾಕ್‌ನಲ್ಲಿ ಇಳಿದುಕೊಂಡಾಗ ನನ್ನ ಗಡಿಯಾರದಲ್ಲಿ ೪:೩೦ ಗಂಟೆ ತೋರಿಸುತ್ತಿದ್ದು, ಗಡಿಯಾರದ ಮುಳ್ಳುಗಳನ್ನು ೧ ಗಂಟೆ ೩೦ ನಿಮಿಷಗಳು ಮುಂದಕ್ಕೆ ದೂಡಿದೆ. ಬೆಳಗಿನ ಉಷ್ಣಾಂಶ ವಿಮಾನದ ಹೊರಗೆ ೨೭ ಡಿಗ್ರಿ ಸೆಲ್ಸಿಯಸ್ ಇದ್ದು ಆಗ ಅಲ್ಲಿನ ಸಮಯ ೬ ಗಂಟೆ. ಅದೊಂದು ಸುಸಜ್ಜಿತ ವಿಮಾನ ನಿಲ್ದಾಣ. ನಮ್ಮ ವಿಮಾನ ೧೧:೦೫ ಕ್ಕೆ ಇರುವುದರಿಂದ ನಾವು ನಿಲ್ದಾಣದಲ್ಲಿಯೆ ಸಮಯ ಕಳೆಯಬೇಕಾಯಿತು. ಟ್ರಾನ್ಸ್‌ಫರ್ ಡೆಸ್ಕ್‌ಗೆ ಹೋದಾಗ ಇನ್ನೂ ಬಹಳ ಸಮಯವಿದೆ ೮ ಗಂಟೆ ಮೇಲೆ ಬನ್ನಿ ಎಂದರು. ನಾವು ಅಲ್ಲಿಂದ ಟಾಯ್‌ಲೆಟ್‌ಗೆ ಹೋದೆವು. ಅಲ್ಲಿ ಬರೀ ಟಿಸ್ಸ್ಯೂ ಪೇಪರ್ ಮಾತ್ರ ಇದ್ದು ಭಾರಿ ಕಸಿವಿಸಿಯಾಯಿತು. ಅಲ್ಲಿಂದ ಬಂದು ಸುತ್ತಲಿದ್ದ ಅಂಗಡಿಗಳಲ್ಲಿ, ರೆಸ್ಟಾರೆಂಟುಗಳಲ್ಲಿ ಇಣಿಕಿ ನೋಡಿದೆವು. ಚಹ ೪೮ ಟಾಪೆ, ಕಾಫಿ ೫೦ ಟಾಪೆ, ಚಿಕನ್ ಫ್ರೈಡ್‌ರೈಸು ೨೨೦ ಟಾಪೆ, ಒಂದು ಪೆಗ್ ವೈನು ೧೮೦ ಟಾಪೆ ಹೀಗೆ ಲಿಸ್ಟ್ ಮಾಡಲಾಗಿತ್ತು. ಒಂದು ಯುಎಸ್ ಡಾಲರ್‌ಗೆ ೪೦:೩೦ ಟಾಪೆ ಅಂದಿನ ಬೆಲೆ. ಅಂದರೆ ಯುಎಸ್ ಡಾಲರ್ ಎದುರಿಗೆ ಭಾರತದ ರೂಪಾಯಿ ಮತ್ತು ಬ್ಯಾಂಕಾಕ್‌ನ ಟಾಪೆಯ ಮೌಲ್ಯ ಹೆಚ್ಚೂ ಕಡಿಮೆ ಸಮ.



ಭಾರತದಿಂದ ಪ್ರತಿನಿಧಿಸಿದ್ದ (ಎಂ. ವೆಂಕಟಸ್ವಾಮಿ, ದಾಸ್ ಮತ್ತು ಘೋಷ್)

ಥಾಯ್‌ಲ್ಯಾಂಡಿನ ವಿಮಾನ ಟಿಜಿ-೬೧೪ ಬ್ಯಾಂಕಾಕ್‌ನಿಂದ ಬೀಜಿಂಗ್‌ಗೆ ೧೧:೦೫ ಗಂಟೆಗೆ ಹೊರಡಬೇಕಾಗಿತ್ತು. ಆದರೆ ವಿಮಾನ ಒಂದು ಗಂಟೆ ತಡವಾಗಿ ಹೊರಟಿತು. ಕೇವಲ ಅರ್ಧ ಗಂಟೆ ಸಮಯದಲ್ಲಿ ಸುಮಾರ ೭೦೦ ಪ್ರಯಾಣಿಕರನ್ನು ಚೆಕ್‌ಅಫ್ ಮಾಡಿ ಬಸ್ಸುಗಳಲ್ಲಿ ವಿಮಾನ್ಕ್ಕೆ ಕರೆದೊಯ್ಯಲಾಯಿತು. ಭಾರಿ ದೊಡ್ಡ ವಿಮಾನ, ಒಂದೊಂದು ಸಾಲಿನಲ್ಲಿ ೧೦ ಸೀಟುಗಳಿದ್ದು ಒಟ್ಟು ೭೦ ಸಾಲುಗಳಿದ್ದವು. ಜೊತೆಗೆ ವಿಮಾನ ಸಿಬ್ಬಂದಿಯಲ್ಲಿ ಎಷ್ಟು ಜನರಿದ್ದರೋ? ಒಳಗೆ ಹೋದೊಡನೆಯೆ ಸೀಟುಗಳಲ್ಲಿ ಕೂರಿಸಿ ಎಲ್ಲರಿಗೂ ಹೆಡ್ ಫೋನುಗಳನ್ನು ನೀಡಲಾಯಿತು. ಮಧ್ಯ ಮಧ್ಯ ಮೂರು

ಕಡೆ ದೊಡ್ಡ ದೊಡ್ಡ ಸಿನಿಮಾ ಪರದೆಗಳಿದ್ದು ಸಿನಿಮಾ, ಡಾಕ್ಯುಮೆಂಟರಿ ಚಿತ್ರಗಳು ಮತ್ತು ಅನೌನ್ಸ್‌ಮೆಂಟ್‌ಗಳನ್ನು ತೋರಿಸುವುದಾಗಿ ತಿಳಿಸಲಾಯಿತು. ಕೈಗಳಲ್ಲಿದ್ದ ಲಗೇಜನ್ನು ಮೇಲಿದ್ದ ಬಾಕ್ಸ್‌ಗಳಲ್ಲಿ ಇಟ್ಟು ಸೀಟಿನಬೆಲ್ಟುಗಳನ್ನು ಕಟ್ಟಿಕೊಳ್ಳುತ್ತಿದ್ದಂತೆ ವಿಮಾನ ಸ್ವಲ್ಪ ದೂರ ಹಿಂದಕ್ಕೆ ಹೋಗಿ ನಿಧಾನವಾಗಿ ಮುಂದಕ್ಕೆ ಸಾಗಿ ಕೆಲವೇ ನಿಮಿಷಗಳಲ್ಲಿ ಬ್ಯಾಂಕಾಕ್ ನಗರದಿಂದ ಮೇಲಕ್ಕೆ ಹಾರಿತು.

ವಿಮಾನ ೩೭೦೦೦ ಅಡಿ ಎತ್ತರ ತಲುಪಿದ್ದೆ ಪರದೆಯ ಮೇಲೆ ಭೂನಕ್ಷೆಯ ಸಮೇತ ವಿಮಾನವಿರುವ ಸ್ಥಳ, ವಿಮಾನ ಧಾವಿಸುತ್ತಿರುವ ವೇಗ, ವಿಮಾನದ ಮುಖಕ್ಕೆ ಅಪ್ಪಳಿಸುತ್ತಿರುವ ವಾಯುವೇಗ, ಹವಾಮಾನ ಹೀಗೆ ಎಲ್ಲಾ ವಿವರಗಳನ್ನು ಪರದೆಯ ಮೇಲೆ ತೋರಿಸಲಾಗುತ್ತಿತ್ತು. ಇದನ್ನೆಲ್ಲ ಜಿಪಿಎಸ್ ಎನ್ನುವ ಪುಟ್ಟ ಯಂತ್ರದ ಮೂಲಕ ತೋರಿಸಲಾಗುತ್ತಿತ್ತು. ಜಿಪಿಎಸ್ (ಗ್ಲೋಬಲ್ ಪೊಷಿಶನಿಂಗ್ ಸಿಸ್ಟಮ್) ಮೊಬೈಲ್ ಗಾತ್ರದ ಸಣ್ಣ ಯಂತ್ರ. ಇದನ್ನು ನಾನು ಎರಡು ವರ್ಷಗಳಿಂದಲೂ ಕ್ಷೇತ್ರ ಸಮೀಕ್ಷೆ ಕಾರ್ಯದಲ್ಲಿ ಉಪಯೋಗಿಸುತ್ತಿದ್ದೆ.

ಈಗ ವಿಮಾನದ ಒಳಗೆ ಪ್ರಯಾಣಿಕರ ಸೇವೆ ಪ್ರಾರಂಭವಾಯಿತು. ಎಲ್ಲರಿಗೂ ಎರಡು ರೀತಿಯ ಮೆನು ಕಾರ್ಡ್‌ಗಳನ್ನು ತೋರಿಸಲಾಯಿತು. ಒಂದು ಬೀಫ್, ಫೋರ್ಕ್ ಸಮೇತವಾದರೆ, ಇನ್ನೊಂದು ಶೀಗಡಿ ಸಮೇತದ ಮೆನು. ನಾವು ಮೂವರು ಶೀಗಡಿ ಇರುವ ಮೆನು ಕೊಡುವಂತೆ ತಿಳಿಸಿದೆವು. ಊಟಕ್ಕೆ ಮುಂಚೆ ಎಲ್ಲಾ ರೀತಿಯ ಸಾಫ್ಟ್ ಮತ್ತು ಹಾಟ್ ಡ್ರಿಂಕ್ಸ್ ಇದ್ದ ಟ್ರಾಲಿಗಳನ್ನು ತಳ್ಳಿಕೊಂಡ ಬಂದ ಗಗನಸಖಿಯರು ಯಾರ್‍ಯಾರಿಗೆ ಏನು ಬೇಕೋ ಕೇಳಿ ಕೇಳಿ ಸಪ್ಲೈ ಮಾಡುತ್ತಾ ಹೋದರು. ಎರಡು ರೌಂಡ್ ಸಪ್ಲೈ ಆದ ಮೇಲೆ ಊಟ ನೀಡಲಾಯಿತು. ಶೀಗಡಿ, ಫ್ರೈಡ್‌ರೈಸ್, ಪೇಸ್ಟ್ರಿ, ಸ್ವೀಟ್ಸ್, ಸೀಸ್ಡ್‌ಬನ್, ಗ್ರೀನ್‌ಲೀವ್ಸ್, ಚಿಕನ್, ಎಗ್‌ಫ್ರೈ ಜೊತೆಗೆ ಆಪಲ್ ಮತ್ತು ಫೈನ್‌ಆಪಲ್ ಜ್ಯೂಸ್ ಕೊಡಲಾಯಿತು.

ನಾನು ಸಿಂಗ್ಡಿಯಾನ ಎನ್ನುವ ಒಂದು ಬೀರು ಕುಡಿದು ಸುಮ್ಮನಾದೆ. ಊಟ ಮಾಡಿದ ಮೇಲೂ ಡ್ರಿಂಕ್ಸ್, ಜ್ಯೂಸ್ ಮತ್ತು ನೀರನ್ನು ಗ್ಲಾಸುಗಳಲ್ಲಿ ಕೇಳಿ ಕೇಳಿ ಸರಬರಾಜು ಮಾಡುತ್ತಲೇ ಇದ್ದರು. ಈ ನಡುವೆ ಒಂದು ಇಂಗ್ಲಿಷ್ ಸಿನಿಮಾ ತೋರಿಸಲಾಯಿತು. ಮಧ್ಯ ಮಧ್ಯ ನಕ್ಷೆಯ ಜೊತೆಗೆ ವಿಮಾನದ ವೇಗ, ಹವಾಮಾನ ಎಲ್ಲವನ್ನು ತೋರಿಸುತ್ತಿದ್ದರು. ವಿಮಾನ ೩೬೦೦ ಕಿ.ಮಿ. ದೂರವನ್ನು ಕೇವಲ ೪ ಗಂಟೆಗಳಲ್ಲಿ ಪೂರ್ತಿಮಾಡಿ ೪ ಗಂಟೆಗೆ ಬೀಜಿಂಗ್‌ನಲ್ಲಿ ಇಳಿಯಿತು. ಅಲ್ಲಿನ ಸಮಯಕ್ಕೆ ಸರಿಯಾಗಿ ನಮ್ಮ ಗಡಿಯಾರದ ಮುಳ್ಳುಗಳನ್ನು ೧ ಗಂಟೆ ಮುಂದಕ್ಕೆ ದೂಡಲಾಯಿತು. ಇಳಿಯುವುದಕ್ಕೆ ಮುಂಚೆ ಬೀಜಿಂಗ್ ಸುತ್ತಮುತ್ತಲ ಪ್ರದೇಶ ನಮ್ಮ ದಕ್ಷಿಣ ಭಾರತದ ಮಾಮೂಲು ಬಯಲು ಪ್ರದೇಶದಂತೆ ಕಾಣಿಸುತ್ತಿತ್ತು.

ಆದರೆ ವಿಮಾನ ನಿಲ್ದಾಣ ಮಾತ್ರ ಭಾರಿ ದೊಡ್ಡದಾಗಿದ್ದು ಎಲ್ಲಿ ನೋಡಿದರು

ಎಸ್ಕಲೇಟರುಗಳು ಚಾಲನೆಯಲ್ಲಿದ್ದವು. ಹೊರಗಡೆಗೆ ಬರುವುದಕ್ಕೆ ಮುಂಚೆ ಒಂದು ಸಣ್ಣ ಫಾರ್ಮ್ ತುಂಬಿ ಕ್ಯೂನಲ್ಲಿ ನಿಂತುಕೊಂಡೆವು. ವೀಸಾ ಮತ್ತು ಪಾಸ್‌ಪೋರ್ಟ್ ಚೆಕ್‌ಮಾಡಿ ಹೊರಕ್ಕೆ ಬಿಡಲಾಯಿತು. ಅಲ್ಲಿಂದ ಒಂದು ಅಂತಸ್ತು ಕೆಳಕ್ಕೆ ಇಳಿದು ಬಂದು ನಮ್ಮ ವಿಮಾನದ ಸಂಖ್ಯೆ ಇರುವ ಕನ್ವೇಯರ್ ಬೆಲ್ಟಿನ ಮುಂದೆ ನಿಂತುಕೊಂಡೆವು. ಕೆಲವೇ ನಿಮಿಷಗಳಲ್ಲಿ ನಮ್ಮ ಲಗೇಜು ಬಂದು ಎಲ್ಲವನ್ನು ತೆಗೆದುಕೊಂಡೆವು.



ಸೆಂಟ್ರಲ್ ಬೀಜಿಂಗ್ ಒಂದು ನೋಟ

ಹೊರಗೆ ಬರುತ್ತಿದ್ದಂತೆ ನಾನು "ನೋಡಿ ನಾವೆಲ್ಲ ತುಂಬಾ ಡಿಗ್ನಿಫೈಡ್ ಆಂಡ್ ಡಿಸಿಪ್ಲೀನ್ಡಾಗಿ ನಡ್ಕೋಬೇಕು" ಎಂದೆ. ಜಗಬಂಧು "ಹೌರ್ ಕ್ಯಾ?" ಎಂದರೆ, ದಾಸ್ "ಹೌದೌದು!" ಎಂದರು. "ನಮ್ಮಗಳ ಹೆಸರು, ಇಲ್ಲ ಇಂಡಿಯನ್ ಡೆಲಿಗೇಷನ್, ಇಲ್ಲ ಇನ್‌ಸ್ಟಿಟ್ಯೂಟ್ ಹೆಸರಿರುವ ಪ್ಲಕಾರ್ಡ್ ಇರುತ್ತೆ. ನೀವೊಂದು ಕಡೆಯಿಂದ ನೋಡಿ. ನಾನೊಂದು ಕಡೆಯಿಂದ ನೋಡ್ತೀನಿ". ಎನ್ನುತ್ತ ಮೂವರು ಎರಡು ಕಡೆ ನೋಡುತ್ತ ಹೊರಗಡೆಗೆ ನಡೆದುಬಂದೆವು. ಸ್ವಲ್ಪ ದೂರ ಬಂದಿದ್ದೆ "ಐಜಿಜಿಐ " ಎನ್ನುವ ಇನ್‌ಸ್ಟಿಟ್ಯೂಟ್ ಹೆಸರಿರುವ ಪ್ಲಕಾರ್ಡ್ ಕಾಣಿಸಿ ಅವರ ಕಡೆಗೆ ಹೋದೆವು. ಮೂವರು ಚೀನಿ ಯುವಕರು ನಮ್ಮನ್ನು ಕೈಕುಲುಕಿ ಬರಮಾಡಿಕೊಂಡರು. ಜಗಬಂಧು ತಳ್ಳಿಕೊಂಡು ಬರುತ್ತಿದ್ದ ಟ್ರ್ಯಾಲಿಯನ್ನು ಒಬ್ಬ ಯುವಕ ತೆಗೆದುಕೊಂಡ. ಎಲ್ಲರೂ ವಾಹನ ಇರುವ ಕಡೆಗೆ ಹೊರಟೆವು. ನಮ್ಮ ಲಗೇಜನ್ನು ಡಿಕ್ಕಿಯಲ್ಲಿ ತುಂಬಿ ಎಲ್ಲರೂ ವ್ಯಾನ್‌ನಲ್ಲಿ ಕುಳಿತುಕೊಂಡೆವು. ನಮ್ಮ ಜೊತೆಗೆ ಕುಳಿತಿದ್ದ ಯುವಕನೊಬ್ಬ ಚೀನಿ ಆಕ್ಸೆಂಟ್‌ನ

ಇಂಗ್ಲಿಷ್‌ನಲ್ಲಿ ಬಹಳ ಹೊತ್ತು ಗುದ್ದಾಡಿದ ಮೇಲೆ ಒಟ್ಟು ಎಷ್ಟು ಗಂಟೆಗಳ ಕಾಲ ಪ್ರಯಾಣ ಮಾಡಿದಿರಿ ಎಂದು ಕೇಳುವಲ್ಲಿ ಸಫಲನಾಗಿದ್ದ. ನಮ್ಮ ಜಗಬಂಧು ಮತ್ತು ದಾಸ್ ಅಷ್ಟೇ ಹೊತ್ತು ಅವರ ಜೊತೆಗೆ ಹೋರಾಡಿ ದೆಹಲಿಯಿಂದ ಬ್ಯಾಂಕಾಕ್‌ಗೆ ೪ ಗಂಟೆ, ಬ್ಯಾಂಕಾಕ್‌ನಿಂದ ಬೀಜಿಂಗ್‌ಗೆ ೪ ಗಂಟೆ. ಬ್ಯಾಂಕಾಕ್‌ನಲ್ಲಿ ೫ ಗಂಟೆ ಬ್ರೇಕ್. ಒಟ್ಟು ೧೩ ಗಂಟೆ ಪ್ರಯಾಣ ಮಾಡಿದ್ದಾಗಿ ತಿಳಿಸಿದರು.

"ಭಾರತದಲ್ಲಿ ಈಗ ಸಮಯ ಎಷ್ಟು?" ಒಬ್ಬ ಯುವಕ ಕೇಳಿದ. ಅದಕ್ಕೆ ಹತ್ತು ನಿಮಿಷ ಗುದ್ದಾಡಿ ನಮಗೂ ಚೀನಾಗೆ ೨:೩೦ ಗಂಟೆ ಸಮಯ ವ್ಯತ್ಯಾಸ ಇರುವುದಾಗಿ ತಿಳಿಸುವಲ್ಲಿ ನನ್ನ ಇಬ್ಬರು ಗೆಳೆಯರು ಸಫಲರಾಗಿದ್ದರು. ನಾವೀಗ ಎಕ್ಸ್‌ಪ್ರೆಸ್ ರಸ್ತೆಯಲ್ಲಿ ಹೋಗುತ್ತಿದ್ದೀವೆಂದು ತಿಳಿಸಿದ ಯುವಕನಿಗೆ ಇನ್ಸ್‌ಟಿಟ್ಯೂಟ್ ಎಷ್ಟು ದೂರ ಇದೆ ಎಂದು ಕೇಳಿದ್ದಕ್ಕೆ ೨೨ ಕಿ.ಮೀ.ದೂರ ಇದೆ ಎಂದು ತಿಳಿಸಿದ. ಹವಾಮಾನ ೨೫ ಡಿಗ್ರಿ ಸೆಲ್ಸಿಯಸ್ ಇದ್ದು ವಾತಾವರಣ ತಂಪಾಗಿತ್ತು. ಹತ್ತು ಕಿ.ಮೀ. ದೂರ ದಾರಿ ಸವೆದ ಮೇಲೆ ನಾವೀಗ ಬೀಜಿಂಗ್‌ನ ಮಧ್ಯ ಇದ್ದೀವೆಂದು ಯುವಕ ತಿಳಿಸಿದ. ಆಗ ಸುಮ ಸುಮ ಕತ್ತಲಾಗಿತ್ತು. ಎರಡೂ ಕಡೆಯೂ ಎತ್ತರೆತ್ತರವಾದ ಕಟ್ಟಡಗಳು. ರಸ್ತೆಗಳ ತುಂಬಾ ಕಾರುಗಳು ಮತ್ತು ಬಸ್ಸುಗಳೆ ತುಂಬಿದ್ದವು. ಜೊತೆಗೆ ಜನರೂ ಹಾಗೆ ತುಂಬಿದ್ದರು. ಒಟ್ಟಾರೆ ಚಿತ್ರಣ ಭಾರತದ ಒಂದು ಪಟ್ಟಣದಂತೆಯೆ ತೋರುತ್ತಿತ್ತು.

ಪಕ್ಕದಲ್ಲಿದ್ದ ಯುವಕ "ಇನ್ಸ್‌ತಿತ್ಯೂತ್... ಇನ್ಸ್‌ತಿತ್ಯೂತ್" ಎನ್ನುತ್ತಿದ್ದಂತೆ ವಾಹನ ಒಂದು ಕಟ್ಟಡಗಳ ಸಂಕೀರ್ಣದ ಒಳಗೆ ನುಗ್ಗಿ ಮಧ್ಯದಲ್ಲಿದ್ದ ಒಂದು ಕಟ್ಟಡದ ಮುಂದೆ ನಿಂತುಕೊಂಡಿತು. ನಾಲ್ಕು ಕಡೆಯೂ ಎತ್ತರೆತ್ತರದ ಕಟ್ಟಡಗಳ ಸಂಕೀರ್ಣ. ಮಧ್ಯದಲ್ಲಿ ಗುಲಾಬಿ ಹೂವಿನ ತೋಟ. ಸುತ್ತಲು ಜಗಮಗಿಸುವ ದೀಪಗಳು ಇಲ್ಲದಿದ್ದರೂ ಎಷ್ಟು ಬೇಕೋ ಅಷ್ಟು ಬೆಳಕು ಚೆಲ್ಲುವ ವಿದ್ಯುತ್ ದೀಪಗಳು ಇದ್ದವು. ಯುವಕ ಬರುವ ದಾರಿಯಲ್ಲಿಯೆ ತುಂಬಾ ಕಷ್ಟಪಟ್ಟು ನಾವು ಮೊದಲು ನೇರವಾಗಿ ರೆಸ್ಟಾರೆಂಟಿಗೆ ಹೋಗಿ ಡಿನ್ನರ್ ಮುಗಿಸಿ ಅಲ್ಲಿಂದ ಇನ್ಸ್‌ಟಿಟ್ಯೂಟ್‌ಗೆ ಹೋಗುವುದಾಗಿ ತಿಳಿಸಿದ್ದ. ಅನಂತರ ತಿಳಿದಿದ್ದೆಂದರೆ ರೆಸ್ಟಾರೆಂಟ್ ಇದ್ದ ಸಂಕೀರ್ಣದಲ್ಲಿಯೆ ಇನ್ಸ್‌ಟಿಟ್ಯೂಟ್ ಕೂಡ ಇತ್ತು.

ನಮ್ಮನ್ನು ರೆಸ್ಟಾರೆಂಟ್ ಒಳಕ್ಕೆ ಕರೆದುಕೊಂಡು ಹೋಗಲಾಯಿತು. ಒಳಗೆ ಒಂದು ವಿಶಾಲವಾದ ಹಾಲು. ಹಾಲಿನ ತುಂಬಾ ಚೀನಿಯರು ಟೇಬಲುಗಳ ಮುಂದೆ ಕುಳಿತುಕೊಂಡು ಡಿನ್ನರ್ ತೆಗೆದುಕೊಳ್ಳುತ್ತಿದ್ದಾರೆ. ಎಲ್ಲರ ತಟ್ಟೆಗಳಲ್ಲೂ ವಿಧವಿಧ ಭಕ್ಷ್ಯಗಳಿದ್ದು ಬೆರಳುಗಳ ಮಧ್ಯ ಚೀನಿ ಸ್ಟಿಕ್ಸ್ ಇವೆ. ತಟ್ಟೆಯ ಮುಂದೆ ಬೀರು, ವೈನು, ಕೋಕೋಕೋಲಾ, ಸ್ಪ್ರೈಟ್ ಇನ್ನಿತರ ಬಾಟಲುಗಳು ಕುಳಿತಿವೆ. ನಮ್ಮನ್ನು ಅಲ್ಲಿಂದ ಮುಂದಕ್ಕೆ ಕರೆದುಕೊಂಡು ಹೋಗಿ ಕೈಗಳನ್ನು ತೊಳೆದುಕೊಳ್ಳಲು ತಿಳಿಸಿದರು. ಕೈಗೆ ಶ್ಯಾಂಪು ಹಾಕಿಕೊಂಡು ಕೈಗಳನ್ನು ತೊಳೆದುಕೊಂಡೆವು. ಅಲ್ಲಿಂದ ಇನ್ನೊಂದು ಕೋಣೆಯ ಒಳಕ್ಕೆ ಆಹ್ವಾನಿಸಲಾಯಿತು. ಅಲ್ಲಿ ಆಗಲೇ ಹತ್ತಾರು ಜನರು ನಾಲ್ಕಾರು ಟೇಬಲುಗಳ ಮುಂದೆ

ಕುಳಿತಿದ್ದರು. ಅಲ್ಲಿದ್ದವರೆಲ್ಲ ಎದ್ದು ನಮ್ಮನ್ನು ಬರಮಾಡಿಕೊಂಡರು. ಡಾ. ವಾಂಗ್ ಅವರು ವಿಶೇಷವಾಗಿ ಮೂವರ ಕೈಗಳನ್ನು ಕುಲುಕಿ ಹೆಸರುಗಳನ್ನು ನಾಲ್ಕಾರು ಸಲ ಕೇಳಿ ಕೇಳಿ ಸರಿಯಾಗಿ ತಿಳಿದುಕೊಂಡ ನಂತರ ಎಲ್ಲರಿಗೂ ಪರಿಚಯ ಮಾಡಿಸಿದರು.

ಅಲ್ಲಿದ್ದವರಲ್ಲಿ ದಕ್ಷಿಣ ಆಫ್ರಿಕಾ, ತಾಂಜೇನಿಯ, ಕೆನಡಾ, ನ್ಯೂ ಗಿನಿಯಾ, ಬೆನಿನ್ ಮುಂತಾದ ದೇಶಗಳಿಂದ ಬಂದ ವಿಜ್ಞಾನಿಗಳಿದ್ದರು. ನಮಗೆ ದೆಹಲಿಯಲ್ಲಿ ವೀಸಾ ಸಿಕ್ಕದೆ ನಾವು ೬ ದಿನಗಳು ತಡವಾಗಿ ಹೋಗಿದ್ದೆವು. ಅವರೆಲ್ಲ ಆಗಲೇ ಡಿನ್ನರ್ ಶುರುಮಾಡಿದ್ದು ನಮ್ಮನ್ನು ಆಹ್ವಾನಿಸಲಾಯಿತು. ಟೇಬಲ್ ಮೇಲೆ ಸುಮಾರು ಹತ್ತು ಐಟಂಗಳಿದ್ದವು. ಚೈನಾ ರೈಸು, ಫ್ರೈಡ್ ಪ್ರಾನ್ಸ್, ಎರಡು ರೀತಿಯ ಫಿಶ್‌ಫ್ರೈ ಎಗ್‌ಟಮ್ಯಾಟೊ, ಬದನೆಕಾಯಿಫ್ರೈ, ಎಣ್ಣೆಯಲ್ಲಿ ಕರಿದ ಎಲೆಕೋಸು, ಕ್ರೀಮ್ ಸವರಿದ ಆಫಲ್ ಮತ್ತು ಕಿತ್ತಳೆ ಹಣ್ಣಿನ ಹೋಳುಗಳು, ಎಗ್‌ಟಮ್ಯಾಟೊ ಬೆರೆಸಿದ ಸೂಪು ಮತ್ತು ಸಾಲೆಡ್ ಇದ್ದವು. ಎಲ್ಲವನ್ನೂ ಸ್ವಲ್ಪ ಸ್ವಲ್ಪ ಹಾಕಿಕೊಂಡೆ. ಪಕ್ಕದಲ್ಲೆ ಟೇಬಲ್ ಮೇಲೆ ಎರಡು ರೀತಿಯ ಸಣ್ಣ ಮತ್ತು ದೊಡ್ಡ ಬೀರು ಬಾಟಲುಗಳು, ಸ್ಪ್ರೈಟು ಮತ್ತು ಕೋಕೋಕೋಲಾ ಟಿನ್ನುಗಳಿದ್ದವು. ಎಲ್ಲರೂ ಆಗಲೆ ಎಲ್ಲಾ ರೀತಿಯ ಬಾಟಲು ಮತ್ತು ಟಿನ್ನುಗಳನ್ನು ಮುಂದೆ ಇಟ್ಟುಕೊಂಡಿದ್ದರು. ನಾನು ಒಂದು ಟಿನ್ನು ಸ್ಪ್ರೈಟು ತೆಗೆದುಕೊಂಡೆ. ಎಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ರುಚಿಯಾಗಿಯೆ ಇದ್ದವು. ಎಲ್ಲರೂ ಊಟ ಮುಗಿಸಿದ ಮೇಲೆ ನಮ್ಮನ್ನು ಅಲ್ಲೆ ಇದ್ದ ಇನ್‌ಸ್ಟಿಟ್ಯೂಟ್‌ಗೆ ಕರೆದುಕೊಂಡ ಹೋಗಿ ತೋರಿಸಲಾಯಿತು.



ಚೀನಾ ಮಹಾಗೋಡೆಯ ಒಂದು ನೋಟ

ಮೂವರಿಗೂ ಒಂದೊಂದು ಬ್ಯಾಗ್ ಕೊಟ್ಟರು. ಅದರಲ್ಲಿ ಇನ್‌ಸ್ಟಿಟ್ಯೂಟ್‌ನಲ್ಲಿ ನೀಡುವ ಲಕ್ಚರ್ ನೋಟ್ಸ್ ಮತ್ತು ಕೋರ್ಸ್‌ನ ಟೈಂಟೇಬಲ್ ಇತ್ತು. "ಉಳಿದಿದ್ದು ನಾಳೇ ಮಾತನೋಡೋಣ. ಈಗ ನೀವು ತುಂಬಾ ಟೈರ್ಡ್ ಆಗಿರಬೇಕು. ಇವೊತ್ತು ಹೋಟಲ್‌ಗೋಗಿ ಮಲಗಿಕೊಳ್ಳಿ" ಎಂದು ವಾಂಗ್ ಅವರು ನಮ್ಮನ್ನು ಬೀಳ್ಕೊಟ್ಟರು. ಒಬ್ಬ ಯುವಕ "ನಾಳೆಯಿಂದ ನೀವೆ ಹೋಟಲ್‌ನಿಂದ ನಡೆದುಕೊಂಡು ಬರ್ಬೇಕು. ಈಗ ನಿಮಗೆಲ್ಲ ದಾರಿ ತೋರಿಸಿಬಿಡ್ತೀನಿ. ಹೋಟಲ್ ಇಲ್ಲೆ ಹತ್ತಿರದಲ್ಲೆ ಇದೆ. ಕೇವಲ ಹತ್ತು ನಿಮಿಷ ವಾಕ್" ಎಂದು ನಮ್ಮನ್ನು ಕರೆದುಕೊಂಡು ನಡೆದ.

ರಸ್ತೆಗಳಲ್ಲಿ ಎಲ್ಲಾ ವಾಹನಗಳು ಬಲಗಡೆಗೆ ಚಲಿಸುತ್ತಿದ್ದರೆ ಜನರು ಬಲಗಡೆ ಪುಟ್‌ಪಾತ್‌ನಲ್ಲಿ ನಡೆದುಕೊಂಡು ಹೋಗುತ್ತಿದ್ದಾರೆ. ಎಲ್ಲಾ ವಾಹನಗಳಲ್ಲೂ ಚಾಲಕರು ಎಡಗಡೆ ಕುಳಿತುಕೊಂಡು ವಾಹನಗಳನ್ನು ನಡೆಸುತ್ತಿದ್ದಾರೆ. ನಮ್ಮ ದೇಶದಲ್ಲಿ ವಾಹನಗಳು ರಸ್ತೆಯಲ್ಲಿ ಎಡಗಡೆ ಚಲಿಸಿದರೆ ಚಾಲಕರು ಬಲಗಡೆ ಕುಳಿತುಕೊಂಡಿರುತ್ತಾರೆ. ಯುವಕ ನಮ್ಮನ್ನು ಬಲಗಡೆಯೆ ಕರೆದುಕೊಂಡು ಹೋಗುತ್ತಿದ್ದಾನೆ ಎಲ್ಲಿ ನೋಡಿದರು ಕಾರುಗಳು ಮಾತ್ರ ಕಾಣಿಸುತ್ತಿವೆ, ಮಧ್ಯ ಮಧ್ಯ ಒಂದೆರಡು ಬಸ್ಸುಗಳನ್ನು ಬಿಟ್ಟರೆ ದ್ವಿಚಕ್ರ ವಾಹನಗಳು, ತ್ರಿಚಕ್ರ ವಾಹನಗಳು ಒಂದೂ ಕಾಣಿಸಲಿಲ್ಲ. ಮುಖ್ಯ ರಸ್ತೆಯ ಎರಡೂ ಕಡೆ ಇರುವ ಸಣ್ಣದಾದ ಸಿಮೆಂಟ್ ರಸ್ತೆಗಳಲ್ಲಿ ಸೈಕಲ್‌ಗಳು ಚಲಿಸುತ್ತಿವೆ. ಸೈಕಲುಗಳ ಮೇಲೆ ಗಂಡು ಹೆಣ್ಣು ಎನ್ನುವ ಭೇದವಿಲ್ಲದೆ ಎಲ್ಲಾ ವಯಸ್ಸಿನವರು ಹೋಗುತ್ತಿದ್ದಾರೆ. ಆ ರಸ್ತೆಗಳು ಮತ್ತು ಮನೆಗಳನ್ನು ನೋಡುತ್ತಿದ್ದರೆ ಐವತ್ತು ವರ್ಷಗಳ ಹಿಂದಿನ ಯುರೋಪ್ ಕಾಲೋನಿಯಂತೆ ಕಾಣಿಸುತ್ತಿದೆ.



ಗಿರಿ ಶಿಖರಗಳನ್ನು ಸೀಳಿಕೊಂಡು ಸಾಗಿರುವ ಚೀನಾ ಮಹಾಗೋಡೆ

ನಾವು ಮುಖ್ಯರಸ್ತೆಯನ್ನು ದಾಟಬೇಕಾಗಿದ್ದಾಗ ನಮ್ಮ ಜೊತೆಯಲ್ಲಿದ್ದ ಯುವಕ ರಸ್ತೆಯ ಪಕ್ಕದಲ್ಲಿದ್ದ ವಿದ್ಯುತ್ ಕಂಬದಲ್ಲಿನ ಒಂದು ಹಸಿರು ಸ್ವಿಚ್ಚನ್ನು ಒತ್ತಿದ. ಅಲ್ಲಿ ಕಂಬದಲ್ಲಿ ಕೆಂಪು ದೀಪಗಳು ಹೋಗಿ ಹಸಿರು ದೀಪಗಳು ಕಾಣಿಸಿಕೊಂಡವು. ರಸ್ತೆಯ ಎರಡೂ ಕಡೆ ವಾಹನಗಳು ನಿಂತುಕೊಂಡುಬಿಟ್ಟವು. ನಾವು ರಸ್ತೆಯನ್ನು ದಾಟುತ್ತಿದ್ದಂತೆ ೩೦ ಸೆಕೆಂಡ್‌ಗಳ ನಂತರ ಮತ್ತೆ ವಾಹನಗಳು ಹೊರಟವು.

ಯುವಕ ದಾರಿಯ ಉದ್ದಕ್ಕೂ ನಮ್ಮ ಜೊತೆ ಇಂಗ್ಲಿಷ್ ಜೊತೆಗೆ ಗುದ್ದಾಡಿ ಗುದ್ದಾಡಿ "ನೀವು ಈ ದಿನ ಲೇಟಾಗಿ ಬಂದಿದ್ದರಿಂದ ಈ ರಾತ್ರಿ ಇನ್ನೊಬ್ಬರ ಜೊತೆಗೆ ಕೋಣೆಯನ್ನು ಶೇರ್ ಮಾಡಿಕೊಳ್ಳಬೇಕಿದೆ. ಈ ಒಂದು ರಾತ್ರಿ ಸಹಕರಿಸಿ ನಾಳೆ ಎಲ್ಲಾರಿಗೂ ಒಂದೊಂದು ಕೋಣೆ ಏರ್ಪಾಟು ಮಾಡ್ತೀವಿ" ಎಂದು ಕೇಳಿಕೊಂಡ. ನಾವು ಯಾವ ವಿಷಾದವು ಇಲ್ಲದೆ ಒಪ್ಪಿಕೊಂಡೆವು. ಮೊದಲು ನಾವು ಮೂವರು ಒಂದು ಕೋಣೆಗೆ ಬಂದೆವು. ಈಗ ಇಬ್ಬರು ಒಂದು ಕೋಣೆಯಲ್ಲಿ ಉಳಿದುಕೊಂಡು, ಒಬ್ಬರು ಮಾತ್ರ ಬೇರೆಯವರ ಕೋಣೆಗೆ ಹೋಗಬೇಕಾಗಿತ್ತು. "ನಾನು ಬೇರೆ ಕೋಣೆಗೆ ಹೋಗಲು ರೆಡಿ" ಎಂದೆ. ದಾಸ್ "ಈ ದಿನ ಮೂವರು ಒಂದೇ ಕೋಣೆಯಲ್ಲಿ ಇದ್ದುಬಿಡೋಣ" ಎಂದ. "ಬೇಡ, ನೀವು ಇಲ್ಲೆ ಇರಿ" ಎಂದು ನಾನು ಯುವಕನ ಜೊತೆಗೆ ಬೇರೆ ಕೋಣೆಗೆ ಹೊರಟೆ.

ಅದು ಆರನೇ ಅಂತಸ್ತಿನಲ್ಲಿದ್ದ ಕೋಣೆ. ಸಂಖ್ಯೆ ೩೬೧೭, ಹೋಟಲ್ ಏಕ್‌ದಂ ನಿಶಬ್ಧವಾಗಿದ್ದು ಕೋಣೆಗೆ ಹೋಗುವವರೆಗೂ ನಮಗೆ ಯಾರೂ ಎದುರಿಗೆ ಕಾಣಿಸಲಿಲ್ಲ. ಯುವಕ ಬಾಗಿಲು ತಟ್ಟಿದ ಕೆಲವು ಕ್ಷಣಗಳಲ್ಲಿಯೆ ಬಾಗಿಲು ತೆರೆದುಕೊಂಡಿತು. ಕೋಣೆಯಲ್ಲಿದ್ದ ಎತ್ತರದ ಮನುಷ್ಯ ಕೈಕುಲುಕಿ ನನ್ನನ್ನು ಬರಮಾಡಿಕೊಂಡರು. ಆತ "ಐಯಾಮ್ ಸಿಯಾರ್ಜು ನೆರೂಡ ಫ್ರಂ ನ್ಯೂ ಗಿನಿಯಾ" ಎಂದ. ಯುವಕ ಅವರನ್ನು "ಈ ರಾತ್ರಿ ಒಂದು ರಾತ್ರಿ ಮಾತ್ರ. ನಾಳೆ ಇವರಿಗೆ ಬೇರೆ ಕೋಣೆ ಏರ್ಪಾಡು ಮಾಡ್ತೀವಿ" ಎನ್ನುತ್ತಿದ್ದಂತೆ ನೆರೂಡ "ನೊ ಪ್ರಾಬ್ಲಂ" ಎನ್ನುತ್ತಿದ್ದಂತೆ. ಯುವಕ ಹೊರಟುಹೋದ.

ನೆರೂಡ ನಿಧಾನವಾಗಿ ಮಾತನಾಡಿದರು ಇಂಗ್ಲೀಷು ಚನ್ನಾಗಿ ಮಾತನಾಡುತ್ತಿದ್ದ. ಆತ ಮೂಲತ: ಕೆನಡಾದವನಾಗಿದ್ದು, ತನ್ನ ಬಗ್ಗೆ ಯಾವುದೇ ಬಿಗುಮಾನವಿಲ್ಲದೆ ಹೇಳುತ್ತಾ ಹೋದ. ತಾನು ಭೂರಾಸಾಯನಿಕ ತಜ್ಞನಾಗಿದ್ದು ಮೊದಲಿಗೆ ಕೆನಡಾದಲ್ಲಿ ಭೂವಿಜ್ಞಾನ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸಿ ಅನಂತರ ಅನೇಕ ದೇಶಗಳಲ್ಲಿ ಭೂರಾಸಾಯನಿಕ ವಿಜ್ಞಾನದಲ್ಲಿ ಕೆಲಸ ನಿರ್ವಹಿಸಿ ಈಗ ನ್ಯೂ ಗಿನಿಯಾದಲ್ಲಿ ಕೆಲಸ ಮಾಡುತ್ತಿರುವುದಾಗಿ ತಿಳಿಸಿದರು.

ನೆರೂಡ ಬೀಜಿಂಗ್‌ಗೆ ಬರುವುದಕ್ಕೆ ಮುಂಚೆ ವೀಸಾ ಸಿಗದೆ, ನಾಲ್ಕೈದು ದಿನ ಒದ್ದಾಡಿದ್ದರಂತೆ. "ನ್ಯೂ ಗಿನಿಯಾ ಬಡ ದೇಶ. ಅವರಿಂದ ನನ್ನ ಪ್ರಯಾಣಕ್ಕೆ ಹಣ

ಕೊಡಲು ಆಗಲಿಲ್ಲ. ಕೊನೆಗೆ ಚೀನಾ ಎಂಬಸಿಯನ್ನು ಕೇಳಿಕೊಂಡಾಗ ಚೀನಾ ಸರಕಾರ ಏರ್ ಟಿಕೆಟ್ ವ್ಯವಸ್ಥೆ ಮಾಡಿತು. ಅನಂತರ ವೀಸಾ ಕೂಡ ದೊರಕಿತು. ನಾನು ಈ ದಿನ ಬೆಳಗ್ಗೆಯಷ್ಟೆ ಬೀಜಿಂಗ್ ತಲುಪಿದೆ" ಎಂದರು ನೆರೂಡ. "ನಿಮ್ಮ ಫ್ಯಾಮಿಲಿ ಎಲ್ಲಿದೆ?" ಕೇಳಿದೆ. "ನನ್ನ ಫ್ಯಾಮಿಲಿ ಕೆನಾಡದಲ್ಲಿದೆ ಫ್ಯಾಮಿಲಿ ಎಂದರೆ ಮಗಳು ಮಾತ್ರ ಅವಳು ಚಿಕ್ಕವಳಾಗಿದ್ದಾಗಿಂದಲೂ ಒಂಟಿ. ಎಲ್ಲಿ ಬೇಕಾದರು ಒಬ್ಬಳೆ ಇದ್ದುಬಿಡ್ತಾಳೆ. ಷಿ ಕ್ಯಾನ್ ಟ್ರಾವಲ್ ಎನಿ ವೇರ್. ಷಿ ಕ್ಯಾನ್ ಮಾನೇಜ್". ಎಂದರು. ಆತನ ಪತ್ನಿಯ ಬಗ್ಗೆ ಕೇಳುವುದೊ ಬೇಡವೊ ಎಂದು ನನ್ನೊಳಗೆ ಪ್ರಶ್ನೆ ಹಾಕಿಕೊಂಡೆ. "ಚೀನಾ ಬಗ್ಗೆ ಯಾವುದಾದರು ಪುಸ್ತಕ ಇದಿಯೆ" ಕೇಳಿದೆ "ಒಂದೇ ಒಂದು ಪುಸ್ತಕ ಇದೆ. ಅದು ನನ್ನ ಎಕ್ಸ್ ವೈಫ್ ಕೊಟ್ಟಿದ್ದು" ಎಂದ. "ಅಯ್ಯೊ ಪಾಪ" ಎಂದುಕೊಂಡೆ. ಮತ್ತೆ ಭೂವಿಜ್ಞಾನದ ಬಗ್ಗೆ ಸುಮಾರು ಎರಡು ಗಂಟೆ ಹೊತ್ತು ನನ್ನ ಜೊತೆಗೆ ಚರ್ಚಿಸಿದ. ಭಾರತದಲ್ಲಿ ಏನು ನಡೆಯುತ್ತಿದೆ ಎಂದು ಕೇಳಿ ತಿಳಿದುಕೊಂಡು, ನಾನು ಬರೆದಿರುವ ಭೂವಿಜ್ಞಾನ ಪೇಪರ್ಸ್ ಬಗ್ಗೆ ಕೇಳಿದ. ನಾನು ಯಾವ ಇಂಗ್ಲಿಷ್ ಪೇಪರುಗಳನ್ನು ಬರೆದಿಲ್ಲದ ಕಾರಣ ನಾನು ಕನ್ನಡದಲ್ಲಿ ಬರೆದಿರುವ ವಿಜ್ಞಾನ ಮತ್ತು ಇತರ ಪುಸ್ತಕಗಳ ಬಗ್ಗೆ ಹೇಳಿದೆ.

* * *

ಅದು ಎರಡು ಹಾಸಿಗೆಗಳಿರುವ ಸುಂದರವಾದ ಕೋಣೆ. ನೆಲದಲ್ಲಿ ಕಾರ್ಪೆಟ್ ಹಾಸಲಾಗಿದೆ, ಹಾಸಿಗೆ ಮೇಲೆ ಕಂಬಳಿ ರಜಾಯಿಗಳನ್ನು ನೀಟಾಗಿ ಮಡಚಿ ಇಡಲಾಗಿದೆ ಎರಡು ಹಾಸಿಗೆಗಳ ಹತ್ತಿರ ಎರಡು ಸಣ್ಣ ಟೇಬಲುಗಳು. ಎದುರಿಗೆ ಇನ್ನೊಂದು ದೊಡ್ಡ ಟೇಬಲು, ಒಂದು ಬಾಕ್ಸ್ ರೀತಿ ಇರುವ ಡ್ರಾಯರಿರುವ ಟೇಬಲು, ನಾಲ್ಕು ಬೆಡ್ ಲ್ಯಾಂಪುಗಳು, ಸುಂದರವಾದ ಎರಡು ಕುರ್ಚಿಗಳು, ಹಾಸಿಗೆಯ ಮೇಲೆ ಮಲಗಿದರೆ ಕೈಗೆಟಕುವಲ್ಲಿ ನಾಲ್ಕಾರು ಸುಚ್ಚುಗಳಿರುವ ಒಂದು ಬೋರ್ಡಿದೆ. ಟಿವಿ, ಏಸಿ, ಫೋನು, ವಿಶಾಲವಾದ ಒಂದು ಕಿಟಿಕಿಗೆ ತೆಳ್ಳನೆ ಮತ್ತು ದಪ್ಪವಾದ ಎರಡು ಪರದೆಗಳನ್ನು ಹಾಕಲಾಗಿದೆ. ಬಟ್ಟೆಗಳನ್ನು ಹಾಕಿಕೊಳ್ಳಲು ಒಂದು ವಾರ್ಡ್‌ರೋಬ್ ಇದೆ.


ಇನ್ನು ಬಾಥುರೂಮಂತು ಎಲ್ಲಾ ರೀತಿಯಲ್ಲೂ ಪೂರ್ಣವಾಗಿ ಸುಸಜ್ಜಿತವಾಗಿತ್ತು. ವಾಟರ್‌ಟಬ್ಬು, ವಾಷ್‌ಬೇಷಿನ್, ಜೊತೆಗೆ ನಾಲ್ಕಾರು ಟವಲುಗಳು, ಟೂತ್‌ಬ್ರಷ್, ಬಾಚಣಿಗೆ, ಸೋಪು ಎಲ್ಲವೂ ಇವೆ. ಆದರೆ ಬಕೆಟ್ಟಾಗಲಿ ಮಗ್ಗಾಗಲಿ ಇಲ್ಲ. ವೆಸ್ಟರ್ನ್ ಟಾಯ್‌ಲೆಟ್ ಜೊತೆಗೆ ಟಿಸ್ಸೂ ಪೇಪರ್ ಮಾತ್ರ ಒಂದು ಮೂಲೆಯಲ್ಲಿ ಸುತ್ತಿಕೊಂಡು ನನ್ನನ್ನು ಅಣಕಿಸುವಂತೆ ಕಾಣಿಸುತ್ತಿದೆ. ಆಗಲೆ ಸಾಕಷ್ಟು ಹೊತ್ತಾಗಿದ್ದು ಬಾಥುರೂಮಿಗೆ ಹೋಗಿ ಬಂದು ಮಲಗಿಕೊಂಡುಬಿಟ್ಟೆ. ಮಲಗಿದ್ದೆ ನಿದ್ದೆ ಬಂದುಬಿಟ್ಟಿತ್ತು.

ಬೆಳಗ್ಗೆ ಜ್ಞಾಪಕ ಬಂದಿದ್ದೆ ಕಣ್ಣುಜ್ಜಿಕೊಂಡು ನೋಡಿದೆ. ನೆರೂಡ ಆಗಲೇ

ಹೊರಡಲು ತಯಾರಿ ಮಾಡಿಕೊಳ್ಳುತ್ತಿದ್ದ. “ಗುಡ್ ಮಾರ್ನಿಂಗ್. ಟೈಂ ಪ್ಲೀಸ್” ಎಂದೆ. “೬:೪೫” ಎಂದರು. ಎದ್ದು ನೋಡಿದರೆ ಬಿಸಿ ನೀರು ಎಲ್ಲೂ ಬರುತ್ತಿಲ್ಲ. ಹಲ್ಲುಜ್ಜಿ ಮುಖ ತೊಳೆದು ಬಟ್ಟೆ ಬದಲಾಯಿಸಿಕೊಂಡು ತಯಾರಾದೆ. ನಾವು ಇಳಿದುಕೊಂಡಿದ್ದ ಬ್ಲಾಕ್ ೩ರ ಪಕ್ಕದಲ್ಲಿಯೆ ಇದ್ದ ಹೋಟಲ್ ಡಿ ಡಾ ಜಿಂಡಡು ಒಳಕ್ಕೆ ನೆರೂಡ ಜೊತೆಗೆ ಹೋದೆ. ಬೆಳಗಿನ ಉಪಹಾರದ ಕೂಪನ್‌ಗಳನ್ನು ನಮಗೆ ರಾತ್ರಿಯೆ ನೀಡಲಾಗಿತ್ತು.

ಆ ಹೋಟಲ್ ಒಳಗೆ ಹೋಗಿದ್ದೆ ದಂಗಾಗಿಬಿಟ್ಟೆ. ನಾನು ಅಂತಹ ಹೋಟಲನ್ನು ನೋಡಿಯೆ ಇರಲಿಲ್ಲ. ನಾನು ಯಾವ ಸ್ಟಾರು ಹೋಟಲನ್ನು ನೋಡಿಲ್ಲದ ಕಾರಣ ಈ ಹೋಟಲನ್ನು ಯಾವ ಹೋಟಲಿಗೆ ಹೋಲಿಸುವುದೋ ಗೊತ್ತಾಗಲಿಲ್ಲ. ಹೋಟಲು ಕರ್ಮಚಾರಿಗಳನ್ನು ಕ್ಯಾಟಗರೈಸ್ ಮಾಡಿ ಅವರಿಗೆ ವಿಶೇಷ ಧಿರಿಸುಗಳನ್ನು ನೀಡಲಾಗಿತ್ತು. ಎಲ್ಲಾ ಕಡೆಯೂ ನೀಟಾದ ಮತ್ತು ಸುಂದರವಾದ ಯೂನಿಫಾರ್ಮ್ ಬಟ್ಟೆಗಳನ್ನು ಧರಿಸಿದ ಯುವಕರು, ಯುವತಿಯರು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿಕೊಂಡಿದ್ದರು. ಟೇಬಲುಗಳ ಮುಂದೆ ಹೆಚ್ಚಾಗಿ ಚೀನಿಯರು ಮತ್ತು ಕಡಿಮೆ ಸಂಖ್ಯೆಯಲ್ಲಿ ಹೊರಗಿನ ಅತಿಥಿಗಳು ಕುಳಿತಿದ್ದರು. ತೀರ ಕಡಿಮೆ ಸಂಖ್ಯೆಯಲ್ಲಿ ಯುರೋಪಿಯನ್ ಅತಿಥಿಗಳು ಮತ್ತು ನಾವಿದ್ದೆವು.

ನೆರೂಡ “ಎಲ್ಲಾ ಸೆಲ್ಫ್ ಸರ್ವಿಸ್. ನಿಮಗೆ ಬೇಕಾದ್ದನ್ನು ನೀವು ತೆಗೆದುಕೊಳ್ಳಬಹುದು” ಎಂದು ಒಂದೊಂದು ಕಡೆಯೂ ತೋರಿಸಿದರು. ಅನೇಕ ರೀತಿಯ ಸಾಫ್ಟ್ ಡ್ರಿಂಕ್ಸ್ ಫ್ರೂಟ್ ಜ್ಯೂಸುಗಳು, ಸೀರಿಯಲ್ಸ್, ರೈಸ್, ಹಸಿರು ತರಕಾರಿ, ಫ್ರೈಮಾಡಿದ ಆಲು, ಬದನೆ, ಹೂವುಕೋಸು, ಕೆಲವು ಸಿಹಿತಿಂಡಿಗಳು ಹೀಗೆ ಅನೇಕ ರೀತಿಯ ಭಕ್ಷ್ಯಗಳನ್ನು ಹಬೆಯಾಡುವ ಸ್ಟೀಲ್ ಕಂಟೇನರುಗಳಲ್ಲಿ ಇಡಲಾಗಿತ್ತು. ಬೇಕಾದುದನ್ನು ಸ್ವಲ್ಪ ಸ್ವಲ್ಪ ಬಡಿಸಿಕೊಂಡೆ. ಅಷ್ಟರಲ್ಲಿ ನಮ್ಮ ಜೊತೆ ತರಬೇತಿಗೆ ಬಂದಿದ್ದ ಇತರರು ಸೇರಿಕೊಂಡರು. ಚೀನಿಯರು ತಮ್ಮ ವಿಶೇಷ ಸ್ಟಿಕ್ಸ್‌ಗಳಲ್ಲಿ ತಿಂಡಿಗಳನ್ನು ತಿನ್ನುತ್ತಿದ್ದರೆ ನಾವೆಲ್ಲ ಸ್ಪೂನುಗಳು ಮತ್ತು ಫೋರ್ಕ್‌ಗಳಲ್ಲಿ ತಿನ್ನುತ್ತಿದ್ದೆವು. ಕೊನೆಗೆ ಕಾಫಿ ಮತ್ತು ಚಹ ಕುಡಿಯುವವರು ತಣ್ಣನೆ ಹಾಲಿನಲ್ಲಿ ಕಾಫಿ ಡಿಕಾಕ್ಷನ್ ಇಲ್ಲ ಗ್ರೀನ್ ಲೀಫ್ಸ್ ಬೆರೆಸಿಕೊಂಡು ಕುಡಿದರು.



ಬೀಜಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ

ಚೀನಿ ಸಾಹಿತ್ಯಕ್ಕೆ ೩ ಸಾವಿರ ವರ್ಷಗಳ ಚರಿತ್ರೆ ಇದೆ.

ನಾವು ಇಳಿದುಕೊಂಡಿದ್ದ ರೆಸ್ಟಾರೆಂಟಿನಿಂದ ಇನ್‌ಸ್ಟಿಟ್ಯೂಟ್ ಕಡೆಗೆ ನಡೆದುಕೊಂಡು ಹೊರಟೆವು. ಅವರು ನಮಗೆ ತಿಳಿಸಿದ್ದ ಸಮಯಕ್ಕೆ ಎರಡು ನಿಮಿಷಗಳ ಮುಂಚೆಯೆ ಲಕ್ಚರ್ ಪ್ರಾರಂಭವಾಗಿತ್ತು. ಹೊಸದಾಗಿ ಬಂದವರನ್ನು ಪರಿಚಯ ಮಾಡಿಕೊಡಲಾಯಿತು. ಮಧ್ಯ ಒಂದು ಬ್ರೇಕ್ ಆದ ಮೇಲೆ ಸರಿಯಾಗಿ ೧೧:೩೦ಕ್ಕೆ ಹತ್ತಿರದಲ್ಲೆ ಇದ್ದ ರೆಸ್ಟಾರೆಂಟ್‌ಗೆ ಎಲ್ಲರನ್ನೂ ಕರೆದುಕೊಂಡು ಹೋಗಲಾಯಿತು. ಅಲ್ಲಿ ಫಿಷ್, ಚಿಕನ್, ಚೀನಿ ರೈಸ್, ಬೀರು, ಸಾಫ್ಟ್ ಡ್ರಿಂಕ್ಸ್, ಹಣ್ಣಿನ ರಸಗಳು ಇದ್ದವು. ಬೇಕಾದವರು ಬೇಕಾದ ರೀತಿಯಲ್ಲಿ ಬಡಿಸಿಕೊಂಡು ತಿಂದರು. ಲಂಚ್, ಡಿನ್ನರ್ ಒಂದು ಕಡೆಯಾದರೆ, ಉಪಹಾರವನ್ನು ಇನ್ನೊಂದು ಕಡೆ ವ್ಯವಸ್ಥೆ ಮಾಡಲಾಗಿತ್ತು. ನಮ್ಮ ಸಮಸ್ಯೆ ಎಂದರೆ ಬೆಳಗ್ಗೆ ೭ ಗಂಟೆಗೆ ಉಪಹಾರ, ೧೧:೩೦ಕ್ಕೆ ಲಂಚ್, ಸಾಯಂಕಾಲ ೫:೩೦ಕ್ಕೆ ಡಿನ್ನರ್. ರಾತ್ರಿಯೆಲ್ಲ ಏನು ಮಾಡುವುದು? ಚಳಿಗಾಲವಾದುದರಿಂದ ಇಡೀ ಬೀಜಿಂಗ್ ನಗರ ೭ ಗಂಟೆಗೆಲ್ಲ ಮಲಗಿಬಿಡುತ್ತಿತ್ತು. ನಮಗೆ ಬೇರೆ ದಾರಿಯಿಲ್ಲದೆ ಈ ಹೊಸ ವ್ಯವಸ್ಥೆಗೆ ಹೊಂದಿಕೊಳ್ಳಲೇಬೇಕಾಯಿತು.

ಮೊದಲ ದಿನದ ಕೊನೆಯಲ್ಲಿ ಡಾ.ವಾಂಗ್ "ನಮ್ಮ ಕಾರ್ಯಕ್ರಮದ ಪ್ರಕಾರ ನಿಮಗೆಲ್ಲ ಒಂದೆರಡು ದಿನ ಚೀನಿ ಭಾಷೆಯನ್ನು ಕಲಿಸಬೇಕಿದೆ. ನೀವೆಲ್ಲ ಸಹಕರಿಸಬೇಕು" ಎಂದರು. ನಾನು "ಒಂದೆರಡು ದಿನ ಯಾಕೆ? ಪ್ರತಿ ದಿನ ಮಧ್ಯಾಹ್ನ ಒಂದರ್ಧ ಗಂಟೆ ಕಲಿಸಿಕೊಡಿ" ಎಂದೆ. ವಾಂಗ್ ನಗುತ್ತ ಆಗಲಿ ಎನ್ನುತ್ತಿದ್ದಂತೆ "ಚೀನಿ ಭಾಷೆಯಲ್ಲಿ ಎಷ್ಟು ಅಕ್ಷರಗಳಿವೆ?" ಪ್ರಶ್ನಿಸಿದೆ. "ಮೇಲಿಂದ ಕೆಳಕ್ಕೋ? ಎಡಗಡೆಯಿಂದ ಬಲಕ್ಕೋ?" ಎಂದು ನಗುತ್ತಲೆ ವಾಂಗ್ ಪ್ರಶ್ನಿಸಿದರು. ಅವರ ಮಾತಿಗೆ ಎಲ್ಲರೂ ನಗುತ್ತಿದಂತೆ, ವಾಂಗ್ "ಚೀನಿ ಭಾಷೆಯಲ್ಲಿ ಅಲ್ಫಾಬೆಟ್ಸ್ ಇಲ್ಲ. ಬರಿ ಕ್ಯಾರೆಕ್ಟರ್ಸ್. ಒಟ್ಟು ಸುಮಾರು ೫೦ ಸಾವಿರ ಕ್ಯಾರೆಕ್ಟರ್ಸ್ ಇವೆ" ಎನ್ನುತ್ತಿದ್ದಂತೆ ಎಲ್ಲರೂ ಆಶ್ಚರ್ಯದಿಂದ ಕಣ್ಣು ಕಣ್ಣು ಬಿಟ್ಟರು. "ಅನಂತರ ನೀವು ಕೇವಲ ೫೦೦ ಕ್ಯಾರೆಕ್ಟರ್ಸ್ ಕಲಿತುಕೊಂಡರೆ ಸಾಕು. ಚೀನಿ

ಭಾಷೆಯಲ್ಲಿ ವ್ಯವಹರಿಸಬಹುದು" ಎಂದರು. ಚೀನಿ ಭಾಷೆ ಕಲಿತಂತೆಯೆ ಎಂದುಕೊಂಡೆ.

* * *

ಅನಂತರ ಚೀನಿ ಭಾಷೆಯ ಬಗ್ಗೆ ತಿಳಿದ ಕೆಲವು ವಿಷಯಗಳು ಹೀಗಿದ್ದವು. ಕೇವಲ ಹತ್ತು ವರ್ಷಗಳ ಹಿಂದೆ ಹೊರ ದೇಶಗಳ ಯಾರಾದರು ಚೀನಿ ಭಾಷೆಯಲ್ಲಿ ಮಾತಾನಾಡುವುದನ್ನು ನೋಡಿದರೆ ಅದು ಚೀನಿಯರಿಗೆ ಪರಮ ಆಶ್ಚರ್ಯವಾಗುತ್ತಿತ್ತು. ಈಗ ಬೀಜಿಂಗ್ ಅಥವಾ ಷಾಂಗಾಯ್ ನಗರಗಳಲ್ಲಿ ವಿದೇಶಿಯರು ಚೀನಿ ಭಾಷೆಯಲ್ಲಿ ಮಾತನಾಡುವುದು ಸರ್ವೆಸಾಮಾನ್ಯ. ಅಮೆರಿಕಾದ ನ್ಯೂಜರ್ಸಿ ನಗರದಲ್ಲಿ ಚೀನಿ ಶಾಲೆಗಳಲ್ಲಿ ಅನೇಕ ಮಕ್ಕಳು ಚೀನಿ ಭಾಷೆ, ಚೀನಿ ಸಂಸ್ಕೃತಿ, ಕಲೆ, ನಾಟ್ಯ, ಕಾವ್ಯ ಮತ್ತು ಮಾರ್ಷಲ್ ಕಲೆಯನ್ನು ಕಲಿಯುತ್ತಿದ್ದಾರೆ. ಇದರಲ್ಲಿ ಹೆಚ್ಚು ಚೀನಿಅಮೆರಿಕನ್ನರು ಮತ್ತು ವಿದೇಶಿ ಮಕ್ಕಳು ಸೇರಿದ್ದಾರೆ. ಅಲ್ಲಿನ ಚೀನಿಯರು ತಮ್ಮ ಮಕ್ಕಳಿಗೆ ತಮ್ಮ ದೇಶದ ಬಗ್ಗೆ ಗೊತ್ತಿರಬೇಕು ಎನ್ನುತ್ತಾರೆ. ಇದೇ ಪ್ರದೇಶದಲ್ಲಿ ೨೦ ಶಾಲೆಗಳಿದ್ದು, ಅಮೆರಿಕಾದಲ್ಲಿ ಇನ್ನೂ ಅನೇಕ ಚೀನಿ ಭಾಷೆಯನ್ನು ಭೋದಿಸುವ ಶಾಲೆಗಳು ಇರುವುದಾಗಿ ತಿಳಿದುಬರುತ್ತದೆ.

ಕೆಲವು ವಿದೇಶಿಯರು ಚೀನಾದ ಭಾಷೆಯಲ್ಲಿರುವ ಚಿತ್ರರೂಪ ಅಥವಾ ಸಂಕೇತಗಳ ಗುಣಲಕ್ಷಣಗಳನ್ನು ನೋಡಿ ಬೆರಗಾಗಿದ್ದಾರೆ. ಜೊತೆಗೆ ಚೀನಿ ಭಾಷೆಯನ್ನು ಕೆಲವರು ತಮ್ಮದೆ ಶೈಲಿಯಲ್ಲಿ ಅರ್ಥೈಯಿಸಿಕೊಂಡು ಓದುವುದನ್ನು ರೂಡಿಸಿಕೊಂಡಿರುವುದು ಮೆದುಳಿನ ಒಂದು ವಿಶೇಷ ಅಂಗವಾಗಿ ಬೆಳೆದಿದೆ ಎಂದು ಹೇಳಲಾಗುತ್ತಿದೆ. ಹಾಗೆ ಚೀನಾದಲ್ಲಿರುವ ವಿದೇಶಿಯರು ಸ್ಥಳೀಯರ ಜೊತೆಗೆ ವ್ಯವಹಾರ ನಡೆಸಬೇಕಾದರೆ ಚೀನಿ ಭಾಷೆಯನ್ನು ಕಲಿತುಕೊಳ್ಳಲೇಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ಚೀನಾದ ಸುತ್ತಲಿರುವ ದೇಶಗಳು ಮತ್ತು ವಿದೇಶಗಳಲ್ಲಿ ಚೀನಿ ಭಾಷೆ ಕಲಿತುಕೊಳ್ಳುವವರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದೆಯಂತೆ.

ಬೀಜಿಂಗ್‌ನಲ್ಲಿ ೨೦೦೮ ರಲ್ಲಿ ಒಲಂಪಿಕ್ ಕ್ರೀಡೆ ಮತ್ತು ಷಾಂಗಾಯ್‌ನಲ್ಲಿ ೨೦೧೦ರಲ್ಲಿ ವರ್ಲ್ಡ್ ಎಕ್ಸ್‌ಪೊ ನಡೆಯಲಿದೆ. ಈ ಎರಡೂ ಅಂತರಾಷ್ಟ್ರೀಯ ಮೇಳಗಳು ಮೊದಲ ಬಾರಿಗೆ ಚೀನಾದಲ್ಲಿ ನಡೆಯಲಿದ್ದು ಬಹಳ ವಿಜೃಂಭಣೆಯಿಂದ ತಯಾರಿ ನಡೆದಿದೆ. ಈ ಎರಡೂ ಅಂತರಾಷ್ಟ್ರೀಯ ಮೇಳಗಳಿಂದ ಚೀನಿ ಭಾಷೆಗೆ ಪ್ರಪಂಚದಲ್ಲಿ ಸಾಕಷ್ಟು ಪ್ರಾಮುಖ್ಯತೆ ದೊರಕಲಿದೆ ಎಂಬುದಾಗಿ ತಿಳಿಯಲಾಗಿದೆ.

೮೫ ದೇಶಗಳ ೨೧೦೦ ಕಾಲೇಜುಗಳಲ್ಲಿ ಮತ್ತು ಚೀನಾ ದೇಶದ ಸುತ್ತಮುತ್ತಲಿನ ದೇಶಗಳಲ್ಲಿರುವ ಸಾವಿರಾರು ಪ್ರಾಥಮಿಕ, ಪ್ರೌಡಶಾಲೆ ಮತ್ತು ಇನ್‌ಸ್ಟಿಟ್ಯೂಟ್‌ಗಳಲ್ಲಿ ಚೀನಿ ಭಾಷೆಯ ಬೋಧನೆ ನಡೆಯುತ್ತಿದೆ. ಇವುಗಳಲ್ಲಿ ಒಟ್ಟು ೩೦ ಲಕ್ಷ ಜನರು ಚೀನಿ ಭಾಷೆ ಕಲಿತುಕೊಳ್ಳುತ್ತಿದ್ದಾರೆ ಎಂದು ಲೆಕ್ಕ ಹಾಕಲಾಗಿದೆ. ಚೀನಾ ದೇಶ ೧೮ ಭಾಷೆಗಳಲ್ಲಿ ಚೀನಿ ಪಠ್ಯ ಪುಸ್ತಕಗಳನ್ನು ಮುದ್ರಿಸುತ್ತಿದ್ದು ೨೦೦೨ ರಲ್ಲಿ ಈ ಪುಸ್ತಕಗಳಿಂದ ಚೀನಾ

೬ ಲಕ್ಷ ಯುಎಸ್ ಡಾಲರುಗಳನ್ನು ಗಳಿಸಿರುವುದಾಗಿ ತಿಳಿದುಬಂದಿದೆ.

ಚೀನಾದ ೩೦೦ ವಿಶ್ವವಿದ್ಯಾಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ ವಿದೇಶಿಯರಿಗೆ ಚೀನಿ ಭಾಷೆ ಕಲಿಸಲು ೫ ಸಾವಿರ ಅಧ್ಯಾಪಕರನ್ನು ನೇಮಿಸಲಾಗಿದೆ. ೧೯೫೨ ರಿಂದ ೨೦೦೧ ರ ನಡುವೆ ಚೀನಾದಲ್ಲಿ ೪೧೦೦೦೦ ವಿದೇಶಿ ವಿದ್ಯಾರ್ಥಿಗಳು ಚೀನಿ ಭಾಷೆ ಕಲಿತುದಾಗಿ ತಿಳಿದುಬರುತ್ತದೆ. ೨೦೦೨ ರಲ್ಲಿ ಚೀನಿ ಭಾಷೆ ಕಲಿಯುವವರ ಸಂಖ್ಯೆ ೧೦ ಪಟ್ಟು ಹೆಚ್ಚಿದೆಯಂತೆ. ಇವರಲ್ಲಿ ಹೆಚ್ಚಾಗಿ ಪೂರ್ವ ಮತ್ತು ದಕ್ಷಿಣ ಪೂರ್ವ ಏಷಿಯಾ ದೇಶಗಳಿಂದ ಬಂದ ವಿದ್ಯಾರ್ಥಿಗಳಿದ್ದಾರೆ. ಇವುಗಳಲ್ಲಿ ಜಪಾನ್, ಕೊರಿಯಾ, ಮಲೇಷಿಯಾ, ಥಾಯ್‌ಲ್ಯಾಂಡ್ ಮತ್ತು ವಿಯಟ್ನಾಂ ದೇಶಗಳು ಮುಖ್ಯವಾದವು. ಉತ್ತರ ಅಮೆರಿಕಾ ಮತ್ತು ಯುರೋಪಿನ ಕೆಲವು ದೇಶಗಳು ಚೀನಿ ಭಾಷೆಯ ಬಗ್ಗೆ ಹೆಚ್ಚು ಆಸಕ್ತಿ ತೋರಿಸುತ್ತಿವೆ.

೨೦೦೨ ರಲ್ಲಿ ಬ್ರಿಟನ್ ಸರಕಾರ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಚೀನಿ ಭಾಷೆಯ ಬಗ್ಗೆ ಆಸಕ್ತಿ ತೋರಿಸಿದವರಿಗೆ ಬೋಧನೆ ಮಾಡುವಂತೆ ಕೇಳಿಕೊಂಡು ಹಣವನ್ನು ಬಿಡುಗಡೆ ಮಾಡಿತು. ಇದಕ್ಕೆ ಮುಖ್ಯ ಕಾರಣ ಚೀನಾ ಪ್ರಸ್ತುತ ಆರ್ಥಿಕತೆಯಲ್ಲಿ ಪ್ರಪಂಚದಲ್ಲಿ ಎದ್ದು ಕಾಣುವ ದೇಶವಾಗಿದ್ದು ಅದರಿಂದ ಬ್ರಿಟನ್ ಕೂಡ ಚೀನಾದೊಂದಿಗೆ ಗೆಳೆತನ ಬೆಳೆಸುವ ಆಸೆಯನ್ನು ಹೊಂದಿರುವುದಾಗಿ ಹೇಳಿಕೊಂಡಿದೆ. ಬ್ರಿಟನ್ ಒಟ್ಟು ೫೬೦೦ ಶಾಲೆಗಳಲ್ಲಿ ಚೀನಿ ಭಾಷೆಯನ್ನು ಪರಿಚಯಿಸಿದೆ.

ಇದೇ ವರ್ಷದಲ್ಲಿ ಚೀನಾ ಮತ್ತು ಅಮೆರಿಕಾ ದೇಶಗಳ ವಿದ್ಯಾಮಂತ್ರಿಗಳು ಚೀನಾ ಮತ್ತು ಅಮೆರಿಕ ಶೈಲಿಯ ಇಂಗ್ಲಿಷ್ ಭಾಷೆಯನ್ನು ಇಂಟರ್‌ನೆಟ್ ಕೋಆಪರೇಟಿವ್ ಯೋಜನೆಯಡಿಯಲ್ಲಿ ಕಲಿತುಕೊಳ್ಳುವ ಮಹದಾಸೆಯ ಒಪ್ಪಂದ ಒಂದನ್ನು ಮಾಡಿಕೊಂಡವು. ಅಮೆರಿಕಾ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಚೀನಿ ಭಾಷೆ ಕಲಿಸಿದರೆ ಚೀನಾದ ಮಿಡ್ಲ್‌ಸ್ಕೂಲ್ ಮಕ್ಕಳಿಗೆ ಅಮೆರಿಕಾ ಶೈಲಿಯ ಇಂಗ್ಲಿಷ್ ಭಾಷೆ ಕಲಿಸಲಾಗುತ್ತಿದೆ.

ನಮ್ಮ ದೇಶದ ವಿದ್ಯಾರ್ಥಿಗಳು ಅಮೆರಿಕಾಗೆ ಹೋಗಬೇಕಾದರೆ ಗ್ರೀ ಮತ್ತು ಟೋಫಲ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು. ಆದರೆ ಚೀನಾ ಅದನ್ನು ಮಿಡ್ಲ್ ಸ್ಕೂಲ್ ವಿದ್ಯಾರ್ಥಿಗಳಿಗೆ ಕಲಿಸಿಕೊಡುತ್ತಿದೆ. ಅಂದರೆ ಬರುವ ಐದಾರು ವರ್ಷಗಳಲ್ಲಿ ಚೀನಾದ ಎಲ್ಲಾ ವಿದ್ಯಾರ್ಥಿಗಳು ಅಮೆರಿಕಾದಲ್ಲಿ ಓದುವ ಅಥವಾ ಕೆಲಸ ಮಾಡುವ ಅರ್ಹತೆಯನ್ನು ಪಡೆದುಕೊಳ್ಳುತ್ತಾರೆ. ಕೆನಡಾದ ಟೊರೆಂಟೊ, ಬ್ರಿಟಿಷ್ ಕೊಲಂಬಿಯಾ ಮತ್ತು ಮೆಕ್ಗಿಲ್ ವಿಶ್ವವಿದ್ಯಾಲಯಗಳು ಈಗಾಗಲೆ ಚೀನಿ ಭಾಷೆಯನ್ನು ಹೇಳಿಕೊಡುತ್ತಿವೆ.

ಅತ್ಯಂತ ಸಂಪ್ರದಾಯ ದೇಶವಾಗಿದ್ದ ಚೀನಾ ಜಾಗತೀಕರಣದ ಈ ಹೊತ್ತಿನಲ್ಲಿ ಇಂತಹ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿರುವುದನ್ನು ನಾವು ಯೋಚಿಸಬೇಕಿದೆ. ನಮ್ಮ ದೇಶದಲ್ಲಿ ದ್ವಿಭಾಷಾ, ತ್ರಿಭಾಷಾ, ಕೆಲವು ಸಲ ನಾಲ್ಕು ಭಾಷೆಗಳ ಸೂತ್ರಗಳನ್ನು ತಂದು

ಮಕ್ಕಳನ್ನು ಎಲ್ಲಿಯೂ ಸಲ್ಲದಂತೆ ಮಾಡಿಬಿಟ್ಟಿದ್ದಾರೆ. ಶಿಕ್ಷಣ ತಜ್ಞರು, ರಾಜಕಾರಣಿಗಳು, ಬುದ್ಧಿಜೀವಿಗಳು ಎಲ್ಲರೂ ಸೇರಿ ಬಡವರ ಮತ್ತು ಗ್ರಾಮೀಣ ಮಕ್ಕಳ ತಲೆಗಳ ಮೇಲೆ ಕಲ್ಲು ಚಪ್ಪಡಿಗಳನ್ನು ಎಳೆಯುವವರೆ. ಕನ್ನಡ ಮಾಧ್ಯಮ ಓದುವ ಮಕ್ಕಳು ಯಾವ ಪರಿ ಕೀಳರಿಮೆ ಬೆಳೆಸಿಕೊಂಡಿರುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತು. ಈ ಶಿಕ್ಷಣ ತಜ್ಞರು, ರಾಜಕಾರಣಿಗಳು, ಬುದ್ಧಿಜೀಪಿಗಳು ಮತ್ತು ಹಣವಂತರ ಮಕ್ಕಳು ಇಂಗ್ಲಿಷ್ ಮಾಧ್ಯಮ ಓದಬಹುದು ಆದರೆ ಗ್ರಾಮೀಣ ಮಕ್ಕಳು ಮಾತ್ರ ಓದಬಾರದು.

ದೇಶದ ಯಾವುದೇ ರಾಜ್ಯ ಸರಕಾರ ಅಥವಾ ಕೇಂದ್ರ ಸರಕಾರ ಇಂಗ್ಲಿಷ್ ಭಾಷೆಯಿಲ್ಲದೆ ಯಾವುದೇ ಉದ್ಯೋಗಕ್ಕೂ ಪರೀಕ್ಷೆಗಳನ್ನು ನಡೆಸುತ್ತಿಲ್ಲ. ಇನ್ನು ಜಾಗತೀಕರಣಕ್ಕೆ ತುತ್ತಾಗಿರುವ ಬಹುಮಿಲಿಯ, ಬಹುಕೋಟಿ ಕಂಪನಿಗಳು ಕನ್ನಡ ಭಾಷೆ ಅಥವಾ ಇತರ ಯಾವುದೇ ಪ್ರದೇಶಿಕ ಭಾಷೆಗಳನ್ನು ಕ್ಯಾರೆ ಎನ್ನುತ್ತಿವೆಯೆ? ಇಲ್ಲ! ಹಾಗಾದರೆ ಈ ಬಾಷೆಗಳನ್ನು ಕಲಿತುಕೊಂಡರೆ ಏನಾದರೂ ಪ್ರಯೋಜನವಿದೆಯೆ?

ಒಟ್ಟಿನಲ್ಲಿ ನಮ್ಮ ದೇಶದಲ್ಲಿ ಬರುವ ದಿನಗಳಲ್ಲಾದರೂ ಬಡವರು ಮತ್ತು ಐಶ್ವರ್ಯವಂತರ ಮಕ್ಕಳ ನಡುವೆ ಕಾಣಿಸಿಕೊಂಡಿರುವ ಭಯಂಕರ ಅಂತರವನ್ನು ಸ್ವಲ್ಪಮಟ್ಟಿಗಾದರು ಕಡಿಮೆಗೊಳಿಸಬೇಕಾದರೆ ದೇಶದ ಎಲ್ಲಾ ಸರಕಾರಿ ಶಾಲೆಗಳಲ್ಲೂ ಇಂಗ್ಲಿಷನ್ನು ಬೋಧಿಸಬೇಕಾಗಿದೆ. ಆಧುನಿಕ ಪ್ರಪಂಚದ ಸ್ಪರ್ಧೆಯಲ್ಲಿ ನಮ್ಮ ದೇಶದ ಮಕ್ಕಳು ಇರಬೇಕೆಂದರೆ ಕೇವಲ ಎರಡು ಭಾಷೆಗಳನ್ನು ಮಾತ್ರ ಪ್ರಾಥಮಿಕ ಅಂತದಿಂದಲೆ ಮಕ್ಕಳಿಗೆ ಕಲಿಸಬೇಕಾಗಿದೆ. ಒಂದು ಇಂಗ್ಲಿಷ್ ಭಾಷೆ, ಎರಡು ಸ್ಥಳೀಯ ಭಾಷೆ/ರಾಜ್ಯ ಭಾಷೆ. ರಾಷ್ಟ್ರಭಾಷೆ ಮತ್ತು ಸಂಸ್ಕೃತ ಭಾಷೆಗಳನ್ನು ಕಿತ್ತೊಗೆಯಬೇಕಾಗಿದೆ.

ಈ ದಿನ ಭಾರತದ ವಿದ್ಯಾರ್ಥಿಗಳು ಪ್ರಪಂಚದಾದ್ಯಂತ ಎಲ್ಲ ಕ್ಷೇತ್ರಗಳಲ್ಲೂ ಸ್ಪರ್ಧೆಯಲ್ಲಿದ್ದಾರೆ ಎಂದರೆ ಅದು ಭಾರತದಲ್ಲಿ ಮೆಕಾಲೆ ಹಾಕಿದ ಇಂಗ್ಲಿಷ್ ಭಾಷೆಯ ಅಡಿಪಾಯದಿಂದಲೆ. ಪ್ರಸ್ತುತ ಕೆಲವು ರಾಜ್ಯಗಳಾದರೂ ಈ ನಿಟ್ಟಿನಲ್ಲಿ ಯೋಚಿಸುತ್ತಿರುವುದು ಒಳ್ಳೆಯ ಆಲೋಚನೆಯಾಗಿದೆ. ಕರ್ನಾಟಕ ಇನ್ನೂ ಮೀನಾ ಮೇಷಾ ಎಣಿಸುತ್ತಿರುವುದು ಒಳ್ಳೆಯ ಶಕುನವಲ್ಲ.

* * *

ಬೀಜಿಂಗ್ ತಲುಪಿ ಎರಡು ದಿನಗಳಾಗಿದ್ದು, ಶೇವ್ ಮಾಡಿಕೊಳ್ಳಲು ಬ್ಲೇಡು ಕೊಂಡುಕೊಳ್ಳೋಣವೆಂದರೆ ನಮ್ಮಲ್ಲಿ ಯುಯಾನ್ ಇರಲಿಲ್ಲ. ಸಾಯಂಕಾಲ ಲಕ್ಚೆರ್ ಮುಗಿದ ಮೇಲೆ ಡಿನ್ನರ್ ಮುಗಿಸಿಕೊಂಡು ಬರುವ ದಾರಿಯಲ್ಲಿ ಬ್ಲೇಡು ಕೇಳಿದರೆ, ಶನಿವಾರ ಮತ್ತು ಭಾನುವಾರ ರಜಾ ದಿನಗಳಾಗಿದ್ದರಿಂದ ಎಲ್ಲಾ ಅಂಗಡಿಗಳನ್ನು ಮುಚ್ಚಿಬಿಟ್ಟಿರುವುದಾಗಿ ತಿಳಿಯಿತು. ನಾಳೆ ಎಲ್ಲಾದರು ತೆಗೆದುಕೊಳ್ಳೋಣವೆಂದು ಸುಮ್ಮನಾದೆವು. ಶನಿವಾರ ನಮ್ಮಲ್ಲಿದ್ದ ಡಾಲರ್ ಕೊಟ್ಟು ಕೆಲವು ಯುಯಾನ್ ಪಡೆದುಕೊಂಡೆವು. ಭಾನುವಾರ ನಮಗೆ ತರಗತಿಗಳಿದ್ದರೂ ಅಂಗಡಿಗಳು ತೆಗೆದಿರಲಿಲ್ಲ.

ಎರಡೇ ದಿನಕ್ಕೆ ನನ್ನ ಮುಖದಲ್ಲಿ ಬಿಳಿ ಕೂದಲುಗಳು ಚೆನ್ನಾಗಿಯೆ ಕಾಣಿಸಿಕೊಂಡಿದ್ದವು. ಮಧ್ಯಾಹ್ನ ೧೧:೩೦ಕ್ಕೆ ಊಟ ಮುಗಿಸಿದ ಮೇಲೆ ನನ್ನ ಗಡ್ಡವನ್ನು ವಾಂಗ್‌ಗೆ ತೋರಿಸಿ ರೇಜರ್ ಬ್ಲೇಡು ಎಲ್ಲಿ ಸಿಕ್ಕುತ್ತದೆ ಎಂದು ಕೇಳಿದೆ. ವಾಂಗ್ ನಗುತ್ತ ಸನ್ ಬಿನ್‌ಜಿನ್ ಎಂಬ ಮಾಸ್ಟರ್ ಡಿಗ್ರಿ ಓದುತ್ತಿದ್ದ ವಿದ್ಯಾರ್ಥಿಯನ್ನು ಕರೆದು ಎದುರಿಗೆ ಎರಡು ರಸ್ತೆಗಳ ಆ ಕಡೆಗೆ ದೂರದಲ್ಲಿ ಎತ್ತರವಾಗಿ ಕಾಣಿಸುತ್ತಿದ್ದ ಮಾರ್ಕೆಟ್ ಕಾಂಪ್ಲೆಕ್ಸ್ ತೋರಿಸಿ ನಮ್ಮನ್ನು ಅಲ್ಲಿಗೆ ಕರೆದುಕೊಂಡುಹೋಗಿ ಬ್ಲೇಡು ಕೊಡಿಸುವಂತೆ ಹೇಳಿದರು.



ಇನ್‌ಸ್ಟಿಟ್ಯೂಟ್‌ನಲ್ಲಿ ಲೆಕ್ಚರ್ ನೀಡುತ್ತಿರುವುದು

ಯುವಕ ನಾವು ಮೂವರನ್ನು, ಇನ್ನಿಬ್ಬರು ನೀಗ್ರೋಗಳನ್ನು ಕರೆದುಕೊಂಡು ಕಾಂಪ್ಲೆಕ್ಸ್ ಕಡೆಗೆ ಹೊರಟ. ಅದೊಂದು ದೊಡ್ಡ ಕಾಂಪ್ಲೆಕ್ಸ್ ಆಗಿದ್ದು ಬಾಗಿಲುಗಳ ಮುಂದೆ ದೈತ್ಯಾಕಾರದ ಗ್ರಾನೈಟ್ ಶಿಲೆಗಳಲ್ಲಿ ಸಿಂಹಗಳನ್ನು ಕೆತ್ತಿ ನಿಲ್ಲಿಸಲಾಗಿತ್ತು. ಅವುಗಳ ಎತ್ತರ ಸುಮಾರು ೧೫ ಅಡಿ ಇತ್ತು. ಯುವಕನ ಹಿಂದೆ ನಾವೆಲ್ಲ ನಡೆದೆವು. ಯುವಕ ಒಂದಾದ ಮೇಲೆ ಒಂದರಂತೆ ಆರು ಎಸ್ಕಲೇಟರುಗಳನ್ನು ಹತ್ತಿಸಿ ಕೊನೆಯ ಮಹಡಿಯೊಳಕ್ಕೆ ನುಗ್ಗಿದ. ತುಂಬಾ ದೊಡ್ಡದಾಗಿ ಮತ್ತು ವಿಶಾಲವಾಗಿದ್ದ ಮಾರ್ಕೆಟ್ ಕಾಂಪ್ಲೆಕ್ಸ್ ಅದಾಗಿದ್ದು ಇಡೀ ಭಾರತದಲ್ಲಿ ಎಲ್ಲೂ ಅಂತಹ ಮಾರ್ಕೆಟ್ ಕಾಂಪ್ಲೆಕ್ಸನ್ನು ನಾನು ಇದುವರೆಗೂ ನೋಡಿರಲಿಲ್ಲ. ಎಲ್ಲಿ ನೋಡಿದರು ವಿದೇಶಿ ಮತ್ತು ಚೀನಾದಲ್ಲಿ ತಯಾರಾದ ಎಲ್ಲಾ ರೀತಿಯ ವಸ್ತುಗಳು ಅಲ್ಲಿದ್ದವು. ಅಮೆರಿಕಾ, ಯುರೋಪ್, ಪೂರ್ವ ಏಷಿಯಾ ಹೀಗೆ ಯಾವುದೇ ದೇಶದಲ್ಲಿ ತಯಾರಾದ ಎಲ್ಲಾ ರೀತಿಯ

ಸಾಮಾನುಗಳು ಮತ್ತು ಭಾರತದಲ್ಲಿ ದೊರಕುವ ಎಲ್ಲಾ ರೀತಿಯ ಬಹುಮಿಲಿಯ ಕಂಪನಿಗಳ ಸಾಮಾನುಗಳು ಅಲ್ಲಿದ್ದವು.

ಮೊಬೈಲುಗಳು, ಟಿವಿಗಳು, ಲ್ಯಾಪ್‌ಟಾಪ್, ಪಾಮ್‌ಟಾಪ್ ಕಂಪ್ಯೂಟರುಗಳು, ಕ್ಯಾಮರಾಗಳು, ಗಡಿಯಾರಗಳು, ಬಟ್ಟೆಗಳು, ಚಪ್ಪಲಿಗಳು, ಸಾಫ್ಟ್ ಡ್ರಿಂಕ್ಸ್, ಫುಡ್ ಐಟಮ್ಸ್, ಸೈಕಲ್‌ಗಳು, ದ್ವಿಚಕ್ರ ವಾಹನಗಳು ಹೀಗೆ ಪ್ರತಿಯೊಂದು ವಸ್ತುಗಳು ಅಲ್ಲಿದ್ದವು. ಕೊಡಕ್ ಕ್ಯಾಮರಾ ರೀಲನ್ನು ಕೇಳಿದಾಗ ೧೭.೫ ಯುಯಾನ್, ಅದೇ ಚೀನಿ ತಯಾರಿ ರೀಲನ್ನು ಕೇಳಿದಾಗ ೧೧.೫ ಯುಯಾನ್ ಹೇಳಿದರು. ಅಂದರೆ ಚೀನಾದಲ್ಲಿ ತಯಾರಾಗುವ ವಸ್ತುಗಳು ಅಮೆರಿಕಾ, ಯುರೋಪ್ ದೇಶಗಳಲ್ಲಿ ತಯಾರಾಗುವ ಸಾಮಾನುಗಳಿಗಿಂತ ಕಡಿಮೆ ಬೆಲೆಯಲ್ಲಿ ದೊರಕುತ್ತಿದ್ದವು.


ಒಂದು ಯುಎಸ್ ಡಾಲರ್‌ಗೆ ಚೀನಾದ ೮.೨೧ ಯುಯಾನ್ ಸಮವಾದರೆ ಅದೇ ಚೀನಾದ ಒಂದು ಯುಯಾನ್‌ಗೆ ಭಾರತದ ೫.೭೦ ರೂ.ಗಳು ಸಮ. ಅಂದರೆ ನಾವು ಒಂದು ಯುಎಸ್ ಡಾಲರ್‌ಗೆ ೪೭ ರೂ.ಗಳನ್ನು ಕೊಟ್ಟರೆ, ಚೀನಾದವರು ಕೇವಲ ೮.೨೧ ಯುಯಾನ್‌ಗಳನ್ನು ಕೊಡುತ್ತಾರೆ. ಅಂದರೆ ಒಟ್ಟಾರೆ ಚೀನಾ ಭಾರತಕ್ಕಿಂತ ಐದರಿಂದ ಆರುಪಟ್ಟು ಮುಂದಿದೆ ಎನ್ನಬಹುದು. ಭಾರತ ಅಭಿವೃದ್ಧಿಯಲ್ಲಿ ಚೀನಾದ ಜೊತೆಗೆ ಬರಬೇಕಾದರೆ ಇನ್ನೂ ಎಷ್ಟು ವರ್ಷಗಳು ಬೇಕೋ ಕಾದು ನೋಡಬೇಕು. ಅದೇ ಸಮಯಕ್ಕೆ ಚೀನಾ ಅಷ್ಟೇ ಮುಂದಕ್ಕೆ ಹೋಗಿರುತ್ತದೆ.

ಸನ್ ಬಿನ್ ಮೇಲಿನ ಮಹಡಿಯಲ್ಲಿ ೧೦೦೦–೨೦೦೦ ಯುಯಾನ್ ಬೆಲೆಯಲ್ಲಿ ಎಲೆಕ್ಟ್ರಿಕ್ ರೇಜರ್ ಬ್ಲೇಡನ್ನು ತೋರಿಸಿದ. ಸನ್ ಬಿನ್‌ನನ್ನು ಹತ್ತಿರಕ್ಕೆ ಕರೆದು ಕಿವಿಯಲ್ಲಿ "ಕಡಿಮೆ ಬೆಲೆಯ ಉಪಯೋಗಿಸಿ ಬಿಸಾಡುವ ರೇಜರ್ ಬ್ಲೇಡ್‌ಗಳು ಸಿಕ್ಕರೆ ಸಾಕು" ಎಂದೆ. ಅವನು ಸೇಲ್ಸ್ ಗರ್ಲ್ಸ್ ಹತ್ತಿರಕ್ಕೆ ಹೋಗಿ ವಿಚಾರಿಸಿ ಕೆಳಗಿನ ಮಾಳಿಗೆಯಲ್ಲಿ ಇರುವುದಾಗಿ ತಿಳಿಸಿದ. ಮತ್ತೆ ಎಲ್ಲರೂ ಆರು ಮಹಡಿಗಳ ಕೆಳಕ್ಕೆ ಇಳಿದುಬಂದೆವು. ನೆಲಮಾಳಿಗೆಯಲ್ಲಿದ್ದ ಒಂದು ರೇಜರ್ ಜೊತೆಗೆ ಎರಡು ಬ್ಲೇಡುಗಳನ್ನು ೧೨ ಯುಯಾನ್ ಕೊಟ್ಟು ಕೊಂಡುಕೊಂಡೆ.

ಕೊನೆಯಲ್ಲಿ ಹಿಂದಕ್ಕೆ ಬರುವಾಗ ಸನ್ ಬಿನ್ ನಮಗೆ ಬೇಡ ಬೇಡವೆಂದರು ಕೇಳದೆ ಎಲ್ಲರಿಗೂ ಒಂದೊಂದು ಐಸ್‌ಕ್ರೀಮ್ ಕೊಡಿಸಿದ. ಒಂದೊಂದರ ಬೆಲೆ ೧.೫೦ ಯುಯಾನ್. ಐಸ್‌ಕ್ರೀಮ್ ಚನ್ನಾಗಿರಲಿಲ್ಲ, ಸುಮ್ಮನೆ ಇವನು ೯ ಯುಯಾನ್ ಕಳೆದುಕೊಂಡನಲ್ಲ ಎಂದುಕೊಂಡೆ. ಸನ್ ಬಿನ್‌ಗೆ ಒಂದು ತಿಂಗಳಿಗೆ ೧೬೦೦ ಯುಯಾನ್ ಸ್ಟೈಪಂಡ್ ಬರುವುದಾಗಿ ತಿಳಿಸಿದ್ದ. ಎಲ್ಲರೂ ಮಾತನಾಡುತ್ತ ಹಿಂದಕ್ಕೆ ಬಂದೆವು.

* * *

ಬೀಜಿಂಗ್‌ನಲ್ಲಿ ಹವಾಮಾನ ೪-೧೫ ಡಿಗ್ರಿ ಸೆಲ್ಸಿಯಸ್ ಮಧ್ಯ ಇರುತ್ತಿತ್ತು. ಬೆಳಗ್ಗೆ ಎದ್ದು ಬಿಸಿನೀರಿನಲ್ಲಿ ಸ್ನಾನಮಾಡಿ ೮ ಗಂಟೆಗೆ ಹೋಟಲಿಗೆ ಹೋಗುತ್ತಿದ್ದೆವು. ಹೋಟಲು ಬಾಡಿಗೆ ದಿನಕ್ಕೆ ೫೦೦ ಯುಯಾನ್ ಇದ್ದು ರೆಸ್ಟಾರೆಂಟಿನಲ್ಲಿ ತಂಗುವವರಿಗೆ ಉಪಹಾರ ತೆಗೆದುಕೊಳ್ಳಲು ಉಚಿತ ಕೂಪನ್‌ಗಳನ್ನು ಕೊಡುತ್ತಿದ್ದರು. ಅದೊಂದು ಫೈವ್‌ಸ್ಟಾರ್ ಹೋಟಲಾಗಿದ್ದು ವಿಶಾಲವಾದ ಆಸನಗಳು, ಮೇಜುಗಳು, ಕುರ್ಚಿಗಳ ಜೊತೆಗೆ ಹಲವು ರೀತಿಯ ಹೂಗಿಡಗಳು ಬಣ್ಣಬಣ್ಣದ ಪೇಪರುಗಳು, ಗ್ರಾನೈಟ್ ಶಿಲೆಗಳು ಮತ್ತು ಹಿತ್ತಾಳೆಯಿಂದ ಒಳಾಂಗಣವನ್ನು ಅಲಂಕರಿಸಲಾಗಿತ್ತು. ಒಟ್ಟಿನಲ್ಲಿ ಇಡೀ ಹೋಟಲನ್ನು ದುಬಾರಿ ವಸ್ತುಗಳಿಂದ ಶೃಂಗರಿಸಲಾಗಿತ್ತು.



ಪೂರ್ಣವಾಗಿ ಕಂಪ್ಯೂಟರೀಕರಣವಾಗಿರುವ ಲ್ಯಾಬ್

ಮುಖ್ಯವಾಗಿ ಮೂರು ಕಡೆ ಮೂರು ರೀತಿಯ ತಿಂಡಿಗಳನ್ನು ಇಡಲಾಗಿತ್ತು. ಒಂದು ಕಡೆ ಅನೇಕ ರೀತಿಯ ಹಣ್ಣುಗಳು ಮತ್ತು ತರಕಾರಿಗಳು. ಇವುಗಳಲ್ಲಿ ಗೊತ್ತಿಲ್ಲದೆ ಇರುವ ಹಲವು ತರಕಾರಿಗಳಿದ್ದವು. ಗೊತ್ತಿರುವ ತರಕಾರಿಗಳೆಂದರೆ ಕಲಂಗಡಿಹಣ್ಣು, ಅನಾನಸ್, ಸೌತೆಕಾಯಿ, ಟೊಮ್ಯಾಟೊ, ಮೆಕ್ಕೆಜೋಳ, ಹೂವುಕೋಸು, ಎಲೆಕೋಸು, ನಡುವೆ ಎರಡು ಮೂರು ರೀತಿಯ ತೊಳೆದಿಟ್ಟ ಹಸಿಹಸಿ ಸೊಪ್ಪು ಇರುತ್ತಿತ್ತು. ಇನ್ನೊಂದು ಕಡೆ ಹಲವು ರೀತಿಯ ಬನ್ನು, ಬ್ರೆಡ್ಡ್‌ಗಳು ಹಲವು ಪಕ್ಷಿ ಪ್ರಾಣಿಗಳ ಆಕಾರದಲ್ಲಿದ್ದು ಇವುಗಳಲ್ಲಿ ಹಲ್ಲಿ, ಓತಿಕ್ಯಾತ, ಡ್ರ್ಯಾಗನ್‌ಗಳು ಇದ್ದವು. ಜೊತೆಗೆ ನಾಲ್ಕಾರು ರೀತಿಯ ಜಾಮ್ ಬಟ್ಟರ್ ಇತ್ತು. ಮತ್ತೊಂದು ಕಡೆ ಚೀನಿ ತಿಂಡಿಗಳ ಜೊತೆಗೆ ಮೊಟ್ಟೆ, ರೈಸ್, ಅಪ್ಪಳ, ಕಾರ್ನ್‌ಫ್ಲೇಕ್, ಕಾರ್ನ್‌ಬ್ರಾನ್, ಕೆಲವು ಹಸಿ ಧಾನ್ಯ ಮತ್ತು ಬೀಜಗಳು ಮತ್ತು ಕೆಲವು ಚಟ್ನಿಗಳು ಇದ್ದವು. ಮತ್ತೊಂದು ಕಡೆ ಬರಿ ಜ್ಯೂಸುಗಳು, ಆಫಲ್, ಅನಾನಸ್, ತಣ್ಣನೆಹಾಲು, ವಿಶೇಷ ಖನಿಜಯುಕ್ತ ನೀರು, ಕಾಫೀ ಡಿಕಾಕ್ಷನ್, ಗ್ರೀನ್

ಟೀ, ಸಕ್ಕರೆ, ತಣ್ಣನೆ ಹಾಲು ಇತ್ತು.



ಬೀಜಿಂಗ್ ಇನ್‌ಸ್ಟಿಟ್ಯೂಟ್‌ನ ಒಳಾಂಗಣ

ನಾನು ಬೆಳಗ್ಗೆ ಬರಿ ಹಣ್ಣು, ತರಕಾರಿ ಮತ್ತು ಆಫಲ್ ಜ್ಯೂಸು ಮಾತ್ರ ಕಡಿಯುತ್ತಿದ್ದೆ. ಬೆಳಗ್ಗೆ ೯ ಗಂಟೆಯಿಂದ ೧೧.೩೦ ಗಂಟೆಯವರೆಗೆ ತರಗತಿಗಳು ನಡೆಯುತ್ತಿದ್ದವು. ಅನಂತರ ರೆಸ್ಟಾರೆಂಟಿಗೆ ಹೋದರೆ ಅಲ್ಲಿ ಸುಮಾರು ೧೫ ರೀತಿಯ ಭಕ್ಷ್ಯಗಳು ಇರುತಿದ್ದವು. ಕೆಂಪು ಮೆಣಸಿಕಾಯಿಯ ಗೊಜ್ಜು, ಇನ್ನೆರಡು ರೀತಿಯ ಚಟ್ನಿಗಳು, ಎರಡು ರೀತಿಯ ತರಕಾರಿಗಳು, ಸಾಲೆಡ್, ನಮ್ಮ ಬಾರ್ಲಿ ಅಕ್ಕಿಗೆ ಹೋಲುವ ಕೆಂಪಕ್ಕಿಯ ಜೊತೆಗೆ ಮೊಟ್ಟೆ ಬೆರೆಸಿದ ಅನ್ನ, ಚಿಕ್ಕನ್, ಡಕ್, ಕಿಂಗ್‌ಡಕ್, ಬೀಜಿಂಗ್ ಡಕ್, ಮೀನು, ಬೀಫ್, ಮಟನ್, ಬೀಜಿಂಗ್ ಆಕ್ಸ್, ಶೀಗಡಿ ಇವುಗಳಲ್ಲಿಯೂ ದಿನಕ್ಕೊಂದು ರೀತಿಯಲ್ಲಿ ತಯಾರಿಸಿದ ಭಕ್ಷ್ಯಗಳಿರುತ್ತಿದ್ದವು. ಒಂದು ಸಲ ಬರಿ ರಿಬ್ಸ್, ಇನ್ನೊಂದು ಸಲ ಬರಿ ಚಿಕ್ಕನ್ ಲೆಗ್ಸ್, ಫ್ರೈ ಮಾಡಿದ ಶೀಗಡಿ, ಬೀಜಿಂಗ್ ಡಕ್‌ನ ಕೊಬ್ಬಿನ ಚರ್ಮ, ಒಂದು ದಿನ ಬರಿ ಮೂಳೆಗಳು ಹೀಗೆ ಪ್ರತಿ ದಿನವೂ ಒಂದೊಂದು ರೀತಿಯ ಭಕ್ಷ್ಯಗಳಿರುತ್ತಿದ್ದವು. ಇದರ ಜೊತೆಗೆ ಬೇಯಿಸಿದ, ತರಕಾರಿಗಳು ಇರುತ್ತಿದ್ದವು. ಎಣ್ಣೆಯಲ್ಲಿ ಕರಿದ ಈರುಳ್ಳಿ, ಆಲು, ತೊಳೆದಿಟ್ಟ ಹಸಿರು ಸೊಪ್ಪು ಇರುತ್ತಿತ್ತು. ಇವುಗಳ ಜೊತೆಗೆ ಸಿಂಫಿಯಾನ ಬೀರು, ಸ್ಪ್ರೈಟ್ ಮತ್ತು ಕೋಕೋಕೋಲಾ ಟಿನ್ನುಗಳಿರುತ್ತಿದ್ದವು. ನಾವು ನೀರು ಕುಡಿಯುವುದನ್ನೆ ಬಿಟ್ಟುಬಿಟ್ಟಿದ್ದೆವು.

ಅರ್ಧಗಂಟೆಯಲ್ಲಿ ಲಂಚ್ ಮುಗಿಸಿ ಮೂರು ಗಂಟೆಯವರೆಗೂ ಲಕ್ಚೆರ್ ತಯಾರಿ, ಇಲ್ಲ ಉಳಿದ ಸಮಯದಲ್ಲಿ ಏನಾದರು ಚರ್ಚೆ ಇತ್ಯಾದಿಯ ತಯಾರಿಯಲ್ಲಿ ಇನ್‌ಸ್ಟಿಟ್ಯೂಟ್‌ನಲ್ಲಿಯೆ ಕಾಲ ಕಳೆಯುತ್ತಿದ್ದವು. ಕೆಲವೊಂದು ಸಲ ಹತ್ತಿರದಲ್ಲೆ ಇದ್ದ

ಹೋಟಲ್‌ಗೆ ಹೋಗಿ ವಿರಾಮ ಪಡೆಯುತ್ತಿದ್ದವು. ಹೋಟಲ್‌ನಲ್ಲಿ ಒಂದು ಪ್ಯಾಂಟು ಒಂದು ಶರ್ಟು ಒಗೆದು ಇಸ್ತ್ರಿ ಮಾಡಿಕೊಡಲು ೩.೨ ಯುಯಾನ್ ಕೊಡಬೇಕಾಗಿದ್ದರಿಂದ ನಾವ್ಯಾರು ಬಟ್ಟೆಗಳನ್ನು ಒಗೆಯಲು ಕೊಡುತ್ತಿರಲಿಲ್ಲ. ಮತ್ತೆ ಮಧ್ಯಾಹ್ನ ೩ ಗಂಟೆಗೆ ಲೆಕ್ಚರ್ಸ್ ಪ್ರಾರಂಭವಾಗಿ ಸರಿಯಾಗಿ ೫:೩೦ಕ್ಕೆ ಮುಗಿಯುತ್ತಿತ್ತು. ಅದೇ ಸಮಯಕ್ಕೆ ಡಿನ್ನರ್, ಅದೇ ರೀತಿಯ ಭಕ್ಷ್ಯಗಳು. ಡಿನ್ನರ್ ಮುಗಿದ ಮೇಲೆ ದಾರಿಯಲ್ಲಿ ಮನೆಗೊಂದು ಫೋನ್ ಮಾಡಿ ಹೋಟಲ್ ಸೇರಿಕೊಳ್ಳುತ್ತಿದ್ದೆವು. ೪:೪೫ ಕ್ಕೆ ಸೂರ್ಯಾಸ್ತಮವಾಗಿ ಕತ್ತಲಾಗಿಬಿಡುತ್ತಿತ್ತು. ಸಾಯಂಕಾಲ ೭ ಗಂಟೆಗೆಲ್ಲ ಬೀಜಿಂಗ್‌ನ ಜನ ತಮ್ಮ ತಮ್ಮ ಮನೆಗಳನ್ನು ಸೇರಿಕೊಂಡು ನಗರ ಸ್ತಬ್ಧವಾಗಿಬಿಡುತ್ತಿತ್ತು. ಇದಕ್ಕೆ ಇನ್ನೊಂದು ಕಾರಣವೆಂದರೆ ಅತಿಯಾದ ಚಳಿ. ಹವಾಮಾನ ೫-೧೦ ಡಿಗ್ರಿ ಸೆಲ್ಸಿಯಸ್ ಇರುತ್ತಿತ್ತು.



ಇನ್‌ಸ್ಟಿಟ್ಯೂಟ್‌ನ ಲೆಕ್ಚರ್ ಹಾಲ್‌ನಲ್ಲಿ

ನಾವು ಮೂವರು ಒಂದೆರಡು ಗಂಟೆ ಟಿವಿ ನೋಡುತ್ತ ಸ್ವಲ್ಪ ಹರಟೆ ಹೊಡೆದು ಮಲಗಿಕೊಳ್ಳುತ್ತಿದ್ದೆವು. ನಾನು ಬೆಂಗಳೂರಿನಲ್ಲಿದ್ದಾಗ ಯಾವಾಗಲೂ ರಾತ್ರಿ ೧೧ ಗಂಟೆಗೆ ಮುಂಚೆ ಮಲಗುತ್ತಿರಲಿಲ್ಲ. ಇಲ್ಲಿ ನನಗೆ ಓದಲು ಏನೂ ಇರಲಿಲ್ಲ. ಬೀಜಿಂಗ್‌ನಲ್ಲಿ ಎಲ್ಲಿ ಹೋದರೂ ಇಂಗ್ಲಿಷ್ ಪತ್ರಿಕೆಗಳು ದೊರಕುತ್ತಿರಲಿಲ್ಲ. ದೊರಕಿದರೂ ನಾನು ಕೊಂಡುಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ನನ್ನಲ್ಲಿ ಕೇವಲ ೫೦ ಯುಎಸ್ ಡಾಲರ್, ೫೦೦ ಇಂಡಿಯನ್ ರೂಪಾಯಿಗಳು ಮತ್ತು ೮೦೦ ಚೀನಿ ಯುಯಾನ್ ಮಾತ್ರ ಇತ್ತು. ಬೆಂಗಳೂರಿನಿಂದ ಹೊರಡುವಾಗ ಅನೇಕ ಗೆಳೆಯರು ಮತ್ತು ಸಂಬಂಧಿಗಳು ಹಲವು ರೀತಿಯ ಸಾಮಾನುಗಳನ್ನು ತರುವಂತೆ ಹಾಗೂ ಚೀನಾದಲ್ಲಿ ಎಲ್ಲಾ ವಸ್ತುಗಳು ಭಾರಿ ಕಡಿಮೆ ಬೆಲೆಗೆ ದುರಕುತ್ತವೆಂದು ತಿಳಿಸಿದ್ದರು. ಅದರಲ್ಲೂ ಮೊಬೈಲ್ಸ್, ಗಡಿಯಾರಗಳು, ಕ್ಯಾಲುಕುಲೇಟರ್ಸ್, ಕ್ಯಾಮರಾಗಳು ಇತ್ಯಾದಿ. ಆದರೆ ಇಲ್ಲಿ ನೋಡಿದರೆ ಎಲ್ಲವೂ ಬೆಂಗಳೂರಿಗಿಂತ ದುಬಾರಿ ಬೆಲೆಯಾಗಿದ್ದವು.

ಬೆಂಗಳೂರಿನಲ್ಲಿ ದೊರಕುವ ಎಲ್ಲಾ ಬಹುಮಿಲಿಯ ಕಂಪನಿಗಳ ವಸ್ತುಗಳೆ ಇಲ್ಲೂ ಇದ್ದವು. ಸೋನಿ, ಟೋಷಿಬಾ, ನ್ಯಾಷನಲ್, ಫಿಲಿಪ್ಸ್, ನೋಕಿಯ, ಕೊಡಕ್ ಇತ್ಯಾದಿ. ಬೆಂಗಳೂರಿನಲ್ಲಿಯೆ ಇವುಗಳ ಬೆಲೆ ಕಡಿಮೆ. ಚೀನಾದಲ್ಲಿ ತಯಾರಾದ ವಸ್ತುಗಳ ಬೆಲೆ ಇವುಗಳಿಗಿಂತ ಕಡಿಮೆ. ನನ್ನ ಬಳಿ ಕಡಿಮೆ ಹಣ ಇದ್ದುದರಿಂದ ಯಾರಿಗೂ ಏನೂ ಕೊಂಡಕೊಳ್ಳಬಾರದೆಂದು ತೀರ್ಮಾನಿಸಿದೆ. ಸಾದ್ಯವಾದರೆ ಕೊನೆಯಲ್ಲಿ ಕೆಲವು ಬಟ್ಟೆಗಳು ಮತ್ತು ಕೆಲವು ಡೆಕೋರೆಟೀವ್ ವಸ್ತುಗಳನ್ನು ತೆಗೆದುಕೊಳ್ಳೋಣ ಎಂದು ಸುಮ್ಮನಾದೆ.

ಸರಕಾರದ ಯಾವುದೆ ಸಂಸ್ಥೆಯಿಂದ ಹೊರದೇಶಗಳಿಗೆ ತರಬೇತಿ ಅಥವಾ ಸ್ಟಡಿ ಮೇಲೆ ಹೋದಾಗ ದಿನಕ್ಕೆ ಕನಿಷ್ಠ ೧೦೦-೧೫೦ ಯುಎಸ್ ಡಾಲರ್ ದೊರಕುತ್ತದೆ ಎಂದು ಹೇಳಿದ್ದರು. ದಿನಕ್ಕೆ ೧೦೦ ಯುಎಸ್ ಡಾಲರ್ ಎಂದರೆ ೫೦೦೦ ರೂ. ಒಂದು ತಿಂಗಳಿಗೆ ೧.೫ ಲಕ್ಷ ರೂ. ದೊರಕುತ್ತದೆ ಎಂದುಕೊಂಡಿದ್ದೆ. ಕಲಕತ್ತಾದಿಂದ ಆರ್ಡರ್ ಬಂದಾಗ ಅದರಲ್ಲಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಚೀನಾ ಸರಕಾರವೆ ವಹಿಸಿಕೊಳ್ಳಲಿದ್ದು, ದಿನಕ್ಕೆ ೩೦ ಯುಯಾನ್ ಪಾಕೆಟ್ ಮನಿ ಕೊಡುವುದಾಗಿ ತಿಳಿಸಲಾಗಿತ್ತು. ೧ ಯುಯಾನ್‌ಗೆ ಎಷ್ಟು ಇಂಡಿಯನ್ ರೂ.ಗಳೆಂದು ಬೆಂಗಳೂರಿನಲ್ಲಿ ಯಾರನ್ನು ಕೇಳಿದರು ಗೊತ್ತಿರಲಿಲ್ಲ. ದೆಹಲಿಯಲ್ಲಿ ಕೇಳಿದಾಗ ಕೆಲವರು ೧ ಯುಯಾನ್‌ಗೆ ೨೨ ರೂ.ಗಳೆಂದಿದ್ದರು. ಆಗಲೂ ದಿನಕ್ಕೆ ೩೦ ಯುವಾನ್ ಆದರೆ ತಿಂಗಳಿಗೆ ೯೦೦ ಯುವಾನ್. ಅಂದರೆ ೧೯,೮೦೦ ರೂ.ಗಳೆಂದು ಲೆಕ್ಕ ಹಾಕಿಕೊಂಡಿದ್ದೆ. ಚೀನಾಗೆ ಬಂದು ಕೇಳಿದಾಗ ೧ ಯುಯಾನ್‌ಗೆ ಕೇವಲ ೫.೭೦ ರೂ. ಬೆಲೆಯಿತ್ತು. ಅಲ್ಲಿಗೆ ನನ್ನ ಲೆಕ್ಕಾಚಾರವೆಲ್ಲ ತಲೆ ಕೆಳಗಾಗಿತ್ತು. ಬೆಂಗಳೂರಿನಿಂದ ದೆಹಲಿಗೆ ಬಂದಾಗ ೫ ಸಾವಿರ ರೂ.ಗಳನ್ನು ತಂದಿದ್ದು ಅದರಲ್ಲಿ ದೆಹಲಿಯಲ್ಲೆ ಒಂದು ವಾರದಲ್ಲಿ ೪ ಸಾವಿರ ಖರ್ಚಾಗಿ ಒಂದು ಸಾವಿರ ಮಾತ್ರ ಉಳಿದಿತ್ತು. ಜಗಬಂಧು ಹತ್ತಿರ ೨೫೦೦ ರೂ. ಸಾಲ ತೆಗೆದುಕೊಂಡು ೫೦ ಯುಎಸ್ ಡಾಲರ್‌ಗೆ ಪರಿವರ್ತಿಸಿಕೊಂಡಿದ್ದೆ.



ಬೀಜಿಂಗ್ ರಸ್ತೆಗಳ ಮೇಲೆ

ಬೀಜಿಂಗ್‌ನ ಟಿಯನ್‌ಮಿನ್ ಚೌಕ ಪ್ರಪಂಚದಲ್ಲಿಯೇ ಅತಿ ದೊಡ್ಡ ಚೌಕ. ೧೯೮೯ರಲ್ಲಿ ಇಲ್ಲಿ ಬಂಡಾಯ ಎದ್ದ ಸುಮಾರು ೧೦,೦೦೦ ವಿದ್ಯಾರ್ಥಿಗಳನ್ನು ಕಮ್ಯೂನಿಷ್ಟ್ ಸರಕಾರ ನಿರ್ದಾಕ್ಷಿಣ್ಯವಾಗಿ ಸಾಯಿಸಿತು.

೨೪ನೇ ತಾರೀಖು ಮಧ್ಯಾಹ್ನ ಬೀಜಿಂಗ್ ಸುತ್ತಲು ಲೋಕಲ್ ಬಸ್ಸಿನಲ್ಲಿ ನಾವು ಒಟ್ಟು ೧೧ ಜನರು ಹೊರಟೆವು. ಮೂವರು ಯುರೋಪಿಯನ್ನರು (ಅದರಲ್ಲಿ ಒಬ್ಬಳು ಮಹಿಳೆ), ನಾಲ್ವರು ನೀಗ್ರೋಗಳು. ನಾವು ಮೂವರ ಜೊತೆಗೆ ಸನ್‌ಬಿನ್. ನಾವು ರಸ್ತೆಯಲ್ಲಿ ಹೋಗುತ್ತಿದ್ದಂತೆ ಎಲ್ಲರೂ ನಮ್ಮ ಕಡೆಗೆ ನೋಡುತ್ತಿದ್ದರು. ಅಕ್ಟೋಬರ್ ೧೬ ರಿಂದ ೨೩ ರವರೆಗೆ ಬೆಳಗ್ಗೆ ಸಾಯಂಕಾಲ ಎನ್ನದೆ ತರಗತಿಗಳಿದ್ದು ನಾವು ಎಲ್ಲಿಯೂ ಹೊರಗಡೆಗೆ ಹೋಗಿರಲಿಲ್ಲ. ಒಂದೆರಡು ಸಣ್ಣ ರಸ್ತೆಗಳನ್ನು ಸುತ್ತಿ ಬಳಸಿ ಹೋಗುತ್ತಿದ್ದಂತೆ, ಅನೇಕ ರೀತಿಯ ಚಿತ್ರಣಗಳು ಸಿಕ್ಕಿದ್ದವು. ಅಲ್ಲೊಂದು ಕಾಲೇಜಿದ್ದು ವಿದ್ಯಾರ್ಥಿಗಳು ಹೊರಗೆ ನಿಂತುಕೊಂಡು ಓದುತ್ತಿದ್ದರು. ಬಹುಶಃ ಇನ್ನೇನು ಕೆಲವೇ ನಿಮಿಷಗಳಲ್ಲಿ ಅವರೆಲ್ಲ ಪರೀಕ್ಷೆಗೆ ಹೋಗಬೇಕಾಗಿತ್ತು. ಹೆಣ್ಣು ಗಂಡೆನ್ನದೆ ಎಲ್ಲರದೂ ಒಂದೇ ರೀತಿಯ ಉಡುಪುಗಳು. ಪ್ಯಾಂಟು ಮತ್ತು ಶರ್ಟುಗಳು, ಹೆಚ್ಚಾಗಿ ಜೀನ್ಸ್ ಪ್ಯಾಂಟುಗಳು ಮತ್ತು ಚೀನಾ ಶೈಲಿಯ ಸ್ವೆಟರುಗಳು ಮತ್ತು ಕೋಟುಗಳು.

ಎಲ್ಲಾ ರೀತಿಯ ಅಂಗಡಿಗಳು, ರೆಸ್ಟಾರೆಂಟುಗಳು, ರಸ್ತೆಯ ಬದಿಗಳಲ್ಲಿ, ತಿರುವುಗಳಲ್ಲಿ ಸಣ್ಣ ಪುಟ್ಟ ತಳ್ಳುವ ಸೈಕಲ್ ಗಾಡಿಗಳಲ್ಲಿ ಹಲವು ರೀತಿಯ ಚೀನಾ ತಿನಿಸುಗಳು, ಹಣ್ಣುಗಳು ಮತ್ತು ತರಕಾರಿಗಳಿವೆ. ಸುಮಾರು ಎರಡು ಕಿ.ಮೀ. ದೂರ ನಡೆದ ಮೇಲೆ ಒಂದು ಬಸ್ಸು ಸ್ಟಾಪಿನಲ್ಲಿ ನಿಂತುಕೊಂಡೆವು. ರಸ್ತೆಯ ಮಧ್ಯದಲ್ಲೆ ಉದ್ದಕ್ಕೂ ಸಣ್ಣದಾದ ಫುಟ್‌ಪಾತುಗಳು. ಅಧರ ನಡುವೆ ಇರುವ ಬೋರ್ಡುಗಳಲ್ಲಿ ಬಸ್ಸುಗಳ ಸಂಖ್ಯೆಗಳು ಮತ್ತು ಸ್ಥಳಗಳ ಹೆಸರುಗಳನ್ನು ಬರೆಯಲಾಗಿದೆ. ಬಸ್ಸು

ಸಂಖ್ಯೆಗಳು ಇಂಗ್ಲಿಷ್‌ನಲ್ಲಿದ್ದು ಹೆಸರುಗಳು ಚೀನಿ ಭಾಷೆಯಲ್ಲಿದ್ದವು. ಸನ್‌ಬಿನ್ ಬೋರ್ಡ್ ನೋಡಿದ ಮೇಲೆ ಬಸ್ಸು ಸಂಖ್ಯೆಯನ್ನು ಎಲ್ಲರಿಗೂ ಹೇಳಿದ. ನಾವು ಜಾಸ್ತಿ ಜನರಿದ್ದರಿಂದ "ಟಿಕೆಟ್ ನೀನು ತೆಗೆದುಕೊಳ್ತೀಯ ಇಲ್ಲ ನಾವೇ ತೆಗೆದುಕೊಳ್ಳಬೇಕಾ?" ಸನ್‌ಬಿನ್‌ಗೆ ಕೇಳಿದೆ.

"ಟಿಕೆಟ್ ಈಜ್ ಮೈ ಜಾಬ್" ಎಂದ ನಗುತ್ತ, ನಾನು ಸುಮ್ಮನಾದೆ. ಕೆಲವು ನಿಮಿಷಗಳಾದ ಮೇಲೆ ಸನ್‌ಬಿನ್ ಹೇಳಿದ ಬಸ್ಸು ಕಾಣಿಸಿಕೊಂಡಿತು. ಎಲ್ಲರೂ ಹತ್ತಿಕೊಂಡೆವು. ನಮ್ಮ ಬಿಟಿಎಸ್ ಬಸ್ಸಿನಲ್ಲಿ ಮುಕ್ಕಾಲು ಸೈಜು ಎನ್ನಬಹುದಾದ ನೀಲಿ ಬಣ್ಣದ ಬಸ್ಸು. ಒಳಗೆ ಕುಷನ್ ಸೀಟುಗಳು, ಹೆಣ್ಣು ಗಂಡೆನ್ನದೆ ಎಲ್ಲರೂ ಒಟ್ಟಾಗಿ ಕುಳಿತುಕೊಂಡಿದ್ದಾರೆ. ಸುಮಾರು ಹತ್ತು ನಿಮಿಷಗಳಾದ ಮೇಲೆ ನನಗೂ ಕುಳಿತುಕೊಳ್ಳಲು ಸೀಟು ಸಿಕ್ಕಿತು. ಸೀಟಿನಲ್ಲಿ ಕುಳಿತುಕೊಂಡು ಕಿಟಕಿಯಲ್ಲಿ ಹಾದುಹೋಗುತ್ತಿದ್ದ ರಸ್ತೆಗಳನ್ನು ಕಟ್ಟಡಗಳನ್ನು ನೋಡುತ್ತಾ ಹೋದೆ. ಎಲ್ಲವೂ ಒಂದು ರೀತಿಯಲ್ಲಿ ಅಚ್ಚುಕಟ್ಟಾಗಿ ಆಲ್ಬಂನಲ್ಲಿನ ಚಿತ್ರಗಳಂತೆ ಕಾಣಿಸುತ್ತಿದ್ದವು.



ಬೀಜಿಂಗ್‌ನ ಹೊರವಲಯದಲ್ಲಿ ಸೈಕಲ್ ರಿಕ್ಷಾ

ಒಂದು ರಸ್ತೆಯಲ್ಲಿ ಬಸ್ಸು ತಿರುವು ತೆಗೆದುಕೊಂಡರೆ ರಸ್ತೆ ಐದಾರು ಕಿ.ಮೀ. ದೂರ ಉದ್ದವಾಗಿ ಕಾಣಿಸುತ್ತಿತ್ತು. ಒಂದೊಂದು ರಸ್ತೆಯಲ್ಲೂ ಸುಮಾರು ೪ ರಿಂದ ೬ ಲೈನುಗಳು. ಕೆಲವು ರಸ್ತೆಗಳಲ್ಲಿ ಇನ್ನೂ ಹೆಚ್ಚು ಲೈನುಗಳಿದ್ದವು. ಯಾವ ಕಡೆ ನೋಡಿದರು ಫ್ಲೈಓವರ್‌ಗಳು, ಮಧ್ಯ ಮಧ್ಯ ರಸ್ತೆಗಳನ್ನು ದಾಟಲು ಮೇಲುಸೇತುವೆಗಳು. ರಸ್ತೆಗಳ ನಡುವೆ ಮತ್ತು ಇಕ್ಕೆಲುಬುಗಳಲ್ಲಿ ವಿವಿಧ ಆಕಾರದಲ್ಲಿ ಕತ್ತರಿಸಿ ಬೆಳೆಸಿದ ಹೂವಿನ ಗಿಡಗಳು ಮತ್ತು ಮರಗಳು. ಕೆಲವೊಂದು ಕಡೆ ರಸ್ತೆಗಳ ಅಗಲ ಸುಮಾರು

೧೫೦ ರಿಂದ ೨೦೦ ಮೀ.ಗಿಂತ ಹೆಚ್ಚು. ಯಾವ ಕಡೆ ನೋಡಿದರು ಗಗನಚುಂಬಿ ಕಟ್ಟಡಗಳು, ಕಡಿಮೆಯೆಂದರೆ ೨೫ ಅಂತಸ್ತುಗಳು. ಸೆಂಟ್ರಲ್ ಬೀಜಿಂಗ್‌ನಲ್ಲಂತೂ ಎಲ್ಲಾ ಕಟ್ಟಡಗಳು ೩೦ ಅಂತಸ್ತುಗಳ ಮೇಲೆಯೆ. ಸಾಮಾನ್ಯವಾಗಿ ಎಲ್ಲಾ ಕಟ್ಟಡಗಳು ಸಿಮೆಂಟ್ ಮತ್ತು ಸ್ಪಟಿಕಶಿಲೆಯ ಬಣ್ಣದ ಗ್ಲಾಸುಗಳಿಂದ ಅಲಂಕಾರಗೊಂಡಿದ್ದವು.

ಬಸ್ಸಿನಲ್ಲಿ ಮಹಿಳಾ ನಿರ್ವಾಹಕಿ ಇದ್ದು ಬಸ್ಸು ಹತ್ತಿದ್ದ ಸನ್‌ಬನ್ ಎಲ್ಲರಿಗೂ ಟಿಕೆಟ್ ತೆಗೆದುಕೊಂಡ. ಮಹಿಳಾ ನಿರ್ವಾಹಕಿ ಎಲ್ಲರೂ ಹತ್ತಿದ ಮೇಲೆ "ಪೋಮಾ... ಪೋಮಾ..." ಎಂದಿದ್ದೆ ಬಸ್ಸಿನ ಬಾಗಿಲು ಸ್ವಯಂಚಾಲಿತವಾಗಿ ಮುಚ್ಚಿಕೊಂಡಿತು. ಬರುಬರುತ್ತ ಹತ್ತುವವರು ಇಳಿಯುವವರು ಹೆಚ್ಚಾಗಿ ಬಸ್ಸು ತುಂಬಿಹೋಗಿ ಬೀಜಿಂಗ್ ಮಹಿಳಾ ನಿರ್ವಾಹಕಿ ಕತೆ ನಮ್ಮ ಬೆಂಗಳೂರಿನ ಮಹಿಳಾ ನಿರ್ವಾಹಕಿ ಕತೆಯಂತೆ ಆಗಿತ್ತು. ಆಕೆ ಎಲ್ಲರ ಮಧ್ಯೆಯೂ ನುಗ್ಗಿ "ತಿಕೆಟ್... ತಿಕೆಟ್..." ಎಂದು ಕೂಗುತ್ತ ಟಿಕೆಟ್ ಕೊಡುತ್ತಿದ್ದಳು. ನಿಲ್ದಾಣ ಬಂದಾಗ "ಚಚಮಾ... ಚಚಮಾ..." ಎನ್ನುತ್ತಿದ್ದಳು. ಮತ್ತೆ ಬಸ್ಸು ಹೊರಡುವಾಗ "ಪೋಮಾ... ಪೋಮಾ" ಎನ್ನುತ್ತಿದ್ದಳು.




ಸೆಂಟ್ರಲ್ ಬೀಜಿಂಗ್‌ನ ರಸ್ತೆಗಳು

ಒಂದು ಗಂಟೆ ಪ್ರಯಾಣಿಸಿ ಬಸ್ಸಿಳಿದು ಮತ್ತೊಂದು ಬಸ್ಸು ಹಿಡಿಯಲಾಯಿತು. ಅಲ್ಲಿಯೂ ಮಹಿಳಾ ನಿರ್ವಾಹಕಿ. ಆ ಬಸ್ಸಿನಲ್ಲಿ ಅರ್ಧ ಗಂಟೆ ಪ್ರಯಾಣ ಮಾಡಿದ ಮೇಲೆ ಎಲ್ಲರೂ ಇಳಿದುಕೊಂಡೆವು. ಹೋಟಲಿನಿಂದ ಹೊರಡುವುದಕ್ಕೆ ಮುಂಚೆ ಸನ್‌ಬಿನ್ "ಸಿಲಿಕಾನ್ ಸಿಟಿಗೆ ಬರ್‍ತೀರಾ?" ಎಂದು ಕೇಳಿದ್ದ. ಸಿಲಿಕಾನ್ ಸಿಟಿ ಅಂದರೆ ಎಲೆಕ್ಟ್ರಾನಿಕ್ ಸಿಟಿ ಎಂದುಕೊಂಡು ನಾನು ಹೊರಟಿದ್ದೆ. ಆದರೆ ಅವನು ಎಲೆಕ್ಟ್ರಾನಿಕ್ ಗೂಡ್ಸ್ ದೊರಕುವ ಮಾರ್ಕೆಟ್ಟಿಗೆ ಕರೆದುಕೊಂಡು ಹೋಗಿದ್ದ. ನಾನು ಏನೂ ಕೊಳ್ಳುವ

ಸ್ಥಿತಿಯಲ್ಲಿ ಇಲ್ಲದೆ ಅವರ ಹಿಂದೆ ಹೋಗಬೇಕಾಯಿತು. ಆ ಕಟ್ಟಡದ ಒಳಕ್ಕೆ ಹೋಗುವ ಮುಂಚೆ ಸನ್‌ಬಿನ್ "ನಿಮ್ಮ ಪಾಕೆಟ್ಸ್ ಭದ್ರ, ಇಲ್ಲಿ ಪಿಕ್‌ಪಾಕೆತ್ ಆಗುತ್ತೆ" ಎಂದ. ನಾವೆಲ್ಲ ಹುಷಾರಾಗಿ ಜೇಬುಗಳನ್ನು ಭದ್ರಿಸಿಕೊಂಡೆವು.

ಅದೊಂದು ಹತ್ತು ಅಂತಸ್ತುಗಳ ವಿಶಾಲವಾದ ಕಟ್ಟಡ. ಕೆಳಗಿಂದ ಮೇಲಕ್ಕೆ ಎಸ್ಕಲೇಟರುಗಳ ಮೇಲೆ ಹೋಗಬೇಕಾಗಿತ್ತು. ನನಗೆ ಬೇರೆ ವಿಧಿಯಿಲ್ಲದೆ ಅವರನ್ನು ಹಿಂಬಾಲಿಸದೆ. ಬೆಂಗಳೂರಿನ ಚೀನಾ ಬಜಾರು, ಹಾಂಗ್‌ಕಾಂಗ್ ಮಾರ್ಕೆಟ್ ರೀತಿಯ ದೊಡ್ಡ ದೊಡ್ಡ ಅಂಗಡಿಗಳು, ನೂರಾರು ರೀತಿಯ ಎಲೆಕ್ಟ್ರಾನಿಕ್ ವಸ್ತುಗಳು. ಎಲ್ಲೆಲ್ಲೂ ಜನರ ನೂಕುನುಗ್ಗಲು. ಇಷ್ಟು ದೊಡ್ಡ ನಗರವನ್ನು ಇವರು ಅದ್ಹೇಗೆ ಸುಧಾರಿಸುತ್ತಾರೋ ಎನ್ನುವ ಆಶ್ಚರ್ಯ ನನ್ನನ್ನು ಕಾಡತೊಡಗಿತು. ಮಧ್ಯಾಹ್ನ ಒಂದು ಗಂಟೆಗೆ ಪ್ರಾರಂಭವಾದ ನಮ್ಮ ಪ್ರಯಾಣ ಮಾರ್ಕೆಟಿಂಗ್ ಮುಗಿದಾಗ ೫:೩೦ ಗಂಟೆ ಆಗಿತ್ತು. ಎಲ್ಲಿಯೊ ನಮ್ಮ ಬೆಂಗಳೂರಿನ (ಕುಕ್ಕುವ) ರಸ್ತೆಗಳು ಜ್ಞಾಪಕಕ್ಕೆ ಬರಲಿಲ್ಲ. ಬಸ್ಸುಗಳು ರಸ್ತೆಗಳ ಉದ್ದಕ್ಕೂ ಒಂದೇ ಸಮನೆ ಜರ್ರನೆ ಓಡುತ್ತಿವು.



ಬೀಜಿಂಗ್ ಒಪೇರಾ : ನೃತ್ಯ, ಸಂಗೀತ, ನಟನೆ ಎಲ್ಲವೂ ಕೂಡಿರುವ ಜಾನಪದ ಕಲೆ

ನಮ್ಮ ಬೆಂಗಳೂರಿನ ಎಂಜಿ ರಸ್ತೆಯನ್ನು ಬೀಜಿಂಗ್ ನಗರದ ರಸ್ತೆಗಳಿಗೆ ಹೋಲಿಸಿದಾಗ ಬೀಜಿಂಗ್‌ನ ಹೊರಹೊಲಯದ ರಸ್ತೆಗಳಿಗೆ ಹೋಲಿಸಬಹುದು. ಇನ್ನೂ ಬೆಂಗಳೂರನ್ನು ಬೀಜಿಂಗ್‌ಗೆ ಹೋಲಿಸಿದಾಗ, ಬೆಂಗಳೂರು ಒಂದು ದೊಡ್ಡ ಹಳ್ಳಿ ಎನ್ನಬಹುದು. ದೆಹಲಿ ಚೀನಾ ರಾಜ್ಯಗಳ ಯಾವುದೊ ಒಂದು ರಾಜಧಾನಿ. ನಮ್ಮ ಜೊತೆಗೆ ಬಂದಿದ್ದ ನೀಗ್ರೋಗಳು ಮತ್ತು ಯುರೋಪಿನ ಮಹಿಳೆ ಗೋಜಾಡಿ ಗೋಜಾಡಿ ಕೆಲವು ಎಲೆಕ್ಟ್ರಾನಿಕ್ ವಸ್ತುಗಳನ್ನು ಕೊಂಡುಕೊಂಡರು. ನಾನು ಸುಮ್ಮನೆ ನಿಂತಿದ್ದರು ಸೇಲ್ಸ್‌ಮನ್‌ಗಳು ಯಾವ ಯಾವುದೋ ವಸ್ತುಗಳನ್ನು ತಂದು ತಂದು ತೋರಿಸುತ್ತ ಅವರ ಅಂಗಡಿಗಳಿಗೆ ಕರೆಯುತ್ತಿದ್ದರು. ನನ್ನ ಜೊತೆಗಿದ್ದ ಕೆನಡಾದ ನರೂಡ ಇಲ್ಲಿಗಿಂತ ಜಂಗಲ್ಲೇ ವಾಸಿ ಎಂದು ಗೊಣಗಿದ. ನಮಗೆ ಆ ಗದ್ದಲದಲ್ಲಿ ತಲೆಕೆಟ್ಟು ಹೋಗಿ ಹೊರಗೆ ಬಂದುಬಿಟ್ಟೆವು. ಕೊನೆಗೆ ಎಲ್ಲರೂ ಬಂದ ಮೇಲೆ ಒಟ್ಟಾಗಿ ಹಿಂದಿರುಗಿದೆವು.



ಸ್ವರ್ಗ ದೇವಾಲಯ

ಚೀನಾದ ಜನಸಂಖ್ಯೆ ೧೪೦ ಕೋಟಿ, ಭಾರತದ ಜನಸಂಖ್ಯೆ ೧೧೫ ಕೋಟಿ.

ಒಂದು ದಿನ ಬೆಳಿಗ್ಗೆ ೭ ಗಂಟೆಗೆ ಎದ್ದು ಬಿಸಿ ನೀರಿನಲ್ಲಿ ಸ್ನಾನ ಮಾಡಿ ಹೊರಗೆ ಬಂದಾಗ ಗೋಷ್ ಮತ್ತು ದಾಸ್ ಜೊತೆಯಲ್ಲಿದ್ದರು. ಹೋಟಲ್ ಹೊರಗೆ ಮೋಡ ಕವಿದು ಸಣ್ಣದಾಗಿ ಹನಿ ಜಿನುಗುತ್ತಿತ್ತು. ಚಳಿಗೆ ಆಫ್ ಸ್ವೆಟರ್ ಮೇಲೆ ಒಂದು ವಿಂಡ್ ಸ್ವೆಟರ್ ಹಾಕಿಕೊಂಡಿದ್ದರೂ ಸಣ್ಣಗೆ ಚಳಿಯಾಗುತ್ತಿತ್ತು. “ಈ ದಿನ ಎಲ್ಲಿಗೂ ಹೋಗುವುದು ಬೇಡ. ನಮ್ಮ ಹತ್ತಿರ ಸರಿಯಾದ ವಾರ್ಮ್ ಬಟ್ಟೆಗಳಿಲ್ಲ” ಎಂದು ಮಾತನಾಡುತ್ತ ನಾವು ಮೂವರು ಬೆಳಗಿನ ಉಪಹಾರಕ್ಕಾಗಿ ರೆಸ್ಟಾರೆಂಟ್ ಕಡೆಗೆ ಹೊರಟೆವು. ವೆಜ್ ಕಟ್ಲೆಟ್ಸ್, ಫ್ರೈ ಮಾಡಿದ ಆಲು, ಒಂದಿಷ್ಟು ಹಣ್ಣುಗಳು ಮತ್ತು ಆಪಲ್ ಜೂಸ್ ಕುಡಿದು ಹಿಂದಕ್ಕೆ ಬಂದು ಕೋಣೆಯಲ್ಲಿ ಸ್ವಲ್ಪ ಹೊತ್ತು ಕುಳಿತುಕೊಂಡೆವು. ವಾಂಗ್ ೯ ಗಂಟೆಗೆ ಸ್ವರ್ಗ ದೇವಾಲಯಕ್ಕೆ ಎಲ್ಲರನ್ನೂ ಕರೆದುಕೊಂಡು ಹೋಗುವುದಾಗಿ ಹೇಳಿದ್ದರು. ೮:೪೫ಕ್ಕೆ ಹೋಟಲ್ ಹೊರಕ್ಕೆ ಬಂದೆವು. ನಾಲ್ವರು ನೀಗ್ರೋಗಳು ಐವರು ಯುರೋಪಿಯನ್ನರು ಮತ್ತು ನಾವು ಮೂವರು ಅಲ್ಲಿದ್ದೆವು. ೯ ಗಂಟೆಗೆ ಐದು ನಿಮಿಷ ಇದ್ದಾಗ ವಾಂಗ್ ಒಂದು ಮಿನಿ ಬಸ್ಸಿನಲ್ಲಿ ಬಂದಿಳಿದರು. ಬಸ್ಸು ನೋಡಿದ್ದೆ, ಎಲ್ಲರೂ ಒಬ್ಬೊಬ್ಬರಾಗಿ ಹೋಗಿ ಒಳಗೆ ಕುಳಿತುಕೊಂಡೆವು. ದಕ್ಷಿಣ ಆಫ್ರಿಕಾದ ಡಾಮ್ನಿಕ್ “ನಾನು ಬರುವುದಿಲ್ಲ. ಬಟ್ಟೆಯಲ್ಲ ಕೊಳೆಯಾಗಿದೆ ಇವೊತ್ತು ಒಗೆಯಲೇಬೇಕು” ಎಂದಾಗ ವಾಂಗ್ “ಹಾಕ್ಕೊಂಡಿದ್ದೀರಲ್ಲ ಅದೇ ಸಾಕು ಬನ್ನಿ” ಎಂದರು. “ಇಲ್ಲ ಇದೆ ಕೊನೆ ಡ್ರೆಸ್. ನಾಳೆ ಬೀಜಿಂಗ್‌ನಲ್ಲಿ ಬೆತ್ತಲಾಗಿ ಓಡಾಡಬೇಕಾಗುತ್ತದೆ”. ಡಾಮ್ನಿಕ್ ಹೇಳಿದ. ಡಾಮ್ನಿಕ್‌ನನ್ನು ಅಲ್ಲಿಯೇ ಬಿಟ್ಟು ಎಲ್ಲರೂ ಬಸ್ಸಿನಲ್ಲಿ ಕುಳಿತುಕೊಂಡೆವು.

ಮಿನಿ ಬಸ್ಸು ಅದೇ ಗಗನಚುಂಬಿ ಕಟ್ಟಡಗಳ ಮಧ್ಯ ಅಂದವಾದ ರಸ್ತೆಗಳಲ್ಲಿ ಓಡುತ್ತಿತ್ತು. ನಾವೆಲ್ಲ ಮತ್ತೆ ಮೊದಲ ದಿನದಂತೆ ಬೀಜಿಂಗ್ ನಗರವನ್ನು ಆಶ್ಚರ್ಯದಿಂದ ನೋಡುತ್ತಿದ್ದೆವು. ಬಸ್ಸು ಸರಾಗವಾಗಿ ನೀರಿನಲ್ಲಿ ಮೀನಿನಂತೆ ಹೋಗುತ್ತಿತ್ತು. ನಾನು ಟೋಕಿಯೊ, ಲಂಡನ್, ವಾಷಿಂಗ್‌ಟನ್ ನಗರಗಳನ್ನು ಮನಸಿನಲ್ಲೆ ಊಹಿಸಿಕೊಂಡು

ಆ ನಗರಗಳು ಇನ್ನೆಷ್ಟು ಅದ್ಭುತವಾಗಿರಬಹುದು..? ಅವುಗಳಿಗಿಂತ ಬೀಜಿಂಗ್ ನಗರವೆ ಚನ್ನಾಗಿದೆಯೊ..? ಒಂದೂ ಗೊತ್ತಾಗಲಿಲ್ಲ. ಆಶ್ಚರ್ಯವಾಗಿ ನೋಡುತ್ತಾ ಹೋದೆ?



ಸ್ವರ್ಗದೇವಾಲಯದ ಮುಂದೆ ಲೇಖಕ

ಸುಮಾರು ೪೫ ನಿಮಿಷಗಳಾದ ಮೇಲೆ ನಮ್ಮ ಬಸ್ಸು ಸ್ವರ್ಗಮಂದಿರದ ಬಾಗಿಲು ಮುಂದೆ ನಿಂತುಕೊಂಡಿತು. ಅದೊಂದು ಮಾಮೂಲಿ ದೇವಾಲಯದ ಹೆಬ್ಬಾಗಿಲಿನಂತೆ ಕಾಣಿಸಿತು. ಸನ್‌ಬಿನ್ ಇಳಿದುಹೋಗಿ ಎಲ್ಲರಿಗೂ ಟಿಕೆಟ್ಟುಗಳನ್ನು ತೆಗೆದುಕೊಂಡು ಬಂದು ಬಸ್ಸಿನಲ್ಲಿ ಕುಳಿತುಕೊಂಡ. ಒಂದು ಟಿಕೆಟ್ಟು ಎಷ್ಟೆಂದು ಕೇಳಿದೆ. ೩೦ ಯುಯಾನ್ ಎಂದ. ಅಂದರೆ ಸುಮಾರು ೨೦೦ ರೂಪಾಯಿಗಳು. ದೇವಾಲಯ ಮತ್ತು ಸುತ್ತಮುತ್ತಲಿನ ಹೂತೋಟ ತುಂಬಾ ಅದ್ಭುತವಾಗಿರಬಹುದು ಎಂದುಕೊಂಡೆ. ಪ್ರತಿಯೊಂದು ಟಿಕೆಟ್ಟಿನ ಜೊತೆಗೆ ೪ ಸಣ್ಣ ಸಣ್ಣ ಟಿಕೆಟ್ಟುಗಳಿದ್ದವು. ನಾಲ್ಕು ಬಾಗಿಲುಗಳಲ್ಲಿ ೪ ಟಿಕೆಟ್ಟುಗಳನ್ನು ತೆಗೆದುಕೊಳ್ಳುವುದಾಗಿ ತಿಳಿಯಿತು.

ಎಲ್ಲರೂ ಮೊದಲಿಗೆ ಒಂದನೇ ಬಾಗಿಲಿನ ಒಳಕ್ಕೆ ಹೋದೆವು. ಸ್ವಲ್ಪ ದೂರ ಹೋದ ಮೇಲೆ ಒಂದು ದೊಡ್ಡ ಬಾಗಿಲು ಕಾಣಿಸಿಕೊಂಡಿತು. ಅಲ್ಲೊಂದು ವಿಶಾಲವಾದ ಪ್ಲಾಟ್‌ಫಾರ್ಮ್ ಇದ್ದು ಮಧ್ಯದಲ್ಲಿ ಪಗೋಡ (ಬೌದ್ಧ ದೇವಾಲಯ) ರೀತಿಯ ಗೋಪುರಗಳುಳ್ಳ ಎತ್ತರದ ಕಟ್ಟಡ. ಸುತ್ತಲು ಸ್ಟೇಡಿಯಂ ರೀತಿಯ ಮೂರು ಸುತ್ತಿನ ಮೆಟ್ಟಿಲುಗಳು. ಮೇಲೆ ಮಧ್ಯದಲ್ಲಿ ಪಗೋಡ ರೀತಿಯ ಗೋಪುರಗಳು. ಒಳಗೆ ಮಿಂಗ್ ಮತ್ತು ಕ್ವಿಂಗ್ ರಾಜರು ಸ್ವರ್ಗದೇವತೆಗಳಿಗೆ ಪೂಜೆ ಸಲ್ಲಿಸುವಾಗ ಉಪಯೋಗಿಸುತ್ತಿದ್ದ ವಸ್ತುಗಳನ್ನು ಇಡಲಾಗಿತ್ತು. ಸುತ್ತಲು ವಿಶಾಲವಾದ ಹಸಿರು ಕಾಡಿನಂತಹ ತೋಟ. ಒಂದೇ ರೀತಿಯ ಮರಗಳನ್ನು ಸಾಲು ಸಾಲಾಗಿ ಬೆಳೆಸಲಾಗಿತ್ತು.

ಸ್ವರ್ಗಮಂದಿರ ಬೀಜಿಂಗ್ ನಗರದ ದಕ್ಷಿಣ ಭಾಗದಲ್ಲಿದ್ದು ಈ ದೇವಾಲಯವನ್ನು ಕ್ರಿ.ಶ.೧೪೨೦ ರಲ್ಲಿ ಯಾಂಗ್ಲೆ ರಾಜರು ಆಳುತ್ತಿದ್ದಾಗ ಕಟ್ಟಲಾಗಿದೆ. ಈ ಸ್ಥಳದಲ್ಲಿ ಅನಂತರದ ದಿನಗಳಲ್ಲಿ ಮಿಂಗ್ ಮತ್ತು ಕಿಂಗ್ ರಾಜರ ಕಾಲದಲ್ಲಿ ೨೪ ತಲೆಮಾರುಗಳ ರಾಜರು ಪ್ರತಿ ವರ್ಷವೂ ಸುಗ್ಗಿ ಕಾಲದಲ್ಲಿ ಒಳ್ಳೆ ಮಳೆಯಾಗಿ, ಒಳ್ಳೆಯ ಫಸಲು ಬೆಳೆಯಬೇಕೆಂದು ಸ್ವರ್ಗದೇವತೆಗಳಿಗೆ ಪ್ರಾರ್ಥನೆ ಸಲ್ಲಿಸುತ್ತಿದ್ದಂತೆ. ಈ ದೇವಾಲಯ ಮತ್ತು ದೇವಾಲಯದ ಸುತ್ತಲಿನ ಹೂತೋಟ ಚೀನಾದಲ್ಲಿಯೆ ದೊಡ್ಡದಾಗಿದ್ದು ದೇಶದ ಮುಖ್ಯ ಸಾಂಸ್ಕೃತಿಕ ಸಂಕೇತವು ಆಗಿದೆ. ಜೊತೆಗೆ ಈ ದೇವಾಲಯಗಳು ಪ್ರಪಂಚದ ಸಾಂಸ್ಕೃತಿಕ ಸ್ಮಾರಕಗಳ ಪಟ್ಟಿಯಲ್ಲೂ ಸೇರಿವೆ. ಸ್ವರ್ಗದೇವತೆಗಳಿಗೆ ಪೂಜೆ ಸಲ್ಲಿಸುವಾಗ ಉಪಯೋಗಿಸುತ್ತಿದ್ದ ವಸ್ತುಗಳನ್ನು ಇಲ್ಲಿ ಇಡಲಾಗಿದ್ದು ಅವುಗಳನ್ನು ಸ್ವಲ್ಪ ವಿವರವಾಗಿ ಗಮನಿಸಿದಾಗ ಬಹುಶ: ಆ ಕಾಲದಲ್ಲಿ ಭಾರತದಲ್ಲಿ ಆರ್ಯರು ಯಾಗ, ಯಜ್ಞಗಳಲ್ಲಿ ಉಪಯೋಗಿಸುತ್ತಿದ್ದ ವಸ್ತುಗಳಂತೆ ತೋರುತ್ತಿದ್ದವು. ಪ್ರಾಣಿಗಳನ್ನು ಬಲಿ ಕೊಡುತ್ತಿರುವುದಾಗಿಯೂ ತಿಳಿದುಬರುತ್ತದೆ. ಒಟ್ಟಿನಲ್ಲಿ ಆ ಕಾಲದಲ್ಲಿ ಭಾರತದಲ್ಲಿದ್ದಂತೆ ಚೀನಾದಲ್ಲೂ ಇಡೀ ಸಮಾಜ ಫ್ಯೂಡಲ್ ಸಮಾಜವಾಗಿ ರಾಜರ ಹಿಡಿತದಲ್ಲಿತ್ತು.



ಮಕ್ಕಳು ಬಟ್ಟೆಯ ಮೇಲೆ ಬಿಡಿಸಿರುವ ಚಿತ್ರಗಳು

ಕ್ರಿ.ಶ.೧೯೧೧ರಲ್ಲಿ ರಾಷ್ಟ್ರೀಯ ಪಕ್ಷ ಆಡಳಿತಕ್ಕೆ ಬಂದ ಮೇಲೆ ಫ್ಯೂಡಲ್ ಸಮಾಜವನ್ನು ಕೊನೆಗಾಣಿಸಿತ್ತು. ಅನಂತರ ಕ್ರಿ.ಶ.೧೯೪೯ರಲ್ಲಿ ರಾಷ್ಟ್ರೀಯ ಪಕ್ಷವನ್ನು ಸೋಲಿಸಿದ ಕಮ್ಯೂನಿಷ್ಟ್ ಪಕ್ಷ ದೇಶದಾದ್ಯಂತ ಎಲ್ಲಾ ಅರಮನೆ, ದೇವಾಲಯ ಮತ್ತು ಸ್ಮಾರಕಗಳನ್ನು ಸಾರ್ವಜನಿಕ ಆಸ್ತಿ ಎಂದು ಘೋಷಿಸಿ, ಶಾಲೆ/ಕಾಲೇಜು, ಆಸ್ಪತ್ರೆ, ಕಚೇರಿ ಮತ್ತು ವಸ್ತುಸಂಗ್ರಾಲಯಗಳನ್ನಾಗಿ ಪರಿವರ್ತಿಸಿತು. ಸ್ವರ್ಗ ದೇವಾಲಯ ಚೀನಿ ರಾಜಧಾನಿ ಬೀಜಿಂಗ್ ಮಧ್ಯದಲ್ಲಿದ್ದು ಅದು ನಿಷೇಧಿತ ಅರಮನೆ (ಫರ್‌ಬಿಡನ್ ಸಿಟಿ) ಗಿಂತ ವಿಶಾಲವಾಗಿದ್ದು ಬೇಸಿಗೆ ಅರಮನೆಗಿಂತ ಚಿಕ್ಕದಾಗಿದೆ.

ಚೀನಾವನ್ನು ಆಳುತ್ತಿದ್ದ ರಾಜರು ತಾವು ಸ್ವರ್ಗದ ವಾರುಸುದಾರರೆಂದು ದೇವತೆಗಳ ಮಕ್ಕಳೆಂದು ಹೇಳಿಕೊಳ್ಳುತ್ತ ರಾಜ್ಯಗಳನ್ನು ಆಳುತ್ತಿದ್ದರು. ಈ ದೇವಾಲಯ ಉತ್ತರದಲ್ಲಿ ಅರ್ಧವೃತ್ತಾಕಾರದ ಗೋಡೆಯಿಂದ ಕೂಡಿದ್ದು ಅದು ಸ್ವರ್ಗದ ಸಂಕೇತವಾದರೆ ದಕ್ಷಿಣದಲ್ಲಿ ಚೌಕಾಕಾರದ ಭೂಮಿಯನ್ನು ಸಂಕೇತಿಸುವ ಗೋಡೆ ಇದೆ. ಉತ್ತರದ ಗೋಡೆ ದಕ್ಷಿಣದ ಗೋಡೆಗಿಂತ ಎತ್ತರವಾಗಿದೆ. ಈ ದೇವಾಲಯ ಆಕಾಶದಲ್ಲಿ ಅಂದರೆ ಸ್ವರ್ಗದಲ್ಲಿ ವೃತ್ತಾಕಾರವಾಗಿ ಮೇಲಿದ್ದರೆ ಭೂಮಿ ಚೌಕಾಕಾರವಾಗಿ ಕೆಳಗಿರುವುದಾಗಿ ಚೀನಿಯರು ತಿಳಿದುಕೊಂಡಿದ್ದಾರೆ.



ಕ್ವಿನ್ ಮತ್ತು ಮಿಂಗ್ ರಾಜರು ದರ್ಬಾರು ನಡೆಸುತ್ತಿದ್ದ ಸಭಾಂಗಣ

ದೇವಾಲಯ ಮುಖ್ಯವಾಗಿ ಎರಡು ಗೋಡೆಗಳಿಂದ ಕೂಡಿದ್ದು ಒಂದು ಒಳಗೋಡೆಯಾದರೆ ಇನ್ನೊಂದು ಹೊರಗಿನ ಗೋಡೆ. ಮುಖ್ಯ ದೇವಾಲಯ ದಕ್ಷಿಣ ಮತ್ತು ಉತ್ತರದ ಕೊನೆಯ ಮಧ್ಯ ಗೆರೆಯ ಒಳಗಿನ ಭಾಗದಲ್ಲಿದೆ. ಇಡೀ ದೇವಾಲಯವನ್ನು ಅಮೃತ ಶಿಲೆಗಳಲ್ಲಿ ಕಟ್ಟಲಾಗಿದೆ. ಮಿಂಗ್ ಮತ್ತು ಕ್ವಿಂಗ್ ಸಾಮ್ರಾಟರ ಕಾಲದಲ್ಲಿ ಕ್ರಿ.ಶ.೧೪೨೦ ರಿಂದ ಕ್ರಿ.ಶ.೧೯೧೧ ರವರೆಗೆ ರಾಜರು ಚಳಿಕಾಲದ ಪ್ರಾರಂಭದಲ್ಲಿ ಪ್ರತಿ ವರ್ಷವೂ ಸ್ವರ್ಗ ದೇವತೆಗಳಿಗೆ ಈ ಸ್ಥಳದಲ್ಲಿ ಪ್ರಾರ್ಥನೆ ಮಾಡಿ ಬಲಿ ಕೊಡುತ್ತಿದ್ದರು. ಈ ಬಲಿಯಲ್ಲಿ ಸ್ವರ್ಗ ದೇವತೆಗಳಿಗೆ ವಂದನೆಗಳನ್ನು ಅರ್ಪಿಸುವುದರ ಜೊತೆಗೆ ಮುಂದಿನ ವರ್ಷ ಒಳ್ಳೆಯ ಮಳೆಯಾಗಿ, ಒಳ್ಳೆ ಬೆಳೆ ಬೆಳೆಯಲಿ ಎನ್ನುವ ಅರಿಕೆ ಇರುತ್ತಿತ್ತು.

ಹೀಗೆ ಪ್ರಾರ್ಥನೆ ಸಲ್ಲಿಸುತ್ತಿದ್ದ ಅರಮನೆಯ ಒಳಗೆ ದೊಡ್ಡ ಹಾಲಿದ್ದು ವಿಶಾಲವಾಗಿ ಮತ್ತು ಎತ್ತರವಾಗಿದ್ದ ಅರಮನೆಯ ಮೇಲೆ ಚಕ್ರಾಕಾರದ ಮೂರು ಕಟ್ಟಡಗಳಿದ್ದು,

ಒಳಗೆ ಸುಂದರವಾದ ಬಣ್ಣಗಳಿಂದ ಸಿಂಗರಿಸಿದ ಛಾವಣಿ ಇದೆ. ಹಾಲಿನಲ್ಲಿ ಒಟ್ಟು ೨೮ ಕಂಬಗಳಿದ್ದು ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಈ ನಾಲ್ಕು ಕಂಬಗಳು ನಾಲ್ಕು ಋತುಗಳ ಸಂಕೇತ. ಇವುಗಳ ಸುತ್ತಲಿರುವ ೧೨ ಕಂಬಗಳು ೧೨ ತಿಂಗಳುಗಳನ್ನು ಪ್ರತಿಬಿಂಬಿಸುತ್ತವೆ. ಈ ಕಂಬಗಳು ಚೀನಾದಲ್ಲಿ ಸಮಯವನ್ನು ಲೆಕ್ಕ ಮಾಡುತ್ತಿದ್ದನ್ನು (ಸಿಯಾಚಿನ್) ಸೂಚಿಸುತ್ತದೆ. ಒಂದು ಸಿಯಾಚಿನ್ ಎಂದರೆ ಎರಡು ಗಂಟೆಗಳು. ೧೨ ಸಿಯಾಚಿನ್‌ಗಳೆಂದರೆ ೨೪ ಗಂಟೆಗಳ ಒಂದು ರಾತ್ರಿ ಮತ್ತು ಒಂದು ದಿನ. ಒಳಗಿನ ಛಾವಣಿ ಕಪ್ಪು, ಹಳದಿ ಮತ್ತು ಹಸಿರು ಬಣ್ಣಗಳಿಂದ ಕೂಡಿದ್ದು, ಅವು ಸ್ವರ್ಗ, ಭೂಮಿ ಮತ್ತು ಭೂಮಿಯ ಮೇಲಿರುವ ಎಲ್ಲವನ್ನು ಬಿಂಭಿಸುತ್ತವೆ. ಸ್ವರ್ಗದ ದೇವಾಲಯ ಅಥವಾ ಅರಮನೆಯ ೧೮ ಅಡಿ ಎತ್ತರದ ವೃತ್ತಾಕಾರದ ಮೂರು ಮೆಟ್ಟಿಲುಗಳು ಸುತ್ತುವರಿದಿವೆ. ಈ ಮೆಟ್ಟಿಲುಗಳನ್ನು ಅಮೃತ ಶಿಲೆಗಳಿಂದ ಅಲಂಕರಿಸಲಾಗಿದೆ.



ಸ್ವರ್ಗ ದೇವಾಲಯದ ಒಂದು ಪಕ್ಷಿ ನೋಟ

ಕ್ರಿ.ಶ.೧೯೧೧ರ ವರೆಗೆ ಈ ಸ್ವರ್ಗ ಮಂದಿರದ ಒಳಕ್ಕೆ ಸಾರ್ವಜನಿಕರಿಗೆ ಪ್ರವೇಶವಿರಲಿಲ್ಲ. ಕ್ರಿ.ಶ.೧೯೪೯ರ ನಂತರ ಕಮ್ಯೂನಿಷ್ಟ್ ಸರಕಾರ ಬಂದ ಮೇಲೆ ಊಳಿಗಮಾನ್ಯ ಮತ್ತು ಜಮೀನುದಾರಿ ಪದ್ಧತಿಯನ್ನು ಕಿತ್ತೊಗೆದು ರಾಜರ ಅರಮನೆಗಳನ್ನೆಲ್ಲ ಸಾರ್ವಜನಿಕರ ಉಪಯೋಗಕ್ಕಾಗಿ ಮೀಸಲಿಟ್ಟಿತು.



ಪೆಕ್ಕಿಂಗ್‌ಮ್ಯಾನ್ ಗುಹೆಗಳು

ಚೀನಾದಲ್ಲಿ ೩೦ ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಮಹಾ ನಗರವಿದ್ದರೆ (೫ ಅಟಾನಮಸ್ ರಾಜ್ಯಗಳು ಸೇರಿ), ಭಾರತದಲ್ಲಿ ೨೮ (೫ ಕೇಂದ್ರಾಡಳಿತ ಪ್ರದೇಶಗಳನ್ನು ಹೊರತುಪಡಿಸಿ) ರಾಜ್ಯಗಳಿವೆ.

೨೬.೧೨.೨೦೦೪ರ ಬೆಳಗ್ಗೆ ೮.೫೦ಕ್ಕೆ ಹೋಟಲ್ ಮುಂದೆ ಕಾಯತೊಡಗಿದೆವು. ಮಿನಿ ಬಸ್ಸು ೮.೫೫ಕ್ಕೆ ಬಂದು ನಿಂತುಕೊಂಡಿತು. ಎಲ್ಲರೂ ಒಳಗೆ ಹೋಗಿ ಕುಳಿತುಕೊಂಡೆವು. ಆ ದಿನ ನಾವು ಬೀಜಿಂಗ್‌ನ ದಕ್ಷಿಣ–ಪಶ್ಚಿಮಕ್ಕೆ ೫೦ ಕಿ.ಮೀ.ಗಳ ದೂರದಲ್ಲಿರುವ ಪೆಕ್ಕಿಂಗ್‌ಮ್ಯಾನ್ ಎಂಬ ಗುಹೆಮಾನವರು ಜೀವಿಸುತ್ತಿದ್ದ ಜೊಕೌಡಾನ್‌ಗೆ ಹೋಗುವುದಾಗಿ ತಿಳಿಸಲಾಗಿತ್ತು. ೬–೨.೫ ಲಕ್ಷ ವರ್ಷಗಳ ಹಿಂದೆ ಟೈಯಾಂಗ್ ಪರ್ವತಗಳಲ್ಲಿ ಆಧಿಮಾನವ ಸುಣ್ಣದ ಶಿಲೆಗಳ ಗುಹೆಗಳಲ್ಲಿ ಗುಂಪು ಗುಂಪಾಗಿ ಜೀವಿಸುತ್ತಿದ್ದನ್ನು ಭೂವಿಜ್ಞಾನಿಗಳು ಕ್ರಿ.ಶ.೧೯೨೧ರಲ್ಲಿ ಈ ಭೂಭಾಗಗಳಲ್ಲಿ ಗುರುತಿಸಿದ್ದರು. ಈ ಶಿಲೆಗಳು ಮಧ್ಯ ಪ್ಲಿಯೋಸೀನ್ ಯುಗಕ್ಕೆ ಸೇರಿದ ಶಿಲೆಗಳು.

ಅಂದರೆ ಇಂದಿಗೆ ಸುಮಾರು ೬ ಲಕ್ಷದಿಂದ ೨.೫ ಲಕ್ಷ ವರ್ಷಗಳ ಹಿಂದಿನವರೆಗೂ ಸಾವಿರಾರು ಸಂಖ್ಯೆಯಲ್ಲಿ ಪೆಕ್ಕಿಂಗ್‌ಮ್ಯಾನ್ ಹೆಸರಿನ ಆಧಿಮಾನವರು ಇಲ್ಲಿನ ಗುಹೆಗಳಲ್ಲಿ ಜೀವಿಸುತ್ತಿದ್ದರು. ಇದುವರೆಗೆ ಈ ಪ್ರದೇಶದ ಸುತ್ತಮುತ್ತಲ ಪರ್ವತಗಳಲ್ಲಿ ೨೬ ದೊಡ್ಡ ದೊಡ್ಡ ಗುಹೆಗಳನ್ನು ಗುರುತಿಸಲಾಗಿದೆ. ಒಂದೊಂದು ಗುಹೆಯೂ ನೂರಾರು ಸಾವಿರಾರು ಮೀಟರುಗಳ ಉದ್ದ ಮತ್ತು ಅಗಲದಿಂದ ಕೂಡಿವೆ. ಕ್ರಿ.ಶ.೧೯೨೧ರಿಂದ ಇಂದಿವರೆಗೆ ಸಾವಿರಾರು ಆಧಿಮಾನವನ ಎಲುಬುಗಳನ್ನು, ಅವರು ಉಪಯೋಗಿಸುತ್ತಿದ್ದ ಶಿಲಾಯುಧಗಳು, ಪ್ರಾಣಿಗಳ ಎಲುಬುಗಳನ್ನು ಈ ಗುಹೆಗಳಲ್ಲಿ ಹೆಕ್ಕಿ ತೆಗೆಯಲಾಗಿದೆ.

ಪೆಕ್ಕಿಂಗ್‌ಮ್ಯಾನ್ ಹೆಸರು ಕೇಳಿದ್ದೆ ನನ್ನ ಮನಸಿನಲ್ಲಿ ಇಷ್ಟೆಲ್ಲ ಯೋಚನೆಗಳು ಹುಟ್ಟಿಕೊಂಡಿದ್ದವು. ಮಂಗೊಲಾಯ್ಡ್‌ನ ಮೂಲಸ್ಥ ಪೆಕ್ಕಿಂಗ್‌ಮ್ಯಾನ್. ಇಂಡಿಯಾ–

ಆಸ್ಟ್ರೇಲಿಯಾ ಮೂಲಸ್ಥ ಜಾವಾಮ್ಯಾನ್, ಹೆಡಲ್‌ಬರ್ಗ್ ಆರ್ಯರ ಮೂಲಸ್ಥ, ಆಫ್ರಿಕಾದ ಮೂಲಸ್ಥ ನೀಗ್ರೋಲಾಯ್ಡ್, ರಾಮಾಪಿತೀಕಸ್, ಜೈಗಾಂಟಿಕೊಪಿತೀಕಸ್ ಹೀಗೆ ಹಲವಾರು ಗುಹೆಮಾನವರು ಒಂದು ಕಾಲದಲ್ಲಿ ಭೂಮಿಯ ಮೇಲೆಲ್ಲ ಅಲ್ಲಲ್ಲಿ ಕಾಣಿಸಿಕೊಂಡಿದ್ದರು.

ನಮ್ಮ ಮಿನಿ ಬಸ್ಸು ೯.೧೫ಕ್ಕೆ ನಾವಿದ್ದ ಜಿನ್‌ಡಾಡು ಹೋಟೆಲ್ ಆವರಣ ಬಿಟ್ಟು ಬೀಜಿಂಗ್‌ನ ರಸ್ತೆಗಳಲ್ಲಿ ಹೊರಟಿತು. ಅದೇ ಸುಂದರವಾದ ರಸ್ತೆಗಳು, ಇಕ್ಕೆಲುಬುಗಳಲ್ಲಿ ಹೂವಿನ ತೋಟಗಳು, ಸುತ್ತಲು ಪಳಪಳನೆ ಹೊಳೆಯುವ ದೈತ್ಯಾಕಾರದ ಗಗನಚುಂಬಿ ಕಟ್ಟಡಗಳು. ಸುಮಾರು ಒಂದು ಗಂಟೆ ಸಮಯ ಬೀಜಿಂಗ್‌ನ ರಸ್ತೆಗಳಲ್ಲಿ ಚಲಿಸಿದ ಬಸ್ಸು ಈಗ ಬೀಜಿಂಗ್‌ನ ಹೊರವಲಯದಲ್ಲಿ ಸರ್ರನೆ ಸಾಗುತ್ತಿತ್ತು.



ಪೆಕ್ಕಿಂಗ್ ಮ್ಯಾನ್ ಗುಹೆಯೊಳಗೆ ಒಂದು ಒಳನೋಟ

ಅಕ್ಕಪಕ್ಕದಲ್ಲಿನ ದೃಶ್ಯಗಳನ್ನು ನೋಡುತ್ತಿದ್ದಂತೆ ನಾನು ಓಡಾಡಿದ ಭಾರತದ ಹಲವು ಪ್ರದೇಶಗಳ ಹಳ್ಳಿ ಪಟ್ಟಣಗಳ ಚಿತ್ರಣಗಳು ನನ್ನ ಮನ:ಪಟಲದಲ್ಲಿ ಹಾದು ಹೋಗುತ್ತಿದ್ದವು. ಬಹುಶ: ಒಬ್ಬ ಭೂವಿಜ್ಞಾನಿಗೆ ಮಾತ್ರ ಅಷ್ಟು ಓಡಾಡಲು ಸಾದ್ಯವಾಗುತ್ತದೊ ಏನೋ. ಭೂವಿಜ್ಞಾನಿಗಳನ್ನು ಬಿಟ್ಟರೆ ಪತ್ರಕರ್ತರು, ಅಲೆಮಾರಿಗಳು, ಸಾಧು ಸಂತರು ಅಷ್ಟು ಓಡಾಡಬಹುದು. ನಾನು ಜಿಎಸ್‌ಐ ಸೇರಿ ೨೩ ವರ್ಷಗಳಾಗಿವೆ. ಭಾರತದಾದ್ಯಂತ ಎಷ್ಟು ಕಿ.ಮೀ. ದೂರವನ್ನು ಕಾಲು ನಡಿಗೆಯಲ್ಲಿ ನಡೆದಿದ್ದೇನೋ? ಎಷ್ಟು ಕಿ.ಮೀ. ದೂರವನ್ನು ಬಸ್ಸು, ರೈಲುಗಳಲ್ಲಿ ಪ್ರಯಾಣ ಮಾಡಿದ್ದೇನೋ? ಗೊತ್ತಿಲ್ಲ! ನಮ್ಮ ವಿಭಾಗದ ಜೀಪುಗಳಲ್ಲಿ ಈಗಲು ಕನಿಷ್ಠ ವರ್ಷಕ್ಕೆ ೨೫ ಸಾವಿರ ಕಿ.ಮೀ. ಕ್ರಮಿಸುತ್ತೇನೆ. ಈಗೀಗ ವಿಮಾನಗಳಲ್ಲಿ ಹಾರಾಡುವ ಅವಕಾಶವು ಒದಗಿಬಂದಿದೆ.

ಆದರೆ ಜೀಪು, ಬಸ್ಸು ಮತ್ತು ರೈಲುಗಳಲ್ಲಿ ಓಡಾಡುವಾಗ ನಮಗೆ ದೊರಕುವ ಅನುಭವಗಳು ವಿಮಾನಗಳಲ್ಲಿ ದೊರಕುವುದಿಲ್ಲ. ಯಾವುದೇ ವಿಮಾನ ಆ ನಗರವನ್ನು

ಜಿಟ್ಟು ಮೇಲಕ್ಕೆ ಏಳುವಾಗ ಮತ್ತು ಇಳಿಯುವಾಗ ಒಂದೈದತ್ತು ನಿಮಿಷಗಳು ಆ ನಗರ ಮತ್ತು ನಗರದ ಸುತ್ತಮುತ್ತಲಿನ ಪ್ರದೇಶವನ್ನು ನೋಡಬಹುದು. ಇನ್ನು ಉಳಿಯುವುದು ನೀಲಿಯಾಕಾಶ. ಕೆಳಗೆ ನೋಡಿದರೆ ರಾಶಿರಾಶಿ ಹತ್ತಿಯಂತಹ ಮೋಡಗಳು. ಕೆಲವೊಮ್ಮೆ ಸೂರ್ಯ ಚಂದ್ರ ಮತ್ತು ನಕ್ಷತ್ರಗಳು. ಆದರೆ ಭೂಮಿಯ ಮೇಲೆ ಓಡಾಡುವಾಗ ಅನೇಕ ರೀತಿಯ ಅನುಭವಗಳು ದೊರಕುತ್ತವೆ. ಎಲ್ಲಿಂದ ಎಲ್ಲಿಗೋ ಹೋಗಿಬಿಟ್ಟೆನಲ್ಲವೆ?

ನನ್ನ ಪಕ್ಕದಲ್ಲಿ ಡಾ.ವಾಂಗ್ ಕುಳಿತಿದ್ದರು. ಅವರಿಗೆ ನನಗಿಂತ ಐದಾರು ವರ್ಷಗಳ ಕಡಿಮೆ ವಯಸ್ಸಿರಬಹುದು. ಹತ್ತು ದಿನಗಳಲ್ಲಿಯೆ ನನ್ನ ಜೊತೆಗೆ ಬಹಳ ಆತ್ಮೀಯವಾಗಿ ಹೊಂದಿಕೊಂಡಿದ್ದರು. ಒಬ್ಬ ಮನುಷ್ಯ ಇಷ್ಟು ಸೋಬರ್ ಮತ್ತು ಸಂಯಮದಿಂದ ನಡೆದುಕೊಳ್ಳಲು ಸಾಧ್ಯವೆ ಎನ್ನುವಷ್ಟು ಚನ್ನಾಗಿ ಅವರು ನಡೆದುಕೊಳ್ಳುತ್ತಿದ್ದರು. ಇಡೀ ತರಬೇತಿಯ ಉಸ್ತುವಾರಿಯನ್ನು ಅವರು ನೋಡಿಕೊಳ್ಳುತ್ತಿದ್ದರು. ಚೀನಾ ಬಗ್ಗೆ ಸ್ವಲ್ಪ ತಿಳಿದುಕೊಳ್ಳೋಣವೆಂದು ಅವರ ಜೊತೆಗೆ ಮಾತುಕತೆ ಪ್ರಾರಂಭಿಸಿದೆ. ಆ ತರಬೇತಿಯ ಕೇಂದ್ರದಲ್ಲಿದ್ದ ರೀಸರ್ಚ್ ಸ್ಕಾಲರ್ಸ್ ಅರ್ಧಂಬರ್ಧ ಇಂಗ್ಲಿಷ್ ಮಾತನಾಡುತ್ತಿದ್ದರೂ ಏನೂ ಪ್ರಯೋಜನವಿರಲಿಲ್ಲ. ಯಾವುದಾದರು ವಿಷಯದ ಬಗ್ಗೆ ಮಾತನಾಡಬೇಕಾದರೆ ಕೆಲವೊಮ್ಮೆ ಪ್ರತಿಯೊಂದು ಪದದ ಅರ್ಥವನ್ನು ಅವರಿಗೆ ವಿವರಿಸಬೇಕು. ವಾಂಗ್ ಎಲ್ಲರಿಗಿಂತ ಮೇಲು. ಆದರೂ ಅವರಿಗೂ ಒಂದೊಂದು ಸಲ ಅರ್ಥವಾಗದಿದ್ದರೆ ಅದೇ ಗತಿ. ಅವರಿಗೂ ಒಂದೊಂದು ಪದವನ್ನು ಎರಡು ಮೂರು ಸಲ ಒತ್ತೊತ್ತಿ ಹೇಳಬೇಕಾಗಿತ್ತು. ಇಲ್ಲ ಇಂಗ್ಲಿಷ್‌ನಲ್ಲಿ ಬರೆದು ತೋರಿಸಬೇಕಾಗಿತ್ತು.

ಯಾವುದೇ ಒಂದು ವಿಷಯವನ್ನು ಪ್ರಾರಂಭಿಸಿದರೆ ಮೊದಮೊದಲು ಸ್ವಲ್ಪ ತಿಣಿಕಾಡಿ ಅನಂತರ ಪಿಕ್‌ಅಪ್ ಮಾಡಿಕೊಳ್ಳುತ್ತಿದ್ದರು. ಒಟ್ಟಿನಲ್ಲಿ ಇಂಗ್ಲಿಷ್ ಪದಗಳನ್ನು ಚೀನಿ ಆಕ್ಸೆಂಟ್‌ನಲ್ಲಿ ಹೇಳಬೇಕಾಗಿತ್ತು. ಬಸ್ಸು ವೇಗವಾಗಿ ಸಾಗುತ್ತಿದ್ದು ಅಕ್ಕಪಕ್ಕದಲ್ಲಿ ಗಮನವಿಟ್ಟು ನೋಡುತ್ತಿದ್ದರೆ ನಮ್ಮ ಉತ್ತರ ಭಾರತದ ಗಂಗಾ ಬಯಲು ಪ್ರದೇಶದ ಸಮತಟ್ಟು ಪ್ರದೇಶದಂತೆ ತೋರುತ್ತಿತ್ತು. ರಸ್ತೆಯ ಎರಡೂ ಬದಿಯಲ್ಲಿ ೫೦ ಅಡಿಗಳ ಅಗಲದಲ್ಲಿ ಸಾಲು ಸಾಲು ಮರಗಳ ಪಟ್ಟಿ, ಆ ಕಡೆ ಈ ಕಡೆ ಜೋಳ, ಹತ್ತಿ, ಹೂಕೋಸು ಮತ್ತು ಮೆಕ್ಕೆಜೋಳದ ಬೆಳೆ ಕಾಣಿಸುತ್ತಿತ್ತು. ಅಲ್ಲಲ್ಲಿ ಸಣ್ಣ ಸಣ್ಣ ಹಳ್ಳಿಗಳು ಹಾದುಹೋಗುತ್ತಿದ್ದವು. ರೆಸ್ಟಾರೆಂಟುಗಳು, ಚಹಾ ದಾಬಾ ಅಂಗಡಿಗಳು, ಸೈಕಲ್ ಸ್ಕೂಟರು ಗ್ಯಾರೇಜುಗಳು, ತರಕಾರಿ ಅಂಗಡಿಗಳು, ಬಟ್ಟೆ ಮತ್ತು ಚಪ್ಪಲೆ ಅಂಗಡಿಗಳು, ಕಲ್ಲು ಇಟ್ಟಿಗೆಯ ಹೆಂಚು ಮನೆಗಳು. ಒಟ್ಟಿನಲ್ಲಿ ಎಲ್ಲವೂ ಭಾರತದ ಹಳ್ಳಿಗಳ ದೃಶ್ಯಗಳಂತೆಯೆ ಕಾಣಿಸುತ್ತಿದ್ದವು.

ನಮ್ಮಲ್ಲಿರುವ ಹೊಸ ಮಾದರಿಯ ಪೆಟ್ರೋಲ್ ಬಂಕ್‌ಗಳು ಅಲ್ಲಲ್ಲಿ ರಸ್ತೆಗಳ ಪಕ್ಕದಲ್ಲಿ ಹಾದುಹೋಗುತ್ತಿವೆ. ರಸ್ತೆಗಳಲ್ಲಿ ಯೂನಿಫಾರ್ಮ್ ಧರಿಸಿರುವ ಕೆಲಸಗಾರರು ರಸ್ತೆ ಕೆಲಸದಲ್ಲಿ ತೊಡಗಿಕೊಂಡಿದ್ದರು. ಸುತ್ತಲಿನ ಚಿತ್ರಣಗಳಿಂದ ಇಲ್ಲೆಲ್ಲೋ ಒಂದು ಸಿಮೆಂಟ್ ಕಾರ್ಖಾನೆ ಇರಬಹುದು ಎಂದುಕೊಳ್ಳುತ್ತಿದ್ದಂತೆ ದೂರದಲ್ಲಿ ತಪ್ಪಲುಗಳ

ಮಾಲೆ ಕಾಣಿಸಿಕೊಂಡಿತು. ಹತ್ತಿರವಾದಂತೆ "ಇವೆಲ್ಲ ಸುಣ್ಣ, ಡಾಲಾಮೈಟ್ ಶಿಲೆಗಳು ತಾನೆ?" ವಾಂಗ್‌ರನ್ನು ಕೇಳಿದೆ. "ಹೌದು" ಎಂದರು. ಸ್ವಲ್ಪ ದೂರದಲ್ಲಿ ಸಿಮೆಂಟ್ ಕಾರ್ಖಾನೆಗಳು ಕಾಣಿಸಿಕೊಂಡವು.

ದಾರಿಯ ಉದ್ದಕ್ಕೂ ಮತ್ತು ಮನೆಗಳ ಸುತ್ತಲೂ ಮರಗಳಲ್ಲಿ ಕಿತ್ತಲೆ ಹಣ್ಣುಗಳು ಜೋತುಬಿದ್ದಿವೆ. ಆದರೆ ಮರಗಳು ಕಿತ್ತಲೆ ಹಣ್ಣಿನ ಮರಗಳಂತೆ ಕಾಣಿಸಲಿಲ್ಲ. ನಾನು ನಾಗಪುರದ ಸುತ್ತಲು ಕಿತ್ತಲೆ ಹಣ್ಣಿನ ತೋಟಗಳನ್ನು ನೋಡಿದ್ದೆ. ವಾಂಗ್‌ರನ್ನು "ಇವೇನು ಕಿತ್ತಲೆ ಹಣ್ಣುಗಳೆ?" ಕೇಳಿದೆ. "ನೊ. ಐ ದೋಂತ್ ನೊ ಇಂಗ್ಲಿಷ್ ನೇಮ್. ವೀ ಕಾಲ್ ತ್ರಿ ತೊಮ್ಯಾಟೊ" ಎನ್ನುತ್ತಿದ್ದಂತೆ "ನಾನು ಟೇಸ್ಟ್ ನೋಡಬೇಕಿದೆ" ಎಂದೆ. "ಎಸ್" ಎಂದು ನಕ್ಕರು.

"ಒಬ್ಬ ಚೀನಾ ಸರಕಾರಿ ನೌಕರನ ಸರಾಸರಿ ಸಂಬಳ ಎಷ್ಟು?" ಕೇಳಿದೆ. "ಒಬ್ಬ ಸರಕಾರಿ ನೌಕರನ ಕನಿಷ್ಠ ಸಂಬಳ ತಿಂಗಳಿಗೆ ೨೦೦೦ ಯುಯಾನ್, ಹೆಚ್ಚೆಂದರೆ ೫೦೦೦ ಯುಯಾನ್. ಅದೇ ಖಾಸಗಿ ನೌಕರನ ಸರಾಸರಿ ಸಂಬಳ ತಿಂಗಳಿಗೆ ೨೮೦೦ ಯುಯಾನ್. ಐಟಿ, ಸಾಫ್ಟ್‌ವೇರ್ ಕಂಪನಿಗಳಲ್ಲಿ ಹೆಚ್ಚೆಂದರೆ ೫೦೦೦ ಯುಯಾನ್ ಸಂಬಳ ಸಿಗಬಹುದು. ಸರಕಾರಿ ನೌಕರಿಯಲ್ಲಿ ಟಾಪ್ ಅಫಿಷಿಯಲ್‌ಗೆ ೧೦೦೦೦ ಯುಯಾನ್ ದೊರಕುತ್ತದೆ. ನನಗೆ ತಿಂಗಳಿಗೆ ೫೦೦೦ ಯುಯಾನ್ ದೊರಕುತ್ತದೆ" ಎಂದರು.

ಈಗ ನಮ್ಮ ಬಸ್ಸು ಬೀಜಿಂಗ್‌ನ ಹೊರವಲಯದಲ್ಲಿದ್ದು ಅಲ್ಲೆಲ್ಲ ನೂರಾರು ಪ್ಲಾಟುಗಳು ನಿರ್ಮಾಣವಾಗುತ್ತಿದ್ದವು. ಪಕ್ಕದಲ್ಲಿದ್ದ ವಾಂಗ್ ಕಡೆಗೆ ನೋಡಿ "ನಾನೀಗ ಇಲ್ಲಿ ಪ್ಲಾಟ್ ಕೊಂಡುಕೊಳ್ಳಬಹುದೆ?" ಎಂದೆ. "ಓ ಎಸ್. ಈಗ ಚೀನಾದಲ್ಲಿ ಯಾವ ದೇಶದವರಾದರು ಸರಿ, ಹಣ ಕೊಟ್ಟು ಮನೆ ಮತ್ತು ಪ್ಲಾಟ್‌ಗಳನ್ನು ಕೊಂಡುಕೊಳ್ಳಬಹುದು" ಎಂದರು. "ನನ್ನ ಹೆಸರಿನಲ್ಲಿ ರಿಜಿಸ್ಟರ್ ಮಾಡಿಕೊಡುತ್ತಾರೆಯೆ?" ಕೇಳಿದೆ. "ಹೌದು! ನಿಮ್ಮ ಹೆಸರಿನಲ್ಲಿಯೆ ರಿಜಿಸ್ಟರ್ ಆಗುತ್ತದೆ. ಈಗ ಚೀನಾ ಓಪನ್ ಫಾರ್ ಎವರಿಬದಿ" ಎಂದರು. ಜಾಗತೀಕರಣದ ಈ ಹೊತ್ತಿನಲ್ಲಿ ಚೀನಾ ಪರಿಸ್ಥಿತಿಯೆ ಈಗಾದರೆ ಇನ್ನು ಭಾರತ, ಮತ್ತಿತರ ಅನೇಕ ಸಣ್ಣಪುಟ್ಟ ದೇಶಗಳ ಗತಿ ಏನಾಗಿರಬೇಕು? ಅಲ್ಲಲ್ಲಿ "ಬಿಡಿಎ" ಎಂದು ಬರೆಯಲಾಗಿತ್ತು. ನಮ್ಮ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಇಲ್ಲಿಗೆ ಬಂದುಬಿಟ್ಟಿತೆ? ಇಲ್ಲ! ಅದು ಬೀಜಿಂಗ್ ಡೆವಲಪ್‌ಮೆಂಟ್ ಅಥಾರಟಿಯಾಗಿತ್ತು.

"ಇಲ್ಲಿ ಒಂದು ಚದರ ಅಡಿ ನೆಲದ ಬೆಲೆ ಎಷ್ಟು?" ಕೇಳಿದೆ. "ಒಂದು ಚದರ ಮೀಟರಿಗೆ ೬೦೦೦ ಯುಯಾನ್. ಅಂದರೆ ೧೦೦ ಚ.ಮೀ. ವಿಸ್ತೀರ್ಣದ ಪ್ಲಾಟ್ ೬ ಲಕ್ಷ ಯುಯಾನ್. ಲೋನ್ ಸಿಗುತ್ತದೆ. ನಿಮ್ಮ ವರಮಾನದ ವಿವರ ಮತ್ತಿತರ ಸರ್ಟಿಫಿಕೆಟ್‌ಗಳನ್ನು ಕೊಡಬೇಕು. ವರ್ಷಕ್ಕೆ ಕೇವಲ ೫ % ಬಡ್ಡಿ. ಲೋನ್ ಕೊಡುವವರು

ಹೆಚ್ಚಾಗಿ ಮಲ್ಟಿಮಿಲಿಯ ಕಂಪನಿಗಳು" ಎಂದರು. ಅನಂತರ ಅನೇಕ ಪ್ರಶ್ನೆಗಳನ್ನು ಕೇಳಿದೆ. ಚೀನಾದಲ್ಲಿ ಒಂದು ಲೀಟರ್ ಪೆಟ್ರೋಲ್ ಅಥವಾ ಡೀಸಲ್ ಬೆಲೆ ೪ ಯುಯಾನ್. ಚೀನಾದಲ್ಲಿ ಪ್ರಸ್ತುತ ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಯುತ್ತಿದ್ದು ಬೇರೆ ದೇಶಗಳಿಗೂ ರಫ್ತು ಮಾಡುತ್ತಿದ್ದಾರೆ. ಕಬ್ಬಿಣ ನಿಕ್ಷೇಪಗಳು ಭಾರತದಲ್ಲಿ ಇರುವುದಕ್ಕಿಂತ ಕಡಿಮೆ. ಟಂಗ್‌ಸ್ಟನ್, ಪಾದರಸ, ಆಂಟಿಮನಿ ಮತ್ತು ಬೆಳ್ಳಿಯ ಸಾಕಷ್ಟು ನಿಕ್ಷೇಪಗಳಿವೆ. ಪ್ರಪಂಚದ ಶೇಕಡ ೯ ರಷ್ಟು ಕಲ್ಲಿದ್ದಲು ನಿಕ್ಷೇಪಗಳು ಚೀನಾದಲ್ಲಿವೆ. ವರ್ಷಕ್ಕೆ ಒಟ್ಟು ಕಲ್ಲಿದ್ದಲ ಉತ್ಪಾದನೆ ಒಂದು ಬಿಲಿಯನ್ ಟನ್ನುಗಳು. ವರ್ಷಕ್ಕೆ ೧೨೦ ಟನ್ನು ಚಿನ್ನ ಉತ್ಪಾದನೆಯಾಗುತ್ತದೆ. ಉಕ್ಕು ಮತ್ತು ಸಿಮೆಂಟನ್ನು ತಮಗೆ ಎಷ್ಟು ಬೇಕೊ ಅಷ್ಟು ಉತ್ಪಾದನೆ ಮಾಡಿಕೊಳ್ಳುತ್ತಾರೆ.

ಬೀಜಿಂಗ್‌ನಲ್ಲಿ ನೂರಕ್ಕೆ ನೂರು ಪಟ್ಟು ಜನರು ಉದ್ಯೋಗದಲ್ಲಿರುವುದಾಗಿ ವಾಂಗ್ ಹೇಳಿದರು. ಬೀಜಿಂಗ್‌ಗೆ ಬಂದು ತಮ್ಮ ಹೆಸರನ್ನು ನೊಂದಾಯಿಸಿಕೊಂಡವರಿಗೆಲ್ಲ ಉದ್ಯೋಗವಿದೆಯಂತೆ. ಆದರೆ ಹಳ್ಳಿಗಳಲ್ಲಿ ನೂರಕ್ಕೆ ಎಂಬತ್ತು ಜನರಿಗೆ ಉದ್ಯೋಗವಿದ್ದು ಶೇಕಡ ಇಪ್ಪತ್ತರಷ್ಟು ಜನರು ನಿರುದ್ಯೋಗಿಗಳಂತೆ. ಪಟ್ಟಣ ಮತ್ತು ನಗರಗಳಲ್ಲಿ ಅಡಿಗೆ ಮಾಡಿಕೊಳ್ಳಲು ವಿದ್ಯುತ್ ಮತ್ತು ಗ್ಯಾಸ್ ಉಪಯೋಗಿಸಿದರೆ ಹಳ್ಳಿಗಳಲ್ಲಿ ಇದ್ದಿಲು ಮತ್ತು ಗೋಬರ್ ಗ್ಯಾಸನ್ನು ಉಪಯೋಗಿಸುತ್ತಾರೆ. ದೇಶದಾದ್ಯಂತ ಕಟ್ಟಿಗೆ ಉರಿಸುವುದನ್ನು ನಿಷೇಧಿಸಲಾಗಿದೆಯಂತೆ.

* * *

ಈಗ ನಾವು ಪೆಕ್ಕಿಂಗ್‌ಮ್ಯಾನ್ ಗುಹೆಗಳ ಹತ್ತಿರಕ್ಕೆ ಬಂದಿದ್ದೆವು. ಅಲ್ಲಿ ನಮ್ಮ ದೇಶದ ಜಮ್ಮು ಕಾಶ್ಮೀರ, ಡಾರ್ಜಿಲಿಂಗ್ ಅಥವಾ ಶಿಮ್ಲಾಗೆ ಹೋಗುವ ದಾರಿಯಲ್ಲಿರುವಂತಹ ಹೆಂಚು ಮತ್ತು ಸಿಮೆಂಟ್ ಮನೆಗಳ ಪುಟ್ಟ ಹಳ್ಳಿಯೊಂದು ಕಾಣಿಸಿಕೊಂಡಿತು. ಚೀನಾ ರೆಸ್ಟಾರೆಂಟುಗಳ ಜೊತೆಗೆ ಪ್ರವಾಸಿಗರಿಗಾಗಿ ಅಲ್ಲಿ ವ್ಯಾಪಾರಿಗಳು ಕಾದುಕುಳಿತಿದ್ದರು.

ವಾಂಗ್ ಇಳಿದಿದ್ದ ಟ್ರಿಟೊಮ್ಯಾಟೊ ಇಟ್ಟಿದ್ದ ಅಂಗಡಿ ಕಡೆಗೆ ನಡೆದರು. ವಾಂಗ್ ಅಂಗಡಿಯಲ್ಲಿದ್ದ ಮಹಿಳೆಯ ಜೊತೆಗೆ ಮಾತನಾಡುತ್ತಿದ್ದಂತೆ ನನಗೊಂದು ಟ್ರಿಟೊಮ್ಯಾಟೊ ಬೇಕೆಂದು ಪಾಕೆಟ್ಟಿನಿಂದ ಹಣ ತೆಗೆದುಕೊಡಲು ಹೋದೆ. "ನಾನು ಕೊಂಡುಕೊಳ್ಳುತ್ತಿರುವುದೇ ನಿಮಗೆ" ಎಂದ ವಾಂಗ್ ಅವರು ಕೈ ಅಡ್ಡ ಇಟ್ಟರು. ೫ ಯುಯಾನ್‌ಗೆ ೨೦ ಹಣ್ಣುಗಳನ್ನು ಕೊಂಡುಕೊಂಡು ಎಲ್ಲರಿಗೂ ನೀಡಿದರು. ಎಲ್ಲರೂ ಕೈಯಿ ಬಾಯಿಗಳನ್ನು ರಸಮಾಡಿಕೊಂಡು ತಿಂದರು. ಹಣ್ಣು ಕಿತ್ತಲೆ ಹಣ್ಣಿನ ರೂಪದಲ್ಲಿ ಇದ್ದರೂ ಒಳಗೆ ತೊಳೆಗಳು ಇರಲಿಲ್ಲ. ಹಣ್ಣಿನ ಹೊರಗೊಂದು ಸಿಪ್ಪೆ ಮಾತ್ರ ಇತ್ತು. ಉಳಿದೆಲ್ಲವು ಬರಿ ಕೆಂಪು ಮತ್ತು ಹಳದಿ ಮಿಶ್ರಿತ ರಸ. ಭಾರಿ ಸಿಹಿಯಾದ ಹಣ್ಣು.

ಈಗ ನಮ್ಮ ನಡುಗೆ ಗುಹೆಯ ಬಾಗಿಲ ಹತ್ತಿರಕ್ಕೆ ಬಂದಿತ್ತು. ಒಬ್ಬೊಬ್ಬರಿಗೆ ೭೦

ಯುಯಾನ್ ಕೊಟ್ಟು ಆಗಲೆ ಟಿಕೆಟ್‌ಗಳನ್ನು ತೆಗೆದುಕೊಂಡಿದ್ದರು. ಮಹಿಳಾ ಮಾರ್ಗದರ್ಶಿ ನಮ್ಮನ್ನು ಗುಹೆಯ ಒಳಕ್ಕೆ ಕರೆದುಕೊಂಡು ಹೊರಟಳು. ಮೊದಲಿಗೆ ಗುಹೆಯ ಬಾಗಿಲಲ್ಲಿ ಎಲ್ಲರನ್ನೂ ನಿಲ್ಲಿಸಿಕೊಂಡು ಗುಹೆ ಬಗ್ಗೆ ಕೆಲವು ಸೂಚನೆಗಳನ್ನು ಕೊಟ್ಟು ಅಲ್ಲಿಂದ ಗುಹೆಯ ಬಗ್ಗೆ ಹೇಳುತ್ತಾ ಹೊರಟಳು. ಆಕೆ ಚೀನಿಯಲ್ಲಿ ಹೇಳುತ್ತಿದ್ದರೆ ವಾಂಗ್ ನಮಗೆ ಇಂಗ್ಲಿಷ್‌ನಲ್ಲಿ ಹೇಳುತ್ತಿದ್ದರು.

ಅದು ಪರ್ವತಗಳ ಒಳಗಿರುವ ಒಂದು ದೊಡ್ಡ ಬಹುಮಹಡಿಯಂತಹ ಬಹುಗುಹೆಗಳ ಸಮೂಹ. ಆ ಗುಹೆಯಲ್ಲಿ ೭ ಅಂತಸ್ತುಗಳಿದ್ದು ಅದರ ಒಟ್ಟು ಉದ್ದ ೫೦೦ ಮೀ.ಗಳಾದರೆ ಎತ್ತರ ೧೫೦ ಮೀ.ಗಳು. ಜೊತೆಗೆ ಸಾವಿರಾರು ಸಂದಿಗೊಂದಿಗಳು, ಹಳ್ಳಕೊಳ್ಳಗಳು. ಆ ಮಹಿಳಾ ಮಾರ್ಗದರ್ಶಿ ಮುಂದೆ ಹೇಳುತ್ತಾ ಹೋಗುತ್ತಿದ್ದರೆ ನಾವೆಲ್ಲ ಹಿಂದೆ ರೈಲು ಬೋಗಿಗಳಂತೆ ಹೋಗುತ್ತಿದ್ದೆವು. ಸುತ್ತಿ ಬಳಸಿ ಹತ್ತಿ ಇಳಿದು ಹೋಗುತ್ತಿದ್ದರೆ ಒಂದು ಕಡೆ ಒಬ್ಬೊಬ್ಬರು ಮಾತ್ರ ನುಸುಳಿ ಹೋಗುವಷ್ಟು ದಾರಿ ಇದ್ದರೆ ಮತ್ತೊಂದು ಕಡೆ ಪಾತಾಳದಂತಹ ಕೊರಕಲುಗಳು. ಆಳವಾದ ಗಣಿ ಸುರಂಗಗಳಲ್ಲಿ ಇಳಿಯುವಂತಹ ಕಬ್ಬಿಣದ ಮೆಟ್ಟಿಲುಗಳು. ಮರದ ಸೇತುವೆಗಳು ಕೆಲವೊಂದು ಸಲ ಮೇಲಿಂದ ಕೆಳಕ್ಕೆ ನೋಡಿದರೆ ಭಯ ಹುಟ್ಟಿಸುವ ಆಳ ಪಾತಾಳ ಕೊರಕಲುಗಳು. ತಲೆ ಮೇಲೆ ನೂರಾರು ಮೀಟರು ಎತ್ತರದ ಶಿಲೆಗಳು.



ಪೆಕ್ಕಿಂಗ್ ಮ್ಯಾನ್ ಗುಹೆಯೊಳಗೆ ಲೇಖಕ

ಇದೆಲ್ಲ ಒಂದು ಕಡೆಯಾದರೆ ಮೇಲಿಂದ ಕೆಳಕ್ಕೆ ಕೆಳಗಿಂದ ಮೇಲಕ್ಕೆ ಮಧ್ಯ ಆಕಾಶದಲ್ಲಿಯೆ ನೇತಾಡುವಂತಹ ಚಿತ್ರ ವಿಚಿತ್ರಕಾರದ ಸ್ಟಾಲಗ್‌ಮೈಟ್ ಶಿಲೆಗಳು ಬಹುಶ: ಮನುಷ್ಯ ಕಂಡರಿಯದ ಸಾವಿರಾರು ಬಣ್ಣದ ಚಿತ್ರ ವಿಚಿತ್ರಕಾರದ ಸ್ಟಾಲಗ್‌ಮೈಟ್ ಶಿಲೆಗಳು ಆ ಗುಹೆಗಳಲ್ಲಿ ಮೂಡಿರುವುದನ್ನು ನೋಡಿದ ಎಲ್ಲರೂ "ಓ ವಂಡರ್‌ಫುಲ್... ಬ್ಯೂಟಿಫುಲ್..." ಎಂದು ಹೌಹಾರುತ್ತಿದ್ದರು. ೧ ರಿಂದ ೫ ಅಂತಸ್ತುಗಳವರೆಗೆ ಕೆಳ

ಇಳಿದು ಹೋಗಿ ಅಲ್ಲಿಂದ ಕೆಳಗೆ ನೀರು ತುಂಬಿದೆ ಎಂದು ಹಿಂದಕ್ಕೆ ಬಂದೆವು.

ಈ ಸ್ಟಾಲೆಗ್‌ಮೈಟ್ ಶಿಲೆಗಳು ಹೇಗೆ ರೂಪಗೊಳ್ಳುತ್ತವೆ ಎಂದರೆ? ಸುಣ್ಣದ ಶಿಲೆಗಳಿರುವ ಬೆಟ್ಟಗಳ ಮೇಲೆ ಮಳೆ ಬಿದ್ದು, ಮಳೆ ನೀರು ಸಣ್ಣ ಪುಟ್ಟ ನೆರಿಕೆ ಬಿರುಕುಗಳಲ್ಲಿ ಇಳಿಯುತ್ತ ಅಂತರ್ಜಲ ರೂಪದಲ್ಲಿ ಒಳಕ್ಕೆ ಇಳಿಯುತ್ತದೆ. ಹಾಗೆ ಇಳಿಯುವ ನೀರು ಸೆಮಿಲಿಕ್ವಿಡ್ ರೂಪದಲ್ಲಿ ತೊಟ್ಟು ತೊಟ್ಟಾಗಿ ಹನಿಯುತ್ತದೆ. ಹನಿದ ನೀರು ಸಾವಿರಾರು ಬಗೆಯಲ್ಲಿ ಕೆಳಕ್ಕೆ ಪ್ಲಾಸ್ಟಿಕ್ ದಾರಗಳಂತೆ ಕಾರಿಕೊಂಡು ಸ್ಟಾಲೆಗ್‌ಮೈಟ್ ಶಿಲೆಗಳು ರೂಪಗೊಳ್ಳುತ್ತವೆ. ಇನ್ನೊಂದು ಕಡೆ ನೀರಿನ ಮಟ್ಟ ಹೆಚ್ಚಾಗಿ ಶಿಲೆಗಳನ್ನು ಕರಗಿಸುತ್ತ ಬೆಟ್ಟಗಳ ಕೆಳಗೆ ದೊಡ್ಡ ದೊಡ್ಡ ಗವಿಗಳು ರೂಪಗೊಳ್ಳುತ್ತವೆ. ಹೆಚ್ಚಾದ ಕಡೆ ನೀರು ಹರಿದು ಹೊರಕ್ಕೆ ಬರುತ್ತದೆ. ಹನಿಯುವ ನೀರಿನ ಕೆಳಗೆ ವಿಶಾಲ ಖಾಲಿ ಸ್ಥಳಗಳಿದ್ದಲ್ಲಿ ಅಜಂತಾ ಎಲ್ಲೋರಾ ರೀತಿಯ ಗುಹೆಗಳು ಸೃಷ್ಟಿಯಾಗುತ್ತವೆ. ಈ ಗುಹೆಗಳಲ್ಲಿ ಒಂದು ಕಾಲದಲ್ಲಿ ಪೆಕ್ಕಿಂಗ್‌ಮ್ಯಾನ್ ಜೀವಿಸುತ್ತಿದ್ದ. ಒಟ್ಟಿನಲ್ಲಿ ಈ ಗುಹೆಗಳನ್ನು ನೋಡಿದ ಮೇಲೆ ಪ್ರಕೃತಿಗಿಂತ ದೊಡ್ಡ ಅಧ್ಯಾಪಕ ಇನ್ನೊಬ್ಬನಿಲ್ಲ ಎನಿಸಿತು. ಸ್ಟಾಲೆಗ್‌ಮೈಟ್ ಶಿಲೆಗಳನ್ನು ತಲೆ ತುಂಬಾ ತುಂಬಿಕೊಂಡು ಪ್ರಕೃತಿಯ ಕಲೆಗೆ ತಲೆದೂಗುತ್ತ ಹೊರಕ್ಕೆ ಬರತೊಡಗಿದೆವು. ವಾಂಗ್ ಹೊರಕ್ಕೆ ಬಂದಿದ್ದೆ ಇರುವ ಚಳಿ ಸಾಕಾಗದೆಂದು ಎಲ್ಲರಿಗೂ ಒಂದೊಂದು ಐಸ್‌ಕ್ರೀಮ್ ಕೊಡಿಸಿದರು. ಅನಂತರ ಬಸ್ಸಿನಲ್ಲಿದ್ದ ಬುತ್ತಿಗಳನ್ನು ತಿಂದು ಎಲ್ಲರೂ ಬೀಜಿಂಗ್ ಕಡೆಗೆ ಹೊರಟೆವು.



ಗುಹೆ ಮಾನವನ ವೈಜ್ಞಾನಿಕ ಹೆಜ್ಜೆಗಳು

ಚೀನಾದ ಶೇಕಡ ೫೦ ರಷ್ಟು ಪ್ರದೇಶ ಮರಳುಗಾಡು, ಪರ್ವತಗಳಿಂದ ಕೂಡಿರುವ ಮತ್ತು ಜನರು ವಾಸಿಸಲಾರದ ನೆಲವಿರುವ ದೇಶ. ಚೀನಾದ ಉತ್ತರ-ಪೂರ್ವ,ಪೂರ್ವ ಮತ್ತು ದಕ್ಷಿಣ ಪ್ರದೇಶಗಳಲ್ಲಿ ಹೆಚ್ಚೆಚ್ಚು ಪಟ್ಟಣಗಳು ಮತ್ತು ನಗರಗಳಿವೆ. ಬೀಜಿಂಗ್ ಮತ್ತು ಷಾಂಗಾಯ್ ನಗರಗಳಿರುವುದು ಪೂರ್ವ ಚೀನಾದಲ್ಲಿ.

ಜೊಕೌಡಾನ್ ಪ್ರದೇಶದಲ್ಲಿರುವ ಶಿಲೆಗಳು ಪ್ಲಿಯೋಸೀನ್‌ನಿಂದ ಪ್ಲಿಸ್ಟೋಸೀನ್‌ವರೆಗಿನ ಶಿಲೆಗಳಾಗಿದ್ದು ಜೊತೆಗೆ ಅರ್ಡೋವಿಸಿಯಸ್ ಯುಗಕ್ಕೆ ಸೇರಿದ ಸುಣ್ಣದ ಶಿಲೆಗಳೂ ಇವೆ. ಹಳ್ಳಿಗರು ಸುಣ್ಣವನ್ನು ತೆಗೆದುಕೊಳ್ಳುತ್ತಿರುವಾಗ ಕೆಲವು ಮೂಳೆಗಳು ಸಿಕ್ಕಿ ಅವನ್ನು ಮೊದಲಿಗೆ ಡ್ರ್ಯಾಗನ್ ಮೂಳೆಗಳೆಂದು ಕರೆಯಲಾಯಿತು. ಆದರೆ ಅವು ಮಿಲಿಯಾಂತರ ವರ್ಷಗಳ ಹಿಂದೆ ಈ ಪ್ರದೇಶಗಳಲ್ಲಿ ಜೀವಿಸುತ್ತಿದ್ದ ಪ್ರಾಣಿಗಳ ಪಳಯುಳಿಕೆಗಳಾಗಿದ್ದವು.

ಕ್ರಿ.ಶ.೧೯೧೮ರಲ್ಲಿ ಈ ವಿಷಯ ಸ್ವೀಡನ್ ಭೂವಿಜ್ಞಾನಿ ಅಂಡರ್‌ಸನ್‌ಗೆ ತಿಳಿದಿದ್ದೆ ಕ್ಷೇತ್ರ ಸಮೀಕ್ಷೆ ನಡೆಸಲು ಹೊರಟ. ಆದರೆ ಅಲ್ಲಿ ದೊರಕಿದ ಮೂಳೆಗಳೆಲ್ಲ ಇಲಿ ಮೂಳೆಗಳಾಗಿದ್ದವು. ಕ್ರಿ.ಶ.೧೯೨೧ರಲ್ಲಿ ಇನ್ನೊಂದು ಗುಹೆಯಲ್ಲಿ ಸಮೀಕ್ಷೆ ನಡೆಸಲಾಯಿತು. ಅಲ್ಲಿ ಆದಿಮಾನವನ ಎರಡು ಹಲ್ಲುಗಳು ದೊರಕಿ ಅವು ಅದುವರೆಗೂ ಚೀನಾದಲ್ಲಾಗಲಿ ಅಥವಾ ಏಷಿಯಾದ ಯಾವುದೇ ದೇಶದಲ್ಲೂ ದೊರಕಿರಲಿಲ್ಲ.

ಕೆನಡಾದ ಡಾ.ಡೇವಿಡ್‌ಸನ್ ಸಂಶೋಧನೆ ನಡೆಸಿ ಈ ಹಲ್ಲುಗಳನ್ನು ಮೊದಲ ಬಾರಿಗೆ ದೊರಕಿದ ಗುಹೆಮಾನವನ ಹಲ್ಲುಗಳೆಂದು ಮತ್ತು ಅವುಗಳಿಗೆ "ಸಿನಾನ್‌ತ್ರೋಪಸ್ ಪೆಕ್ಕಿನಿಸಿಸ್" ಎಂಬ ಹೆಸರು ನೀಡಿದರು. ಇವು ಸುಮಾರು ೨.೫ ಮಿಲಿಯ ವರ್ಷಗಳ ಹಿಂದಿನ ಗುಹೆಮಾನವನದು ಎಂದು ತಿಳಿಸಲಾಯಿತು. ಅಮೇರಿಕಾದ ಭೂವಿಜ್ಞಾನಿ ವಿಲಿಯಮ್ಸ್ ಅಂತಿಮವಾಗಿ ಪೆಕ್ಕಿಂಗ್‌ಮ್ಯಾನ್ ಎಂದು ಹೆಸರಿಸಿದ. ಇದಕ್ಕೆ ಕಾರಣ ಈ

ಗುಹೆಗಳು ಪೆಕ್ಕಿಂಗ್ ನಗರಕ್ಕೆ (ಇಂದಿನ ಬೀಜಿಂಗ್ ನಗರ) ಹತ್ತಿರ ಇದ್ದವು.

ಕ್ರಿ.ಶ. ೧೯೨೯ರಲ್ಲಿ ಒಂದು ಗಹೆಯನ್ನು ಆಯ್ಕೆ ಮಾಡಿಕೊಂಡು ಗಹೆಯಲ್ಲಿ ತುಂಬಿದ್ದ ಗಸಿಮಣ್ಣನ್ನು ೧೦ ಪದರುಗಳಾಗಿ ವಿಭಾಗಿಸಿಕೊಂಡು ವಿವರವಾಗಿ ಸಂಶೋಧನೆಯನ್ನು ನಡೆಸಲಾಯಿತು. ಕೆಂಪು ಉಸುಗಿನಲ್ಲಿ ಮನುಷ್ಯನ ಒಂದು ತಲೆಬುರಡೆ ಸಿಕ್ಕಿತು. ಈ ತಲೆಬುರುಡೆ ಮುಂದೆ ಗುಹೆಮಾನವ ಮತ್ತು ಆದಿಮಾನವನ ನಡುವಿನ ವಿಕಾಶಕ್ಕೆ ಒಂದು ಕೊಂಡಿಯಾಗಿ ಪೆಕ್ಕಿಂಗ್‌ಮ್ಯಾನ್ ಹೆಸರಿನಲ್ಲಿ ಪ್ರಪಂಚದಾದ್ಯಂತ ಹೆಸರುವಾಸಿಯಾಯಿತು.

ಕ್ರಿ.ಶ.೧೯೯೧-೯೨ರಲ್ಲಿ ಡಚ್ ವಿಜ್ಞಾನಿ ಡುಬಿಯಸ್, ಜಾವಾ ಮತ್ತು ಇಂಡೋನೇಶೀಯಾದಲ್ಲಿ ಓಮಿನಿಡ್ ಆದಿಮಾನವನ ಪಳೆಯುಳಿಕೆಗಳನ್ನು ಕಂಡಿಡಿದಿದ್ದ. ಡುಬಿಯಸ್ ಇದನ್ನು ಪಿತೆಕ್ಯಾಂತ್ರೋಪಸ್ ಎರೆಕ್ಟಸ್ ಎಂದು ಕರೆದು, ಇವನು ಭೂಮಿಯ ಮೇಲೆ ಮೊದಲ ಬಾರಿಗೆ ನಿಂತು ನಡೆದ ಆದಿಮಾನವನೆಂದು ಹೇಳಿದ.



ಪೆಕ್ಕಿಂಗ್ ಮ್ಯಾನ್ ಗುಹೆಯೊಳಗೆ ಚೀನಿ ಯುವತಿ

ಈ ಪಳೆಯುಳಿಕೆಯ ಒಗ್ಗೆ ಆ ಕಾಲಕ್ಕೆ ಪ್ರಪಂಚದಾದ್ಯಂತ ದೊಡ್ಡ ಚರ್ಚೆ ನಡೆದು ಅಂತಿಮವಾಗಿ ಇವು ಮಂಗಮಾನವ (ಏಪ್) ಮತ್ತು ನಿಂತು ನಡೆಯುವ ಆದಿಮಾನವನ ಕೊಂಡಿ ಎಂದು ಒಪ್ಪಿಕೊಳ್ಳಲಾಯಿತು.

ಎರಡು ಪ್ರದೇಶಗಳಲ್ಲಿ ದೊರಕಿದ ಗುಹೆಮಾನವರ ಪಳೆಯುಳಿಕೆಗಳು ಪ್ರಪಂಚದಾದ್ಯಂತ ಮಾನವ ವಿಕಾಸದ ಒಗ್ಗೆ ಹಲವು ವಿಸ್ಮಯಗಳನ್ನು ಹೊರಚೆಲ್ಲಿದ್ದವು. ಪೆಕ್ಕಿಂಗ್‌ಮ್ಯಾನ್ ಬೆಂಕಿ ಉಪಯೋಗಿಸುತ್ತಿದ್ದುದನ್ನು, ಪ್ರಾಣಿಗಳನ್ನು ಬೇಟೆಯಾಡುವುದನ್ನು,

ಬೇಟೆಯಾಡಲು ಉಪಯೋಗಿಸುತ್ತಿದ್ದ ಆಯುಧಗಳನ್ನು ರಾಶಿರಾಶಿಯಾಗಿ ಕೂಡಿಯಾಕಿಕೊಂಡಿರುವುದನ್ನು ಜಗತ್ತಿಗೆ ತೋರಿಸಿಕೊಟ್ಟ. ಪೆಕ್ಕಿಂಗ್‌ಮ್ಯಾನ್ ತಿಂದು ತೇಗಿದ ಅನೇಕ ರೀತಿಯ ಪ್ರಾಣಿಗಳ ಎಲುಬುಗಳು, ಕೂದಲು ಮತ್ತು ಬೂದಿಯ ಗುಡ್ಡೆಗಳು ದೊರಕಿದ್ದವು. ಇವೆಲ್ಲವು ಅವನ ವಿಕಾಸವನ್ನು ವಿವರವಾಗಿ ಹೇಳುತ್ತಿದ್ದವು.

ಮಂಗಮಾನವ ಮತ್ತು ಆದಿಮಾನವನ ನಡುವಿನ ವಿಕಾಸ ಪೆಕ್ಕಿಂಗ್‌ಮ್ಯಾನ್ ಪಳೆಯುಳಿಕೆಗಳು ದೊರಕುವವರೆಗೂ ವಿಜ್ಞಾನ ಜಗತ್ತಿಗೆ ದೊಡ್ಡ ಪ್ರಶ್ನೆಯಾಗಿಯೆ ಕಾಡಿತ್ತು. ಆದರೆ ಪೆಕ್ಕಿಂಗ್‌ಮ್ಯಾನ್ ದೊರಕಿದ ನಂತರ ಮಾನವ ವಿಕಾಸದ ನಕ್ಷೆಯಲ್ಲಿ ತನಗೆ ತಾನೆ ಉತ್ತರ ಕಂಡುಕೊಂಡಿತ್ತು. ಜೊತೆಗೆ ಅಂದಿನ ಪರಿಸರ ಜ್ಞಾನ ಮತ್ತು ಆದಿಮಾನವನ ಚಟುವಟಿಕೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ವಿಜ್ಞಾನ ಸಫಲವಾಗಿತ್ತು. ಮುಂದಿನ ದಿನಗಳಲ್ಲಿ ಸುತ್ತುಮುತ್ತಲಿನ ಇನ್ನಿತರ ಗುಹೆಗಳಲ್ಲಿ ಪೆಕ್ಕಿಂಗ್‌ಮ್ಯಾನ್‌ನ ಹಲವು ಹಲ್ಲುಗಳು, ಎಲುಬುಗಳು, ತಲೆಬುರುಡೆಗಳು ದೊರಕಿದ್ದವು.

ಮಧ್ಯ ಪ್ಲಿಸ್ಟೋಸೀನ್ ಯುಗದ ಪೆಕ್ಕಿಂಗ್‌ಮ್ಯಾನ್‌ನ ಸರಾಸರಿ ಎತ್ತರ ೧೫೬ ಸೆ.ಮೀ. ಇದ್ದರೆ, ಮಹಿಳೆಯ ಸರಾಸರಿ ಎತ್ತರ ೧೪೪ ಸೆ.ಮೀ. ಇತ್ತು. ತಲೆಬುರುಡೆ ಇಂದಿನ ಮನುಷ್ಯನಿಗಿಂತ ದೃಢವಾಗಿರುವುದು ಕಂಡುಬಂದಿತ್ತು. ಹಣೆ ಅಗಲವಾಗಿದ್ದು ಕಣ್ಣುಬ್ಬುಗಳ ಎಲುಬುಗಳು ಮುಂದಕ್ಕೆ ಬಾಗಿಕೊಂಡಿದ್ದವು. ಮೆದುಳು ಚಿಪ್ಪು ದಕ್ಷಿಣ ಆಫ್ರಿಕಾ ಮತ್ತು ಜಾವಾ ಮಾನವನಿಗಿಂತ ತುಸು ಚಿಕ್ಕದಾಗಿದ್ದು ಆಧುನಿಕ ಮಾನವನಿಗಿಂತ ತುಸು ಚಿಕ್ಕದಾಗಿತ್ತು. ಪೆಕ್ಕಿಂಗ್‌ಮ್ಯಾನ್‌ನ ಸರಾಸರಿ ಮೆದುಳು ತೂಕ ೧೦೫೯ ಮಿ.ಲೀ.

ಈ ಪ್ರದೇಶದಲ್ಲಿ ಒಟ್ಟು ೧೮೭೩ ದಿನಗಳು ಕಾಲ ೧೦೦ ಜನರ ಸಹಾಯದಿಂದ ಸಂಶೋಧನೆ ನಡೆಸಲಾಗಿತ್ತು. ಒಟ್ಟು ೨೪೦೦೦ ಚ.ಮೀ.ರಷ್ಟು ಗಸಿಯನ್ನು ಗುಹೆಗಳಲ್ಲಿ ತೋಡಲಾಗಿತ್ತು. ಒಟ್ಟು ೧೨೨೧ ಪೆಟ್ಟಿಗೆಗಳಲ್ಲಿ (೩೭೫ ಚ.ಮೀ) ಆದಿಮಾನವನ ಎಲುಬುಗಳನ್ನು ಸಂಗ್ರಹಿಸಲಾಯಿತು. ಸುಮಾರು ೧ ಲಕ್ಷ ಸಂಖ್ಯೆಯ ಚೂರುಗಳಲ್ಲಿ ೧೭೦೦೦ ಚೂರುಗಳನ್ನು ಸಂಶೋಧನೆಗೆ ಒಳಪಡಿಸಲಾಯಿತು.

ಬೆಣಚು ಶಿಲೆ, ಹರಳು ಶಿಲೆ, ಫ್ಲಿಂಟ್ ಶಿಲೆ ಮತ್ತು ಮರಳು ಶಿಲೆಗಳಲ್ಲಿ ಪೆಕ್ಕಿಂಗ್‌ಮ್ಯಾನ್ ಆಯುಧಗಳನ್ನು ಮಾಡಿ ಉಪಯೋಗಿಸುವುದನ್ನು ಕಲಿತುಕೊಂಡಿದ್ದ. ಬೆಂಕಿ ಹೊತ್ತಿಸುವುದರ ಜೊತೆಗೆ ಆರಿಸುವುದನ್ನು ಪೆಕ್ಕಿಂಗ್‌ಮ್ಯಾನ್ ಕಲಿತುಕೊಂಡಿರುವುದು ದೃಢಪಟ್ಟಿತು. ಹಲವು ಗುಹೆಗಳಲ್ಲಿ ಹತ್ತು ಮೀಟರುಗಳ ದಪ್ಪದ ಬೂದಿ ಗುಡ್ಡೆಗಳು ಕಂಡುಬಂದವು. ಪೆಕ್ಕಿಂಗ್‌ಮ್ಯಾನ್ ಮೊದಲಿಗೆ ಬೆಂಕಿಯನ್ನು ಹೇಗೆ ಕಂಡುಕೊಂಡ ಎನ್ನುವುದಕ್ಕೆ ಸರಿಯಾದ ಉತ್ತರ ದೊರಕದಿದ್ದರು ಕಾಡಿನಲ್ಲಿ ಬೇಸಿಗೆ ದಿನಗಳಲ್ಲಿ ಬೆಂಕಿ ಬೀಳುವುದನ್ನು ಮೊದಲಿಗೆ ನೋಡಿರಬೇಕು. ಇಲ್ಲ ಸಿಡಿಲಿನಿಂದ ಬೆಂಕಿ ಹೊತ್ತುಕೊಂಡಿದ್ದನ್ನು ನೋಡಿರಬಹುದು. ಒಟ್ಟಿನಲ್ಲಿ ಉರಿಯುವ ಕಟ್ಟಿಗೆಯನ್ನು ಮೊದಲಿಗೆ ಗುಹೆಯ ಒಳಕ್ಕೆ ತಂದಿರಬಹುದು. ಅನಂತರ ಗುಹೆಯಲ್ಲಿ ಉರಿಯುವ ಬೆಂಕಿಗೆ

ನಿರಂತರ ಸೌದೆಯನ್ನು ಹಾಕುತ್ತ ಬೆಂಕಿಯನ್ನು ಉಳಿಸಿಕೊಂಡಿರಬಹುದು.

ಗುಹೆಯ ಬಾಗಿಲಲ್ಲಿ ಬೆಂಕಿಯಾಕಿಕೊಂಡು ಕಾಡಿನ ಮೃಗಗಳಿಂದ ರಕ್ಷಣೆಯನ್ನು ಪಡೆಯುವುದು ಪೆಕ್ಕಿಂಗ್‌ಮ್ಯಾನ್ ಕಂಡುಕೊಂಡಿದ್ದ. ರಾತ್ರಿ ಹೊತ್ತು ದೀಪವು ಅದಾಗಿತ್ತು. ಮಾಂಸವನ್ನು ಬೆಂಕಿಯಲ್ಲಿ ಬೇಯಿಸಿ ತಿನ್ನುವುದು, ಚಳಿಗಾಳದಲ್ಲಿ ಮೈ ಕಾಯಿಸಿಕೊಳ್ಳುವುದು ಹೀಗೆ ಬೆಂಕಿಯನ್ನು ಅನೇಕ ರೀತಿಯಲ್ಲಿ ಆದಿಮಾನವ ಉಪಯೋಗಿಸಿಕೊಳ್ಳುತ್ತಿದ್ದ. ಗುಹೆಗಳಲ್ಲಿ ದೊರಕಿದ ಹೂವು, ಕಾಯಿ, ಬೀಜ ಮತ್ತು ಹಣ್ಣುಗಳಿಂದ ಆ ಕಾಲದಲ್ಲಿ ಸುತ್ತಲ ಪ್ರದೇಶಗಳಲ್ಲಿ ಯಾವ ಯಾವ ರೀತಿಯ ಮರ ಗಿಡಗಳು ಇದ್ದವು ಎನ್ನುವುದನ್ನು ತಿಳಿದುಕೊಳ್ಳಲು ಸಹಾಯವಾಗಿದ್ದವು. ಒಟ್ಟಿನಲ್ಲಿ ಅಂದಿನ ನೈಸರ್ಗಿಕ ಪರಿಸರದ ವಿವರಣೆಗಳು ಈ ಗುಹೆಗಳಲ್ಲಿ ದೊರಕಿದ್ದವು.

ಗುಹೆಗಳಲ್ಲಿ ೧೦೦ಕ್ಕಿಂತ ಹೆಚ್ಚು ಪ್ರಾಣಿಗಳ ಎಲುಬುಗಳು ದೊರಕಿದ್ದವು. ಅವೆಲ್ಲವನ್ನು ಪೆಕ್ಕಿಂಗ್‌ಮ್ಯಾನ್ ಬೇಟೆಯಾಡಿ ತಂದು ಗುಹೆಗಳಲ್ಲಿ ಕುಳಿತು ತಿಂದು ಮುಗಿಸಿದ್ದ. ಮಹಿಳೆ ಗರ್ಭಿಣಿಯಾದಾಗ ಮಕ್ಕಳನ್ನು, ಸಾಕುತ್ತ ಗುಹೆಯಲ್ಲಿ ಕಾಲ ಕಳೆದರೆ ಆದಿಮಾನವ ಹೊರಗೆ ಪ್ರಾಣಿಗಳನ್ನು ಬೇಟೆಯಾಡಿ ಬರುತ್ತಿದ್ದ. ೩೦೦ ಸಾವಿರ ವರ್ಷಗಳಲ್ಲಿ ಪೆಕ್ಕಿಂಗ್‌ಮ್ಯಾನ್ ಚರಿತ್ರೆಯಲ್ಲಿ ಆಯುಧಗಳು ಕಾಲ ಕಾಲಕ್ಕೆ ಆಧುನಿಕಗೊಳ್ಳುತ್ತಲೆ ಹೋಗಿದ್ದವು. ಪೆಕ್ಕಿಂಗ್‌ಮ್ಯಾನ್ ಮಾನವರಲ್ಲಿ ಸರಾಸರಿ ೧೪ ವರ್ಷಗಳ ವಯಸ್ಸಿಗೆ ೬೮.೨ ರಷ್ಟು ಜನರು ಸತ್ತರೆ, ಶೇಕಡ ೪.೫ ರಷ್ಟು ಜನರು ೫೦ ವರ್ಷಗಳು ಮಾತ್ರ ಬದುಕುತ್ತಿದ್ದರು. ಪೆಕ್ಕಿಂಗ್‌ಮ್ಯಾನ್ ಅನೇಕ ರೀತಿಯ ನೈಸರ್ಗಿಕ ತೊಂದರೆಗಳಿಗೆ ಸಿಕ್ಕಿ ಸಾಯುತ್ತಿದ್ದ.



ಲಾಂಗ್‌ಫಾಂಗ್ ನಗರದಲ್ಲಿ

ಚೀನಾದ ರೂಪಾಯಿಯ ಹೆಸರು ಯುಯಾನ್. ಚೀನಾದ ಒಂದು ಯುಯಾನ್‌ಗೆ ಭಾರತದ ೫.೭ ರೂಪಾಯಿಗಳು ಸಮ. ಒಂದು ಯು ಎಸ್ ಡಾಲರ್‌ಗೆ ೮.೨೧ ಯುಯಾನ್ ಸಮ.

೨೭.೧೦.೨೦೦೪ ರಂದು ಜಿನ್‌ಡಾಡು ಹೋಟಲಿನಲ್ಲಿ ಉಪಹಾರ ಮುಗಿಸಿ ಲಗೇಜ್ ಪ್ಯಾಕ್ ಮಾಡಿಕೊಂಡು ಹೋಟಲ್ ಹೊರಗೆ ನಿಂತುಕೊಂಡೆವು. ಆ ದಿನ ನಾವು ಬೀಜಿಂಗ್ ನಗರಕ್ಕೆ ೬೦ ಕಿ.ಮೀ. ದೂರದಲ್ಲಿರುವ ಲಾಂಗ್‌ಫಾಂಗ್ ನಗರಕ್ಕೆ ಹೋಗಬೇಕಾಗಿತ್ತು. ಲಾಂಗ್‌ಫಾಂಗ್‌ನಲ್ಲಿ ತರಬೇತಿಯ ಇನ್ನೊಂದು ಕೇಂದ್ರವಿದ್ದು ಬಸ್ಸು ಸರಿಯಾಗಿ ೯:೩೦ಕ್ಕೆ ಹೊರಟಿತು. ಬಸ್ಸಿನ ಹಿಂದೆ ಒಂದು ಕಾರು ಬರುತ್ತಿತ್ತು. ಹಿಂದಿನ ದಿನದ ರಾತ್ರಿ ಊಟ ಮಾಡಿದ ಮೇಲೆ ಬೀಜಿಂಗ್‌ನ ಒಂದು ಡಿಪಾರ್ಟ್‌ಮೆಂಟಲ್ ಅಂಗಡಿಗೆ ನಮ್ಮ ಸಹಪಾಟಿಗಳ ಜೊತೆಗೆ ಸಾಯಂಕಾಲ ೭ ಗಂಟೆಗೆ ಕೊರೆಯುವ ಚಳಿಯಲ್ಲಿ ೨ ಕಿ.ಮೀ. ದೂರ ನಡೆದುಹೋಗಿದ್ದೆವು. ವಿಶಾಲವಾದ ಅಂಗಡಿ. ಅಲ್ಲಿ ಏನಿದೆ? ಏನಿಲ್ಲ ಎನ್ನುವುದೇ ಗೊತ್ತಾಗಲಿಲ್ಲ. ಒಂದು ಕಡೆಯಿಂದ ಸಾಮಾನುಗಳನ್ನು ಮತ್ತು ಅವುಗಳ ಬೆಲೆಗಳನ್ನು ನೋಡುತ್ತಾಹೋದೆವು. ನಾವು ೮ ಜನರು ಹೋಗಿದ್ದು ಅಲ್ಲಿ ಒಳಗೆ ಹೋದ ಕೆಲವೇ ಕ್ಷಣಗಳಲ್ಲಿ ಯಾರೂ ಕಾಣಿಸಲಿಲ್ಲ, ಎಲ್ಲರೂ ತಪ್ಪಿಸಿಕೊಂಡುಬಿಟ್ಟಿದ್ದರು.

ನಾನು ಒಬ್ಬ ನೀಗ್ರೊ ಹಿಂದೆ ಹೊರಟೆ. ಅವನು ಒಂದು ಪ್ಲಾಸ್ಟಿಕ್ ಬುಟ್ಟಿಯನ್ನು ತೆಗೆದುಕೊಂಡು ಅದರಲ್ಲಿ ಒಂದೊಂದೆ ವಸ್ತುವನ್ನು ತುಂಬುತ್ತಾ ಹೋದ. ಅಲ್ಲಿದ್ದ ಎಲ್ಲಾ ಸಾಮಾನುಗಳನ್ನು ತೆಗೆದುಕೊಳ್ಳೋಣ ಎನಿಸಿತು. ದೆಹಲಿಯಲ್ಲಿ ಜಗಬಂಧು ಹತ್ತಿರ ೨೫೦೦ ರೂ. ತೆಗೆದುಕೊಂಡು ೫೦ ಯುಎಸ್ ಡಾಲರ್‌ಗೆ ಪರಿವರ್ತಿಸಿಕೊಂಡಿದ್ದೆ. ಜೊತೆಗೆ ೫೫೦ ಇಂಡಿಯನ್ ರೂ.ಗಳು ಮತ್ತು ವಾಂಗ್ ೮೦೦ ಯುಯಾನ್

ಪಾಕೆಟ್ ಮನಿ ನೀಡಿದ್ದರು. ಅದರಲ್ಲಿ ಫೋನಿಗಾಗಿ ೧೦೦ ಯುಯಾನ್ ಆಗಲೆ ಖರ್ಚಾಗಿಹೋಗಿತ್ತು. ನನಗೆ ಸರಿಯಾಗಿ ಪ್ರೋಗ್ರಾಂ ಗೊತ್ತಿದ್ದರೆ ಸ್ವಲ್ಪ ಹಣ ತೆಗೆದುಕೊಂಡು ಬರಬಹುದಿತ್ತು. ತಂದಿದ್ದ ೫ ಸಾವಿರ ದೆಹಲಿಯಲ್ಲೇ ಖರ್ಚಾಗಿಹೋಗಿತ್ತು.

ಅಲ್ಲಿದ್ದ ವಸ್ತುಗಳನ್ನು ನೋಡಿದ ಮೇಲೆ ಒಂದು ಜಾಕೆಟ್, ಒಂದು ಕೋಟು ಮತ್ತು ಒಂದು ಟೈಯನ್ನು ತೆಗೆದು ಪ್ಲಾಸ್ಟಿಕ್ ಬುಟ್ಟಿಯಲ್ಲಿ ಹಾಕಿಕೊಂಡೆ. ಮೂರಕ್ಕೂ ೨೭೩ ಯುಯಾನ್ ಕೊಟ್ಟು ಹೊರಕ್ಕೆ ಬಂದೆ. ಉಳಿದವರು ಅವರಿಗೆ ಬೇಕಾದ ಸಾಮಾನುಗಳನ್ನು ತೆಗೆದುಕೊಂಡಿದ್ದರು. ಒಂದು ಕೋಟು ಟೈಯನ್ನು ತೆಗೆದುಕೊಳ್ಳಬೇಕೆಂದುಕೊಂಡಿದ್ದ ನನ್ನ ಬಹು ದಿನಗಳ ಆಸೆ ಇಲ್ಲಿ ಬೀಜಿಂಗ್‌ನಲ್ಲಿ ಈಡೇರಿತ್ತು. ಒಂದು ಕಾಕತಾಳಿಯವೆಂಬಂತೆ ಬೆಂಗಳೂರಿನಲ್ಲಿ ಹಿಡಿದ ಫೋಟೋಗೆ ಫೋಟೊಗ್ರಾಫರ್ ಕಂಪ್ಯೂಟರ್‌ನಲ್ಲಿ ಒಂದು ಕೋಟು ಹಾಕಿಕೊಟ್ಟಿದ್ದ. ಇಲ್ಲಿ ತೆಗೆದುಕೊಂಡ ಕೋಟು ಅದೆ ಬಣ್ಣದಾಗಿತ್ತು.



ಸಾವು ಉಳಿದುಕೊಂಡಿದ್ದ ಲಾಂಗ್‌ಫಾಂಗ್ ನಗರದ ಹೊಟೇಲ್ ಮುಂದಿನ ಸರ್ಕಲ್

ಬಸ್ಸು ಹೆದ್ದಾರಿಯಲ್ಲಿ ಸರಾಗವಾಗಿ ಸಾಗಿತ್ತು. ಸಮತಟ್ಟಾದ ಪ್ರದೇಶ. ರಸ್ತೆಯ ಎರಡೂ ಬದಿಗಳಲ್ಲಿ ಸಾಲು ಸಾಲು ಮರಗಳು. ಮರಗಳ ಹಿಂದೆ ಜೋಳ ಮತ್ತು ಹತ್ತಿಯ ಹೊಲಗಳು. ಅಲ್ಲಲ್ಲಿ ಬೆಳೆಗಳಿಗೆ ಡ್ರಿಪ್ಪಿಂಗ್ ಅಳವಡಿಸಲಾಗಿತ್ತು. ಹೆಂಚು ಮನೆಗಳ ಹಳ್ಳಿಗಳು ತೇಟ್ ಭಾರತದ ಹಳ್ಳಿಗಳಂತೆ ಕಾಣಿಸುತ್ತಿದ್ದವು. ಸರಿಯಾಗಿ ೧೧:೧೫ ಕ್ಕೆ ನಮ್ಮ ಬಸ್ಸು ಲಾಂಗ್‌ಫಾಂಗ್‌ನ ಒಂದು ಹೋಟಲ್ ಮುಂದೆ ನಿಂತುಕೊಂಡಿತು. ವಿಶಾಲವಾದ ರಸ್ತೆಗಳು, ರಸ್ತೆಗಳ ಬದಿಯಲ್ಲಿ ಸುಂದರವಾದ ಹೂತೋಟಗಳು ಮತ್ತು ಅಂಗಡಿಗಳು. ಅಲ್ಲಲ್ಲಿ ದೂರದೂರದಲ್ಲಿ ಎತ್ತರೆತ್ತರ ಕಟ್ಟಡಗಳು

ಕಾಣಿಸುತ್ತಿದ್ದವು.

ಬಸ್ಸಿನಲ್ಲಿ ಸಾಮಾನುಗಳನ್ನು ಇಳಿಸಿ ಎಲ್ಲರೂ ಹೋಟಲ್ ಒಳಗಿನ ಆವರಣಕ್ಕೆ ಬಂದೆವು. ವಾಂಗ್ ಕೌಂಟರ್ ಹತ್ತಿರ ಮಾತನಾಡಿದ ಮೇಲೆ ಎಲ್ಲರಿಗೂ ಒಂದೊಂದು ಕ್ರೆಡಿಟ್‌ಕಾರ್ಡ್ ರೀತಿಯ ಕಾರ್ಡ್‌ಗಳನ್ನು ಕೊಟ್ಟರು. ಆ ಕಾರ್ಡ್ ಮೇಲೆ ಕೋಣೆಗಳ ಸಂಖ್ಯೆಯನ್ನು ಬರೆಯಲಾಗಿತ್ತು. ನಾನು ಕಾರ್ಡ್ ಜೊತೆಗೆ ಲಗೇಜ್ ತೆಗೆದುಕೊಂಡು ಕೋಣೆಯ ಮುಂದೆ ನಿಂತುಕೊಂಡು ಒಂದು ಕ್ಷಣ ನೋಡಿದೆ. ಬಾಗಿಲ ಮೇಲೆ ಕಾರ್ಡ್ ಸಿಕ್ಕಿಸುವ ಒಂದು ಸ್ಥಳ ಕಾಣಿಸಿಕೊಂಡಿತು. ಕಾರ್ಡನ್ನು ಒಳಕ್ಕೆ ಸೇರಿಸಿದ್ದೆ ಪುಟ್ಟ ಹಸಿರು ಲೈಟು ಕಾಣಿಸಿಕೊಂಡು ಬಾಗಿಲು ತೆರೆದುಕೊಂಡಿತು.

ಒಳಕ್ಕೆ ಬಂದು ಬಾಗಿಲು ಮುಚ್ಚಿ ಸುತ್ತಲು ನೋಡಿದೆ. ಸುಂದರವಾದ ಕೋಣೆ. ಟೇಬಲ್‌ನ ಕೆಳಗಿನ ಪಟ್ಟಿಯಲ್ಲಿರುವ ಸ್ವಿಚ್ಚುಗಳನ್ನು ಒಂದೊಂದಾಗಿ ಒತ್ತಿದೆ. ಕೋಣೆಯೊಳಗೆ ವಿದ್ಯುತ್ ದ್ವೀಪಗಳು ಒಂದೊಂದಾಗಿ ಹೊತ್ತಿಕೊಂಡವು. ಬಾಥುರೂಮಂತು ತುಂಬಾ ಆಧುನಿಕವಾಗಿತ್ತು. ಟವಲ್‌ಗಳು, ಬ್ರಶ್ಶು, ಸೋಪು, ರೇಜರುಗಳು ಮತ್ತಿತರ ವಸ್ತುಗಳಿದ್ದವು. ಒಟ್ಟಿನಲ್ಲಿ ಒಂದು ಸುಂದರವಾದ ಅಟೋಮ್ಯಾಟಿಕ್ ಎಲೆಕ್ಟ್ರಾನಿಕ್ ಕೋಣೆ ಅದಾಗಿತ್ತು.

ಅರ್ಧಗಂಟೆ ಸಮಯಕೊಟ್ಟು ೧೧:೪೫ ಕ್ಕೆ ಎಲ್ಲರನ್ನು ಲಂಚ್‌ಗೆ ಬರಬೇಕೆಂದು ತಿಳಿಸಿದ್ದರು. ಎಲ್ಲರೂ ಅವರು ಹೇಳಿದ ಸಮಯಕ್ಕೆ ಹೋಟಲ್ ಆವರಣದಲ್ಲಿ ಸೇರಿದೆವು. ವಾಂಗ್ ಆಗಲೆ ಅಲ್ಲಿದ್ದ ಎಲ್ಲರನ್ನು ಅದೇ ಹೋಟಲಿನ ಇನ್ನೊಂದು ಮಗ್ಗಲಲ್ಲಿದ್ದ ರೆಸ್ಟಾರೆಂಟಿಗೆ ಕರೆದುಕೊಂಡು ಹೊರಟರು. ಮಿಂಚುತ್ತಿದ್ದ ಕೆಂಪು ಯೂನಿಫಾರ್ಮ್ ಧರಿಸಿದ್ದ ಸುಂದರವಾದ ಹುಡುಗಿಯರು ನಮ್ಮನ್ನು ಬರಮಾಡಿಕೊಂಡರು.

ನಾವು ಒಟ್ಟು ೨೦ ಜನರಿದ್ದು ಹತ್ತತ್ತು ಜನರಂತೆ ಎರಡು ರೌಂಡ್ ಟೇಬಲುಗಳ ಮುಂದೆ ನಮ್ಮನ್ನು ಕೂರಿಸಲಾಯಿತು. ಟೇಬಲು ಮೇಲೆ ಸುತ್ತುವ ಗ್ಲಾಸಿದ್ದು ಮೊದಲಿಗೆ ಎಲ್ಲರಿಗೂ ಫೋರ್‌ಸ್ಲೀನ್ ಕಪ್ಪುಗಳಲ್ಲಿ ಹಸಿರು ಚಹಾ ಕೊಡಲಾಯಿತು. ಹತ್ತು ಜನರಿಗೂ ಹತ್ತು ಸಣ್ಣ ಪ್ಲೇಟುಗಳು, ಚೀನಾ ಕಡ್ಡಿಗಳು, ಫೋರ್ಕ್‌ಗಳು ಮತ್ತು ಚಮಚಾಗಳನ್ನು ಕೊಟ್ಟರು. ಈಗ ಒಂದೊಂದೇ ಭಕ್ಷ್ಯವನ್ನು ಸುತ್ತುವ ಗಾಜಿನ ಮೇಲೆ ಇಡುತ್ತಾ ಹೋದರು. ನಮ್ಮ ಪಕ್ಕದಲ್ಲಿದ್ದ ಸನ್‌ಬಿನ್ "ನಮ್ಮ ಮನೆಗಳಲ್ಲಿ ಹೀಗೇನೆ. ಶುರುಮಾಡಿ" ಎಂದ. ಎಲ್ಲರೂ ಮೊದಲಿಗೆ ಚೀನಾ ಕಡ್ಡಿಗಳಲ್ಲಿ ಭಕ್ಷ್ಯಗಳನ್ನು ತೆಗೆದುಕೊಳ್ಳಲು ಪ್ರಯತ್ನಿಸಿದರು. ಅನಂತರ ಯಾವುದರಲ್ಲಿ ಸಾಧ್ಯವೊ ಅದರಲ್ಲಿ ತೆಗೆದುಕೊಂಡರು. ಕೊನೆಗೆ ತಿನ್ನುವುದು, ತೆಗೆದುಕೊಳ್ಳುವುದು ಯಾವುದೆಂದು ಗೊತ್ತಾಗಲಿಲ್ಲ. ಎಲ್ಲವೂ ಎಂಜಿಲುಮಯವಾಯಿತು.

ಹುಡುಗಿಯರು ಸುಮಾರು ೧೫ ಭಕ್ಷ್ಯಗಳನ್ನು ತಂದಿಟ್ಟಿದ್ದರು. ಚಿಕನ್, ಫಿಷ್, ಮಟನ್, ಬೀಫ್, ಪ್ರಾನ್, ಪೋರ್ಕ್ ಜೊತೆಗೆ ಅನೇಕ ಸಸ್ಯಾಹಾರ ಭಕ್ಷ್ಯಗಳು

ಇದ್ದವು. ಜೊತೆಗ ಬೀರು, ತಂಪು ಪಾನೀಯಗಳೂ ಇದ್ದವು. ನಾನು ಒಂದೊಂದೆ ರುಚಿ ನೋಡಿ ಚನ್ನಾಗಿರುವುದನ್ನು ಮಾತ್ರ ಸ್ವಲ್ಪ ಸ್ವಲ್ಪ ಆಯ್ಕೆ ಮಾಡಿಕೊಂಡು ತಿಂದೆ. ಅದ್ಯಾಕೊ ಈ ಚೀನಿಯರ ಪದ್ಧತಿ ಹಿಡಿಸಲಿಲ್ಲ. ಒಟ್ಟಿನಲ್ಲಿ ಅದೊಂದು ಅಂತರಾಷ್ಟ್ರೀಯ ಎಂಜಿಲು ಬಫೆ ಪದ್ಧತಿ ಆಗಿತ್ತು. ಭಕ್ಷ್ಯಗಳು ಮಾತ್ರ ಚನ್ನಾಗಿಯೆ ಇದ್ದವು.

ಹೋಟಲಿನ ರಿಸೆಪ್ಶಿನಿಷ್ಟ್ ಹಾಲಿನ ಒಂದು ಮೂಲೆಯಲ್ಲಿ ಒಂದು ಫೋಟೋ ಇಟ್ಟಿದ್ದು ಅದರ ಮುಂದೆ ಆಪಲ್‌ಗಳು, ದೊಡ್ಡ ದೊಡ್ಡ ಕಿತ್ತಲೆ ಹಣ್ಣುಗಳು, ದರ್ಬೂಸ್ ಹಣ್ಣೊಂದು, ಮಿನರಲ್ ವಾಟರ್ ಮತ್ತು ಒಂದು ವೈನು ಬಾಟಲನ್ನು ಇಡಲಾಗಿತ್ತು. ಫೋಟೋ ಮುಂದೆ ಒಂದು ಗ್ಲಾಸಿನ ಬಾಕ್ಸ್‌ನಲ್ಲಿ ನೂರಾರು ನೋಟುಗಳು ಮತ್ತು ಕಾಯಿನ್‌ಗಳು ಕಾಣಿಕೆಯಾಗಿ ಬಿದ್ದಿದ್ದವು. ಎದುರಿಗೆ ಊದುಕಡ್ಡಿಗಳನ್ನು ಹಚ್ಚಿಡಲಾಗಿತ್ತು. ನಮ್ಮ ಜೊತೆಗಿದ್ದ ಸನ್‌ಬಿನ್‌ನನ್ನು "ಇವರು ಯಾರು?" ಎಂದು ಕೇಳಿದೆ. ಸನ್‌ಬಿನ್ "ಇವರು ನಮ್ಮ ಗುರು" ಎಂದಿದ್ದೆ, "ಅವರ ಬಗ್ಗೆ ಸ್ವಲ್ಪ ಹೇಳು" ಎಂದೆ. ಒಂದಾನೊಂದು ಕಾಲದಲ್ಲಿ ಇಬ್ಬರು ಅಣ್ಣ ತಮ್ಮಂದಿರು ಇದ್ದರು ಎನ್ನುತ್ತ ನಮ್ಮ ಭರತ ಮತ್ತು ಬಾಹುಬಲಿ ರೀತಿಯ ಒಂದು ಕಥೆ ಹೇಳಿದ. ಫೋಟೊದಲ್ಲಿದ್ದ ಮನುಷ್ಯ ನಮ್ಮ ಮಹಿಷಾಸುರನಷ್ಟೆ ಸುಂದರನಾಗಿದ್ದ. ಅಷ್ಟರಲ್ಲಿ ಹೋಟಲಿನ ಒಬ್ಬ ಹುಡುಗನು ಬಂದು ಉರಿಯುತ್ತಿದ್ದ ಮೂರು ಊದುಕಡ್ಡಿಗಳನ್ನು ಕೈಯಲ್ಲಿಡಿದುಕೊಂಡು ಮೂರ ಸಲ ಚೀನಾ ಶೈಲಿಯಲ್ಲಿ ಬಗ್ಗಿ ನಮಸ್ಕಾರ ಮಾಡಿ ಫೋಟೊ ಮುಂದೆ ಇಟ್ಟ.

ನಾಳೆ ಬೆಳಗ್ಗೆ ಇನ್ನರ್ ಮಂಗೋಲಿಯ ಕಡೆಗೆ ಕ್ಷೇತ್ರ ಸಮೀಕ್ಷೆಗೆ ಹೋಗಬೇಕಾಗಿದ್ದು ಅಲ್ಲಿ ತೀರ ಚಳಿ ಇದ್ದು ಬೆಚ್ಚಗಿನ ಉಡುಪುಗಳನ್ನು ರೆಡಿಮಾಡಿಕೊಳ್ಳುವಂತೆ ವಾಂಗ್ ಹೇಳಿದ್ದರು. ಅದಕ್ಕಾಗಿ ನಾವು ಕೆಲವು ಉಡುಪುಗಳನ್ನು ಕೊಂಡುಕೊಳ್ಳಲು ಸಾಯಂಕಾಲ ಒಂದು ಸೂಪರ್ ಶಾಪಿಂಗ್ ಕಾಂಪ್ಲೆಕ್ಸಿಗೆ ಹೋಗಿ ಅಲ್ಲಿ ಬೆಲೆಗಳು ತೀರ ದುಬಾರಿಯಾಗಿದ್ದರಿಂದ ಏನೂ ಕೊಂಡುಕೊಳ್ಳದೆ ಹಿಂದಕ್ಕೆ ಬಂದಿದ್ದೆವು.



ಇನ್ನರ್ ಮಂಗೋಲಿಯ

ಚೀನಾದಲ್ಲಿ ಇರುವುದು ಒಂದೇ ರಾಜಕೀಯ ಪಕ್ಷ. ಅದೇ ಮಾವೋ ತ್ಸಿ ತ್ಸಾಂಗ್ ಸ್ಥಾಪಿಸಿದ ಕಮ್ಯೂನಿಷ್ಟ್ ಪಕ್ಷ.

೨೮.೧೧.೨೦೦೪ರ ಬೆಳಗ್ಗೆ ಉಪಹಾರ ಮುಗಿಸಿ ೮:೩೦ಕ್ಕೆ ಒಂದು ಮಿನಿ ಬಸ್ಸು ಮತ್ತು ಒಂದು ಕಾರಿನಲ್ಲಿ ಇನ್ನರ್ ಮಂಗೋಲಿಯ ಕಡೆಗೆ ನಮ್ಮ ಪ್ರಯಾಣ ಪ್ರಾರಂಭವಾಯಿತು. ಮಿನಿ ಬಸ್ಸು ಗಂಟೆಗೆ ೧೪೦ ಕಿ.ಮೀ. ವೇಗದಲ್ಲಿ ಹೆದ್ದಾರಿಯ ಮೇಲೆ ಬರೋ ಎಂದು ಸಾಗುತ್ತಿತ್ತು. ಕೇವಲ ೧೦ ನಿಮಿಷಗಳಲ್ಲಿ ಬಸ್ಸು ಲಾಂಗ್‌ಫಾಂಗ್ ನಗರ ಬಿಟ್ಟು ಹೊರವಲಯದಲ್ಲಿ ಸಾಗುತ್ತಿತ್ತು. ಎರಡು ಕಡೆಯೂ ಸಮತಟ್ಟಾದ ಜೋಳದ ಹೊಲಗಳು, ಮಧ್ಯ ಮಧ್ಯ ಮೆಕ್ಕೆಜೋಳ, ಹತ್ತಿ, ಎಲೆಕೋಸು ಇತ್ಯಾದಿ ಬೆಳೆಗಳು ಕಾಣಿಸುತ್ತಿದ್ದವು.

ಎಲ್ಲೆಲ್ಲೂ ಬೂದು ಬಣ್ಣದ ಮಣ್ಣಿನ ಹೊಲಗಳು. ವಾಂಗ್ ಬೆಳಗ್ಗೆ ಈ ದಿನ ಇಲ್ಲಿ ವಸಂತಕಾಲ ಮುಗಿದು ಚಳಿಗಾಳ ಪ್ರಾರಂಭವಾಗಿದೆ ಎಂದಿದ್ದರು. ಗಿಡ ಮರಗಳಲ್ಲಿ ಎಲೆಗಳು ಅರ್ಧಂಬರ್ಧ ಉದುರಿದ್ದವು, ಇಲ್ಲ ಹಳದಿ ಬಣ್ಣಕ್ಕೆ ತಿರುಗುತ್ತಿದ್ದವು. ತೀರಾ ಕಡಿಮೆ ಮಳೆ ಬೀಳುವುದರಿಂದ ಆ ಪ್ರದೇಶದ ಗಿಡ ಮರಗಳು ಬಡವರಂತೆ ಕೈಯಲ್ಲಿ ಪ್ರಾಣ ಹಿಡಿದುಕೊಂಡು ನಿಂತಿದ್ದವು. ಬಸ್ಸು ಚಲಿಸುತ್ತಿದ್ದಂತೆ ನಾನೆಲ್ಲೊ ತಪ್ಪಿ ರಾಜಸ್ಥಾನದ ಅರಾವಳಿ ಬೆಟ್ಟಗಳ ನಡುವೆ ಹೋಗುತ್ತಿದ್ದೇನೋ ಎನಿಸಿತು. ಟಿಪಿಕಲ್ ರಾಜಸ್ಥಾನದ ವಾತಾವರಣ. ರಾಜಸ್ಥಾನದ ಹಳ್ಳಿಗಳ ಸುತ್ತಮುತ್ತಲು ಕೆಲವು ಹಸಿರು ಗಿಡ ಮರಗಳಾದರೂ ಕಾಣಿಸುತ್ತವೆ. ಆದರೆ ಈ ಪ್ರದೇಶದಲ್ಲಿರುವ ಗಿಡ ಮರಗಳು ನೀರುಕುಡಿದು ವರ್ಷಗಳೆ ಕಳೆದುಹೋಗಿರುವಂತೆ ತೋರುತ್ತಿತ್ತು. ಅರೆ ಮರಳುಗಾಡು ಎನ್ನುವ ಪದ ಈ ಪ್ರದೇಶಕ್ಕೆ ಚನ್ನಾಗಿ ಒಪ್ಪುತ್ತದೆ. ಯಾವುದೇ ಪ್ರದೇಶದಲ್ಲಿ ವರ್ಷಕ್ಕೆ ಸರಾಸರಿ ೨೦ ಸೆ.ಮೀ. ಗಿಂತ ಕಡಿಮೆ ಮಳೆ ಬೀಳುತ್ತದೊ ಆ ಪ್ರದೇಶವನ್ನು ಅರೆ ಮರಳುಗಾಡು ಎಂದು ಕರೆಯಲಾಗುತ್ತದೆ. ಅಲ್ಲಿ ಗಿಡ ಮರ ಹುಲ್ಲು ಬೆಳೆಯದೆ ನೆಲವೆಲ್ಲ ಮಣ್ಣು ಮತ್ತು ಮರಳುಗಾಡಿನಿಂದ ಕೂಡಿ ಬೆಂಗಾಡಾಗಿ ಮಾರ್ಪಡುತ್ತದೆ. ಗಾಳಿ ಬಂದಾಗ ಮರಳು

ರಾಶಿ ರಾಶಿಯಾಗಿ ತೂರಿಕೊಂಡು ಸಮುದ್ರದ ಅಲೆಗಳಂತೆ ನೂರಾರು ಕಿ.ಮೀ. ದೂರ ಸಾಗುತ್ತದೆ. ಅಂತಹ ಪ್ರದೇಶದಲ್ಲಿ ನಮ್ಮ ವಾಹನ ಸಾಗುತ್ತಿದೆ. ಆದರೆ ರಸ್ತೆ ಮಾತ್ರ ಅದ್ಭುತವಾಗಿದೆ.

ಈಗ ಅಲ್ಲಲ್ಲಿ ಸಣ್ಣ ಸಣ್ಣ ಹಳ್ಳಿಗಳು ಕಾಣಿಸಿಕೊಳ್ಳುತ್ತಿವೆ. ಆ ಬಡಪಾಯಿ ಹಳ್ಳಿಗಳನ್ನು ನೋಡಿ ನಮ್ಮ ಪಕ್ಕದಲ್ಲಿದ್ದ ಸೋಮೆ "ತೋತಲಿ ದಿಫರೆಂತ್ ಕಾಂತ್ರಾಸ್ತ್ ಫ್ರಂ ಸಿತೀಸ್" ಎಂದು ಉದ್ಗಾರ ತೆಗೆದ. ಸಾಲು ಸಾಲು, ಗುಂಪು ಗುಂಪು ಮಣ್ಣು ಮತ್ತು ಇಟ್ಟಿಗೆ ಗೋಡೆಗಳ ಹೆಂಚಿನ ಮನೆಗಳು, ಮಧ್ಯ ಮಧ್ಯ ಮುರಿದು ಬಿದ್ದಿರುವ ಗೋಡೆಗಳು. ಅಲ್ಲಲ್ಲಿ ಒಣಗಿದ ಬೂದು ಬಣ್ಣದ ಹುಲ್ಲನ್ನು ಮೇಯುತ್ತಿರುವ ಕುರಿಗಳು. ಅವುಗಳ ಮುಂದೆ ಕುರುಬರು, ನೀರು ಮಾತ್ರ ಎಲ್ಲೂ ಕಾಣಿಸುತ್ತಿಲ್ಲ. ಈ ಹಳ್ಳಿಗಳಿಗಿಂತ ಭಾರತದ ಹಳ್ಳಿಗಳೆ ಎಷ್ಟೋ ಮೇಲು ಎನ್ನುವ ಯೋಚನೆ ನನ್ನಲ್ಲಿ ಸಣ್ಣದಾಗಿ ಎದ್ದಿತು. ಅಲ್ಲಲ್ಲಿ ಜೋಳದ ಹೊಲಗಳಲ್ಲಿ ಕೆಲಸ ಮಾಡುತ್ತಿರುವ ರೈತರು. ಎಲ್ಲೋ ದೂರ ದೂರದಲ್ಲಿ ಹೊಲಗಳ ಮಧ್ಯ ಒಂದೊಂದು ಮಿನಿ ಲಾರಿ ಮತ್ತು ಟ್ರ್ಯಾಕ್ಟರುಗಳು ನಿಂತಿದ್ದವು. ಹೆಂಚಿನ ಮನೆಗಳ ಮೇಲೆ ರಾಶಿ ರಾಶಿ ಮೆಕ್ಕೆ ಜೋಳದ ತೆನೆಗಳನ್ನು ಒಣಗಲು ಹಾಕಲಾಗಿದೆ. ಮಧ್ಯದಲ್ಲಿ ಒಂದೆರಡು ಸಲ ನಿಂತಿದ್ದ ಬಸ್ಸು ಅದೇ ವೇಗದಲ್ಲಿ ಸಾಗುತ್ತಿತ್ತು. ಹನ್ನೆರಡು ಗಂಟೆಗೆ ಸರಿಯಾಗಿ ಬಸ್ಸಿನಲ್ಲಿದ್ದ ಸ್ಪೀಕರ್‌ನಲ್ಲಿ "ಈಗ ಸಮಯ ೧೨ ಗಂಟೆ. ಹಸಿವಿದ್ದವರು ಲಂಚ್ ಮಾಡಬಹುದು" ಎಂದ ಸನ್‌ಬಿನ್ ಲಂಚ್ ಪಾಕೆಟ್ಟುಗಳನ್ನು ಎಲ್ಲರಿಗೂ ತಂದುಕೊಟ್ಟ.

ಅದರಲ್ಲಿ ಒಂದು ದೊಡ್ಡ ಬ್ರೆಡ್ಡು, ೫೦೦ ಗ್ರಾಂ ಯೋಗರ್ಟ್ ಪ್ಯಾಕ್ ಮತ್ತು ಕೆಂಪು ಬಣ್ಣದ ಮಟನ್ ಸ್ಟಿಕ್ಕ್‌ಗಳಿದ್ದವು. ಮಾಂಸದ ವಾಸನೆ ಚನ್ನಾಗಿರಲಿಲ್ಲ. ಯೋಗರ್ಟ್ ಕೂಡ ಅಷ್ಟಕ್ಕಷ್ಟೆ ಎರಡನ್ನು ರುಚಿ ನೋಡಿ ಬಿಸಾಕಿದೆ. ಒಂದೆರಡು ಬ್ರೆಡ್ಡು ತುಂಡುಗಳನ್ನು ತಿಂದು ಉಳಿದಿದ್ದನ್ನು ಪಕ್ಕದಲ್ಲಿಟ್ಟುಕೊಂಡೆ. ಸಾಯಂಕಾಲ ೪ ಗಂಟೆಗೆ ನಮ್ಮ ಬಸ್ಸು ಡಟ್‌ಲಾಂಗ್ ಎನ್ನುವ ಪಟ್ಟಣದೊಳಕ್ಕೆ ನುಗ್ಗಿತು. ಇಡೀ ಊರು ಮಣ್ಣು ಧೂಳಿನಿಂದ ತುಂಬಿಹೊಗಿತ್ತು. ಒಂದು ಕಡೆ ಎರಡು ಮೂರು ಅಂತಸ್ತುಗಳ ಮನೆಗಳಿದ್ದರೆ, ಮಧ್ಯ ಮಧ್ಯ ಮುರಿದ ಗೋಡೆಗಳ ಹೆಂಚಿನ ಮನೆಗಳು ಊರೆಲ್ಲ ಹರಡಿಕೊಂಡಿದ್ದವು. ಎಲ್ಲಾ ಮನೆಗಳ ಮೇಲೂ ಮೆಕ್ಕೆಜೋಳದ ತೆನೆಗಳನ್ನು ಹೇರಳವಾಗಿ ಒಣಗಿ ಹಾಕಲಾಗಿತ್ತು. ತರಕಾರಿ ಅಂಗಡಿಗಳು, ಪೆಟ್ಟಿಗೆ ಅಂಗಡಿಗಳು, ದಾಬಾ ಅಂಗಡಿಗಳು ಎಲ್ಲೆಲ್ಲೂ ಇವೆ. ಜನರ ಮೈ ಮುಖಗಳೆಲ್ಲ ಕಪ್ಪು ಧೂಳಿನಿಂದ ತುಂಬಿಹೋಗಿವೆ. ಇಲ್ಲೆ ಎಲ್ಲಾದರು ಇದ್ದಿಲು ಕಾರ್ಖಾನೆ ಇರಬಹುದು ಎಂದುಕೊಂಡೆ. ಒಟ್ಟಿನಲ್ಲಿ ಅದೊಂದು ಇದ್ದಿಲು ಮತ್ತು ಸಿಮೆಂಟ್ ಕಾರ್ಖಾನೆಗಳಿರುವ ಭಾರತದ ಹಳ್ಳಿಯಂತೆ ಕಾಣಿಸುತ್ತಿತ್ತು. ಹಳ್ಳಿ ಪಟ್ಟಣಗಳಿಗೆ ಇಷ್ಟೊಂದು ವ್ಯತ್ಯಾಸವೆ? ಅರ್ಥವಾಗಲಿಲ್ಲ. ಇಂಡಿಯಾದಂತೆ ಚೀನಾದಲ್ಲಿಯೂ ಪಟ್ಟಣ ಮತ್ತು ನಗರಗಳು ಹಳ್ಳಿಗಳನ್ನು ತುಳಿದುಕೊಂಡು ಬೆಳೆದು ನಿಂತಿರುವಂತೆ ತೋರುತ್ತಿತ್ತು.

ಚೀನಿಯರು ಬೀಜಿಂಗ್ ಮಹಾನಗರವನ್ನು ಪ್ರಪಂಚಕ್ಕೆ ತೋರಿಸಲು ಒಂದು ಷೋಪೀಸ್ ನಗರವನ್ನಾಗಿ ಮಾಡಿಟ್ಟುಕೊಂಡಿದ್ದಾರೆಯೆ ಎನ್ನುವ ಯೋಚನೆ ಬಂದಿತು. ಇದಕ್ಕಿಂತ ಅದ್ಭುತವಾದ ಚೀನಾದ ಇನ್ನೊಂದು ನಗರವೆಂದರೆ ಷಾಂಗಾಯ್. ಆ ನಗರ ಹೇಗಿರಬಹುದು? ಸಾಯಂಕಾಲ ೫ ಗಂಟೆಗೆ ಸರಿಯಾಗಿ ಪಶ್ಚಿಮದಲ್ಲಿ ಸೂರ್ಯ ಅಸ್ತಂಗತನಾದ. ಬೀಜಿಂಗ್‌ನಲ್ಲಿ ೪:೪೫ಕ್ಕೆ ಸೂರ್ಯನು ಮುಳುಗಿದರೆ ಇಲ್ಲಿ ೫ ಗಂಟೆಗೆ ಕಾಣದಾದ. ನಮ್ಮ ಪ್ರಯಾಣ ಬೀಜಿಂಗ್‌ನಿಂದ ಉತ್ತರ ಪಶ್ಚಿಮಕ್ಕೆ ಸಾಗಿತ್ತು. ಇನ್ನೆಷ್ಟು ದೂರ? ಇನ್ನೆಷ್ಟು ದೂರ? ಎಂದುಕೊಳ್ಳುತ್ತ ಸಾಯಂಕಾಲ ೭ ಗಂಟೆಗೆ ನಮ್ಮ ಬಸ್ಸು ಹುಹಟ್ ಹೆಸರಿನ ನಗರದ ಒಂದು ಹೋಟಲ್ ಮುಂದೆ ನಿಂತುಕೊಂಡಿತು.

ಬಸ್ಸು ಇಳಿದಿದ್ದೆ "ಬೀಜಿಂಗ್‌ನಿಂದ ಇಲ್ಲಿಗೆ ಎಷ್ಟು ದೂರ?" ವಾಂಗ್‌ಗೆ ಕೇಳಿದೆ. "ಬೀಜಿಂಗ್ ಇಲ್ಲಿಗೆ ೭೦೦ ಕಿ.ಮೀ. ದೂರ. ಆದರೆ ರಸ್ತೆ ಸರಿಯಿಲ್ಲದ ಕಾರಣ ೧೫೦ ಕಿ.ಮೀ. ಹೆಚ್ಚು ದೂರವನ್ನು ಸುತ್ತಿಕೊಂಡು ಬಂದೆವು" ಎಂದರು. ಅಂದರೆ ಬೆಳಗ್ಗೆ ೮:೩೦ ರಿಂದ ಸಾಯಂಕಾಲ ೭ ಗೆ ೮೫೦ ಕಿ.ಮೀ. ದಾರಿ ಸವೆದಿದ್ದವು. ರಾಷ್ಟ್ರೀಯ ಹೆದ್ದಾರಿ ಮತ್ತು ಎಕ್ಸ್‌ಪ್ರೆಸ್ ಹೆದ್ದಾರಿಗಳನ್ನು ಮಾಡಿರುವುದರಿಂದ ರಸ್ತೆಗಳಲ್ಲಿ ಸುಮಾರು ೧೦ ಕಡೆ ರಸ್ತೆ ತೆರಿಗೆಯನ್ನು ಪಾವತಿಸಿಲಾಗಿತ್ತು. ವಾಂಗ್ ಅವರು "ಲಗೇಜನ್ನು ಬಸ್ಸಿನಲ್ಲಿಯೆ ಬಿಟ್ಟು ಬನ್ನಿ. ಸಫರ್ ಮುಗಿಸಿದ ಮೇಲೆ ಹೋಟಲಿಗೆ ಹೋಗೋಣ" ಎಂದರು. ಎಲ್ಲರೂ ಇಳಿದು ರೆಸ್ಟಾರೆಂಟಿನ ಒಳಗೆ ನಡೆದೆವು. ಆಗಲೆ ಅಲ್ಲೊಬ್ಬರು ಎಲ್ಲವನ್ನು ವ್ಯವಸ್ಥೆ ಮಾಡಿ ನಮಗಾಗಿ ಕಾಯುತ್ತಿದ್ದರು.

ಎಲ್ಲರೂ ಟೇಬಲುಗಳ ಮುಂದೆ ಕುಳಿತುಕೊಂಡೆವು. ನಾವೀಗ ಇನ್ನರ್ ಮಂಗೋಲಿಯಾದ ರಾಜಧಾನಿ ಹುಹಟ್ ನಗರದಲ್ಲಿದ್ದೆವು. ಆ ಪ್ರದೇಶ ಒಂದು ಕಾಲದಲ್ಲಿ ಮಂಗೋಲಿಯ ದೇಶದ ವಶವಾಗಿದ್ದು ಈಗ ಚೀನಾ ದೇಶದಲ್ಲಿದೆ. ಈ ಪ್ರದೇಶದ ಜೊತೆಗೆ ಚೀನಾದ ಹೆಚ್ಚು ಪ್ರದೇಶವನ್ನು ಒಂದು ಕಾಲದಲ್ಲಿ ಪ್ರಪಂಚ ಪ್ರಖ್ಯಾತ ಚರಿತ್ರೆಯ ಅತಿಭಯಂಕರ ಜಂಗೀಸ್‌ಖಾನ್ ಆಳಿದ್ದ. ಮತ್ತೊಂದು ಅಂತರಾಷ್ಟ್ರೀಯ ಎಂಜಿಲು ಬಫೆ ನಡೆಯಿತು. ಚಿಕನ್, ಮಟನ್, ಬೀಫ್ ಜೊತೆಗೆ ಹಲವು ಮಂಗೋಲಿಯ ತಿಂಡಿಗಳನ್ನು ಬಡಿಸಲಾಯಿತು. ಜೊತೆಗೆ ಸಾಫ್ಟ್ ಮತ್ತು ಹಾರ್ಡ್ ಡ್ರಿಂಕ್ಸ್ ಇದ್ದವು. ಊಟ ಮುಗಿಸಿ ಅಲ್ಲಿಂದ ನಮಗೆ ಕಾಯ್ದಿರಿಸಿದ್ದ ಹೋಟಲ್ ಕಡೆಗೆ ಹೊರಟೆವು. ಹೋಟಲ್ ಸಿಬ್ಬಂದಿ ಪಾಸ್‌ಪೋರ್ಟ್ ಮತ್ತು ವೀಸಾ ಪರಿಶೀಲಿಸಿದ ಮೇಲೆ ಎಲ್ಲರಿಗೂ ಕೋಣೆಯ ಸಂಖ್ಯೆ ಇರುವ ಮ್ಯಾಗ್ನೆಟ್ ಕಾರ್ಡ್‌ಗಳನ್ನು ನೀಡಿತು.

ಬೀಜಿಂಗ್‌ನ ಜಿನ್‌ಡಾಡು ಹೋಟಲ್‌ಗಿಂತ ಈ ಹೋಟಲ್ ಇನ್ನೂ ಚನ್ನಾಗಿತ್ತು. ಚೀನಾದವರು ಬೀಜಿಂಗ್ ಮತ್ತು ಷಾಂಗಾಯ್ ನಗರಗಳನ್ನು ಮಾತ್ರ ಷೋಪೀಸುಗಳನ್ನಾಗಿ ಮಾಡಿಕೊಂಡಿದ್ದಾರೆ ಎನ್ನುವ ನನ್ನ ಯೋಚನೆಯನ್ನು ಬದಲಿಸಿಕೊಳ್ಳಬೇಕಾಯಿತು. ಯಾಕೆಂದರೆ ಎಲ್ಲಾ ನಗರಗಳನ್ನು ಅಭಿವೃದ್ಧಿ ಗೊಳಿಸುತ್ತಿರುವುದು ಕಾಣಿಸುತ್ತಿತ್ತು. ಹುಹಟ್ ನಗರ ಭವ್ಯವಾದ ಹೋಟಲುಗಳು,

ಗಗನಚುಂಬಿ ಕಟ್ಟಡಗಳು ಮತ್ತು ವಿದ್ಯುತ್ ದೀಪಗಳಿಂದ ಜಗಮಗಿಸುತ್ತಿತ್ತು. ರಾತ್ರಿ ಮಲಗಿಕೊಳ್ಳುವುದಕ್ಕಿಂತ ಮುಂಚೆ ಒಂದಷ್ಟು ನೋಟ್ಸ್ ಮಾಡಿಕೊಂಡು ೧೦ ಗಂಟೆಗೆ ಮಲಗಿಕೊಂಡೆ. ಎಂಟಿವಿ ಮತ್ತು ಒಂದು ಚಾನಲ್‌ನಲ್ಲಿ ಇಂಗ್ಲಿಷ್ ಸಿನಿಮಾ ಬರುತ್ತಿದ್ದು ಉಳಿದೆಲ್ಲವು ಚೀನಿ ಭಾಷೆಯ ಚಾನಲುಗಳು.

ಮರುದಿನ ಬೆಳಗ್ಗೆ ಅಲ್ಲಿಂದ ಇನ್ನೂ ೪೫೦ ಕಿ.ಮೀ. ದೂರವಿರುವ ಇನ್ನೊಂದು ಪಟ್ಟಣಕ್ಕೆ ಹೋಗಬೇಕಾಗಿದ್ದು ೭:೩೦ ಕ್ಕೆ ಉಪಹಾರ ಮುಗಿಸಿದ ಮೇಲೆ ಬಸ್ಸು ಹೊರಡುವುದಾಗಿ ತಿಳಿಸಲಾಗಿತ್ತು. ಬೆಳಗ್ಗೆ ೬ ಗಂಟೆಗೆ ಎದ್ದು ಷವರ್‌ನಲ್ಲಿ ನೀರು ಬಿಟ್ಟರೆ ನೀರು ಬರುತ್ತಿಲ್ಲ. ಭಾತ್ ಟಬ್‌ಗೆ ಮಾತ್ರ ಬಿಸಿ ನೀರು ಬರುತ್ತಿತ್ತು. ಗಡ್ಡ ಶೇವ್ ಮಾಡಿ, ಹಲ್ಲು ಉಜ್ಜಿಕೊಂಡು ಎರಡನೇ ಕೆಲಸವನ್ನು ಮುಗಿಸಿಕೊಂಡೆ. ಅನಂತರ ಬಟ್ಟೆ ಬಿಚ್ಚಿ ಮೈಗೆ ಸೋಪನ್ನು ಹಚ್ಚಿಕೊಂಡು ಬಿಸಿ ನೀರಿನ ಟಬ್ಬಿನಲ್ಲಿ ಸ್ವಲ್ಪ ಹೊತ್ತು ಉರುಳಾಡಿ ಎದ್ದೆ. ಯಾವುದೇ ಹೋಟಲಿನಲ್ಲಿ ಬಕೆಟ್ಟಾಗಲಿ ಮಗ್ಗಾಗಲಿ ಇರಲಿಲ್ಲ. ಎರಡನೇ ವಿಷಯಕ್ಕೆ ಬಂದಾಗಲು ಟಿಸ್ಯೂ ಪೇಪರೆ ಗತಿಯಾಗುತ್ತಿತ್ತು. ಹೋಟಲಿನಲ್ಲಿದ್ದಾಗ ಯಾವುದೋ ಒಂದು ರೀತಿಯಲ್ಲಿ ನಿವಾರಿಸಿಕೊಳ್ಳಬಹುದು. ಆದರೆ ಪ್ರಯಾಣದಲ್ಲೂ ಟಿಸ್ಯೂ ಪೇಪರೆ ಇರುತ್ತಿತ್ತು. ಆಗಂತೂ ಹಿಂಸೆಯಾಗಿಬಿಡುತ್ತಿತ್ತು.



ಇನ್ನರ್ ಮಂಗೋಲಿಯಾ ರಾಜ್ಯದ ಕಡೆಗೆ ಹೋಗುವ ದಾರಿಯಲ್ಲಿ ಹಿಮ ಬೀಳುತ್ತಿರುವುದು

ನಾನು ಚಿಕ್ಕವನಾಗಿದ್ದಾಗ ನಮ್ಮೂರಿನಿಂದ ಮಿಡ್ಲ್‌ಸ್ಕೂಲಿಗೆ ಹೋಗುವಾಗ ಘಟ್ಟುಮಾದುಮಂಗಳ ಮತ್ತು ನಮ್ಮೂರು ನಡುವೆ ಒಂದು ಕೆರೆಯಿತ್ತು. ಯಂತಹ ಪರಿಸ್ಥಿತಿಯಲ್ಲೂ ಕೆರೆಯಲ್ಲಿ ಸ್ವಲ್ಪ ನೀರು ಇದ್ದೆ ಇರುತ್ತಿತ್ತು. ಶಾಲೆಗೆ ಹೋಗುವಾಗ ಮತ್ತು ಬರುವಾಗ ಎರಡಕ್ಕೆ ಬಂದರೆ ಕೆರೆಯ ಆಸರೆ ಪಡೆಯುತ್ತಿದ್ದೆ. ಒಂದು ವೇಳೆ ಕೆರೆ ಹಾದು ಬಾರ್ಲಿದಿನ್ನೆ ದಾಟಿದರೆ ಘಟ್ಟುಮಾದುಮಂಗಳದವರೆಗೆ ನೀರು ದೊರಕುತ್ತಿರಲಿಲ್ಲ. ಹತ್ತಾರು ಸಲ ಯೋಚಿಸಿ ಕಲ್ಲುಗಳಿಂದ ಇಲ್ಲ ಎಲೆಗಳಿಂದ ಒರೆಸಿಕೊಂಡು ವಿಧಿಯಿಲ್ಲದೆ

ಹಾಗೆ ಶಾಲೆಗೆ ಹೋಗುತ್ತಿದ್ದೆ. ಬರುವಾಗ ಜ್ಞಾಪಕವಿಟ್ಟುಕೊಂಡು ಕೆರೆಯಲ್ಲಿ ತೊಳೆದುಕೊಂಡು ಊರಿಗೆ ಬರುತ್ತಿದ್ದೆ. ಯಾವಾಗಲಾದರು ಒಮ್ಮೆ ಮರೆತು ಮನೆ ಒಳಕ್ಕೆ ಹೋಗಿಬಿಟ್ಟರೆ ರಾತ್ರಿಯೆಲ್ಲ ಅದೇ ಯೋಚನೆ. ಮರುದಿನ ಹೊರಗೆ ಹೋಗಿ ನೀರಿನಿಂದ ತೊಳೆದುಕೊಂಡರೆ ಮಾತ್ರ ಮನಸ್ಸಿಗೆ ಸಮಾಧಾನವಾಗುತ್ತಿತ್ತು.

ಆದರೆ ಈಗ ಇಡೀ ಯುರೋಪ್ ಖಂಡವೆ ಟಿಸ್ಯೂ ಪೇಪರಿನಲ್ಲಿ ಕೆಲಸ ಮುಗಿಸುತ್ತಿದೆ. ಸಾಲದ್ದಕ್ಕೆ ಆಫ್ರಿಕಾ, ಅಮೆರಿಕಾ, ಆಸ್ಟ್ರೇಲಿಯಾ, ಚೀನಾ ಹಾಗೂ ತೃತೀಯ ಜಗತ್ತಿನ ಅನೇಕ ದೇಶಗಳು ಅದನ್ನು ಪಾಲಿಸುತ್ತಿವೆ. ಇದೂ ಕೂಡ ಜಾಗತೀಕರಣದ ಒಂದು ಅದ್ಭುತ ಕೊಡುಗೆ. ಎಲ್ಲಿಂದ ಎಲ್ಲಿಗೊ ಹೋಗಿಬಿಟ್ಟೆನಲ್ಲವೆ? ಊಟದಲ್ಲಿ ಉಪ್ಪಿನಕಾಯಿ ಇದ್ದರೆ ತಾನೆ ರುಚಿ.

* * *

ಯಾವುದಕ್ಕೂ ಒಳ್ಳೆಯದೆಂದು ಬೆಳಗ್ಗೆ ಗಡದ್ ತಿಂಡಿ ತಿಂದು ಹೋಟಲ್ ಹೊರಗೆ ಬಂದು ನಿಂತುಕೊಂಡೆವು. ಹೋಟಲಿನ ಹೊರಗೆ ನಾಲ್ಕಾರು ಸಣ್ಣ ಸಣ್ಣ ಗೋಲಾಕಾರದ ಪುಟ್ಟ ಪುಟ್ಟ ಮನೆಗಳಿದ್ದವು. ಆ ಮನೆಗಳ ಮುಂದೆ ಕಪ್ಪು ಶಿಲೆಯಲ್ಲಿ ಕಡೆದಿರುವ ಕುದುರೆಗಳು, ಅವುಗಳ ಮೇಲೆ ಯೋಧರು ಕತ್ತಿಗಳನ್ನು ಹಿಡಿದು ಕುಳಿತಿದ್ದಾರೆ. ಆ ಮನೆಗಳ ಹತ್ತಿರಕ್ಕೆ ಹೋಗಿ ನಿಧಾನವಾಗಿ ಒಳಕ್ಕೆ ಇಣಿಕಿನೋಡಿದೆ. ಒಳಗೆ ಒಂದು ಸಣ್ಣ ಮೇಜು ಮತ್ತು ಕೆಳಗೆ ಕೆಂಪು ಕಾರ್ಪೆಟ್ಟು ಹಾಸಲಾಗಿದೆ. ಒಂದು ಹುಡುಗಿ ಧೂಳನ್ನು ಹೊಡೆಯುತ್ತಿದ್ದಾಳೆ. ಇನ್ನೊಂದು ಕೋಣೆಯಲ್ಲಿ ಇಣಿಕಿದೆ. ಅಲ್ಲಿ ಕೆಲವು ಕುರ್ಚಿಗಳು ಮಾತ್ರ ಇದ್ದವು. ಮಧ್ಯ ಒಂದು ಫೋಟೊ ಇದೆ. ಹುಡುಗಿಯನ್ನು ಕೇಳುವ ಯೋಚನೆ ಬಂದರೂ ಭಾಷೆಯ ತೊಂದರೆಯಿಂದ ಏನೂ ಪ್ರಯೋಜನವಿಲ್ಲವೆಂದು ಸುಮ್ಮನಾದೆ. ಅಲ್ಲಿಂದ ಕುದುರೆಗಳಿರು ಸ್ಥಳಕ್ಕೆ ಬಂದೆ. ಅಷ್ಟೊತ್ತಿಗೆ ವಾಂಗ್ ಅಲ್ಲಿಗೆ ಬಂದಿದ್ದು "ಈ ಕುದುರೆ ಮೇಲೆ ಇರುವವರು ಯಾರು? ಚೆಂಗೀಸ್‌ಖಾನೆ?" ಕೇಳಿದೆ. "ಪ್ರಾಬೆಬಲಿ ಎಸ್" ಎಂದರು. ಕುದುರೆಗಳ ಹಿಂದೆ ಸ್ವಲ್ಪ ದೂರದಲ್ಲಿ ಸಿಮೆಂಟ್‌ನಲ್ಲಿ ಮಾಡಿದ್ದ ಒಂದು ಕುರಿ, ಒಂದು ಮೇಕೆ ಮಧ್ಯದಲ್ಲಿ ಒಂದು ಮರಿ ಇತ್ತು.

ಮಿನಿಬಸ್ಸು ಬೆಳಗ್ಗೆ ೮:೩೦ಕ್ಕೆ ಹುಹಟ್ ನಗರವನ್ನು ಬಿಟ್ಟು ಗೋಬಿ ಮರಳುಗಾಡಿನ ಕಡೆಗೆ ನೆನ್ನೆಯಂತೆ ಇಲ್ಲೂ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಗಂಟೆಗೆ ೧೨೦ ಕಿ.ಮೀ ವೇಗದಲ್ಲಿ ಧಾವಿಸುತ್ತಿತ್ತು. ಬಲಗಡೆ ಬೋಳುಬೆಟ್ಟಗಳು, ಎಡಗಡೆ ಸಮತಟ್ಟಾದ ಬೂದು ಮಣ್ಣಿನ ನೆಲ. ಮಧ್ಯ ಮಧ್ಯ ಮಣ್ಣು ಇಟ್ಟಿಗೆ ಹೆಂಚಿನ ಮನೆಗಳಿರುವ ಹಳ್ಳಿಗಳು ಕಾಣಿಸಿಕೊಳ್ಳುತ್ತಿದ್ದವು. ಮನೆಗಳ ಮೇಲೆ ಬಿಸಿಲಿಗೆ ಒಣಗಾಕಿರುವ ಮೆಕ್ಕೆಜೋಳದ ತೆನೆಗಳು. ಅಲ್ಲಲ್ಲಿ ಹೊಲಗಳಲ್ಲಿ ಕೆಲಸ ಮಾಡುತ್ತಿರುವ ರೈತರು. ನಡುನಡುವೆ ಕುರಿ ಕಾಯುತ್ತಿರುವ ಕುರುಬರು. ಎಲ್ಲಿ ನೋಡಿದರು ಎಲೆಗಳನ್ನು ಉದುರಿಸಿಕೊಂಡು ನಿಂತಿರುವ ಒಂದೇ ರೀತಿಯ ಮರಗಳು.

ನೆನ್ನೆಯಿಂದ ಸುಮಾರು ೧೦೦೦ ಕಿ.ಮೀ. ದಾರಿಯನ್ನು ಸವೆದಿದ್ದರು ಅಪ್ಪಿತಪ್ಪಿಯೂ ಎಲ್ಲೂ ಹುಣಿಸೆ, ಬೇವು ಅಥವಾ ಹೊಂಗೆಮರಗಳು ನನ್ನ ಕಣ್ಣಿಗೆ ಬೀಳಲಿಲ್ಲ. ಸಮಯ ೧೨ ಗಂಟೆಯಾದರೂ ಒಂದೇ ರೀತಿಯ ಚಿತ್ರಣಗಳು.

ವಾಂಗ್ ಸಣ್ಣ ಮೈಕ್ ತೆಗೆದುಕೊಂಡು "ಇದು ಬೋಟೌವ್ ಸಿಟಿ. ಪ್ರಪಂಚದ ಶೇಕಡ ೮೦ ರಷ್ಟು ರೇರ್ ಅರ್ಥ್ಸ್ ಈ ಪ್ರದೇಶದಲ್ಲಿ ದೊರಕುತ್ತವೆ" ಎಂದರು. ಹಿಂದೆ ಕುಳಿತಿದ್ದ ನರೂಡ "ಈ ರೇರ್ ಅರ್ಥ್ಸ್ ಯಾವ ಶಿಲೆಗಳಲ್ಲಿ ದೊರಕುತ್ತವೆ?" ಕೇಳಿದರು. "ರೂಪಾಂತರ ಹೊಂದಿದ ಶಿಲೆಗಳು ಮತ್ತು ಅಗ್ನಿಶಿಲೆಗಳಲ್ಲಿ ದೊರಕುತ್ತವೆ" ಎಂದರು ವಾಂಗ್. ನನ್ನ ಪಕ್ಕದಲ್ಲಿದ್ದ ದಾಸ್ "ಪರವಾಗಿಲ್ಲ ಮಂಗೋಲಿಯಾದಲ್ಲೂ ಮುಖ್ಯ ಖನಿಜಗಳಿವೆ" ಎಂದರು. ಅಲ್ಲಿಂದ ಮುಂದಕ್ಕೆ ಸ್ವಲ್ಪ ಸ್ವಲ್ಪ ನೀರು ಕಾಣಿಸಿಕೊಂಡರು ಮಣ್ಣು ಮಾತ್ರ ಅದೇ ರೀತಿಯದು, ಬಸ್ಸು ಹೋಗುತ್ತಿದ್ದಂತೆ ಎರಡು ಕಡೆಯೂ ಕಾಲುವೆ ನೀರಾವರಿ ಮಾಡಿರುವುದು ಕಾಣಿಸುತ್ತಿತ್ತು. ಎಲ್ಲಿ ನೋಡಿದರು ಭತ್ತ, ಮೆಕ್ಕೆಜೋಳ ಮತ್ತು ಜೋಳದ ರಾಶಿ ರಾಶಿ ಬಣಿವೆಗಳು. ರೈತರು ನೆಲವನ್ನು ಉತ್ತಿ ಮತ್ತೊಂದು ಬೆಳೆಗೆ ಅಣಿಯಾಗುತ್ತಿದ್ದರು. ಹತ್ತಿರದಲ್ಲಿ ಇಲ್ಲೆ ಎಲ್ಲೊ ಒಂದು ದೊಡ್ಡ ಅಣೆಕಟ್ಟು ಇರಬೇಕು ಎಂದುಕೊಂಡೆ. ಆದರೆ ಅಲ್ಲಿಂದ ಸುಮಾರು ೧೦೦ ಕಿ.ಮೀ. ದೂರ ಹೋದರು ಅಣೆಕಟ್ಟು ಕಾಣಿಸಲಿಲ್ಲ. ಆ ಪ್ರದೇಶವೆಲ್ಲ ನೀರಾವರಿ ಪ್ರದೇಶವಾಗಿತ್ತು. ಹಳ್ಳಿಗಳು ದೂರದೂರಕ್ಕೆ ಕಾಣಿಸುತ್ತಿದ್ದವು. ಆದರೆ ಅಲ್ಲೆಲ್ಲೂ ಅಣೆಕಟ್ಟು ಇರಲಿಲ್ಲ. ನದಿಯೊಂದರಿಂದ ನೇರವಾಗಿ ಕಾಲುವೆಗಳನ್ನು ಮಾಡಿ ನೀರನ್ನು ಹೊಲಗಳ ಕಡೆಗೆ ತಿರುಗಿಸಿಬಿಟ್ಟಿದ್ದರು.

ಮಧ್ಯಾಹ್ನ ೨ ಗಂಟೆಗೆ ಒಂದು ಹೋಟಲ್ ಹತ್ತಿರ ಬಸ್ಸು ನಿಂತುಕೊಂಡಿತು. ಲಗೇಜ್ ಇಳಿಸಿಕೊಂಡ ಮೇಲೆ ಮತ್ತೊಮ್ಮೆ ಪಾಸ್‌ಪೋರ್ಟ್ ಮತ್ತು ವೀಸಾ ಪರಿಶೀಲಿಸಿ ಹೋಟಲ್‌ನಲ್ಲಿ ಕೋಣೆಗಳನ್ನು ಕೊಟ್ಟರು. ಮಧ್ಯಾಹ್ನ ಒಳ್ಳೆ ಮಂಗೋಲಿ ಶೈಲಿ ಊಟ ಮಾಡಿ ವಿಶ್ರಾಂತಿ ಪಡೆದುಕೊಂಡೆವು. ಬಟ್ಟೆಗಳು ಬಹಳ ಕೊಳಕಾಗಿದ್ದರಿಂದ ಬಿಸಿ ನೀರಿನಲ್ಲಿ ತೊಳೆದು ಒಣಗಾಕಿದೆ.

ಸಾಯಂಕಾಲ ೪:೩೦ ಕ್ಕೆ ಊರು ಸುತ್ತಿ ಬರೋಣವೆಂದು ನಾವು ಮೂವರು ಹೊರಟೆವು. ನಮ್ಮ ಹೋಟಲ್ ಹ್ಯಾಂಗಿನ್‌ಹೂಕ್ಯೂ ಎಂಬ ಊರಿನಿಂದ ಸ್ವಲ್ಪ ದೂರದ ಹೆದ್ದಾರಿಯಲ್ಲಿತ್ತು. ಯಾವುದಕ್ಕೂ ಒಳ್ಳೆಯದೆಂದು ಶರ್ಟ್ ಮೇಲೆ ಒಂದು ಆಫ್ ಸ್ವೆಟರು, ಅದರ ಮೇಲೆ ಜಾಕೆಟ್ ಹಾಕಿಕೊಂಡಿದ್ದೆ. ತಲೆ ಮೇಲೆ ಉಣ್ಣೆ ಟೋಪಿ, ಕೈಗಳಿಗೆ ಗ್ಲೋಸ್ ಹಾಕಿಕೊಂಡಿದ್ದೆ. ಜಗಬಂಧು ಎರಡು ಸ್ವೆಟರುಗಳ ಮೇಲೆ ಕೋಟಾಕಿಕೊಂಡು ತಲೆಗೆ ಮಫ್ಲೇರ್ ಸುತ್ತಿಕೊಂಡು ಕೈಗಳಿಗೆ ಗ್ಲೋಸ್ ಹಾಕಿಕೊಂಡಿದ್ದರು. ಇನ್ನೂ ದಾಸ್ ನಮಗಿಂತ ಹತ್ತು ವರ್ಷ ಚಿಕ್ಕವನಾಗಿದ್ದು ಒಂದು ಜಾಕೆಟ್ ಮಾತ್ರ ಹಾಕಿಕೊಂಡಿದ್ದ. ಆಗಾಗ ನಾನು ಇಬ್ಬರನ್ನು ಚುಡಾಯಿಸುತ್ತಿದ್ದೆ.

ಜಗಬಂಧು ಅಸಿಸ್ಟೆಂಟ್ ಕೆಮಿಷ್ಟ್ ಆಗಿದ್ದು, ದಾಸ್ ಜೂನಿಯರ್ ಜಿಯಾಲಜಿಸ್ಟ್ ಆಗಿದ್ದರು. ನಾನು ಸೀನಿಯರ್ ಜಿಯಾಲಜಿಸ್ಟ್ ಆಗಿದ್ದು, ಅವರು ಏನೇ ಮಾಡಿದರು ನನ್ನನ್ನು ಕೇಳಿಯೆ ಮಾಡುತ್ತಿದ್ದರು. ನಾನು, ಮೂವರು ಬೀರು ಕುಡಿಯಬೇಕು ಅಂದರೆ "ಸಾಭ್ ಆಫ್ ಖಾಲಿ ಹುಕ್ಕುಂ ದೀಜಿಯೆ. ಬಸ್ಸ್, ಪಿರ್ ಆಫ್ ದೇಕೀಯೆ" ಎನ್ನುತ್ತಿದ್ದ ದಾಸ್. ಅದನ್ನು ಪಾಲಿಸುತ್ತಲೂ ಇದ್ದರು. ದಿನಾ ಸಾಯಂಕಾಲ ೭ ಗಂಟೆಗೆ ಸಫರ್ ಮುಗಿಸಿದ್ದೆ ಇಬ್ಬರೂ ನನ್ನ ಕೋಣೆಗೆ ಬರುತ್ತಿದ್ದರು. ಮೂವರು ಒಂದೆರಡು ಗಂಟೆ ಹರಟೆ ಹೊಡೆದ ಮೇಲೆ ತಮ್ಮ ತಮ್ಮ ಕೋಣೆಗಳಿಗೆ ಹೋಗಿ ಮಲಗಿಕೊಳ್ಳುತ್ತಿದ್ದರು.

ಚೀನಿಯರ ಜೊತೆಗೆ ಇಂಗ್ಲಿಷ್‌ನಲ್ಲಿ ಮಾತನಾಡುವುದು ಒಂದು ದೊಡ್ಡ ಸಾಹಸವಾದರೆ ಈ ಜಗಬಂಧುವಿನ ಬಂಗ್ಲಾ ಆಕ್ಸೆಂಟ್‌ನ ಇಂಗ್ಲಿಷ್‌ನಿಂದ ನನಗೆ ಆಗಾಗ ತಲೆ ಚಿಟ್ಟಿಡಿದು ಹೋಗುತ್ತಿತ್ತು. "ದಾಸ್ ಈ ಚೀನಿಯರ ಜೊತೆಗಾದರು ಹೋರಾಡಬಹುದು ಆದರೆ ಈ ಜಗಬಂಧುಪಿನ ಬಂಗ್ಲಾ ಇಂಗ್ಲಿಷ್ ಸ್ವಲ್ಪಾನು ಅರ್ಥಾ ಆಗ್ತಾಯಿಲ್ಲ" ಎಂದೆ. "ಹ ಕ್ಯಾ ಕರೆ ಸಾಬ್. ಆಫ್ ತು: ಹಮಾರ ಲೀಡರ್ ಹೈ ಸೈನಾತು: ಪಡೆಗಾ" ಎಂದರು.



ಇನ್ನರ್ ಮಂಗೋಲಿಯಾ ರಾಜ್ಯದ ರಸ್ತೆ ಪಕ್ಕದಲ್ಲಿ ಕಾಣಿಸಿದ ಒಂದು ಹಳ್ಳಿಯ ನೋಟ

ಉದ್ದವಾದ ರಸ್ತೆ. ಮೂವರು ಬಲಗಡೆಯೆ ನಡೆಯುತ್ತಿದ್ದೇವೆ. ಸಮಯ ೪:೩೦. ಆಗಲೆ ಮಂಜು ಆಕಾಶವನ್ನು ಮುಚ್ಚಿಕೊಂಡಿದ್ದು, ಸೂರ್ಯನು ತಣ್ಣಗೆ ಮಂಜಿನ ಹಿಂದೆ ಚಳಿಗೆ ನಡುಗುತ್ತಿದ್ದಾನೆ. ಸೈಕಲ್‌ಗಳು, ದ್ವಿಚಕ್ರವಾಹನಗಳು, ಮಧ್ಯ ಮಧ್ಯ ಬಸ್ಸುಗಳು ಹೋಗುತ್ತಿವೆ. ರಸ್ತೆಯಲ್ಲಿ ಓಡಾಡುತ್ತಿರುವವರು ಮತ್ತೆ ಮತ್ತೆ ನಮ್ಮ ಕಡೆಗೆ ನೋಡುತ್ತ ಹೋಗುತ್ತಿದ್ದಾರೆ. ಅದರಲ್ಲೂ ಮಹಿಳೆಯರಂತೂ ತದೇಕಚಿತ್ತದಿಂದ ನಮ್ಮ ಕಡೆಗೆ ನೋಡುತ್ತ ಮುಸಿಮುಸಿ ನಗುತ್ತಾ ದಾರಿ ತಪ್ಪಿದವರಂತೆ ಹೋಗುತ್ತಿದ್ದಾರೆ.

ಬೀಜಿಂಗ್‌ನ ಜಿನ್‌ಡಾಡು ಹೋಟಲಿನಲ್ಲಿ ಮೊದಲ ದಿನ ರಾತ್ರಿ ನರಡೂ ಜೊತೆಗೆ ಒಂದೇ ಕೋಣೆಯಲ್ಲಿ ಮಲಗಿದ್ದಾಗ ನಮ್ಮ ಜೊತೆಗೆ ತರಬೇತಿಗಾಗಿ ಬಂದಿದ್ದ ದಕ್ಷಿಣ ಆಫ್ರಿಕಾದ ನೀಗ್ರೋಗಳನ್ನು ಬೀಜಿಂಗ್‌ನ ಬೀದಿಗಳಲ್ಲಿ ಚೀನಿಯರು ಆಶ್ಚರ್ಯದಿಂದ ಸುತ್ತುವರಿದು ಅವರ ಕಪ್ಪು ಮೈಯನ್ನೆಲ್ಲ ಮುಟ್ಟಿ, ಸವರಿ ನೋಡಿ ಅವರ ಜೊತೆಗೆ ಫೋಟೊಗಳನ್ನು ಹಿಡಿದುಕೊಂಡಿದ್ದಾಗಿ ನರಡೂ ನನಗೆ ತಿಳಿಸಿ, "ದೇ ಮೇ ಡೂ ಯು ಪೀಪಲ್ ಟು. ಡೋಂಟ್ ಬಿ ಟೆನ್ಸ್. ಟೇಕ್ ಇಟ್ ಈಜಿ" ಎಂದಿದ್ದರು. ನಮ್ಮ ಜೊತೆಗೆ ಹಾಗೆ ಮಾಡಲಾರರು ಎಂದುಕೊಂಡೆ. ಜಗಬಂಧು ದಕ್ಷಿಣ ಭಾರತದವರಂತೆ ಕಾಣುತ್ತಿದ್ದರೂ ಕೆಂಪಾಗಿದ್ದರು. ದಾಸ್ ಮೂಲತ: ಒರಿಸ್ಸಾದವನಾಗಿದ್ದು ಜಗಬಂಧುಗಿಂತ ಕೆಂಪಾಗಿದ್ದ. ಇದ್ದದರಲ್ಲಿ ನಾನೆ ಕಪ್ಪು. ಅನಂತರ ಹತ್ತು ದಿನಗಳ ಕಾಲ ಬೀಜಿಂಗ್‌ನಲ್ಲಿ ನಾವು ಮೂವರು ಒಟ್ಟಾಗಿ ಮತ್ತು ಒಬ್ಬೊಬ್ಬರಾಗಿ ಓಡಾಡಿದ್ದರು ಯಾರೂ ನಮ್ಮ ಹತ್ತಿರಕ್ಕೆ ಬಂದಿರಲಿಲ್ಲ. ಆದರೆ ಲಾಂಗ್‌ಫಾಂಗ್‌ನಲ್ಲಿ ದಕ್ಷಿಣ ಆಫ್ರಿಕಾದ ಡ್ಯಾನಿಯಲ್ ಸುಮೆ ಜೊತೆಗೆ ನಾನು ಸೂಪರ್ ಮಾರ್ಕೆಟ್‌ಗೆ ಹೋಗಿದ್ದೆ. ದೈತ್ಯಾಕಾರದ ಸುಮೆ ರಾವಣನ ತಮ್ಮ ಕುಂಬಕರ್ಣನಷ್ಟೆ ಸುಂದರನಾಗಿದ್ದ. ದೊಡ್ಡಹೊಟ್ಟೆ, ತಲೆಯಲ್ಲಿ ಸಹರಾ ಮರಭೂಮಿಯಲ್ಲಿನ ಹುಲ್ಲಿನಂತೆ ಕಾಣುವ ಕೂದಲು, ಕಪ್ಪು ಬಣ್ಣ. ಅವನನ್ನು ಮುಂದೆ ಬಿಟ್ಟು ನಾನು ಏನು ಗೊತ್ತಿಲ್ಲದವನಂತೆ ಅವನಿಗೂ ನನಗೂ ಯಾವುದೇ ಸಂಬಂಧವಿಲ್ಲದಂತೆ ಐದಾರು ಹೆಜ್ಜೆ ಹಿಂದೆ ಎಲ್ಲಾ ವಸ್ತಗಳು ಮತ್ತು ಅವುಗಳ ಮೇಲೆ ಬರೆದಿದ್ದ ಬೆಲೆಗಳನ್ನು ನೋಡುತ್ತಾ ಹೋಗುತ್ತಿದ್ದೆ.

ಆ ಸೂಪರ್ ಮಾರ್ಕೆಟ್ ತುಂಬ ವಿಶಾಲವಾಗಿದ್ದು ಕೊಳ್ಳುವವರು ತೀರಾ ವಿರಳವಾಗಿದ್ದರು. ಕೌಂಟರುಗಳ ಮುಂದೆ ನಿಂತಿದ್ದ ಹುಡುಗಿಯರು ಸುಮೆನನ್ನು ನೋಡಿದ್ದೆ ಕಣ್ಣುಗಳನ್ನು ಅರಳಿಸಿಕೊಂಡು ಇಲ್ಲ ತುಟಿಗಳನ್ನು ಬಿಗಿಹಿಡಿದುಕೊಂಡು ಅಕ್ಕಪಕ್ಕದ ಗೆಳತಿಯರ ಕಡೆಗೆ ನೋಡಿ ಮುಗುಳು ನಗುತ್ತಿದ್ದರು. ಜೊತೆಗೆ ನನ್ನನ್ನೂ ಅದೆ ರೀತಿಯಾಗಿ ನೋಡುತ್ತಿದ್ದರು. ಮರು ದಿನ ಇನ್ನರ್‌ಮಂಗೋಲಿಯ ಕಡೆಗೆ ಪ್ರಯಾಣ ಮಾಡಬೇಕಾಗಿದ್ದರಿಂದ ಚಳಿಗೆ ಒಂದು ವಿಂಡ್‌ಸ್ವೆಟರ್‌ಗಾಗಿ ಸುಮೆ ಹುಡುಕಾಡುತ್ತಿದ್ದ. ಅವನ ಅಳತೆಗೆ ವಿಂಡ್‌ಸ್ವೆಟರ್ ಸಿಗದೆ ಹುಡುಕಾಡಿ ಹುಡುಕಾಡಿ ಕೊನೆಗೆ ಒಂದು ಅಂಗಡಿಯಲ್ಲಿ ಕಪ್ಪು ಬಣ್ಣದ ವಿಂಡ್‌ಸ್ವೆಟರ್ ಧರಿಸಿ ಕನ್ನಡಿ ಮುಂದೆ ನಿಂತುಕೊಂಡು "ಇತ್ ಈಸ್ ಆಲ್‌ರೈತ್?" ಎಂದ. "ಯಾ" ಎಂದೆ. ಟಕ್ಕನೆ ಪರ್ಸ್ ತೆಗೆದು ಹಣಕೊಟ್ಟು ಪ್ಯಾಕ್ ಮಾಡುವಂತೆ ಹೇಳಿದ.

ನಾವು ಮೂವರು ಈಗ ಆ ಪಟ್ಟಣದ ಮುಖ್ಯ ಬಜಾರಿನಲ್ಲಿದ್ದೆವು. ಅಡ್ಡ ಬರುವವರೆಲ್ಲ ನಮ್ಮನ್ನು ನೋಡುತ್ತಾ ಹೋಗುತ್ತಿದ್ದಾರೆ. ದೈತ್ಯಾಕಾರದ ದೇಹಗಳನ್ನೊಂದಿರುವ ಮಂಗೋಲಿಯರ ಮುಖಗಳು ರಕ್ತ ಚಿಮ್ಮುವಷ್ಟು ಕೆಂಪಾಗಿವೆ. ಅವರು ನಾನು ನೋಡಿರುವ ಚೀನಿಯರು ಜಪಾನಿಯರು ಅಥವಾ ನಮ್ಮ ಉತ್ತರ ಪೂರ್ವ ರಾಜ್ಯಗಳಲ್ಲಿರುವ ಮಂಗೋಲಿಯರಂತೆ ಕಾಣಿಸುತ್ತಿಲ್ಲ. ಕೆಲವರ ಕಣ್ಣುಗಳು ಮಾತ್ರ

ಮಂಗೋಲಿಯರಂತೆ ಸಣ್ಣಗಿವೆ. ದುಂಡು ಮುಖಗಳ ಜೊತೆಗೆ ಮೊಂಡು ಮೂಗುಗಳು. ನಿಜವಾದ ಮಂಗೋಲಿಯರು ಯಾರು? ಎನ್ನುವ ಸಂದೇಹ ಬಂದಿತು. ಇವರೆಲ್ಲ ಜಂಗೀಸ್‌ಖಾನ್‌ನ ಮೂಲದವರೆ? ಇರಬೇಕು ಎಂದುಕೊಂಡೆ.

ಅಂಗಡಿಗಳ ಮೇಲೆ ಮತ್ತು ಗೋಡೆಗಳ ಮೇಲಿನ ಪೋಸ್ಟರ್‌ಗಳಲ್ಲಿದ್ದ ಅಕ್ಷರಗಳು ಕೂಡ ಚೀನಿ ಭಾಷೆಯ ಅಕ್ಷರಗಳಿಗಿಂತ ಸ್ವಲ್ಪ ಭಿನ್ನವಾಗಿದ್ದವು. "ಇನ್ನು ಮುಂದೆ ಹೋಗೋದು ಬೇಡ. ಚಳಿ ಜಾಸ್ತಿಯಾಗ್ತಿದೆ" ಎಂದೆ. ಮೂವರು ಇನ್ನೇನು ಹಿಂದಕ್ಕೆ ತಿರುಗಿಕೊಳ್ಳಬೇಕು. ಅಲ್ಲೊಂದು ಜನರ ಗುಂಪಿದೆ. ಏನಿದು? ಮೂವರು ಅಲ್ಲೇ ನಿಂತುಕೊಂಡು ನೋಡಿದೆವು. ನಮ್ಮ ಜತೆಗಿದ್ದ ಇನ್ಸ್‌ಟಿಟ್ಯೂಟ್‌ನ ಹುಡುಗ ಜೋಶೆಂಡಿಂಗ್ ಗುಂಪಿಂದ ಸ್ವಲ್ಪ ದೂರದಲ್ಲಿ ನಿಂತುಕೊಂಡು ಫೋಟೊಗಳನ್ನು ತೆಗೆಯುತ್ತಿದ್ದಾನೆ.

ಅರೆ ಶೆಂಡಿಂಗ್? ಹತ್ತಿರಕ್ಕೆ ಹೋಗಿ ನೋಡುತ್ತೇವೆ. ನಮ್ಮ ಜತೆಗೆ ತರಬೇತಿಗೆ ಬಂದಿದ್ದ ನೀಗ್ರೋಗಳಲ್ಲಿ ಇಬ್ಬರನ್ನು ಸ್ಥಳೀಯರು ಸುತ್ತುವರಿದಿದ್ದಾರೆ. ಕೆಲವರು ಮೈಮುಟ್ಟಿ ನೋಡುತ್ತಿದ್ದಾರೆ. ಕೆಲವರು ಸ್ವಲ್ಪ ದೂರದಲ್ಲಿ ನಿಂತುಕೊಂಡು ಕೈಗಳನ್ನು ಚಾಚಿ ಬೆರಳುಗಳಿಂದ ಸ್ಪರ್ಶಿಸುತ್ತಿದ್ದಾರೆ. ನೀಗ್ರೋಗಳು ಯಾವ ಅಳುಕೂ ಇಲ್ಲದೆ ನಗುತ್ತ ಆನಂದಿಸುತ್ತಿದ್ದಾರೆ. ಕೆಲವರು ಧೈರ್ಯ ಮಾಡಿದವರಂತೆ ಕೈಕುಲುಕುತ್ತಿದ್ದಾರೆ. ಸುಮಾರು ಹತ್ತು ನಿಮಿಷಗಳ ಕಾಲ ಅದೇ ರೀತಿ ನಡೆದ ಮೇಲೆ ನೀಗ್ರೋಗಳಿಬ್ಬರು ಗುಂಪಿನಿಂದ ಹೊರಕ್ಕೆ ಬಂದರು. ಅನಂತರ ನಾವು ಮತ್ತು ಅವರು ಒಟ್ಟುಗೂಡಿ ಮಾತನಾಡುತ್ತ ಹೋಟಲ್ ಕಡೆಗೆ ಬಂದೆವು.




ಗೋಬಿ ಮರಳುಗಾಡು

ಒಬ್ಬ ಹುಚ್ಚನು ಮಾತ್ರ ದಾರಿ ತಪ್ಪದೆ ಗೋಬಿಯನ್ನು ದಾಟಲು ಸಾಧ್ಯ–ಮಿಲ್ಡ್ರೆಡ್ ಕೇಬಲ್,

ಗೋಬಿ ಮರಳುಗಾಡಿನ ಒಟ್ಟು ಭೂವಿಸ್ತೀರ್ಣ ೧.೩ ಮಿಲಿಯ ಚದರ ಕಿ.ಮೀಟರುಗಳು. ಈ ಮರುಭೂಮಿ ಮುಖ್ಯವಾಗಿ ಚೀನಾ ಮತ್ತು ಮಂಗೋಲಿಯಾಗಳಲ್ಲಿ ವಿಸ್ತರಿಸಿದೆ.

ಚೀನಾದೇಶದಲ್ಲಿ ಇನ್ನರ್‌ಮಂಗೋಲಿಯ ರಾಜ್ಯ ಒಂದು ಹಿಂದುಳಿದ ಮತ್ತು ಬರಡುರಾಜ್ಯ. ಈ ರಾಜ್ಯ ತನ್ನ ಎದೆಯ ಮೇಲೆ ಹೇರಳವಾಗಿ ಬರಡು ಬೆಟ್ಟಗಳನ್ನು ಮತ್ತು ಮರಳುಗಾಡನ್ನು ಹಾಸಿಕೊಂಡು ಮಲಗಿದೆ. ನಮಗೆ ಮೊದಲೆ ತಿಳಿಸಿದಂತೆ ಸರಿಯಾಗಿ ೭:೩೦ ಗಂಟೆಗೆ ಕೆಳಗಿದ್ದ ರೆಸ್ಟಾರೆಂಟಿಗೆ ಉಪಹಾರಕ್ಕಾಗಿ ಬಂದೆವು. ಅಲ್ಲಿ ಯಾರೂ ಇರಲಿಲ್ಲ. ದಕ್ಷಿಣ ಆಫ್ರಿಕಾದಿಂದ ಬಂದಿದ್ದ ಜರ್ಮನ್ ಮೂಲದ ಮಹಿಳಾ ಜಿಯೋಕೆಮಿಷ್ಟ್ ನಿಂತಿದ್ದಳು. ಮೈನಡುಗುವ ಚಳಿ "ಯಾಕೆ ಇಲ್ಲಿ ನಿಂತಿದ್ದೀರಿ? ಎಲ್ಲರೂ ಒಳಗಡೆ ಇದ್ದಾರಾ?" ಕೇಳಿದೆ. "ನಾನು ರೆಸ್ಟಾರೆಂಟ್ ಒಳಗೆ ಹೋಗಲಿಲ್ಲ." ಎಂದಳು. "ನಡಿಯಿರಿ ನೋಡೋಣ" ಎಂದು ಇಬ್ಬರೂ ಡೈನಿಂಗ್ ಹಾಲ್ ಕಡೆಗೆ ಹೊರಟೆವು. ಒಳಗೆ ಯಾರೂ ಕಾಣಿಸಲಿಲ್ಲ. ರೆಸ್ಟಾರೆಂಟ್ ಇನ್ನೂ ತಣ್ಣಗೆ ಮಲಗಿತ್ತು. ಯಾರೂ ಇಲ್ಲವಲ್ಲ ಎಂದು ಹಿಂದಕ್ಕೆ ಬರುತ್ತಿದ್ದಂತೆ, ಇಬ್ಬರು ಕೆಲಸಗಾರರು ಅವರ ಭಾಷೆಯಲ್ಲಿ ಉಪಹಾರ ಆಗುವುದಕ್ಕೆ ಅರ್ಧಗಂಟೆಯಾಗುತ್ತದೆ ಎಂದರು. ಹೋಟಲ್ ಹೊರಗೆ ಬಂದು ನೋಡಿದರೆ ಒಂದೇ ಮಂಜು, ಕೊರೆಯುವ ಚಳಿ. ಹೋಟಲ್ ಒಳಕ್ಕೆ ಬಂದುಬಿಟ್ಟೆವು. ನಾನು ಮತ್ತೆ ಕೋಣೆಗೆ ಹೋಗಿ ಅರ್ಧಗಂಟೆ ಸಮಯ ಕಳೆದು ಜಗಬಂಧು ಮತ್ತು ದಾಸ್ ಜೊತೆಗೆ ರೆಸ್ಟಾರೆಂಟ್‌ಗೆ ಬಂದು ನೋಡುತ್ತೇನೆ. ಎಲ್ಲರೂ ಇನ್ನೇನು ಉಪಹಾರ ಮುಗಿಸುವ ಹಂತದಲ್ಲಿದ್ದಾರೆ. ಅದೇಗೆ ಅರ್ಧ ಗಂಟೆಯಲ್ಲಿ ಇಷ್ಟು ತಿಂಡಿಗಳನ್ನು ಮಾಡಿದರು? ಎಂದುಕೊಂಡು ಬೇಗನೆ ಉಪಹಾರ ಮುಗಿಸಿದೆವು. ಸರಿಯಾಗಿ ೮:೩೦ಕ್ಕೆ ನಮ್ಮ ಮಿನಿ ಬಸ್ಸು ಮತ್ತು ಕಾರು ಗೋಬಿ ಮರಳುಗಾಡಿನ

ಕಡೆಗೆ ಚಳಿಯಲ್ಲಿ ನಡುಗುತ್ತ ಹೊರಟಿತು. ರಸ್ತೆಯಲ್ಲಿ ಅಲ್ಲೊಂದು ಇಲ್ಲೊಂದು ವಾಹನಗಳನ್ನು ಬಿಟ್ಟರೆ ಏನೂ ಕಾಣಿಸುತ್ತಿಲ್ಲ. ಅದೇ ಬೂದು ಮಣ್ಣಿನ ಹೊಲಗಳು, ಮಣ್ಣು ಇಟ್ಟಿಗೆ ಮತ್ತು ಹೆಂಚಿನ ಮನೆಗಳು. ಮೂರು ದಿನಗಳಿಂದ ಸವೆಸಿದ ಸುಮಾರು ೨ ಸಾವಿರ ಕಿ.ಮೀ. ದೂರವು ಒಂದೇ ರೀತಿಯ ಚಿತ್ರಣಗಳು. ಇಟ್ಟಿಗೆ ಗೋಡೆಗಳಿಗೆ ಎಲ್ಲಿಯೂ ಪ್ಲಾಸ್ಟರಿಂಗ್ ಮಾಡಿರಲಿಲ್ಲ. ಸುಣ್ಣ ಮತ್ತು ಬಣ್ಣಗಳ ಮಾತೆ ಇಲ್ಲ.



ಮಣ್ಣಿನ ಸ್ಯಾಂಪಲ್ ಸಂಗ್ರಹಿಸುವ ಒಂದು ನೋಟ

೧ ಗಂಟೆ ಪ್ರಯಾಣ ಮಾಡಿದ ಮೇಲೆ ನಮ್ಮ ವಾಹನಗಳನ್ನು ಒಂದು ಕಡೆ ನಿಲ್ಲಿಸಲಾಯಿತು. ಅಲ್ಲಿ ನದಿಯ ನೆರೆಯಿಂದ ಉಕ್ಕಿ ಬಂದಿದ್ದ ಮರಳು ದಿಬ್ಬಗಳನ್ನು ತೋರಿಸಲಾಯಿತು. ನನ್ನಲ್ಲಿದ್ದ ಜಿಪಿಎಸ್ ತೆಗೆದುಕೊಂಡು ಉಪಗ್ರಹಗಳನ್ನು ಕ್ಯಾಚ್ ಮಾಡಿ ಭೂಮಿಯ ಮೇಲೆ ಯಾವ ರೇಖಾಂಶಗಳ ಮೇಲೆ ನಿಂತಿದ್ದೇನೆಂದು ಪರೀಕ್ಷಿಸಿದೆ. ಉತ್ತರ ಅಕ್ಷಾಂಶ ೪೧ ೦೪ ೧೬ ಡಿಗ್ರಿಗಳು ಮತ್ತು ಪೂರ್ವ ರೇಖಾಂಶ ೧೦೭ ೦೪ ೨೨ ಡಿಗ್ರಿಗಳ ಮೇಲೆ ಷಾಂಗಾಯ್ ಹತ್ತಿರದ ಸಮುದ್ರ ಮಟ್ಟದಿಂದ ೧೦೩೦ ಮೀ. ಎತ್ತರದಲ್ಲಿ ನಿಂತಿದ್ದೆ. ಬೆಂಗಳೂರು ನಗರವನ್ನು ಗುರುತಿಸಿ ನಾನು ಎಷ್ಟು ದೂರದಲ್ಲಿದ್ದೇನೆಂದು ಕೇಳಿದೆ. ನಾನಿದ್ದ ಸ್ಥಳದಿಂದ ದಕ್ಷಿಣ-ಪಶ್ಚಿಮಕ್ಕೆ ೫೫೧೦ ಕಿ.ಮೀ. ದೂರದಲ್ಲಿ ಇರುವುದಾಗಿ ತಿಳಿಸಿತು. ಅದು ಆಕಾಶದಲ್ಲಿ ಪಕ್ಷಿ ನೋಟದ ದೂರ. ಹಾಗೆ ನೋಡಿದರೆ ಬೆಂಗಳೂರಿಂದ ಬೀಜಿಂಗ್ ಮಧ್ಯ ಸುಮಾರು ೧೦ ಸಾವಿರ ಕಿ.ಮೀ.ದೂರವನ್ನು ವಿಮಾನದಲ್ಲಿ ಹಾರಿದ್ದೆ.

ದೂರದ ಗೋಬಿ ಮರಳುಗಾಡಿನಲ್ಲಿ ನಿಂತಿದ್ದಾಗ ಯಾಕೋ ನಮ್ಮೂರಿನ ಯರ‍್ರಕೊಂಡ ಜ್ಞಾಪಕಕ್ಕೆ ಬಂದುಬಿಟ್ಟಿತು. ಗೋಬಿ ಮರಳುಗಾಡಿನಿಂದ ಬೆಂಗಳೂರಿಗೆ ೫೫೧೦ ಕಿ.ಮೀ. ದೂರವಾದರೆ ಅಲ್ಲಿಂದ ಪೂರ್ವಕ್ಕೆ ಸರಿಯಾಗಿ ೧೦೦ ಕಿ.ಮೀ.ದೂರದಲ್ಲಿ ಕೋಲಾರ ಚಿನ್ನದಗಣಿಗಳಿವೆ. ಅಲ್ಲಿಂದ ಸರಿಯಾಗಿ ೧೦ ಕಿ.ಮೀ.

ದಕ್ಷಿಣಕ್ಕೆ ನಾನು ಹುಟ್ಟಿದ ಬ್ಯಾಟರಾಯನಹಳ್ಳಿ ಇದೆ. ಈ ಹಳ್ಳಿಯನ್ನು ಇಂದಿಗೂ ಸುತ್ತಮುತ್ತಲಿನ ಹಳ್ಳಿಗರು ಯರ್ರಕೊಂಡ ಬ್ಯಾಟರಾಯನಹಳ್ಳಿ ಎಂದೆ ಕರೆಯುತ್ತಾರೆ. ನಮ್ಮ ತಂದೆ ಇದೆ ಹಳ್ಳಿಯಲ್ಲಿ ನಾಲ್ಕನೆ ತರಗತಿಯವರೆಗೂ ಓದಿ ಆಗಲೆ ಸಣ್ಣ ಪ್ರಮಾಣದ ಪಿಡಬ್ಲೂ ಗುತ್ತಿಗೆದಾರರಾಗಿದ್ದರು. ನಮ್ಮ ತಾಯಿ ಏನೂ ಓದದ ಕ್ಯಾಸಂಬಳ್ಳಿ ಹತ್ತಿರದ ಜಂಗಮಾನಹಳ್ಳಿಯವರು.

ಈ ಯರ್ರಕೊಂಡದ ದಕ್ಷಿಣ ತುದಿಯಿಂದ ಆಂಧ್ರದ ಗಡಿ ಪ್ರಾರಂಭವಾಗುತ್ತದೆ. ಅದೇ ಸ್ಥಳದಲ್ಲಿ ಪ್ರಪಂಚ ಪಖ್ಯಾತ ಕೋಲಾರ ಚಿನ್ನದ ಗಣಿಗಳು ಮೊದಲಿಗೆ ಪ್ರಾರಂಭಗೊಂಡಿದ್ದು ಬಿಸಾನತ್ತಂ ಗಣಿಗಳಿಂದ. ಪುಸ್ತಕ ಪ್ರಾಧಿಕಾರ ಪ್ರಕಟಿಸಿರುವ ನನ್ನ ಹತ್ತು ವರ್ಷಗಳ ಭಾರತ ಸುತ್ತಿದ ಅನುಭವವುಳ್ಳ "ಅಲೆಮಾರಿಯ ಹೆಜ್ಜೆಗಳು" ಪ್ರವಾಸದ ಉದ್ದಕ್ಕೂ ಹೆಚ್ಚೂ ಕಡಿಮೆ ಸುಶೀಲ ಮತ್ತು ಕ್ರಾಂತಿ ನನ್ನ ಜೊತೆಯಲ್ಲಿದ್ದರು. ಆದರೆ ಇಲ್ಲಿ ಚೀನಾದಲ್ಲಿ ನಾನು ಮಾತ್ರ ಓಡಾಡುತ್ತಿದ್ದೆ. ಸುಶೀಲಳಿಗೆ ಪ್ರವಾಸ ಮಾಡುವುದೆಂದರೆ ಎಲ್ಲಿಲ್ಲದ ಖುಷಿ. ಚೀನಾಗೆ ಹೋಗುತ್ತೀದ್ದೇನೆ ಎಂದು ಫೋನ್‌ನಲ್ಲಿ ತಿಳಿಸಿದ್ದೆ ನಾನೂ ಬರುತ್ತೇನೆ ಎಂದು ಹಿಂದೆ ಬಿದ್ದಿದ್ದಳು. ನಿನಗೆ ಟಿಕೆಟ್ ಕೊಡುವವರ್‍ಯಾರು? ಎಂದಾಗ ನಿಮ್ಮ ಆಫೀಸಿನವರೆ ಕೊಡಲಿ. ಅದೆಂತಹ ಆಫೀಸು ಗಂಡಸರ್ನ ಮಾತ್ರ ಕಳುಹಿಸುವುದು? ಗಂಡಸರ್ನ ಕಳಿಸದರೆ ಅವರ ಜೊತೆಗೆ ಹೆಂಡತಿಯರನ್ನು ಕಳಿಸಲಿ ಎಂದು ಜಗಳವಾಡಿದ್ದಳು. "ದೇಶ ಸುತ್ತು ಭಾಷೆ ಕಲಿ" ಎನ್ನುವ ಮಾತು ಸತ್ಯ. ಇದರಿಂದ ದೊರಕುವ ಅನುಭವಗಳು ಮತ್ತು ಜ್ಞಾನ ಅಪಾರ. ದೇಶಗಳನ್ನು ಸುತ್ತಿ ಭಾಷೆಗಳನ್ನು ಕಲಿತವರಿಗೆ ಮಾತ್ರ ಅದರ ಗುಟ್ಟು ಗೊತ್ತು.



ಗೋಬಿ ಮರಳು ಗಾಡಿನಲ್ಲಿ ದಕ್ಷಿಣ ಆಫ್ರಿಕಾದಿಂದ ಬಂದಿದ್ದ ಸಹದ್ಯೋಗಿ

ಇಷ್ಟೆಲ್ಲ ನೋಡಿದ ಮೇಲೂ ಅದ್ಯಾಕೊ ನಾನು ಹುಟ್ಟಿದ ಊರಿನ ವ್ಯಮೋಹ ನನ್ನನ್ನು ಯಾವಾಗಲೂ ಕಾಡುತ್ತಲೆ ಇರುತ್ತದೆ. ಈಗಲೂ ನಾನು ಹಳ್ಳಿಗೆ ಹೋದಾಗಲೆಲ್ಲ

ಹಳ್ಳಿಯ ಸುತ್ತಲಿನ ಹೊಲಗದ್ದೆಗಳು, ಕೆರೆ ಕುಂಟೆಗಳು ನಮ್ಮೂರಿನ ಕೆಂಪುಬೆಟ್ಟ (ಯರ್ರಕೊಂಡ) ಅದರ ಸುತ್ತಲಿನ ಕಾಡು ನನ್ನನ್ನು ಪುಳಕಗೊಳಿಸುತ್ತಲೇ ಇರುತ್ತವೆ. ಒಂದು ದಿನ ನನ್ನ ಮಗನ ಜೊತೆಗೆ ಬೆಟ್ಟದ ತುದಿಯಲಿರುವ ಬ್ಯಾಟರಾಯನಸ್ವಾಮಿಯ ಗುಡಿಯ ಹಿಂಭಾಗದಲ್ಲಿ ಕುಳಿತು ದಕ್ಷಿಣಕ್ಕೆ ನೋಡತೊಡಗಿದೆ. ಸುತ್ತ ಮುತ್ತಲಿನ ಹಳ್ಳಿಗಳ ಕುರಿ, ಮೇಕೆ, ದನ ಮತ್ತು ಹಸುಗಳು ತಪ್ಪಲುಗಳಲ್ಲಿ ಹುಲ್ಲು ಮೇಯುತ್ತಿದ್ದವು. ಅವುಗಳ ಹಿಂದೆ ಬಂದಿದ್ದ ಹುಡುಗರು ಅಲ್ಲಲ್ಲಿ ಕಾಡು ಹರಟೆಯಲ್ಲಿ ತೊಡಗಿದ್ದರು. ಎಲ್ಲೆಲ್ಲೂ ಸಮುದ್ರದ ಅಲೆಗಳಂತೆ ಕಾಣಿಸುವ ಬೆಟ್ಟಗುಡ್ಡಗಳು, ಅವುಗಳ ತುಂಬಾ ಅಲೆಗಳಿಂದ ಚಿಮ್ಮಿ ಹಾರುವ ನೀರಿನ ಹನಿಗಳಂತೆ ಕಾಣುವ ಮರಗಿಡಗಳು ಹರಡಿಕೊಂಡಿದ್ದವು. ನಮ್ಮ ತಲೆಯ ಮೇಲೆ ಮತ್ತು ಸುತ್ತಮುತ್ತಲು ಹದ್ದುಗಳು ಮತ್ತು ಕೆಲವು ಪಕ್ಷಿಗಳು ತಪ್ಪಲುಗಳ ಮೇಲೆ ಕಣ್ಣು ನೆಟ್ಟು ಆಹಾರಕ್ಕಾಗಿ ಹುಡುಕುತ್ತಿದ್ದವು. ದೂರದೂರಕ್ಕೆ ಮಂದವಾದ ಬಿಸಿಲು ಮತ್ತು ನೆರಳಗಳ ಜೊತೆಗೆ ಕಾಣುವ ದೃಶ್ಯ ಭೂಮಿಯೆ ಒಂದು ಭೂಪಟದಂತೆ ಕಾಣಿಸುತ್ತಿತ್ತು. ಸುಮಾರು ಹೊತ್ತು ನನ್ನ ಮಗ ಕ್ರಾಂತಿ, ನಮ್ಮ ಜೊತೆಗೆ ಬಂದಿದ್ದ ನಮ್ಮ ಅಣ್ಣನ ಮಗ ಅದೆಲ್ಲವನ್ನು ನೋಡುತ್ತ ಕುಳಿತಿದ್ದೆವು. ಇಂತಹ ಸ್ಥಳಗಳಲ್ಲಿ ಎಷ್ಟು ಸಮಯ ಕಳೆದರೂ ತೃಪ್ತಿ ದೊರಕುವುದಿಲ್ಲ. ಸೂರ್ಯ ಪಶ್ಚಿಮದ ಕಡೆಗೆ ಇಳಿಯುತ್ತಿದ್ದಂತೆ ನಾವೂ ಬೆಟ್ಟದಿಂದ ನಿಧಾನವಾಗಿ ಮನೆಯ ಕಡೆಗೆ ಇಳಿದುಬಂದಿದ್ದೆವು.

* * *

ಒಂದು ಗಂಟೆ ಪ್ರಯಾಣದ ನಂತರ ಇನ್ನರ್‌ಮಂಗೋಲಿಯಾದ ನಿಜವಾದ ಬೋಳುಬೆಟ್ಟಗಳು ಕಾಣಿಸಿಕೊಂಡವು. ಮಿನಿ ಬಸ್ಸು ಮತ್ತು ಕಾರು ಒಂದೇ ವೇಗದಲ್ಲಿ ಚಲಿಸುತ್ತಿದ್ದವು. ರಸ್ತೆಗಳಲ್ಲಿ ಎಲ್ಲೋ ಒಂದೊಂದು ವಾಹನಗಳು ಎದುರಿಗೆ ಬರುತ್ತಿದ್ದವು. ಬರೀ ಶಿಲೆಗಳೆ ತುಂಬಿರುವ ದೈತ್ಯಾಕಾರದ ಎತ್ತರೆತ್ತರ ಪರ್ವತ ಶ್ರೇಣಿಗಳು. ನೀರು ನೋಡಿ ಎಷ್ಟೋ ವರ್ಷಗಳಾಗಿರುವ ನದಿ ಕಣಿವೆಗಳು. ಕಣ್ಣಲ್ಲಿ ಕಣ್ಣಿಟ್ಟು ನೋಡಿದರು ಆ ಪರ್ವತಗಳಲ್ಲಿ ಎತ್ತರದ ಒಂದೇ ಒಂದು ಮರ ಗಿಡವೂ ಕಾಣಿಸಲಿಲ್ಲ. ಆದರೆ ಒಣಗಿದ ಬೂದು ಬಣ್ಣದ ಹುಲ್ಲು ಮಾತ್ರ ತಪ್ಪಲು ನದಿಗಳ ಪಕ್ಕದಲ್ಲಿ ಕಾಣಿಸುತ್ತಿತ್ತು.

ನಡುನಡುವೆ ನದಿಯ ತೊರೆಗಳ ಪಕ್ಕದಲ್ಲಿ ಒಂದೊಂದೆ ಇಟ್ಟಿಗೆ ಗೋಡೆಗಳ ಹೆಂಚಿನ ಮನೆಗಳು ಕಾಣಿಸುತ್ತಿದ್ದವು. ಮನೆಗಳ ಮುಂದೆ ಜೋಳದ ಕಡ್ಡಿಗಳ ರಾಶಿ ಮತ್ತು ಮನೆಗಳ ಮೇಲೆ ಜೋಳದ ತೆನೆಗಳ ರಾಶಿ ಬಿದ್ದಿದೆ. ಅಲ್ಲಲ್ಲಿ ಮೇಕೆಗಳು ಹುಲ್ಲು ಮೇಯುತ್ತಿವೆ. ಬೆಟ್ಟಗುಡ್ಡಗಳೆ ಆಸ್ತಿಯಂತಿರುವ ಈ ತೀವ್ರ ಚಳಿ ಪ್ರದೇಶದಲ್ಲಿ ದೂರದೂರಕ್ಕೆ ಒಂಟಿ ಮನೆಗಳಲ್ಲಿ ಜನರು ಹೇಗೆ ವಾಸಿಸಬಹುದು ಎನ್ನುವು ಪ್ರಶ್ನೆ ನನ್ನನ್ನು ಕಾಡತೊಡಗಿತು. ಸುಮಾರು ೪೫ ನಿಮಿಷಗಳಲ್ಲಿ ನಮ್ಮ ಬಸ್ಸು ಎತ್ತರದ ಬೆಟ್ಟಗಳನ್ನು ದಾಟಿದ ಮೇಲೆ ಸಣ್ಣ ತಪ್ಪಲುಗಳ ಪ್ರದೇಶದಲ್ಲಿ ಸಾಗತೊಡಗಿತು. ವಾಂಗ್ "ಗೋಬಿ ಮರಳುಗಾಡು ಇಲ್ಲಿಂದ ಪ್ರಾರಂಭವಾಗುತ್ತದೆ" ಎಂದರು. ಗೋಬಿ ಮರಳುಗಾಡು

ಹೆಸರು ಕೇಳಿದಾಗಿನಿಂದ ನನ್ನ ಕಣ್ಣುಗಳಲ್ಲಿ ರಾಜಸ್ಥಾನದ ಮರಳುಗಾಡಿನ ಚಿತ್ರಣಗಳೆ ತುಂಬಿಕೊಂಡಿದ್ದವು. ಅಲ್ಲಿ ಒಮ್ಮೆ ಮರಳು ಬೀಸಿತೆಂದರೆ ಮರಳು ಸಮುದ್ರದ ಅಲೆಗಳಂತೆ ಚಲಿಸುತ್ತದೆ. ನೂರಾರು ಮೀಟರುಗಳು ಎತ್ತರದ ಮರಳು ದಿಬ್ಬಗಳು ಕೆಲವೇ ಗಂಟೆಗಳಲ್ಲಿ ಸೃಷ್ಟಿಯಾಗುತ್ತವೆ. ಹಾಗೆ ಮಾಯವು ಆಗಿಬಿಡುತ್ತವೆ. ಆದರೆ ಇಲ್ಲಿ ಹಾಗಿರಲಿಲ್ಲ. ಬರೀ ಬೆಂಗಾಡು, ಸುತ್ತಲೂ ಒಂದು ಅಥವಾ ಎರಡು ಅಡಿ ಎತ್ತರದ ಗರಟು ಕಟ್ಟಿಕೊಂಡಿರುವ ವೃತ್ತಾಕಾರದ ಗುಂಪು ಗುಂಪು ಗಿಡಗಳು ಮತ್ತು ಹುಲ್ಲು ಬೆಳೆದು ನಿಂತಿದೆ. ಅದನ್ನು ಬಿಟ್ಟರೆ ಸುತ್ತಲು ಕಣ್ಣು ಹಾಯುವಷ್ಟು ದೂರ ಯಾವ ಗಿಡಮರಗಳೂ ಇಲ್ಲ.



ಗೋಬಿ ಮರಳುಗಾಡಿನಲ್ಲಿ ತೆರೆದ ಬಹು ಖನಿಜಗಳ ಗಣಿ

ಇದು ರಾಜಸ್ಥಾನದಂತಹ ಮರಳುಗಾಡಲ್ಲ. ಕಲ್ಲು ಮಣ್ಣು ಮತ್ತು ಮರಳುಮಿಶ್ರಿತ ಬೆಂಗಾಡು. ಈಗ ಮಧ್ಯ ಮಧ್ಯ ನಾಲ್ಕಾರರಿಂದ ಐವತ್ತು ನೂರು ಮನೆಗಳಿರುವ ಊರುಗಳು ಕಾಣಿಸುತ್ತಿದ್ದವು. ಎಲ್ಲಿ ನೋಡಿದರು ಕುರಿ ಮತ್ತು ಮೇಕೆಗಳ ಗುಂಪುಗಳು. ನೂರಾರು ಕುಟುಂಬಗಳು ಕುರಿ ಮೇಕೆಗಳನ್ನು ಸಾಕಿಕೊಂಡು ಇಲ್ಲಿ ಜೀವನ ನಡೆಸುತ್ತಿವೆ. ಅಲ್ಲಲ್ಲಿ ಬಸ್ಸು ನಿಲ್ಲಿಸಿ ಗೋಬಿ ಮರಳುಗಾಡಿನ ಚಿತ್ರಣಗಳನ್ನು ಕಣ್ಣುಗಳಲ್ಲಿ ತುಂಬಿಕೊಂಡು, ಕ್ಯಾಮರಾ ಕಣ್ಣುಗಳಲ್ಲೂ ಸೆರೆ ಹಿಡಿದುಕೊಂಡೆವು. ಚಳಿಗಾಳಿ ಎಷ್ಟು ತಣ್ಣಗೆ ಬೀಸುತ್ತಿತ್ತೆಂದರೆ ಎಲ್ಲರೂ ಮುಖಗಳು ರಕ್ತದಿಂದ ಕೆಂಪೇರಿಬಿಟ್ಟಿದ್ದವು. ಚಳಿಯನ್ನು ಎದುರುಗೊಳ್ಳಲು ದೇಹದಲ್ಲಿನ ರಕ್ತವೆಲ್ಲ ಮುಖಕ್ಕೆ ಬಂದಿತ್ತು. ನಾನು ಕೈಗಳಿಗೆ ಗ್ಲೌಸ್ ಹಾಕಿಕೊಂಡು ತಲೆಗೆ ಒಂದು ಉಲ್ಲನ್ ಟೋಪಿ ಹಾಕಿಕೊಂಡಿದ್ದರೂ ನನ್ನಿಂದ ತಡೆದುಕೊಳ್ಳಲಾಗಲಿಲ್ಲ. ಮೈ ಗಡಗಡನೆ ನಡುಗುತ್ತಿತ್ತು.

ಈ ಪ್ರದೇಶವೆ ಭೂಮಿಯ ಒಂದು ವಿಕಾರ ರೂಪದಂತಿದ್ದು ಚಳಿಗೆ ಅದುರುತ್ತಿರುವಂತೆ ತೋರುತ್ತಿತ್ತು. ಅಲ್ಲಿಂದ ಸುಮಾರು ೫೦ ಕಿ.ಮೀ. ದೂರದಲ್ಲಿದ್ದ ಲೆಡ್‌ಜಿಂಕ್ ಮತ್ತು ಕಾಪರ್ ಗಣಿಗಳಿಗೆ ಕರೆದುಕೊಂಡುಹೋದರು. ಮೂರು ಖನಿಜಗಳು

ಒಂದೇ ಕಡೆ ದೊರೆಯುತ್ತಿದ್ದು ಅವು ತೆರೆದ ಮತ್ತು ಸುರಂಗ ಗಣಿಗಳಾಗಿದ್ದವು. ಆ ಗಣಿಗಳನ್ನು ಗಡಗಡ ನಡುಗುತ್ತಲೆ ನೋಡಿಬಂದು ಬಸ್ಸಿನ ಒಳಕ್ಕೆ ಸೇರಿಕೊಂಡೆವು. ಬಸ್ಸು ಹಿಂದಕ್ಕೆ ತಿರುಗಿಕೊಂಡು ವೇಗವಾಗಿ ಚಲಿಸತೊಡಗಿತು. ಅಲ್ಲಿಂದ ಮತ್ತೊಮ್ಮೆ ಇನ್ನಷ್ಟು ಬರಡು ಬೆಟ್ಟಗಳನ್ನು ಹತ್ತಿ ಇಳಿದು ಸುತ್ತಿ ಬಳಸಿ ಸಾಯಂಕಾಲ ೫:೩೦ಕ್ಕೆ ಹೋಟಲ್ ತಲುಪಿದೆವು.

* * *

ಗೋಬಿ ಮರಳುಗಾಡಿನ ಒಟ್ಟು ಭೂಪ್ರದೇಶ ೧,೩೦೦೦೦ ಚದರ ಕಿ.ಮೀ.ಗಳು. ಈ ಮರಳುಗಾಡಿನಲ್ಲಿ ಒಂದು ಚದರ ಮೈಲಿಗೆ ಸರಾಸರಿ ಒಬ್ಬ ಮನುಷ್ಯನಿಗಿಂತ ಕಡಿಮೆ ಜನರು ವಾಸಿಸುತ್ತಿದ್ದಾರೆ. ಈ ಪ್ರದೇಶಗಳಲ್ಲಿ ಮೊದಲಿಗೆ ಹೆಚ್ಚಾಗಿ ಅಲೆಮಾರಿಗಳು, ಬುಡಕಟ್ಟು ಜನರು, ಸೈನ್ಯದಿಂದ ಹೊರಕ್ಕೆ ಅಟ್ಟಿದವರು, ಋಷಿಗಳು ಮತ್ತು ಕುರಿ ಮೇಕೆಗಳ ಪಾಲಕರು ಮಾತ್ರ ನೆಲೆಗೊಂಡಿದ್ದರು. ಮುಂದೆ ಅವರ ಜನಾಂಗಗಳೆ ಇಲ್ಲಿ ನೆಲೆಯೂರಿದವು. ಮಂಗೋಲಿಯರ ಭಾಷೆಯಲ್ಲಿ ಗೋಬಿ ಎಂದರೆ ನೀರಿಲ್ಲದ ಪ್ರದೇಶ. ಉರಲ್-ಅಲ್ಟಿಯಾಸ್ ಭಾಷೆಗಳಲ್ಲಿ ಗೋಬಿ ಎಂದರೆ ಮರಳುಗಾಡು ಅಥವಾ ಮಳೆ ಇಲ್ಲದ ಪ್ರದೇಶ. ಆದರೆ ಇಲ್ಲಿ ಹಲವು ನದಿ ಸಾಗರಗಳನ್ನು ನೋಡಬಹುದು. ಇವೆಲ್ಲ ಹಿಮ ಕರಗುವಾಗ ಹರಿಯುವ ನದಿಗಳು. ಕ್ರಿ.ಶ.೧೯೨೬ ರಿಂದ ಮತ್ತು ಮುಂದಿನ ೧೨ ವರ್ಷಗಳಲ್ಲಿ ಮಿಲ್ಡಾರೆಡ್ ಕೇಬಲ್, ಈವ್ ಮತ್ತು ಪ್ರಾನ್‌ಸೆಸ್ಕಾ ಎಂಬ ಮಿಷಿನರಿ ಮಹಿಳೆಯರು ಗೋಬಿ ಮರಳುಗಾಡನ್ನು ೫ ಸಲ ದಾಟಿ ಮತ್ತೆ ಹಿಂದಿರುಗಿ ಬಂದಿದ್ದರು. ಮರಳುಗಾಡು ಅವರನ್ನು ಅನೇಕ ತೊಂದರೆಗಳಿಗೆ ಸಿಲುಕಿಸಿತ್ತು. ದರೋಡೆಕೋರರು, ಬಿಸಿಲ್ಗುದುರೆ, ಚಳಿ, ಗಾಳಿ ಮತ್ತು ಹಾರುವ ಮರಳು ಗುಡ್ಡೆಗಳು ಅವರನ್ನು ತೊಂದರೆಗೆ ಸಿಲುಕಿಸಿದ್ದವು. ಅವರು ಬೈಬಲ್‌ಗೆ ಸಂಬಂಧಿಸಿದ (ತರ್ಜುಮೆ ಮಾಡಿದ) ದಾಖಲೆಗಳನ್ನು ಹೊತ್ತು ಸಾಗಿದ್ದರು.

ಸಾಮಾನ್ಯವಾಗಿ ಗೋಬಿ ಮರಳುಗಾಡಿನ ಹೆಸರು ಕೇಳಿದ ತಕ್ಷಣವೆ ಸುಡುವ ಬಿಸಿಲು, ಅಗಾಧ ಶಕೆಯಿಂದ ಕೂಡಿದ, ಜೀವಸಂಕುಲವಿಲ್ಲದ ಮತ್ತು ಮರಳು ರಾಶಿಗಳಿರುವ ಪ್ರದೇಶಗಳಾಗಿದ್ದು ಅದು ಸಹಾರ ಮರುಭೂಮಿಯಂತೆ ಇರಬಹುದು ಎಂದು ತಿಳಿದುಕೊಳ್ಳುವವರೆ ಹೆಚ್ಚು, ನಾನೂ ಹಾಗೆ ತಿಳಿದುಕೊಂಡಿದ್ದೆ. ಪ್ರಸ್ತುತ ಉತ್ತರ-ಪಶ್ಚಿಮ ಚೀನಾ ಮತ್ತು ದಕ್ಷಿಣ ಮಂಗೋಲಿಯ ದೇಶಗಳನ್ನೊಳಗೊಂಡ ಪ್ರದೇಶಗಳೆ ಗೋಬಿ ಮರಳುಗಾಡು. ಈ ಪ್ರದೇಶಗಳಲ್ಲಿ ಬೋಳು ಬೆಟ್ಟಗಳು, ಹಿಮಹೊದ್ದ ಎತ್ತರೆತ್ತರ ಪರ್ವತ ಶ್ರೇಣಿಗಳು, ನೀರಿನ ಬುಗ್ಗೆಗಳು, ಹುಲ್ಲುಗಾವಲು, ಮರಳು ಮತ್ತು ಶಿಲೆಗಳನ್ನು ಎದೆ ತುಂಬಾ ಹಾಸಿಕೊಂಡಿರುವ ಪ್ರದೇಶಗಳು, ಮೆಟ್ಟಿಲಾಕಾರದ ಕೃಷಿ ಪ್ರದೇಶ ಮತ್ತು ಸಮೃದ್ಧ ಜೀವಸಂಕುಲ ಇಲ್ಲಿ ನೆಲೆಗೊಂಡಿದೆ. ಇದೆಲ್ಲ ಮಿಲಿಯಾಂತರ ವರ್ಷಗಳಿಂದಲೂ ನಿರಂತರವಾಗಿ ಸಾಗುತ್ತಾ ಬಂದಿದೆ.

ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ ಮಂಗೋಲಿಯ ಗೋಬಿಯೆಂದರೆ ಯುರೋಪಿನ ಬಯಲುಗಳು, ಏಷಿಯಾದ ಎತ್ತರ ಪರ್ವತ ಶ್ರೇಣಿಗಳು, ಆಫ್ರೀಕಾದ ಮರಳು ಗುಡ್ಡೆಗಳು ಮತ್ತು ಮರಳು ಕಣಿವೆಗಳು; ಅಥವಾ ಮೂರು ಖಂಡಗಳ ಸಮಿಶ್ರ ಪ್ರದೇಶವೆ ಈ ಮರಳುಗಾಡು. ಮೇಲೆ ನೀಲಾಕಾಶ, ಎದುರಿಗೆ ನೀಲಿ ಬಿಸಿಲ್ಗುದರೆ, ಬಂಗಾರ ಬಣ್ಣದ ಮರಳು ಮತ್ತು ಅಪಾರವಾಗಿ ಹಾಸಿಕೊಂಡಿರುವ ತಪ್ಪಲುಗಳ ಮೆಟ್ಟಿಲಾಕಾರದ ಇಳಿಜಾರುಗಳು.



ಗೋಬಿ ಮರಳುಗಾಡಿನಲ್ಲಿ ನಮ್ಮ ಜೊತೆಗಿದ್ದ ಇನ್‌ಸ್ಟಿಟ್ಯೂಟ್ ವಿದ್ಯಾರ್ಥಿಗಳು

ಇನ್ನೂ ವಿಚಿತ್ರವೆಂದರೆ ಈ ಗೋಬಿ ಮರಳುಗಾಡು ೩೩ ಬೇರೆ ಬೇರೆ ಪ್ರದೇಶಗಳನ್ನು ಹೊಂದಿದೆ. ಅದರಲ್ಲಿ ಕೇವಲ ೩ ರಷ್ಟು ಪ್ರದೇಶ ಮಾತ್ರ ಮರಳಿನಿಂದ ತುಂಬಿಕೊಂಡಿದೆ. ಅವುಗಳಲ್ಲಿ ಮುಖ್ಯವಾಗಿ ಪೂರ್ವಗೋಬಿ, ದಕ್ಷಿಣಗೋಬಿ, ಗೋಬಿಅಲ್ಟಾಯಿ ಹೀಗೆ. ಈ ಪ್ರದೇಶಗಳಲ್ಲಿ ಅರ್ಗಲಿ ಎನ್ನುವ ಬೆಟ್ಟದ ಕುರಿಗಳು, ಇಬೆಕ್ಸ್, ಹಿಮಚಿರಿತೆ, ಕತ್ತೆಕಿರುಬ, ಕಾಡುಕತ್ತೆ, ಗೆಜಲ್ಲಾ, ಸೀಗಾ, ಕವಟ್‌ಗಾಯ್ (ಕಾಡು ಒಂಟೆ), ಗೋಬಿನರಿ, ತೋಳಗಳು ಇತ್ಯಾದಿ ಪ್ರಾಣಿಗಳಿವೆ. ಅನೇಕ ರೀತಿಯ ಸಸ್ಯ ಸಂಪತ್ತು ಇದೆ. ಜೊತೆಗೆ ಹಲವು ಖನಿಜ ನಿಕ್ಷೇಪಗಳೂ ಇವೆ.

ರಷ್ಯಾ ದೇಶದ ಪ್ರಜ್ವಲಸ್ಕೀ ಎಂಬುವನು ಮಂಗೋಲಿಯಾದ ಟಕ್ಕಿ ಎನ್ನುವ ಕುದುರೆಯನ್ನು ೧೯ನೇ ಶತಮಾನದಲ್ಲಿ ಯುರೋಪಿಯನ್ನರಿಗೆ ತೋರಿಸಿಕೊಟ್ಟ. ಹೊಸದಾಗಿ ಹುಟ್ಟಿದ ಟಕ್ಕಿ ನೇರವಾಗಿ ನೆಲದ ಮೇಲೆ ನಿಂತುಕೊಳ್ಳುತ್ತದೆ. ಅದರ ಕಿವಿಗಳು ಆರಿದ ಮೇಲೆ ಅದನ್ನು ಯಾರೂ ಹಿಡಿಯಲಾರರು. ಇದೇ ಗೋಬಿ ಪ್ರದೇಶದಲ್ಲಿದ್ದ ಕರಾಕೋಟಾ ಎಂಬ ನಗರವನ್ನು ೧೪ನೇ ಶತಮಾನದಲ್ಲಿ ಚೀನಾದ ಮಿಂಗ್ ರಾಜರು ಪೂರ್ಣವಾಗಿ ಧ್ವಂಸ ಮಾಡಿದರೆಂದು ತಿಳಿದುಬರುತ್ತದೆ.

ಕ್ರಿ.ಶ. ೧೯೯೦ ರಲ್ಲಿ ನಡೆಸಿದ ಸಂಶೋಧನೆಗಳಿಂದ ಗೋಬಿ ಪ್ರದೇಶಗಳಲ್ಲಿ ೮೦ ಮಿಲಿಯ ವರ್ಷಗಳ ಹಿಂದೆ ಹಲ್ಲಿ, ಮೊಸಳೆ ಮತ್ತು ಸಸ್ತನಿ ಕುಟುಂಬಗಳಿಗೆ ಸೇರಿದ ದೈತ್ಯ ಪ್ರಾಣಿಗಳು ವಾಸಿಸುತ್ತಿದ್ದವು. ೩೦ ಪ್ರಕಾರಗಳ ಹಲ್ಲಿ ಪ್ರಭೇದಗಳ ಪಳೆಯುಳಿಕೆಗಳು ದೊರಕಿವೆ. ಪ್ರಸ್ತುತ ಭೂಮಿಯ ಮೇಲೆ ಜೀವಿಸುತ್ತಿರುವ ಏಕೈಕ ಕೊಮೊಡೊ. ಹಲ್ಲಿ ಕುಟುಂಬಕ್ಕೆ ಹತ್ತಿರದ ಕೊಮೊಡೊ ಡ್ರ್ಯಾಗನ್ ಸ್ಕೇಲುಗಳು ದೊರಕಿವೆ. ಇದರ ಬಾಯಲ್ಲಿ ೮ ಅಂಗುಲ ಉದ್ದದ ಕತ್ತಿಯಂತ ಕ್ರೂರ ಹಲ್ಲುಗಳು ಇದ್ದವು. ಒಟ್ಟಿನಲ್ಲಿ ಹಲ್ಲಿಗೆ ಸಂಬಂಧಪಟ್ಟ ಅನೇಕ ಜೀವ ವಿಕಾಸದ ಕೊಂಡಿಗಳು ಗೋಬಿ ಪ್ರದೇಶದಲ್ಲಿ ಜೀವಿಸುತ್ತಿದ್ದಿದ್ದು ದೃಢಪಟ್ಟಿದೆ. ಈ ಪ್ರಭೇದಗಳೆಲ್ಲ ಕ್ರಿಟೇಷಿಯಸ್ ಯುಗಕ್ಕೆ ಸೇರಿದವು.

ಇವುಗಳ ಜೊತೆಗೆ ಅನೇಕ ರೀತಿಯ ಪೆಡಂಭೂತಗಳು ಮತ್ತು ಅವುಗಳ ಮೊಟ್ಟೆಗಳು ರಾಶಿರಾಶಿಯಾಗಿ ದೊರಕಿವೆ. ತೀರೋಪಾಡ್ ಪೆಡಂಭೂತಗಳು, ಟೈರನೋಸಾರಸ್ ಮತ್ತು ಅಲ್ಲೊಸಾರಸ್, ಡ್ರೊಮೀಯೊಸಾರಸ್ ಪ್ರಭೇದಗಳು ಸುಮಾರು ೬೦ ಮಿಲಿಯ ವರ್ಷಗಳ ಕಾಲ ಇಲ್ಲಿ ಜೀವಿಸಿದ್ದವು. ಎಷ್ಟೇಷಿಯಾ ಎನ್ನುವ ದೈತ್ಯ ಪೆಡಂಭೂತಗಳು, ಸಸ್ತನಿಗಳನ್ನು, ಸಣ್ಣ ಸಣ್ಣ ಪೆಡಂಭೂತಗಳನ್ನು ಮತ್ತು ಅವುಗಳ ಮೊಟ್ಟೆಗಳನ್ನು ನುಂಗಿರುವುದನ್ನು ಎಷ್ಟೇಷಿಯಾಗಳ ಹೊಟ್ಟೆಯಲ್ಲಿರುವುದು ಕಂಡುಬಂದಿದೆ. ಭೂಮಿಯ ಮೇಲೆ ಗೋಬಿ ಪ್ರದೇಶ ಪೆಡಂಭೂತಗಳಿಗೆ ಒಂದು ಸಮೃದ್ಧ ಬಯಲಾಗಿತ್ತು. ಕ್ರಿಟೇಷಿಯಸ್ ಯುಗದ ಅಂತಿಮದಲ್ಲಿ ನೀರಿನ ಅಭಾವದಿಂದ ಗೋಬಿ ಪ್ರದೇಶ ಪೂರ್ಣವಾಗಿ ಒಣಗಿಹೋಗಿತ್ತು. ಕೆಲವು ಭಾಗಗಳಲ್ಲಿ ಮಾತ್ರ ನೀರಿದ್ದುದ್ದನ್ನು ಆಮೆಗಳ ಪಳೆಯುಳಿಕೆಗಳೆಂದು ಗುರುತಿಸಲಾಗಿದೆ.

ಉಕಾ ತೊಲ್‌ಗಾಡ್ ಪ್ರದೇಶದಲ್ಲಿ ಕೇವಲ ಕೆಲವು ಅಂಗುಲ ಎತ್ತರದ ಪುಟ್ಟ ಇಲಿಯಾಕಾರದ ಸಸ್ತನಿಗಳನ್ನು ಗುರುತಿಸಲಾಗಿದೆ. ಇವು ಟರ್ಷಿಯನ್ ಯುಗಕ್ಕೆ ಸೇರಿದ ಇಲಿಗಳಾಗಿದ್ದು ಜೀವ ವಿಕಾಸದಲ್ಲಿ ಇಂದಿನ ಇಲಿಗಳ ಕೊಂಡಿಗಳಾಗಿವೆ. ತೀರಿಯನ್ ಎಂದು ಕರೆಯುವ ಪ್ರಾಣಿಗಳು ಜೀವವಿಕಾಸದಲ್ಲಿ ಸಮುದ್ರದಲ್ಲಿನ ತಿಮಿಂಗಲಗಳಿಂದ ಬಾವಲಿಗಳವರೆಗಿನ ಕೊಂಡಿಗಳು ಎಂದು ಗುರುತಿಸಲಾಗಿದೆ. ಇವು ಕೂಡ ಗೋಬಿ ಪ್ರದೇಶಗಳಲ್ಲಿ ಜೀವಿಸುತ್ತಿದ್ದವು.

ಗೋಬಿ ಮರಳುಗಾಡಿನ ಉಲಾನ್ ಬಾಟರ್ ಎನ್ನುವ ಒಂದು ಪ್ರದೇಶವನ್ನು ನೈಸರ್ಗಿಕ ಸಂಗ್ರಹಾಲಯ ಎಂದು ಕರೆಯಲಾಗುತ್ತದೆ. ಉಲಾನ್ ಬಾಟರ್ ಪ್ರದೇಶದಲ್ಲಿ ಹಕ್ಕಿಗಳು, ಪೆಡಂಭೂತಗಳು, ಉರಗಗಳು ಮತ್ತು ಸಸ್ತನಿಗಳ ಪಳೆಯುಳಿಕೆಗಳು ಹೇರಳವಾಗಿ ದೊರಕಿವೆ. ಪೆಡಂಭೂತಗಳಲ್ಲಿ ಹಲವು ರೀತಿ, ಕೆಲವು ಹಕ್ಕಿಗಳಿಗೆ ಹತ್ತಿರವಾದರೆ ಕೆಲವು ಉರಗಗಳಿಗೆ ಹತ್ತಿರ. ಕೆಲವು ಪೂರ್ಣವಾಗಿ ಸಸ್ಯಾಹಾರಿಗಳಾದರೆ ಕೆಲವು ಪೂರ್ಣವಾಗಿ ಮಾಂಸಾಹಾರಿಗಳು. ಕೆಲವು ಸಸ್ಯ ಮತ್ತು ಮಾಂಸಾಹಾರಿಗಳು. ಕೆಲವು ನೀರಿನಲ್ಲಿ ಈಜಿಕೊಂಡಿದ್ದರೆ, ಕೆಲವು ನೆಲಕ್ಕೆ ಅಂಟಿಕೊಂಡವು. ಕೆಲವು ಮರಗಳನ್ನು ಹತ್ತುವ ಪ್ರಾಣಿಗಳಾದರೆ, ಕೆಲವು ಗಾಳಿಯಲ್ಲಿ ಹಾರುವ ಪ್ರಾಣಿಗಳು. ಅಂದರೆ ಗೋಬಿ

ಮರಳುಗಾಡಿನಲ್ಲಿ ಜೀವವಿಕಾಸದ ಎಲ್ಲಾ ಲಕ್ಷಣಗಳುಳ್ಳ ಪ್ರಾಣಿಗಳನ್ನು ನೋಡಬಹುದು. ಅಂತು ಈ ಎಲ್ಲಾ ಪ್ರಾಣಿಗಳ ಪಳೆಯುಳಿಕೆಗಳಿರುವ ನೈಸರ್ಗಿಕ ಸಂಗ್ರಹಾಲಯವೆ ಈ ಗೋಬಿ ಮರಳುಗಾಡು.

ರೇಷ್ಮೆ ರಸ್ತೆ : ಕ್ರಿ.ಪೂ. ೧೩೯ ರಲ್ಲಿ ಚೀನಾದ ರಾಜರುಗಳು ಜ್ಹಾಂಗ್ ಎಂಬವನ ಜೊತೆಗೆ ೧೦೦ ಜನರನ್ನು ಆಯ್ಕೆ ಮಾಡಿ ಇಂದಿನ ಜೀಯ್ಹಾಂಗ್ ನಗರದಿಂದ ಪಶ್ಚಿಮದ ಕಡೆಗೆ ಕಳುಹಿಸಿಕೊಟ್ಟಿದ್ದರು. ೧೩ ವರ್ಷಗಳ ನಂತರ ಅವರಲ್ಲಿ ಕೇವಲ ೩ ಜನರು ಮಾತ್ರ ಹಿಂದಿರುಗಿ ಬಂದಿದ್ದರು. ಅದು ರೇಷ್ಮೆ ರಸ್ತೆಯ ಮೊದಲ ಪ್ರಯತ್ನ. ಈ ರಸ್ತೆ ಗೋಬಿ ಮರಳುಗಾಡು ಮತ್ತು ಟಕ್ಲಾಮಕನ್ ಪ್ರದೇಶಗಳ ಮೂಲಕ ಪೂರ್ವಚೀನಾದಿಂದ ಪ್ರಾರಂಭವಾಗಿ ಪೂರ್ವ ಮೆಡಿಟರೆನಿಯನ್‌ವರೆಗೂ ತಲುಪಿತ್ತು. ಈ ರಸ್ತೆಯ ಮೂಲ ಉದ್ದೇಶ ವ್ಯಾಪಾರ ಸಾಗಣಿಯ ಜೊತೆಗೆ ಎರಡೂ ಕಡೆ ಜ್ಞಾನ ಮತ್ತು ಸಂಸ್ಕೃತಿಯನ್ನು ಹರಡುವುದಾಗಿತ್ತು.

ಈ ರಸ್ತೆ ಉತ್ತರ ಚೀನಾದ ಜೀಯಾನ್‌ನಿಂದ ಪ್ರಾರಂಭವಾಗಿ ದೋಹ್ಹಾಂಗ್ ಮತ್ತು ಪಶ್ಚಿಮ ಮರಳುಗಾಡು, ಹಿಮಾವೃತ ಪರ್ವತ ಕಣಿವೆಗಳ ಮೂಲಕ ಇರಾನ್ ಸಮತಟ್ಟು ಪ್ರದೇಶದ ಮೂಲಕ ರೇಷ್ಮೆ ರಸ್ತೆ ಸಾಗಿತ್ತು. ಸಾವಿರಾರು ಕಿ.ಮೀ.ಗಳ ದೂರದ ಈ ರಸ್ತೆಯನ್ನು ದಾಟುವುದು ಹರ ಸಾಹಸವೆ ಆಗಿತ್ತು. ಕ್ರಿ.ಶ.೧೩ನೇ ಶತಮಾನದಲ್ಲಿ ಸಮುದ್ರದ ಮೂಲಕ ಹಡುಗುಗಳಲ್ಲಿ ಪ್ರಯಾಣ ಪ್ರಾರಂಭವಾಗುವವರೆಗೆ ಈ ರಸ್ತೆಯಲ್ಲಿ ವ್ಯಾಪಾರ ನಡೆದಿತ್ತು. ಈ ರಸ್ತೆಯ ಮೂಲಕ ಚೀನಾದಿಂದ ಪಶ್ಚಿಮ ದೇಶಗಳಿಗೆ ರೇಷ್ಮೆ, ಕಿತ್ತಳೆ ಮತ್ತು ಪೀಚ್ ಹಣ್ಣುಗಳು, ಗನ್‌ಪುಡಿ, ಕಾಗದ, ಉತ್ತರಮುಖಿ (ಕಾಂಪಾಸ್) ಮತ್ತು ಮುದ್ರಣ ತಂತ್ರಜ್ಞಾನ ಸಾಗಿತ್ತು. ಪಶ್ಚಿಮ ದೇಶಗಳಿಂದ ಚೀನಾ ದೇಶಕ್ಕೆ ದೊರೆತ ವಸ್ತುಗಳೆಂದರೆ ಸೌತೆಕಾಯಿ, ಎಳ್ಳು, ದ್ರಾಕ್ಷಿ, ಉಣ್ಣೆ, ಲೆನಿನ್ ಬಟ್ಟೆ ಮತ್ತು ಆನೆ ದಂತ.

* * *

ಸಾಯಂಕಾಲ ೫:೩೦ಕ್ಕೆ ಎಲ್ಲರೂ ರೆಸ್ಟಾರೆಂಟಿನಲ್ಲಿ ಸೇರಿದೆವು. ಹಸಿರು ಚಹಾದಿಂದ ಡಿನ್ನರ್ ಪ್ರಾರಂಭವಾಯಿತು. ನಾವಿದ್ದ ಟೇಬಲ್ ಮುಂದೆ ೧೨ ಜನರಿದ್ದೆವು. ಮೂವರು ಹುಡುಗಿಯರು ಭಕ್ಷ್ಯಗಳನ್ನು ಬಡಿಸತೊಡಗಿದರು. ಒಂದು ಹುಡುಗಿ ಚಹ, ಬೀರು ಕೋಕ್‌ಗಳನ್ನು ಗ್ಲಾಸುಗಳಿಗೆ ಸುರಿದು ಕೊಡುತ್ತಿದ್ದರೆ, ಇನ್ನೊಂದು ಹುಡುಗಿ "ಎಕ್ಸ್‌ಕ್ಯೂಸ್ಮಿ... ಎಕ್ಸ್‌ಕ್ಯೂಸ್ಮಿ..." ಎನ್ನುತ್ತಾ ಒಂದೊಂದೆ ಭಕ್ಷ್ಯಗಳುಳ್ಳ ತಟ್ಟೆಗಳನ್ನು ಸುತ್ತುವ ಗ್ಲಾಸ್ ಟೇಬಲ್ ಮೇಲೆ ತಂದು ತಂದು ಇಡುತ್ತಿದ್ದಳು. ಮತ್ತೊಂದು ಹುಡುಗಿ ಕಿಚನ್‌ನಿಂದ ಭಕ್ಷ್ಯಗಳನ್ನು ತಂದು ತಂದು ಕೊಡುತ್ತಿದ್ದಳು.

ಆ ಕೋಣೆಯ ಒಂದು ಮೂಲೆಯಲ್ಲಿ ಗೋಡೆಯ ಮೇಲೆ ಒಂದು ದೊಡ್ಡದಾದ ಹಳೆ ಕಾಲದ ಪೇಯಿಂಟ್ ಮಾಡಿದ ಫೋಟೊ ನೇತು ಹಾಕಲಾಗಿತ್ತು. ಕತ್ತಿಯಂತಹ

ಕಣ್ಣುಬ್ಬುಗಳು, ಅದರ ಕೆಳಗೆ ಎಂತಹವರಿಗೂ ದಿಗಿಲು ಹುಟ್ಟಿಸುವ ಕ್ರೂರವಾದ ಕಣ್ನೋಟ, ಗೋಬಿ ಮರಳುಗಾಡಿನ ಹೋತ ಗಡ್ಡ. ಕಿವಿಯಲ್ಲಿ ಉಂಗುರಗಳಿವೆ. ತಲೆಗೆ ಒಂದು ಬಟ್ಟೆಯನ್ನು ಸುತ್ತಿಕೊಳ್ಳಲಾಗಿದೆ. ಅದು ಮಂಗೋಲಿಯ ಪ್ರದೇಶವಾಗಿದ್ದರಿಂದ ಆ ಫೋಟೋ ಭೂಲೋಕದ ಅತಿ ಭಯಂಕರ ಜಂಗೀಸ್‌ಖಾನ್ ಫೋಟೋ ಇರಲೇಬೇಕು? ಆ ಫೋಟೋ ನನ್ನನ್ನು ವಿಶೇಷವಾಗಿ ಆಕರ್ಷಿಸಿ "ಆ ಫೋಟೋದಲ್ಲಿರುವವರು ಯಾರು?" ಕೇಳಿದೆ. ಸನ್ ಬಿನ್ "ಪ್ರಾಬಲಿ ಜಂಗೀಸ್‌ಖಾನ್" ಎಂದ. ಅನಂತರ ಹೋಟಲಿನವರನ್ನು ಕೇಳಿದಾಗ ಅವರು ಬಹಳ ಖುಷಿಯಿಂದ ವಿಚಿತ್ರ ಆಕ್ಸೆಂಟ್‌ನಲ್ಲಿ "ಜಂಗೀಸ್" ಎಂದರು.



ಜಂಗೀಸ್‌ಖಾನ್‌ನ ರಕಸಿಕ್ತ ನಾಡು

ಚೀನಾದಲ್ಲಿ ಇದುವರೆಗೂ ೩೫,೦೦೦ ಕಿ.ಮೀ. ದೂರದ ಎಕ್ಸ್‌ಪ್ರೆಸ್ ರಸ್ತೆಗಳನ್ನು ನಿರ್ಮಿಸಲಾಗಿದೆ. ಭಾರತದಲ್ಲಿ ಕೇವಲ ೫೦೦೦ ಕಿ.ಮೀ. ದೂರದ ಎಕ್ಸ್‌ಪ್ರೆಸ್ ರಸ್ತೆಗಳನ್ನು ನಿರ್ಮಿಸಲಾಗಿದೆ.

ಮಂಗೋಲರ ಒಂದು ಬುಡಕಟ್ಟು ನಾಯಕನಾದ ಎಸುಗೆ ಎಂಬವನ ಮಗನಾಗಿ ಜಂಗೀಸ್‌ಖಾನ್ ಜನ್ಮ ತಾಳಿದ. ಹುಟ್ಟಿದಾಗ ಇವನನ್ನು ತೆಮುಝಿನ್ ಎಂದು ಕರೆಯಲಾಯಿತು. ಸ್ಥಳೀಯ ಭಾಷೆಯಲ್ಲಿ ತೆಮುಝಿನ್ ಎಂದರೆ ಕಬ್ಬಿಣದ ಕೆಲಸಗಾರ. ತೆಮುಝಿನ್ ಹುಟ್ಟಿದಾಗ ಅವನ ಮುಷ್ಟಿಯಲ್ಲಿ ರಕ್ತ ಹೆಪ್ಪು ಕಟ್ಟಿಕೊಂಡಿದ್ದರಿಂದ ಅವನು ಒಬ್ಬ ಮಹಾಯೋಧನಾಗುವನೆಂದು ಹೇಳಲಾಯಿತು.

ತೆಮುಝಿನ್‌ಗೆ ೧೩ ವರ್ಷಗಳು ತುಂಬುವವರೆಗೂ ಅವನ ಬಗ್ಗೆ ಯಾವ ವಿವರಗಳೂ ದೊರಕುವುದಿಲ್ಲ. ಅವನಿಗೆ ೧೩ ವರ್ಷಗಳು ತುಂಬಿದಾಗ ಅವನ ತಂದೆ ಅವನಿಗೆ ಮದುವೆ ಮಾಡಲು ಒಂದು ಹುಡುಗಿಯನ್ನು ಹುಡುಕತೊಡಗಿದ. ಹತ್ತಾರು ತಿಂಗಳ ಕಾಲ ತೆಮುಝಿನ್ ಮತ್ತು ಅವನ ತಂದೆ ಹುಡುಗಿಯನ್ನು ಹುಡುಕಾಡಿದ ಮೇಲೆ ಮಂಗೋಲರ ಒಂದು ಒಳ್ಳೆ ಬುಡುಕಟ್ಟಿನ ಜನಾಂಗ ದೊರಕಿತು. ಆ ಬುಡಕಟ್ಟು ನಾಯಕನ ಮಗಳಾದ ಬೋರ್ಟೆ ಎಂಬುವಳನ್ನು ತೆಮುಝಿನ್‌ಗೆ ಮದುವೆ ಮಾಡಲಾಯಿತು.

ತೆಮುಝಿನ್ ಚಿಕ್ಕವನಾಗಿದ್ದಾಗಲೆ ಟಾಟರ್ ಎಂಬ ಬುಡಕಟ್ಟಿನ ಜನರು ತೆಮುಝಿನ್ ತಂದೆಗೆ ವಿಷ ಉಣಿಸಿ ಸಾಯಿಸಿಬಿಟ್ಟರು. ಆಗ ಪೂರ್ವ ಮಂಗೋಲಿಯಾ ಪ್ರಾಂತ್ಯದಲ್ಲಿ ಟಾಟರ್ ಬುಡಕಟ್ಟಿನ ಜನರದೆ ಪ್ರಾಬಲ್ಯವಿದ್ದು ಉಳಿದ ಬುಡಕಟ್ಟುಗಳ ವಿರುದ್ಧ ಕಿಡಿಕಾರುತ್ತಿದ್ದರು. ತೆಮುಝಿನ್ ತನ್ನ ತಂದೆ ಸಾವಿನಿಂದ ದುಃಖಿತನಾಗಿ ಪತ್ನಿಯನ್ನು ತೊರೆದು ಬಂದು ತನ್ನ ಬುಡಕಟ್ಟಿನ ಜನರ ಜೊತೆಗೆ ಸೇರಿಕೊಂಡುಬಿಟ್ಟ. ತೆಮುಝಿನ್ ನನ್ನ ತಂದೆಯನ್ನು ಸಾಯಿಸಿದವರ ವಿರುದ್ಧ ಸೇಡು ತೀರಿಸಿಕೊಳ್ಳಲು ನನ್ನನ್ನು ಬುಡಕಟ್ಟಿನ

ನಾಯಕನಾಗಿ ಮಾಡಿ ಎಂದು ತನ್ನ ಬುಡಕಟ್ಟಿನವರನ್ನು ಕೇಳಿದ. ನೀನು ಇನ್ನೂ ಚಿಕ್ಕವನು ನಿನಗೆ ನಾಯಕನಾಗುವ ಯಾವ ಅರ್ಹತೆಯೂ ಇಲ್ಲ ಎಂದು ಅವನನ್ನು ಬುಡಕಟ್ಟಿನಿಂದ ಹೊರಗಾಕಲಾಯಿತು. ಇದರಿಂದ ಕೋಪಗೊಂಡ ತೆಮುಝಿನ್ ತನ್ನ ಬುಡಕಟ್ಟಿನ ಜನರ ವಿರುದ್ಧವೆ ಹೋರಾಡಲು ತೀರ್ಮಾನಿಸಿಬಿಟ್ಟ.

ಆಗ ತೆಮುಝಿನ್ ಕುಟುಂಬದವರು ಮಂಗೋಲಿನ ಬಯಲು ಪ್ರದೇಶಕ್ಕೆ ಹೋಗಿ ತಲೆ ಮರೆಸಿಕೊಳ್ಳಬೇಕಾಗುತ್ತದೆ. ಇದೇ ಸಮಯದಲ್ಲಿ ತೆಮುಝಿನ್ ಸಹೋದರ ಕಳ್ಳತನ ಮಾಡಿ ಸಿಕ್ಕಿಕೊಂಡಾಗ ತೆಮುಝಿನ್ ತನ್ನ ಸಹೋದರನನ್ನೆ ಕೊಲೆ ಮಾಡಿಬಿಡುತ್ತಾನೆ. ಈ ವಿಷಯ ಕಾಡ್ಗಿಚ್ಚಿನಂತೆ ಸುತ್ತಲ ಪ್ರದೇಶಗಳಲ್ಲಿ ಹರಡುತ್ತಿದ್ದಂತೆ ಮತ್ತು ಬುಡಕಟ್ಟುಗಳ ನಡುವೆ ನಡೆದ ಅನೇಕ ಹೋರಾಟಗಳಲ್ಲಿ ಪಾಲ್ಗೊಂಡ ತೆಮುಝಿನ್ ಹೆಸರು ಬುಡಕಟ್ಟುಗಳ ನಡುವೆ ಮತ್ತಷ್ಟು ಪ್ರಖ್ಯಾತಗೊಳ್ಳುತ್ತದೆ.



ಮಂಗೋಲರ ಒಂದು ಜಾನಪದ ನೃತ್ಯ

ಈ ನಡುವೆ ತೆಮುಝಿನ್‌ಗೆ ಭೋಗರ್ಚಿ ಎನ್ನುವವನ ಸಾನ್ನಿಧ್ಯ ದೊರಕುತ್ತದೆ. ನಾಲ್ಕು ವರ್ಷಗಳ ನಂತರ ತೆಮುಝಿನ್ ತನ್ನ ಪತ್ನಿಯನ್ನು ಮತ್ತೆ ಕೂಡಿಕೊಳ್ಳುತ್ತಾನೆ. ಆಕೆಯ ತಂದೆ ಮದುವೆಯ ಸೆನಪಿಗಾಗಿ ತೆಮುಝಿನ್‌ಗೆ ಕೃಷ್ಣಮೃಗದ ಒಂದು ಕಪ್ಪು ಚರ್ಮವನ್ನು ಉಡುಗೆಯಾಗಿ ನೀಡಿರುತ್ತಾನೆ. ಅದು ಅವನ ಜೀವನದಲ್ಲಿ ದೊಡ್ಡ ಕೊಡುಗೆಯಾಗುತ್ತದೆ. ಇದರಿಂದ ತೆಮುಝಿನ್ ತನ್ನ ತಂದೆಯ ಸಹೋದರ ತೊಗ್‌ರುಲ್‌ನ ಮೂಲಕ ತನ್ನ ಬುಡಕಟ್ಟು ಜನರನ್ನು ಮತ್ತೊಮ್ಮೆ ಕೂಡಿಕೊಳ್ಳುತ್ತಾನೆ. ಅನಂತರ ತೆಮುಝಿನ್ ತನ್ನ ಬುಡಕಟ್ಟಿನ ನಾಯಕನಾಗಿ ಟಾಟಾರ ವಿರುದ್ಧ ಸೇಡು ತೀರಿಸಿಕೊಳ್ಳಲು ಸಂಘಟಿತನಾಗುತ್ತಾನೆ.

ತೆಮುಜ಼ಿನ್‌ಗೆ ೧೭ ವಯಸ್ಸು ತುಂಬಿದಾಗಲೆ ಅವನ ಹೆಸರು ಪ್ರಖ್ಯಾತಗೊಂಡಿರುತ್ತದೆ. ತೆಮುಜ಼ಿನ್ ಮತ್ತು ತೊಗ್‌ರುಲ್ ಇಬ್ಬರೂ ಕೂಡಿ ಮಂಗೋಲ್‌ನ ಎಲ್ಲಾ ಬುಡಕಟ್ಟುಗಳನ್ನು ಒಟ್ಟುಗೂಡುವಂತೆ ಕೇಳಿಕೊಳ್ಳುತ್ತಾರೆ. ಆದರೆ ಅವರ ಮಾತುಗಳನ್ನು ಕೇಳದೆ ಎದುರು ನಿಂತ ಶತ್ರುಗಳನ್ನು ಸದೆಬಡಿಯುತ್ತಾ ಹೋಗುತ್ತಾರೆ. ಕೊನೆಗೆ ಇವರ ಜತೆಗೂಡಲು ಬುಡಕಟ್ಟುಗಳ ಸಾವಿರಾರು ಕುಟುಂಬಗಳು ಆಹಾರ ಧಾನ್ಯಗಳು ಮತ್ತು ಆಯುಧಗಳ ಸಮೇತ ಇವರ ಕಡೆಗೆ ಧಾವಿಸಿಬರುತ್ತಾರೆ.

ತೆಮುಜ಼ಿನ್ ಈಗ ಮುಖ್ಯ ನಾಯಕನಾಗಿ ಎಲ್ಲವನ್ನೂ ವ್ಯವಸ್ಥಿತವಾಗಿ ಸಂಘಟಿಸಲು ತೊಡಗುತ್ತಾನೆ. ಬುಡಕಟ್ಟು ಜನರನ್ನು ಗುಂಪು ಗುಂಪಾಗಿ ವಿಂಗಡಿಸಿ ಪ್ರತಿಯೊಬ್ಬರ ಕಾರ್ಯವನ್ನು ವಿವರಿಸುತ್ತಾನೆ. ಎಲ್ಲರೂ ತಮ್ಮ ತಮ್ಮ ಆಹಾರವನ್ನು ತಾವೆ ಹೊರಬೇಕು. ಅದರಲ್ಲೂ ಮುಖ್ಯವಾಗಿ ಚಮರೀ ಮೃಗದ ಹಾಲಿನ ಪುಡಿ. ಆಹಾರ ದೊರಕದೆ ತೀರ ತೊಂದರೆಯಲ್ಲಿದ್ದಾಗ ಅವರವರ ಕುದುರೆಗಳ ನರಗಳನ್ನು ಸೀಳಿ ರಕ್ತವನ್ನು ಕುಡಿಯುವಂತೆ ಆಜ್ಞೆ ಮಾಡುತ್ತಾನೆ.

ಕ್ರಿ.ಶ.೧೧೮೩ ರಲ್ಲಿ ಮಂಗೋಲರು ತೆಮುಜ಼ಿನ್‌ನನ್ನು ತಮ್ಮ ಪೂರ್ಣಪ್ರಮಾಣದ ನಾಯಕ ಖಾನ್‌ರಲ್ಲಿ ಖಾನ್ ಜಂಗೀಸ್‌ಖಾನ್ ಎಂದು ಘೋಷಿಸಿದರು ಜಂಗೀಸ್‌ಖಾನ್ ಇನ್ನೂ ಎಳೆಯನೆ ಆಗಿದ್ದು ಇನ್ನೂ ಸ್ವಲ್ಪ ದಿನಗಳು ಕಾಯಬೇಕು ಎನ್ನುವುದಾಗಿ ಎಲ್ಲರೂ ತೀರ್ಮಾನಿಸುತ್ತಾರೆ. ಜಂಗೀಸ್ ಅಥವಾ ಜೆನ್‌ಗೀಸ್ ಅಂದರೆ ಏನು ಎನ್ನುವುದರ ಬಗ್ಗೆ ಚರ್ಚೆ ಪ್ರಾರಂಭವಾಗುತ್ತದೆ. ಕೆಲವರು ಜಂಗೀಸ್ ಎಂದರೆ ಮುಖ್ಯ ಯೋಧನೆಂದರೆ ಕೆಲವರು ಚೈತನ್ಯದ ಬೆಳಕು ಎನ್ನುತ್ತಾರೆ. ಒಟ್ಟಿನಲ್ಲಿ ಜಂಗೀಸ್ ಎಂದರೆ ಅಪ್ಪಣೆ ನೀಡುವ ಸಾಮ್ರಾಟ ಎನ್ನತ್ತಾರೆ. ಹಿರಿಯರೆಲ್ಲರೂ ಕೂಡಿ "ಈಹ್ ಜಸಾಗ್" ಎನ್ನುವ ಕಾನೂನು ತರುತ್ತಾರೆ.



ಜಂಗೀಸ್ ಖಾನ್

ಅಂತೂ ಕೆಲವು ತಕರಾರುಗಳ ಮಧ್ಯೆಯೆ ತೆಮುಜಿನ್‌ನನ್ನು ಕೊನೆಗೂ ತಮ್ಮ ನಾಯಕನನ್ನಾಗಿ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಅನಂತರ ಹಲವು ವರ್ಷಗಳ ಕಾಲ ತೆಮುಜಿನ್ ಬಗ್ಗೆ ಚರ್ಚೆಗಳು ನಡೆಯುತ್ತವೆ. ತೆಮುಜಿನ್‌ನ ಬಾಲ್ಯ ಗೆಳೆಯ ಜಮುಗಾ ಇನ್ನೊಂದು ಬುಡಕಟ್ಟಿನ ನಾಯಕನಾಗಿದ್ದು ಅವನನ್ನು ತನ್ನ ಜೊತೆಗೆ ಸೇರಿಕೊಳ್ಳುವಂತೆ ತೆಮುಜಿನ್ ಕೇಳಿಕೊಳ್ಳುತ್ತಾನೆ. ಜಮುಗಾ ಒಪ್ಪಿಕೊಳ್ಳುವುದಿಲ್ಲ ಇಬ್ಬರ ಮಧ್ಯೆ ಹಲವು ಯುದ್ಧಗಳು ನಡೆಯುತ್ತವೆ. ಕ್ರಿ.ಶ.೧೨೦೧ ರಲ್ಲಿ ಜಮುಗಾನ ಯೋಧರನ್ನು ನಾಶಮಾಡಲಾಯಿತು. ಕ್ರಿ.ಶ.೧೨೦೩ ರಲ್ಲಿ ಜಮುಗಾ ಅಂತಿಮವಾಗಿ ತನ್ನ ರಕ್ತ ನೆಲದ ಮೇಲೆ ಬೀಳದೆ ಸಾಯಿಸುವಂತೆ ವಿನಂತಿಸಿಕೊಳ್ಳುತ್ತಾನೆ. ತೆಮುಜಿನ್ ತನ್ನ ಹಳೆ ಗೆಳಯನನ್ನು ಉಸಿರು ಕಟ್ಟಿ ಹಾಗೆ ಸಾಯಿಸುತ್ತಾನೆ.

ಅತ್ಯಂತ ಸಂತೋಷದ ವಿಷಯವೆಂದರೆ

ಶತ್ರುಗಳನ್ನು ಸಾಯಿಸುವುದು. ನನ್ನನ್ನು

ಓಡಿಸಿಕೊಂಡು ಬರುವುದಕ್ಕಿಂತ

ಮುಂಚೆ ಅವರನ್ನೇ ಅಟ್ಟಿಸಿಕೊಂಡು

ಓಡುವುದು. ಶತ್ರುಗಳಿಂದ ಎಲ್ಲವನ್ನು

ದೋಚುವುದು, ಅವರ ಸಂಬಂಧಿಗಳು

ಕಣ್ಣೀರು ಹಾಕುವುದನ್ನು ನೋಡುವುದು

ಅವರ ಪತ್ನಿಯರು ಮತ್ತು ಮಕ್ಕಳನ್ನು

ಅವರ ಎದುರಿಗೆ ಎದೆಗೆ ಅವಿಚಿಕೊಳ್ಳವುದು

–ಜಂಗೀಸ್‌ಖಾನ್

ಕ್ರಿ.ಶ.೧೨೦೬ರ ಹೊತ್ತಿಗೆ ಜಂಗೀಸ್‌ಖಾನ್ ಖಾನರ ಖಾನ್, ರಾಜರ ರಾಜ ಎನ್ನುವ ಬಿರುದುಗಳೊಂದಿಗೆ ವಿಜೃಂಭಿಸತೊಡಗಿದ. ಮಂಗೋಲ್‌ನ ಎಲ್ಲಾ ಬುಡಕಟ್ಟುಗಳು ಈಗ ಜಂಗೀಸ್‌ಖಾನ್‌ನ ಕೆಳಗೆ ಒಟ್ಟುಗೂಡಿದ್ದವು. ಕ್ರಿ.ಶ.೧೨೦೭ರಲ್ಲಿ ಜಂಗೀಸ್‌ಖಾನ್ ಮೊದಲಿಗೆ ತನ್ನ ಪ್ರದೇಶವನ್ನು ವಿಸ್ತರಿಸಲು ಪ್ರಾರಂಭಿಸಿದ.

ಆ ಕಾಲಕ್ಕೆ ಚೀನಾ ದೇಶ ಮುಖ್ಯವಾಗಿ ಮೂರು ಸಾಮ್ರಾಜ್ಯಗಳಾಗಿ ಪ್ರತ್ಯೇಕಗೊಂಡಿತ್ತು. ಒಂದು ಕ್ವಿನ್ ರಾಜ್ಯ, ಉತ್ತರದಲ್ಲಿ ಟಂಗಟ್ ಮತ್ತು ದಕ್ಷಿಣದಲ್ಲಿ ಸಂಗ್ ಸಾಮ್ರಾಜ್ಯಗಳು. ಜಂಗೀಸ್‌ಖಾನ್ ಮೊದಲಿಗೆ ಟಂಗಟ್ (ಇಂದಿನ ಜಿನ್‌ಜಿಯಾಂಗ್) ಪ್ರದೇಶವನ್ನು ಯುದ್ಧ ಮಾಡಿ ಆಕ್ರಮಿಸಿಕೊಂಡ. ಅನಂತರ ಪೆಕ್ಕಿಂಗ್ (ಈಗ ಬೀಜಿಂಗ್, ಚೀನಾದ ರಾಜಧಾನಿ) ನಗರವಿರುವ ಕ್ವಿನ್ ಪ್ರದೇಶವನ್ನು

ಕ್ರಿ.ಶ.೧೨೧೫ರಲ್ಲಿ ಆಕ್ರಮಿಸಿಕೊಂಡ. ಚೀನಾದ ಹೆಚ್ಚು ಉತ್ತರ ಪಶ್ಚಿಮ ಪ್ರದೇಶಗಳನ್ನು ಜಂಗೀಸ್‌ಖಾನ್ ಆಕ್ರಮಿಸಿಕೊಂಡುಬಿಟ್ಟ. ಇಡೀ ಚೀನಾ ದೇಶವನ್ನು ಆಕ್ರಮಿಸಿಕೊಳ್ಳುವ ಕನಸು ಅವನು ಬದುಕಿರುವ ಕಾಲದಲ್ಲಿ ನೆರವೇರದಿದ್ದರು. ಕ್ರಿ.ಶ.೧೨೭೯ರಲ್ಲಿ ಅವನ ಮೊಮ್ಮಗನಾದ ಕುಬಲೈಖಾನ್ ಅದನ್ನು ನನಸಾಗಿಸಿದ್ದ.

ಉತ್ತರ ಪಶ್ಚಿಮ ಪ್ರದೇಶಗಳನ್ನು ಆಕ್ರಮಿಸಿಕೊಂಡ ಮಂಗೋಲರ ಕಣ್ಣು ಪಶ್ಚಿಮದ ಕಡೆಗೆ ಬಿದ್ದಿತು. ಕ್ರಿ.ಶ.೧೨೧೮ರಲ್ಲಿ ಜಂಗೀಸ್‌ಖಾನ್‌ನ ಯೋಧರು ಇಂದಿನ ಉಜ್‌ಬೇಕಿಸ್ಥಾನ್ ಕಡೆಗೆ ದಂಡೆತ್ತಿ ಹೋಗುವಾಗ ಷಾ ೨ನೇ ಮಹಮದ್‌ನ ಯೋಧರು ಅಡ್ಡಗಟ್ಟಿ ಮಂಗೋಲರನ್ನು ಸಾಯಿಸಿದರು. ಜಂಗೀಸ್‌ಖಾನ್ ಷಾಗೆ ನಮ್ಮ ತಂಟೆಗೆ ಬರದೆ ಸುಮ್ಮನೆ ಇರಲು ಹೇಳಿದಾಗ ಷಾ ನಿರಾಕರಿಸಿ ಯುದ್ಧ ಘೋಷಿಸಿಬಿಟ್ಟ.

ಜಂಗೀಸ್‌ಖಾನ್ ಉತ್ತರ ದಿಕ್ಕಿನಿಂದ ೯೦ ಸಾವಿರ ಸೈನಿಕರ ಜೊತೆಗೆ ಯುದ್ಧಕ್ಕೆ ಹೊರಟರೆ, ಪೂರ್ವದಿಂದ ೩೦ ಸಾವಿರ ಯೋಧರನ್ನು ಒಬ್ಬ ಜನರಲ್ ಜೊತೆಗೆ ಯುದ್ಧಕ್ಕೆ ಕಳುಹಿಸಿದ. ಇದರ ಜೊತೆಗೆ ಜಂಗೀಸ್‌ಖಾನ್ ಕೆಳಗೆ ೪ ಲಕ್ಷ ಸೈನಿಕರಿದ್ದರು. ಷಾನನ್ನು ಪೂರ್ಣವಾಗಿ ಸೋಲಿಸಿ ಅವನ ಇಡೀ ಪ್ರದೇಶವನ್ನು ಆಕ್ರಮಿಸಿಕೊಂಡುಬಿಟ್ಟ. ಜಂಗೀಸ್‌ಖಾನ್‌ನ ಸೈನಿಕರನ್ನು "ಹಾರುವ ಬೆಂಕಿ" ಎಂದು ಕರೆಯಲಾಯಿತು. ಅವರು ಬೆಂಕಿಯ ಬಾಣಗಳನ್ನು ಚೆಲ್ಲುತ್ತಾ ಗಾಳಿಯಂತೆ ಶತ್ರುಗಳನ್ನು ಸಾಯಿಸಿ ಮುಂದಕ್ಕೆ ಸಾಗುತ್ತಿದ್ದರು.

ಅನಂತರ ೨೦ ಸಾವಿರ ಯೋಧರನ್ನು ರಷ್ಯಾ ಕಡೆಗೆ ಕಳುಹಿಸಿಕೊಟ್ಟ. ಇವರು ಕ್ರಿ.ಶ.೧೧೨೩ರಲ್ಲಿ ೮೦ ಸಾವಿರ ರಷ್ಯಾ ಯೋಧರನ್ನು ಸಾಯಿಸಿ ಆ ಪ್ರದೇಶವನ್ನು ಆಕ್ರಮಿಸಿಕೊಂಡುಬಿಟ್ಟರು. ಇಲ್ಲಿಂದ ರಷ್ಯಾ ಚರಿತ್ರೆಯಲ್ಲಿ "ಟಾಟರ್ ನೊಗ" ಎನ್ನುವ ಹೆಸರಿನಿಂದ ಜಂಗೀಸ್‌ಖಾನ್ ಯೋಧರು ಹೆಸರುವಾಸಿಯಾದರು. ರಷ್ಯಾ ಗಡಿಗಳನ್ನು ದಾಟಿದ ಮಂಗೋಲರು ಯುರೋಪ್ ಕಡೆಗೆ ಧಾವಿಸಿದರು. ರಷ್ಯಾದ ನಂತರ ಹಂಗೇರಿ ಮತ್ತು ಪೋಲೆಂಡ್ ದೇಶಗಳು ಅವರಿಗೆ ಆಹುತಿಯಾದವು.

ಕ್ರಿ.ಶ.೧೨೨೭ರಲ್ಲಿ ಇದ್ದಕ್ಕಿದ್ದಾಗೆ ಜಂಗೀಸ್‌ಖಾನ್ ಕುದುರೆಯ ಮೇಲಿಂದ ಬಿದ್ದು ಗಾಯಗೊಂಡು ಪ್ರಾಣ ಕಳೆದುಕೊಂಡುಬಿಟ್ಟ. "ದೇವರ ಆಶೀರ್ವಾದದಿಂದ ನಿಮಗಾಗಿ ಇಷ್ಟೆಲ್ಲಾ ಪ್ರದೇಶಗಳನ್ನು ಗೆದ್ದುಕೊಂಡೆ. ಇಡೀ ಪ್ರಪಂಚವನ್ನು ಗೆದ್ದುಕೊಳ್ಳಲು ನನ್ನ ಆಯುಷ್ಯ ಸಾಲದು. ಅದು ನಿಮಗೆ ಬಿಟ್ಟಿದ್ದು"– ಈ ಮಾತುಗಳನ್ನು ಜಂಗೀಸ್‌ಖಾನ್ ಪ್ರಾಣ ಬಿಡುವ ಮುನ್ನ ತನ್ನ ಮಕ್ಕಳಿಗೆ ಹೇಳಿದ.

ಜಂಗೀಸ್‌ಖಾನ್ ಹೆಣವನ್ನು ಅವನು ಹುಟ್ಟಿದ ಉಲಾನ್‌ಬಾಟರ್‌ಗೆ ತರಲಾಯಿತು. ಒಂದು ಹೇಳಿಕೆಯಂತೆ ಜಂಗೀಸ್‌ಖಾನ್‌ನ ಹೆಣವನ್ನು ಯಾರಿಗೂ ತಿಳಿಯದಂತೆ ಸಾಗಿಸಲಾಯಿತಂತೆ. ಜಂಗೀಸ್‌ಖಾನ್‌ನ ಸಾವು ಯಾರಿಗೂ ತಿಳಿಯಬಾರದು ಎನ್ನುವುದೇ ಇದರ ಗುಟ್ಟು. ಅವನ ಹೆಣವನ್ನು ಚೀನಾದ ಬರ್‍ದೋಸ್ ಜವಗು ಭೂಮಿಗೆ ತಂದು

ಅಲ್ಲಿ ಊಳಿ ಆ ಪ್ರದೇಶದಲ್ಲಿ ಒಂದು ಬೃಂದಾವನವನ್ನು ಸ್ಥಾಪಿಸಲಾಯಿತು. ನೂರಾರು ಕುದುರೆಗಳನ್ನು ಅಲ್ಲಿ ಮೇಯಲು ಬಿಟ್ಟು, ಅಲ್ಲಿ ಹುಲ್ಲು ಮರ ಗಿಡಗಳು ಬೆಳೆಯುವವರೆಗೂ ಮಂಗೋಲ ಯೋಧರು ಕಾವಲು ಕಾಯುತ್ತಿದ್ದರೆಂದು ತಿಳಿಯಲಾಗಿದೆ.

ಪ್ರಪಂಚದ ಹೆಚ್ಚು ಪ್ರದೇಶವನ್ನು ಆಳಿದ ಜಂಗೀಸ್‌ಖಾನ್ ಸಮಾಧಿ ಎಲ್ಲಿದೆ ಎನ್ನುವುದು ಪ್ರಪಂಚಕ್ಕೆ ಇದುವರೆಗೂ ತಿಳಿದಿಲ್ಲ. ಜಂಗೀಸ್‌ಖಾನ್ ಸತ್ತ ಮೇಲೆ ಅವನ ವಾರುಸುದಾರರೆಲ್ಲ ಮುಂದಿನ ರಾಜನು ಯಾರು ಎಂದು ತೀರ್ಮಾನಿಸಲು ಮಂಗೋಲಿಗೆ ಹಿಂದಿರುಗಿ ಬಂದರು. ಅನಂತರ ಜಂಗೀಸ್‌ಖಾನ್ ಗೆದ್ದಿದ್ದ ಪ್ರದೇಶಗಳನ್ನು ಮೂರು ಭಾಗಗಳಾಗಿ ವಿಂಗಡಿಸಿ ಅವನ ಮೂವರು ಮಕ್ಕಳನ್ನು ರಾಜರನ್ನಾಗಿ ನೇಮಿಸಲಾಯಿತು.

* * *

ಹಸಿರು ಚಹಾ ಬೀರು ಕೋಕ್ ನಂತರ ಮೂರು ನಾಲ್ಕು ತರಕಾರಿಗಳಲ್ಲಿ ತಯಾರಿಸಿದ ಚೀನಿ ಭಕ್ಷ್ಯಗಳು, ಅನಂತರ ಫಿಷ್ ಪೋರ್ಕ್ ಬೀಫ್ ಚಿಕನ್ ಮಟನ್ ಕೊನೆಯಲ್ಲಿ ಅನ್ನ. ನಡುನಡುವೆ ಇನ್ನೊಂದಷ್ಟು ಚೀನಿ ತಿಂಡಿಗಳು. ಒಟ್ಟು ೧೫ ರಿಂದ ೨೦ ರೀತಿಯ ತಿಂಡಿಗಳಿದ್ದವು. ನಮ್ಮ ಜಗಬಂಧು ಹಿಂದಿನ ದಿನ "ಏ ಕ್ಯಾ ಹೈ ಸಾಬ್ ಚಾವಲ್ ಲಾಸ್ಟ್ ಮೇ ದೇತಾ ಹೈ" ಎಂದು ಸನ್ ಬಿನ್‌ಗೆ ಅನ್ನ ಮೊದಲೆ ಕೊಡುವಂತೆ ತಿಳಿಸಿದ. ಅದನ್ನು ಕೇಳಿದ ಹೋಟಲ್ ಹುಡುಗಿ "ಇಲ್ಲ ಒಳ್ಳೆ ಕಾಸ್ಟ್ಲಿ ಐಟಮ್ಸ್ ಮೊದಲು ಕೊಡ್ತೀವಿ. ಕೊನೆಯಲ್ಲಿ ಚೀಪ್ ಐಟಮ್ಸ್ ಕೊಡ್ತೀವಿ" ಎಂದುಬಿಟ್ಟಳು. ನಮ್ಮ ಜಗಬಂಧು ಅದಾದ ಮೇಲೆ ಯಾವಾಗಲೂ ಊಟ ಮಾಡುವಾಗ ಮೀನಿನ ತುಂಡುಗಳನ್ನು ಒಂದು ತಟ್ಟೆಯಲ್ಲಿ ಹಾಕಿಕೊಂಡು ಅನ್ನಕ್ಕಾಗಿ ಕೊನೆಯವರೆಗೂ ಕಾಯುತ್ತಿದ್ದರು.

ನಮಗೆ ತಿನ್ನಲು ಒಂದು ಚಮಚ, ಪೋರ್ಕ್ ಮತ್ತು ಚೀನಿಸ್ಟಿಕ್ ಕೊಡುತ್ತಿದ್ದರು. ಒಂದು ಐಟಂ ಟೇಬಲಿಗೆ ಬಂದ ತಕ್ಷಣ ಎಲ್ಲರೂ ಎಲ್ಲದರಲ್ಲೂ ಎತ್ತಿಕೊಂಡು ಹಾಗೆ ಬಾಯಿಗೆ ಹಾಕಿಕೊಳ್ಳುತ್ತಿದ್ದರು. ಚೀನಿಯರೆ ನಮ್ಮ ಎಂಜಿಲು ತಿನ್ನುತ್ತಿರುವಾಗ ನಮಗೆ ಬೇರೆ ತಟ್ಟೆಗಳಲ್ಲಿ ಹಾಕಿಕೊಡಿ ಎನ್ನುವುದು ಹೇಗೆ? ಇದು ಅವರ ತಲತಲಾಂತರ ಪದ್ಧತಿ. ನಾವು ದಿಢೀರನೆ ಬದಲಾಯಿಸಲು ಸಾಧ್ಯವೆ? ಕೇಳಲು ಚನ್ನಾಗಿರುವುದಿಲ್ಲ ಎಂದು ಸುಮ್ಮನಾದೆವು. ನಾನು ಒಂದು ಐಟಮ್ ಬಂದ ತಕ್ಷಣವೆ ಮೊದಲಿಗೆ ಚಮಚಾದಲ್ಲಿ ಒಂದರೆಡು ಸಲ ತೆಗೆದು ತಟ್ಟೆಗೆ ಹಾಕಿಕೊಂಡುಬಿಡುತ್ತಿದ್ದೆ.

ಮರು ದಿನ ಬಂದ ದಾರಿಯಲ್ಲೆ ಹಿಂದಿರುಗಬೇಕಾಗಿದ್ದರಿಂದ ಸ್ವಲ್ಪ ನೋಟ್ಸ್ ಮಾಡಿಕೊಂಡು ರಾತ್ರಿ ಬೇಗನೆ ಮಲಗಿಕೊಂಡುಬಿಟ್ಟೆ. ಒಳ್ಳೆ ನಿದ್ದೆ. ಫೋನ್ ಹೊಡೆದುಕೊಂಡಿತು. ಬೆಡ್‌ಲ್ಯಾಂಪ್ ಒತ್ತಿ ಫೋನ್ ತೆಗೆದುಕೊಂಡು "ಹಲೋ" ಎಂದೆ. "ನೇಹಾ" ಎಂದ ಹೆಣ್ಣಿನ ಧ್ವನಿ ಮಾತನಾಡತೊಡಗಿತು. ಅವಳು ಚೀನಿ ಭಾಷೆಯಲ್ಲಿ ಮಾತನಾಡುತ್ತಿದ್ದಳು. ಮಧ್ಯ ಮಧ್ಯ ಒಂದೆರಡು ಇಂಗ್ಲಿಷ್ ಪದಗಳಂತೆ

ಕೇಳಿಸತೊಡಗಿತು. "ವಾಟ್ ಡು ಯು ವಾಂಟ್?" ಎಂದೆ. ಮತ್ತೆ ಅದೇ ರೀತಿ ಏನೋ ಹೇಳಿದಳು. ದೊಡ್ಡ ಹೋಟಲು. ಮಲಗುವುದಕ್ಕೆ ಮುಂಚೆ ವಿಷ್ ಮಾಡುತ್ತಿರಬಹುದೆಂದು "ಓಕೆ ಗುಡ್‌ನೈಟ್" ಎಂದು ಫೋನ್ ಇಟ್ಟುಬಿಟ್ಟೆ.

ಅನಂತರ ಗಡಿಯಾರ ತೆಗೆದುಕೊಂಡು ನೋಡಿದೆ. ೧೧ ಗಂಟೆ. ಯಾರಿರಬಹುದು? ಯಾರೋ? ಬೆಡ್‌ಲ್ಯಾಂಪ್ ಆಫ್ ಮಾಡಿ ಮಲಗಿಕೊಂಡೆ. ಎರಡು ನಿಮಿಷ ಆಗಿರಬೇಕು. ಯಾರೋ ಬಾಗಿಲನ್ನು ನಿಧಾನವಾಗಿ ಬೆರಳುಗಳಲ್ಲಿ ಕುಟ್ಟಿದರು. ಒಂದೆರಡು ಕ್ಷಣ ಯೋಚಿಸಿದೆ. ಹಾಗೆ ಸದ್ದಾಗುತ್ತಿದೆ. ಎದ್ದು ಹೋಗಿ ಬಾಗಿಲು ತೆಗೆದು ಹೊರಕ್ಕೆ ನೋಡಿದೆ? ಬಾಗಿಲ ಮೇಲಿದ್ದ ಮಂದ ಬೆಳಕಿನ ಕೆಳಗೆ ಮಹಿಳೆಯೊಬ್ಬಳು ನಿಂತಿದ್ದಾಳೆ. ಕೆಂಪು ಬಣ್ಣ, ಒಳ್ಳೆ ಎತ್ತರ. ಪಾಚಿ ಬಣ್ಣದ ಫುಲ್ ಸ್ವೆಟರ್ ಧರಿಸಿದ್ದಾಳೆ. ಎರಡು ತೋಳುಗಳ ನಡುವೆ ಚಂದ್ರಾಕಾರವಾಗಿ ತೆರೆದುಕೊಂಡಿದ್ದ ಸ್ವೆಟರ್ ಒಳಗೆ ಅರ್ಧ ಎದೆಗಳು ದರ್ಶನವಾಗುತ್ತಿವೆ.

ಮೆತ್ತಗೆ "ವಾಟ್?" ಎಂದೆ. ಬಲಕೈಯಿನ ಮೊದಲು ಮತ್ತು ಕೊನೆ ಬೆರಳುಗಳನ್ನು ಕಿವಿ ಮತ್ತು ಬಾಯಿಗೆ ಮಧ್ಯ ಇಟ್ಟುಕೊಂಡು ಫೋನ್ ಮಾಡಿದೆನಲ್ಲವೆ ಎನ್ನುವಂತೆ ಸನ್ನೆ ಮಾಡಿದಳು. "ನೋ" ಎಂದೆ. ಮತ್ತೆ ಅದೆ ರೀತಿ ತೋರಿಸಿ ಬಾಗಿಲು ಮೇಲಿದ್ದ ಸಂಖ್ಯೆಯ ಕಡೆಗೆ ನೋಡಿದಳು. ನಾನು ಒಂದೆಜ್ಜೆ ಹಿಂದಕ್ಕೆ ಬಂದಿದ್ದೆ ಆಕೆ ಒಳಗೆ ಬರಲು ಒಂದೆಜ್ಜೆ ಮುಂದಕ್ಕಿಟ್ಟಳು. ನಾನು ಎಡಗೈ ಅಡ್ಡವಿಟ್ಟು ಅಕೆಯನ್ನು ತಡೆದು ಬಾಗಿಲು ಮುಚ್ಚಿಬಿಟ್ಟೆ.

ಅಬ್ಬಾ ತಪ್ಪಿಸಿಕೊಂಡೆ ಎಂದು ಹಾಸಿಗೆ ಮೇಲೆ ಬಿದ್ದುಕೊಂಡೆ. ಡೂಪ್ಲಿಕೇಟ್ ಕೀಯಲ್ಲಿ ಬಾಗಿಲು ತೆಗೆದು ಒಳಗೆ ಬಂದರೆ ಏನು ಮಾಡುವುದು? ಹಾಗೇನೂ ಆಗುವುದಿಲ್ಲ. ಲೈಟಾಕಿಕೊಂಡೆ ಹಾಸಿಗೆ ಮೇಲೆ ಉರುಳಾಡಿದೆ. ಸುಮಾರು ಹೊತ್ತು ನಿದ್ದೆ ಬರಲಿಲ್ಲ. ಅನಂತರ ಬೆಳಗ್ಗೆ ಜ್ಞಾಪಕ ಬಂದು ಸಮಯ ನೋಡಿದರೆ ೫ ಗಂಟೆಯಾಗಿತ್ತು. ಮತ್ತೆ ೬ ಗಂಟೆಯಾಗಲಿ ಎಂದು ಮಲಗಿಕೊಂಡೆ.

ಬೆಳಗ್ಗೆ ಜಗಬಂಧು ಮತ್ತು ದಾಸ್‌ಗೆ ವಿಷಯ ತಿಳಿಸಿದಾಗ, ಜಗಬಂಧುಗೆ ರಾತ್ರಿ ೧೦:೫೦ಕ್ಕೆ ಫೋನ್ ಬಂದು ರಾಂಗ್‌ನಂಬರ್ ಎಂದು ಫೋನ್ ಇಟ್ಟುಬಿಟ್ಟಿದ್ದರಂತೆ. ದಾಸ್ "ಫೋನ್ ಬಂದಿತ್ತೊ ಇಲ್ಲವೊ ಗೊತ್ತಿಲ್ಲ. ಆದರೆ ಈ ರೀತಿಯ ವಿಷಯ ನನಗೆ ನೆನ್ನೆ ಸಾಯಂಕಾಲವೆ ಹುಡುಗರು ಹೇಳಿದ್ದರು. ಈ ಪ್ರದೇಶದಲ್ಲಿ ಇದು ಸರ್ವೆಸಾಮಾನ್ಯವಂತೆ" ಎಂದರು. ನಮ್ಮ ಜತೆಗಿದ್ದ ಇನ್ನೊಂದಷ್ಟು ಜನರು ಗುಸು ಗುಸು ಮಾತನಾಡುತ್ತ ಮುಸಿ ಮುಸಿ ನಗುತ್ತಿದ್ದರು.



ಬುದ್ಧನ ಸನ್ನಿಧಿಯಲ್ಲಿ

ಚೀನಾದ ಜಂಜ್‌ಜಿಯ್ಯಾಂಗ್ ಪ್ರಾಂತ್ಯದಲ್ಲಿ ಹರಿಯುವ ಹಳದಿ ನದಿಯನ್ನು ಚೀನಿಯರ ಕಣ್ಣೀರಿನ ನದಿಯೆಂದು ಕರೆಯಲಾಗುತ್ತದೆ.

ಚೀನಾದ ಒಟ್ಟು ಭೂವಿಸ್ತೀರ್ಣ ೯.೬ ಮಿಲಯ ಚದರ ಕಿ.ಮೀ. ಈ ಇನ್ನರ್ ಮಂಗೋಲಿಯ ರಾಜ್ಯ ಒಂದು ಕಾಲದಲ್ಲಿ ಮಂಗೋಲಿಯ ದೇಶವಾಗಿದ್ದು ಅನಂತರ ಚೀನಿಯರ ಪಾಲಾಗಿದೆ. ಚೀನಾದಲ್ಲಿ ಒಟ್ಟು ೩೧ ರಾಜ್ಯಗಳಿದ್ದು ಅವುಗಳಲ್ಲಿ ೫ ರಾಜ್ಯಗಳು ವಿಶೇಷ ಹಕ್ಕುಗಳನ್ನು ಪಡೆದಿವೆ. ಬೀಜಿಂಗ್ ಕೇಂದ್ರಾಡಳಿತ ನಗರ ಮತ್ತು ಚೀನಾದ ರಾಜಧಾನಿಯಾಗಿದೆ.



ಅರಮನೆಯ ಒಳಗೆ ಬುದ್ಧನ ಚಿನ್ನದ ಪುತ್ಥಳಿಕೆ

ನಾವು ನೋಡಿದ ಎಲ್ಲಾ ಹಳ್ಳಿ ಪಟ್ಟಣ ನಗರಗಳಲ್ಲಿ ಮನೆಗಳ ಮುಂದೆ, ಕಛೇರಿಗಳ ಮುಂದೆ, ಯಾವುದೆ ದೊಡ್ಡ ಶಾಪಿಂಗ್ ಕಾಂಪ್ಲೆಕ್ಸ್ ಮತ್ತು ಎಲ್ಲಾ ಕಟ್ಟಡಗಳ ಮುಂದೆ ಬಾಗಿಲುಗಳ ಎರಡೂ ಕಡೆ ಎರಡು ಸಿಂಹಗಳನ್ನು ನಿಲ್ಲಿಸಲಾಗಿತ್ತು. ಇದರ ಬಗ್ಗೆ ವಾಂಗ್‌ರನ್ನು ಕೇಳಿದಾಗ "ಅದು ನಮ್ಮ ಸೇಫ್ಟಿಯ ಸಿಂಬಲ್" ಎಂದರು. "ನಿಮ್ಮ ರಾಷ್ಟ್ರೀಯ ಪ್ರಾಣಿ ಸಿಂಹವೆ?" ಕೇಳಿದೆ. "ಇಲ್ಲ ನಮ್ಮ

ದೇಶಕ್ಕೆ ಯಾವುದೆ ರಾಷ್ಟ್ರೀಯ ಪ್ರಾಣಿ ಇಲ್ಲ" ಎಂದರು. "ಹಕ್ಕಿ ಇದೆಯೆ? ಹೂವು ಯಾವುದಾದರು ಇದೆಯೆ?" ಎಂದೆ. "ಇಲ್ಲ ಯಾವುದೂ ಇಲ್ಲ. ನಿಮ್ಮ ದೇಶಕ್ಕೆ?" ವಾಂಗ್ ಕೇಳಿದರು. ಹುಲಿ, ನವಿಲು, ಕಮಲದ ಹೆಸರು ಹೇಳಿದೆ. ವಾಂಗ್ "ನಮಗೆ ರಾಷ್ಟ್ರಗೀತೆ ಮಾತ್ರ ಇದೆ" ಎಂದರು.



ಹಸಿರು ತಪ್ಪಲುಗಳ ನಡುವೆ ಪಗೋಡ

ಬೆಳಗ್ಗೆ ಉಪಹಾರ ಮುಗಿಸಿ ಹುಹಟ್ ಕಡೆಗೆ ಹೊರಟೆವು. ಎರಡು ದಿನಗಳ ಹಿಂದೆ ಇದೇ ರಸ್ತೆಯಲ್ಲಿ ಹೋಗಿದ್ದೆವು. ರಸ್ತೆಯ ಎರಡೂ ಕಡೆ ಅದೇ ಮಂಗೋಲಿಯಾದ ಬೋಳು ಬೆಟ್ಟಗಳು. ಮಧ್ಯ ಅಲ್ಲಲ್ಲಿ ಮಣ್ಣು ಮತ್ತು ಇಟ್ಟಿಗೆ ಮನೆಗಳಿರುವ ಹಳ್ಳಿಗಳು. ಅರ್ಧದಾರಿಯಲ್ಲಿ ಇದ್ದಕ್ಕಿದ್ದಾಗೆ ಮೋಡಗಳು ಕವಿದು ವಾತಾವರಣ ತೀವ್ರವಾಗಿ ಕುಸಿದುಹೋಯಿತು. ಮಿನಿ ಬಸ್ಸು ೧೧೦ ಕಿ.ಮೀ. ವೇಗದಲ್ಲಿ ಓಡುತ್ತಿದೆ. ಬೋಳು ಬೆಟ್ಟಗಳ ಮೇಲೆ ಮೋಡಗಳು ಒಂದೇ ಸಮನೆ ಹಿಮಪಾತದ ಧಾಳಿ ಮಾಡುತ್ತಿವೆ.

ಎರಡು ದಿನಗಳ ಹಿಂದೆ ಇದೇ ದಾರಿಯಲ್ಲಿ ಹೋದಾಗ ಬೆಟ್ಟಗಳ ಮೇಲೆ ಏನೂ ಇಲ್ಲದೆ ಇದ್ದು ಈಗ ಅವು ಸುಂದರವಾದ ಬಣ್ಣಗಳನ್ನು ಬಳಿದುಕೊಳ್ಳುತ್ತಿರುವಂತೆ ಎಲ್ಲೆಲ್ಲೂ ಬಿಳಿ ಮತ್ತು ಬೂದು ಬಣ್ಣಗಳ ನಡುವೆ ತೀವ್ರ ಪೈಪೋಟಿ ನಡೆದಿದೆ. ಚೀನಾದಲ್ಲಿ ನಾಳೆ ವಸಂತಕಾಲ ಮುಗಿದು ಚಳಿಕಾಲ ಪ್ರಾರಂಭವಾಗುತ್ತದೆ ಎಂದಿದ್ದ ವಾಂಗ್‌ರ ಮಾತುಗಳು ಜ್ಞಾಪಕಕ್ಕೆ ಬಂದವು. ಚಳಿಗಾಲ ಈಗ ತಾನೆ ಶುರುವಾಗಿದೆ. ಇನ್ನೂ ನವೆಂಬರ್‌ನಿಂದ ಫೆಬ್ರವರಿ ತಿಂಗಳುಗಳಲ್ಲಿ ಎಷ್ಟು ಚಳಿ ಇರಬಹುದು? ಇಲ್ಲಿನ ಜನರು ಚಳಿಗೆ ಎಷ್ಟು ನಡುಗಬಹುದು? ನೆನೆದುಕೊಳ್ಳುತ್ತಲೆ ಮೈ ತಣ್ಣಗಾಯಿತು. ಬಸ್ಸು ನಿಂತಿದ್ದೆ ನಮ್ಮ ಜತೆಗಾರರೆಲ್ಲ ಹಿಮದ ಬೆಟ್ಟಗಳನ್ನು ತಮ್ಮ ಕ್ಯಾಮರಾಗಳಲ್ಲಿ ಸೆರೆ

ಹಿಡಿಯತೊಡಗಿದರು. ಬಸ್ಸು ಮತ್ತೆ ಜಾಗರೂಕತೆಯಿಂದ ಹಿಮ ಬೀಳುತ್ತಿದ್ದ ರಸ್ತೆಗಳಲ್ಲಿ ಚಲಿಸತೊಡಗಿತು.

ಮಧ್ಯಾಹ್ನ ೩ ಗಂಟೆಗೆ ಹೂಹಟ್‌ಗೆ ಬಂದಿದ್ದೆವು. ರಸ್ತೆಯ ಪಕ್ಕದಲ್ಲಿ ಒಂದು ಪಗೋಡದ ಗೋಪುರಗಳು ಕಾಣಿಸಿಕೊಂಡವು. ಬೆಳಗ್ಗೆಯಿಂದ ನನ್ನ ಪಕ್ಕದಲ್ಲಿ ಕುಳಿತಿದ್ದ ಜರ್ಮನ್ ಮಹಿಳೆಗೆ "ಬುದ್ಧನ ದೇವಾಲಯವಿದ್ದಂತಿದೆ" ಎಂದೆ. ಆಕೆ "ಬುದ್ಧ?" ಎಂದಳು. ಅಷ್ಟರಲ್ಲಿ ನಮ್ಮ ಬಸ್ಸು ಇನ್ನೊಂದು ಕಡೆಯಿಂದ ಸುತ್ತಿಕೊಂಡು ಬಂದು ಅದೇ ದೇವಾಲಯದ ಮುಂದೆ ನಿಂತುಕೊಂಡಿತು. ಕಾರಿನ ಮುಂದೆ ಬರುತ್ತಿದ್ದ ಬಸ್ಸು ಆಗಲೆ ಅಲ್ಲಿಗೆ ಬಂದು ನಿಂತಿತ್ತು. ಸನ್‌ಬಿನ್ ಬಸ್ಸಿನ ಹತ್ತಿರಕ್ಕೆ ಬಂದು ನಮ್ಮನ್ನೆಲ್ಲ ಪಗೋಡ ಕಡೆಗೆ ಕರೆದುಕೊಂಡು ನಡೆದ.

ಎಲ್ಲಾ ದೇವಾಲಯಗಳಲ್ಲಿರುವಂತೆ ಮುಂದೆ ಒಂದು ಹೆಬ್ಬಾಗಿಲು, ಮೇಲೆ ಗೋಪುರ. ಒಳಗೆ ಎರಡು ಕಡೆಯೂ ದ್ವಾರಪಾಲಕರು ವಿಚಿತ್ರ ಧಿರುಸುಗಳೊಂದಿಗೆ ಕತ್ತಿಗಳನ್ನು ಹಿಡಿದುಕೊಂಡು ನಿಂತಿದ್ದಾರೆ. ಎಲ್ಲರೂ ಒಳಗೆ ಹೋದೆವು. ಮಧ್ಯ ಇನ್ನೊಂದು ಗೋಪುರ. ನಡುವೆ ವಿಶಾಲಾಂಗಣ. ಎರಡು ಕಡೆಯೂ ಸಾಲು ಸಾಲು ಕೊಠಡಿಗಳು. ಮಧ್ಯ ದೊಡ್ಡ ದೇವಾಲಯ. ಎಲ್ಲರೂ ಒಳಗೆ ನಡೆದೆವು. ಅಷ್ಟರಲ್ಲಿ ಇಬ್ಬರು ಬೌದ್ಧ ಭಿಕ್ಷುಗಳು ಒಳಕ್ಕೆ ಓಡಿಬಂದರು.



ವಿಶ್ರಮಿಸುತ್ತಿರು ಬುದ್ಧನ ವಿಗ್ರಹ

ಎರಡು ಕಡೆಯೂ ಬುದ್ಧನ ಅನೇಕ ರೀತಿಯ ಮೂರ್ತಿಗಳು, ಪಟಗಳು ಮತ್ತು ಚಿತ್ರ ವಿಚಿತ್ರ ಸಾಮಾನುಗಳು. ಎಲ್ಲವನ್ನು ನೋಡಿ ಹೊರಗೆ ಬಂದೆವು. ನಮ್ಮ ಜತೆಗಿದ್ದ ದಕ್ಷಿಣ ಆಫ್ರೀಕಾದ ಸುಮೆ ಬುದ್ಧನ ಬಗ್ಗೆ ಕೇಳಿದ. ನಾನು ಬುದ್ಧನ ಬಗ್ಗೆ ಸಂಕ್ಷಿಪ್ತವಾಗಿ

ಹೇಳಿದೆ. "ಹೌದಾ? ನನಗೆ ಬುದ್ಧನ ಬಗ್ಗೆ ಗೊತ್ತೆ ಇಲ್ಲ. ಗ್ರೇತ್‌ಮೆನ್" ಎಂದ. ಗುಡಿಯ ಆವರಣದಲ್ಲಿ ಅಮೃತ ಶಿಲೆಯಲ್ಲಿ ೧೨ ಪ್ರಾಣಿಗಳನ್ನು ಗೋಳಾಕೃತಿಯಲ್ಲಿ ಸುತ್ತಲು ಕೆತ್ತಿ ಚೀನಿ ಭಾಷೆಯಲ್ಲಿ ಬರೆಯಲಾಗಿತ್ತು. ವಾಂಗ್‌ರನ್ನು ಕೇಳಿದಾಗ "ಇವು ಚೀನಿ ಪಂಚಾಂಗದ ಪ್ರಕಾರ ೧೨ ವರ್ಷಗಳು" ಎಂದರು. ೧೨ ಅಂಕಣಗಳಲ್ಲಿ ೧೨ ಪ್ರಾಣಿಗಳಿದ್ದವು. ಮೊದಲನೆಯದು ಇಲಿಯಾದರೆ ಕೊನೆಯದು ನಾಯಿ. ಮಧ್ಯದಲ್ಲಿ ಮೊಲ ಹುಲಿ ಹಂದಿ ಮೇಕೆ ಟಗರು ಹಾವು ಜಿಂಕೆ ನರಿ ಆಮೆ ಡ್ರ್ಯಾಗನ್ ಇತ್ಯಾದಿ ಪ್ರಾಣಿಗಳಿದ್ದವು. ೧೨ ವರ್ಷಗಳಿಗೊಮ್ಮೆ ಚೀನಿಯರ ಪ್ರಕಾರ ಹೊಸ ವರ್ಷ ಹುಟ್ಟುತ್ತದೆ. ಭಾರತೀಯರ ಪ್ರಕಾರ ೬೦ ವರ್ಷಗಳಿಗೊಮ್ಮೆ ಹೊಸ ವರ್ಷ ಬರುತ್ತದೆ.



ಕ್ರಿ.ಶ. 338 – ಹ್ಯಾನಾನ್ ರಾಜ್ಯದ ಫೆಂಕ್ಷಿಯಾನ್ ಗುಹೆಯಲ್ಲಿನ ಬುದ್ಧನ ಪ್ರತಿಮೆ

ಅಲ್ಲಿಂದ ನೇರವಾಗಿ ಹೋಟಲಿಗೆ ಹೋಗಿ ಉಳಿದುಕೊಂಡೆವು. ಮೂರು ದಿನಗಳ ಹಿಂದೆ ಇದೇ ಹೋಟಲಿನಲ್ಲಿ ಒಂದು ದಿನ ಉಳಿದುಕೊಂಡಿದ್ದೆವು. ಆದರೆ ಈ ದಿನ ಇನ್ನಷ್ಟು ಲಕ್ಸುರಿ ಕೋಣೆಗಳನ್ನು ನಮಗೆಲ್ಲ ನೀಡಿದ್ದರು. ಈ ಹುಹಟ್ ನಗರ ಇನ್ನರ್‌ಮಂಗೋಲಿಯಾದ ರಾಜಧಾನಿಯಾಗಿದ್ದು ಚೀನಾ ದೇಶದ ಈ ಹಿಂದುಳಿದ ರಾಜ್ಯದ ರಾಜಧಾನಿಯೆ ಹೀಗಿದ್ದರೆ, ಇನ್ನು ದಕ್ಷಿಣ ಮತ್ತು ಪೂರ್ವ ರಾಜ್ಯಗಳ ನಗರಗಳು ಇನ್ನೆಷ್ಟು ಶ್ರೀಮಂತವಾಗಿರಬಹುದು? ಎಂದುಕೊಂಡೆ.



ಮತ್ತೆ ಲಾಂಗ್‌ಫಾಂಗ್‌ನಲ್ಲಿ

ಚೀನಿಯರ ಪುರಾಣಗಳಲ್ಲಿ ಬರುವ ಕಾಲ್ಪನಿಕ ಡ್ರ್ಯಾಗನ್ ಒಂದು ವಿಶೇಷ.

೦೧.೧೧.೦೪ ಹುಹಟ್ ಮತ್ತು ಲಾಂಗ್‌ಫಾಂಗ್ ನಗರದ ಮಧ್ಯ ೭೦೦ ಕಿ.ಮೀ. ದೂರವಿದ್ದು ಮಧ್ಯದಲ್ಲಿ ರಸ್ತೆ ರಿಪೇರಿಯಿಂದ ಇನ್ನೂ ೧೦೦ ಕಿ.ಮೀ. ಹೆಚ್ಚು ದೂರವನ್ನು ಒಂದೇ ದಿನದಲ್ಲಿ ಸುತ್ತಿಕೊಂಡು ಹೋಗಬೇಕಾಗಿತ್ತು. ಬಸ್ಸು ನಗರದ ಬೀದಿಗಳಲ್ಲಿ ಹೊರಟಿತ್ತು. ನಗರ ಬಿಡುವುದರಲ್ಲಿಯೆ ದಾರಿ ತಪ್ಪಿದ್ದ ಚಾಲಕ ಬಸ್ಸು ನಿಲ್ಲಿಸಿ ದಾರಿ ಕೇಳತೊಡಗಿದ. ನಗರದ ಹೊರವಲಯದಲ್ಲಿ ಮಹಿಳೆಯೊಬ್ಬಳನ್ನು ಕೇಳಿದಾಗ ಆಕೆ ನಾನೂ ಆ ಕಡೆಯೆ ಬರುತ್ತೇನೆಂದು ಬಸ್ಸತ್ತಿ ಕುಳಿತುಕೊಂಡಳು. ಮೂವರು ರೀಸರ್ಚ್ ವಿದ್ಯಾರ್ಥಿಗಳು ಆ ಮಹಿಳೆಯ ಜೊತೆಗೆ ಜೋರಾಗಿ ಹರಟುತ್ತಾ ನಗುತ್ತಿದ್ದರು. ನನಗೆ ಒಂದು ಮಾತೂ ಅರ್ಥವಾಗಲಿಲ್ಲ. ನನಗೆ ಚೀನಿ ಭಾಷೆ ಗೊತ್ತಿದ್ದರೆ ಎಷ್ಟು ಚನ್ನಾಗಿತ್ತು ಎಂದುಕೊಂಡೆ. ಸುಮಾರು ಮುಕ್ಕಾಲು ಗಂಟೆ ಬಸ್ಸಿನಲ್ಲಿ ಪ್ರಯಾಣ ಮಾಡಿದ ಆ ಹಳ್ಳಿ ಮಹಿಳೆ ಇಳಿಯುವಾಗ ಬಸ್ಸು ಯಾವ ಕಡೆಗೆ ಹೋಗಬೇಕೆಂದು ಹೇಳಿ ಹೊರಟುಹೋದಳು. ಎಕ್ಸ್‌ಪ್ರೆಸ್ ದಾರಿ ಸಿಗದೆ ಬಸ್ಸು ಇನ್ನೂ ಹಳ್ಳಿಗಾಡು ರಸ್ತೆಗಳಲ್ಲೆ ಹೆಣಗಾಡುತ್ತಿತ್ತು.

ದಿನಾಗಲು ಬೆಳಗ್ಗೆ ೭:೩೦ಕ್ಕೆ ಉಪಹಾರ ಮಾಡಿ, ಮಧ್ಯಾಹ್ನ ೧೧:೩೦ಕ್ಕೆ ಊಟ ಮಾಡುತ್ತಿದ್ದೆವು. ಆದರೆ ಕಳೆದ ೫ ದಿನಗಳಿಂದ ಮಧ್ಯಾಹ್ನ ಪ್ಯಾಕ್‌ಲಂಚ್ ಕೊಡುತ್ತಿದ್ದರು. ಅದರಲ್ಲಿ ಮೂರುನಾಲ್ಕು ಬನ್ನು ಅಥವಾ ಒಂದು ದೊಡ್ಡ ಬ್ರೆಡ್ ೫೦೦ ಗ್ರಾಂ ಯೋಗರ್ಟ್. ಒಂದೆರಡು ಕಿತ್ತಲೆ ಹಣ್ಣು ಮತ್ತು ಒಂದೆರಡು ಬೀಫ್ ಸ್ಟಿಕ್ಕುಗಳಿರುತ್ತಿದ್ದವು. ಎಲ್ಲವನ್ನೂ ಹೇಗೋ ತಿನ್ನಬಹುದು ಆದರೆ ಈ ಬೀಫ್ ಸ್ಟಿಕ್ಕುಗಳು ಮಾತ್ರ ಹಾರಿಬಲ್. ಒಂದೇ ವಾಸನೆ. ಅವುಗಳನ್ನು ಪಕ್ಕದಲ್ಲಿದ್ದವರಿಗೆ ಕೊಟ್ಟುಬಿಡುತ್ತಿದ್ದೆ. ಅವರೊ ಅವುಗಳನ್ನು ಬಹಳ ಪ್ರೀತಿಯಿಂದ ತಿನ್ನುತ್ತಿದ್ದರು.

ಬೆಳಗ್ಗೆ ಬಸ್ಸಿನಲ್ಲಿ ಕುಳಿತೊಡನೆ ಟಿಫಿನ್ ಕಂ ಲಂಚ್‌ಪ್ಯಾಕ್ ಎಂದು ಕೊಟ್ಟರು. ಈ ದಿನ ಲಂಚ್ ಮಾಡುವುದೆ ಬೇಡ ರಾತ್ರಿಗೆ ಒಂದೇ ಸಲ ಬರ್ಜರಿ ಡಿನ್ನರ್ ಮಾಡೋಣ

ಎಂದುಕೊಂಡೆ. ಹತ್ತುಗಂಟೆಗೆ ಬಸ್ಸಿನಲ್ಲಿದ್ದ ನಮ್ಮ ಗೆಳೆಯರು "ಸ್ನೊ... ಸ್ನೊ..." ಎಂದು ಬೆಟ್ಟಗಳ ಕಡೆಗೆ ಕೈತೋರಿಸಿದರು. ಬೆಳಗ್ಗೆಯಿಂದಲೂ ನಮ್ಮ ಬಸ್ಸು ಸಮತಟ್ಟು ಪ್ರದೇಶದಲ್ಲಿ ಓಡುತ್ತಿದ್ದು, ಎಡಗಡೆ ಪರ್ವತ ಸಾಲುಗಳು ನಮ್ಮನ್ನು ಹಿಮ್ಮೆಟ್ಟುತ್ತಲೆ ಬರುತ್ತಿದ್ದವು. ದೂರದಲ್ಲಿ ಎತ್ತರೆತ್ತರ ಪರ್ವತಗಳ ಮೇಲೆ ಹಿಮದ ಒಂದು ತೆಳು ಪದರು ಬೆಳ್ಳಗೆ ಕಾಣಿಸಿಕೊಂಡಿತು. ನೋಡುನೋಡುತ್ತಿದ್ದಂತೆ ಅದು ಹತ್ತಿರತ್ತಿರಕ್ಕೆ ನಮ್ಮ ಹತ್ತಿರಕ್ಕೆ ನಡೆದುಬರುವಂತೆ ನಮ್ಮ ಬಸ್ಸಿನ ಎರಡೂ ಕಡೆಯೂ ತಪ್ಪಲುಗಳ ಮೇಲೆ ಹಿಮದ ರಾಶಿ ರಾಶಿ ಪದರುಗಳು ಕಾಣಿಸಿಕೊಂಡವು. ನಾಲ್ಕು ದಿನಗಳ ಹಿಂದೆ ಬರಿ ಬೋಳು ಬೆಟ್ಟಗಳಾಗಿದ್ದ ಈ ಬೆಟ್ಟಗಳು ಇಂದು ದಿಢೀರನೆ ಹಿಮದ ಸ್ನಾನ ಮಾಡತೊಡಗಿದ್ದವು.

ಬೀಸುವ ಶೀತಗಾಳಿ ಮತ್ತು ಬಿಳಿ ಮೋಡಗಳಿಂದ ತಾಪಮಾನ ಜರ್ರನೆ ಇಳಿದುಹೋಗಿ ಮೈನಸ್ ಡಿಗ್ರಿ ತಲುಪಿದ್ದರಿಂದ ಮೋಡಗಳು ಒಂದೇ ಸಮನೆ ಹಿಮದ ಧೂಳನ್ನು ಸುರಿಸುತ್ತಿದ್ದವು. ಮೋಡಗಳ ಮಧ್ಯ ಇಣುಕುತ್ತಿರುನ ಸೂರ್ಯನ ಕಿರಣಗಳನ್ನು ಬೆಟ್ಟಗಳ ಮೇಲೆ ಹರಿಸುತ್ತಿದ್ದರೂ ಕಿರಣಗಳು ತಮ್ಮ ಪ್ರಕರತೆಯನ್ನು ಕಳೆದುಕೊಂಡು ತಣ್ಣಗಾಗಿದ್ದವು.

ಬಸ್ಸನ್ನು ನಿಲ್ಲಿಸಿದ ನಾವು ರಸ್ತೆಯ ಎಕ್ಕೆಲುಬುಗಳಲ್ಲಿ ನಿಂತುಕೊಂಡು ಕ್ಯಾಮರಾ ಕಣ್ಣುಗಳಲ್ಲಿ ಹಿಮದ ರಾಶಿ ರಾಶಿ ಚಿತ್ರಣಗಳನ್ನು ಚಿತ್ರಿಸಿಕೊಂಡೆವು. ಬೆಟ್ಟ ಕಣಿವೆಗಳ ಮೇಲೆ ಬಿಳಿ ಮೋಡಗಳು ಹಿಮದ ರಾಶಿಯನ್ನೆ ಸುರಿಸುತ್ತಿವೆ. ಮಧ್ಯ ಮಧ್ಯ ಕಣಿವೆಗಳಲ್ಲಿ ಸಿಕ್ಕಿಕೊಂಡಿರುವ ಹಳ್ಳಿಗಳು ಸಹ ಹಿಮದಿಂದ ಆವೃತವಾಗುತ್ತಿವೆ. ಚಳಿಗಾಲ ಪ್ರಾರಂಭವಾದ ಕೇವಲ ಎರಡು ಮೂರು ದಿನಗಳಲ್ಲೆ ಹಿಮದ ಧಾಳಿ ಈ ರೀತಿ ನಡೆದರೆ ಮೂರು ನಾಲ್ಕು ತಿಂಗಳು ಚಳಿಗಾಲ ಹೇಗಿರಬಹುದು? ಎನ್ನುವ ಯೋಚನೆಯ ಜೊತೆಗೆ ಇನ್ನರ್‌ಮಂಗೋಲಿಯ ಎಂದರೆ ಏನು ಎನ್ನುವುದು ಈಗ ಸ್ವಲ್ಪ ಸ್ವಲ್ಪ ಅರ್ಥವಾಗುತ್ತಿತ್ತು.

ಸಮಯ ಮಧ್ಯಾಹ್ನ ೩ ಗಂಟೆ. ಎಕ್ಸ್‌ಪ್ರೆಸ್ ರಸ್ತೆಯಲ್ಲಿ ಬಸ್ಸು ಒಂದೇ ಸಮನೆ ಎಡೆತಡೆಯಿಲ್ಲದೆ ಚಲಿಸುತ್ತಿದ್ದು ಬೀಜಿಂಗ್ ಇನ್ನೂ ೧೫೦ ಕಿ.ಮೀ. ದೂರದಲ್ಲಿದೆ. ಮುಂದೆ ಕಾರಿನಲ್ಲಿದ್ದ ವಾಂಗ್ ಬಸ್ಸು ನಿಲ್ಲಿಸಿ "ಈಗೊಂದು ರಸ್ತೆ ಇದೆ. ನಿಮಗೆ ಒಳ್ಳೆ ಹಿಲ್‌ಸೆಕ್ಷನ್ ತೋರಿಸ್ತೀವಿ" ಎಂದು ಬೆಟ್ಟಗಳ ಕಡೆಗೆ ತಿರುಗಿಸಿದರು. ಬಸ್ಸು ಎತ್ತರೆತ್ತರ ತಪ್ಪಲು, ಕಣಿವೆಗಳ ನಡುವೆ ನಾಗರಹಾವಿನಂತೆ ತಿರುವುಗಳಲ್ಲಿ ಚಲಿಸುತ್ತಿದ್ದಂತೆ ಚಳಿ ವಿಕಾರ ರೂಪ ಪಡೆದಂತೆ ಸುಯ್ಯನೆ ಬೀಸತೊಡಗಿತು. ಬಸ್ಸಿನ ಕಿಟಕಿಗಳ ಕಡೆಗೆ ನೋಡಿದರೆ ಎದೆ ದಸಕ್ಕೆನ್ನುವಂತಹ ಆಳ ಪಾತಾಳ ಕಣಿವೆಗಳು. ಎಲ್ಲರೂ ಕಿಟಕಿಯ ಗಾಜುಗಳನ್ನು ಸರಿಸಿ ಡಿಜಿಟಲ್ ಕ್ಯಾಮರಾಗಳಲ್ಲಿ ದೃಶ್ಯಗಳನ್ನು ಸೆರೆ ಹಿಡಿಯುತ್ತಿದ್ದರೆ ನಾನು ಮಾತ್ರ ಮಾಮೂಲಿ ಕೊಡಕ್ ಕ್ಯಾಮರಾದಲ್ಲಿ ಕೆಲವು ಚಿತ್ರಗಳನ್ನು ಹಿಡಿದುಕೊಂಡೆ. ಆದರೆ ಒಂದು ವಿಷಾದದ ಸಂಗತಿ ಎಂದರೆ ಈ ಬೆಟ್ಟ ಕಣಿವೆಗಳು ಪೂರ್ಣವಾಗಿ ಬೋಳು ಬೋಳು. ಈ ವಿಶಾಲ ಸಾಗರದಂತಹ ಬೆಟ್ಟ ಕಣಿವುಗಳು ಸಸ್ಯರಾಶಿಯಿಂದ ತುಂಬಿದ್ದರೆ ಇನ್ನೆಷ್ಟು ಸೊಗಸಾಗಿರುತ್ತಿದ್ದವೂ ಏನೂ?

ನಮ್ಮ ಅಪೂರ್ವ ಅದ್ಭುತ ಹಿಮಾಲಯಗಳು ಜ್ಞಾಪಕಕ್ಕೆ ಬಂದು ಬಿಟ್ಟೆವು. ಹಿಮಾಲಯ ಆಫ್‌ಘಾನಿಸ್ಥಾನ್‌ನಿಂದ ಹಿಡಿದು ಬರ್ಮಾದವರೆಗೂ ದಟ್ಟ ಕಾಡು ಕಣಿವೆ ಗಿಡ ಮರ ಬಳ್ಳಿಗಳಿಂದ ಆವೃತವಾಗಿವೆ. ನಾನಂತು ಬಾರಿ ಅದೃಷ್ಟವಂತ ಆಫ್‌ಘಾನಿಸ್ಥಾನ್‌ನಿಂದ ಜಮ್ಮು ಕಾಶ್ಮೀರ, ಹರಿದ್ವಾರ್, ಬದರಿನಾಥ್, ಅಮರನಾಥ್, ಕೇದಾರ್‌ನಾಥ್, ಶಿಮ್ಲಾ, ಡಾರ್ಜಿಲಿಂಗ್, ಗಂಗೋತ್ರಿ, ಯಮುನೋತ್ರಿ, ವ್ಯಾಲಿ ಆಫ್ ಫ್ಲವರ್ಸ್ ಮತ್ತು ಉತ್ತರ ಈಶಾನ್ಯದ ಏಳು ರಾಜ್ಯಗಳು ಮತ್ತು ಬರ್ಮಾ ಗಡಿಯವರೆಗೂ ಹಿಮಾಲಯದಲ್ಲಿ ಓಡಾಡಿಬಿಟ್ಟಿದ್ದೀನಿ.

ಹಿಮಾಲಯಗಳೆಂದರೆ ಹಿಮಾಲಯದಲ್ಲಿ ಓಡಾಡಿದವರಿಗೆ ಮಾತ್ರ ಅದರ ಅನುಭವ ತಿಳಿಯುತ್ತದೆ. ವರ್ಣಿಸಲಾಗದ ಹೂವಿನ ಕಣಿವೆಗಳು, ಮುಗಿಲುಗಳಿಗೆ ಮೊನಚಾಗಿ ಚುಚ್ಚಿಕೊಂಡಿರುವ ಫೈನ್ ಮರಗಳು, ವಿಶಾಲವಾಗಿ ಹರಡಿಕೊಂಡಿರುವ ಚಿನಾಬ್ ಮರಗಳು, ಆಕಾಶಕ್ಕೆ ಏಣಿಗಳಂತೆ ಹೆಣೆದುಕೊಂಡಿರುವ ಬಳ್ಳಿಗಳು, ಆಫಲ್ ಗಿಡಗಳು, ಹಿಮಾವೃತ ಗಿರಿಶಿಖರಗಳು ಇತ್ಯಾದಿ. ಈ ಹಿಮಾಲಯಗಳನ್ನು ಮುಖ್ಯವಾಗಿ ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಕೆಳ ಹಿಮಾಲಯ, ಮಧ್ಯ ಹಿಮಾಲಯ ಮತ್ತು ಎತ್ತರ ಹಿಮಾಲಯಗಳು. ಈ ಹಿಮಾಲಯಗಳು ಭಾರತ ಮತ್ತು ಚೀನಾ ದೇಶಗಳನ್ನು ಒಟ್ಟುಗೂಡಿಸಿವೆ. ನೀವು ನಂಬುತ್ತೀರೋ ಇಲ್ಲವೋ? ಈ ಹಿಮಾಲಯಗಳು ಒಂದು ಕಾಲದಲ್ಲಿ ತೆಥೀಸ್ ಎಂಬ ಮಹಾಸಾಗರದ ತಳದಲ್ಲಿದ್ದವು. ಮತ್ತೆ ಈ ಮಹಾಸಾಗರ ಹಿಮಾಲಯ ಪರ್ವತ ಶ್ರೇಣಿಗಳಾದುದಾದರು ಹೇಗೆ? ಎನ್ನುತ್ತೀರ? ಅದೊಂದು ರೋಚಕ ಕಥೆ.

* * *

ಒಂದು ಕಾಲದಲ್ಲಿ ಇಂದಿನ ಹಿಮಾಲಯ ಪರ್ವತ ಶ್ರೇಣಿಗಳು ಸಮುದ್ರದ ತಳದಲ್ಲಿದ್ದವು. ಈ ಮಹಾಸಮುದ್ರ ಹಿಮಾಲಯ ಪರ್ವತಗಳಾಗಿ ತಲೆಯೆತ್ತಲು ಚಲಿಸುತ್ತಿದ್ದ ಭೂಖಂಡಗಳೆ ಕಾರಣ. ಅದರ ಹೆಸರೆ ತೆಥೀಸ್ ಮಹಾಸಾಗರ. ಇಂಡಿಯಾ ಫಲಕ ಇಪ್ಪತ್ತು ಕೋಟಿ ವರ್ಷಗಳ ಹಿಂದೆ ಇಂದಿನ ಅಂಟಾರ್ಕ್‌ಟಿಕಾ ಖಂಡದಲ್ಲಿದ್ದು ಅದು ಅನಂತರ ಉತ್ತರ ಪೂರ್ವಾಭಿಮುಖವಾಗಿ ಒಂಬತ್ತು ಸಾವಿರ ಕಿಲೋಮಿಟರುಗಳ ದೂರ ಪಯಣಿಸಿ ಯುರೇಷ್ಯ ಖಂಡದೊಡನೆ ಘರ್ಷಣೆಗೆ ನಿಂತಿತು. ತೆಥೀಸ್ ಮಹಾಸಾಗರವನ್ನು ಭೂಮಿಯ ಮಹಾ ಆಕಳಿಕೆ ಎಂದು ಕರೆಯಲಾಗುತ್ತದೆ. ಭಾರತ ಮತ್ತು ಆಸ್ಟ್ರೇಲಿಯಾವನ್ನು ಹೊತ್ತ ಇಂಡಿಯಾ ಫಲಕ ಆರೂವರೆ ಕೋಟಿ ವರ್ಷಗಳ ಹಿಂದೆ ಇದಕ್ಕಿಂತಲೂ ದೊಡ್ಡ ಗಾತ್ರದ ಯುರೋಪು, ಏಷ್ಯಾ ಖಂಡವನ್ನು ಹೊತ್ತಿರುವ ಯುರೇಷ್ಯ ಫಲಕದ ಜೊತೆಗೆ ಯುದ್ಧಕ್ಕೆ ನಿಂತಿತು. ತೆಥೀಸ್ ಮಹಾಸಾಗರದಲ್ಲಿ ಸಂಚಯವಾಗಿದ್ದ ಅಗಾದ ಹೂಳು ಹಿಮಾಲಯದ ಭ್ರೂಣವಾಗಿ ಬೆಳೆದಿತ್ತು.

ಹಿಮಾಲಯ ಒಂದೇ ದಿನದಲ್ಲಿ ಎದ್ದು ನಿಂತ ಪರ್ವತವಲ್ಲ. ಅದು ಹಂತ


ಹಂತವಾಗಿ ಬೆಳೆಯಲು ಕೋಟ್ಯಾಂತರ ವರ್ಷಗಳನ್ನೇ ತೆಗೆದುಕೊಂಡಿತು. ಭೂಮಿಯ ದೈತ್ಯ ಶಕ್ತಿಯಾದ ಹಿಮಾಲಯ ಪರ್ವತ ಶ್ರೇಣಿಗಳು ಕೊಂಚ ಕೊಂಚವಾಗಿ ಮೇಲೇರುತ್ತಿದ್ದಾಗ ಅದು ಪ್ರಳಯ ರೂಪವಾಗಿ ಘರ್ಷಣೆಗೊಳ್ಳುತ್ತಿತ್ತು. ಭ್ರೂಣ ರೂಪ ತಾಳಿದ ಹಿಮಾಲಯ ಮೇಲೇಳುತ್ತಿದ್ದಂತೆ ಯುರೇಷ್ಯ ಫಲಕ ಮೆಲ್ಲ ಮೆಲ್ಲನೆ ತೆಥೀಸ್ ಸಾಗರದ ಕತ್ತನ್ನು ಹಿಸುಕಲು ಪ್ರಾರಂಭಿಸಿತು. ಇಂಡಿಯಾ ಹೊತ್ತ ಭೂಫಲಕ ಇದಕ್ಕೆ ವಿರುದ್ಧವಾಗಿ ಉತ್ತರದೆಡೆಗೆ ಸರಿಯುತ್ತ ಬುಲ್‌ಡೋಜರ್‌ನಂತೆ ಅಡ್ಡ ನಿಂತಿತು. ಏಳು ಕೋಟಿ ವರ್ಷಗಳ ಹಿಂದೆ ಈ ರೀತಿಯ ಮುಷ್ಠಿ ಯುದ್ಧ ಪ್ರಾರಂಭವಾಗಿತ್ತು. ಒಂದು ಕಡೆ ಇಂಡಿಯಾ ಫಲಕ ಇನ್ನೊಂದು ಕಡೆ ಯುರೇಷ್ಯ ಫಲಕ ತೆಥೀಸ್ ಸಾಗರದಲ್ಲಿದ್ದ ಹೂಳನ್ನೆಲ್ಲ ಗುಡ್ಡೆ ಹಾಕಿ ಈಗಿನ ಪ್ರಪಂಚದ ಮೇಲ್ಛಾವಣಿ ಎಂದು ಕರೆಯುವ ಟಿಬೆಟ್ಟು ಸೃಷ್ಟಿಯಾಯಿತು. ಈ ಫಲಕಗಳು ಗುದ್ದಾಡಿದ ಕುರುಹುಗಳಿರುವ ಪ್ರದೇಶವನ್ನು ಇಂದಸ್ ಹೊಲಿಗೆಯ ವಲಯ ಎಂದೇ ಕರೆಯಲಾಯಿತು.

ಎಳೆ ಹಿಮಾಲಯಗಳು ಕೆಲವು ಸಹಸ್ರ ವರ್ಷಗಳು ಕಾಲ ಮೌನವಹಿಸಿದ ನಂತರ ಏಳು ಕೋಟಿ ವರ್ಷಗಳ ಹಿಂದೆ ಅದಕ್ಕೆ ಮತ್ತೊಂದು ಗುದ್ದು ಬಿದ್ದಿತು. ಅದು ಬರ್ಮಾ ಮತ್ತು ಅಸ್ಸಾಂನ ಮುಂದಿನ ಭಾಗಗಳನ್ನು ಬಿರಿಯುವಂತೆ ಮಾಡಿ ಅಲ್ಲಿ ಝರಿಗಳು ಹುಟ್ಟಿಕೊಂಡವು. ಈ ಒತ್ತಡದಿಂದ ಸಿಂಧ್ ಮತ್ತು ಬಲೂಚಿಸ್ಥಾನ ಪ್ರದೇಶಗಳು ಮೇಲೇರಿ ಅಲ್ಲೂ ಖಾರಿಗಳು ಬಾಯ್ತೆರೆದು ಕೊಂಡವು. ಈಗ್ಗೆ ಎರಡೂವರೆ ಕೋಟಿ ವರ್ಷಗಳ ಹಿಂದೆ ಬೆಳೆಯುತ್ತಿದ್ದ ಹಿಮಾಲಯಕ್ಕೆ ಇನ್ನೊಂದು ಹೊಡೆತ ಬಿದ್ದಿತು. ಅದೊಂದು ಭಾರಿ ಸೆಣಸಾಟದ ಘರ್ಷಣೆಯಾಗಿದ್ದು ಎರಡೂ ಫಲಕಗಳ ಹಣಾಹಣಿಗೆ ಇಡೀ ಏಷ್ಯಾ ಖಂಡವೇ ರಣರಂಗವಾಗಿಹೋಗಿತ್ತು. ಈ ಹೊಡೆತದ ಫಲದಿಂದ ಎವರೆಸ್ಟ್, ಕಾಂಚನಗಂಗಾ, ಧವಳಗಿರಿ ಮುಂತಾದ ಅತಿ ಎತ್ತರದ ಶಿಖರಗಳಿರುವ ಪರ್ವತ ಸಾಲುಗಳು ರೂಪುಗೊಂಡವು. ಭೂಮಿಯ ಮೇಲೆ ಎರಡೂವರೆ ಕೋಟಿ ವರ್ಷಗಳ ಹಿಂದಿನಿಂದಲೆ ಎವರೆಸ್ಟ್ ಶಿಖರ ಅತ್ಯುನ್ನತ ಶಿಖರವಾಗಿ ಎದ್ದು ನಿಂತಿದೆ.

ಯುರೇಷ್ಯ ಮತ್ತು ಇಂಡಿಯಾ ಭೂಫಲಕಗಳ ಗುದ್ದಾಟದಿಂದ ಇಂಡಿಯಾ ಹೊತ್ತ ಭೂಫಲಕ (ಹಿಮಾಲಯ) ಪ್ರಸ್ತುತ ವರ್ಷಕ್ಕೆ ಸರಾಸರಿ ಆರು ಸೆಂಟಿಮೀಟರುಗಳಷ್ಟು ಎತ್ತರ ಬೆಳೆಯುತ್ತಿದೆ. ಇಂದಿಗೂ ಹಿಮಾಲಯಾ ಅವಿಶ್ರಾಂತ, ಹಿಮಾಲಯ ಪರ್ವತವಾಗಿ ಮೇಲೇಳುವ ಮೊದಲು ಒಟ್ಟು ಐದು ಮಹಾ ಘರ್ಷಣೆಗಳನ್ನು ಎದುರಿಸಿತ್ತು. ಈ ಘರ್ಷಣೆಗಳ ಫಲವಾಗಿ ಹಿಮಾಲಯದ ಪಾದದುದ್ದಕ್ಕೂ ದಕ್ಷಿಣದಲ್ಲಿ ಎರಡೂವರೆ ಸಾವಿರ ಕಿಲೋಮೀಟರುಗಳು ಉದ್ದದ ದೊಡ್ಡ ತಗ್ಗೊಂದು ಕಾಣಿಸಿಕೊಂಡಿತು. ಅದೇ ಸಮಯಕ್ಕೆ ಮಳೆ ಚಳಿ ಬಿಸಿಲು ಹಿಮಾಲಯವನ್ನು ಸುತ್ತುವರಿದು ಸಿಂಧೂ, ಗಂಗಾ ಮತ್ತು ಬ್ರಹ್ಮಪುತ್ರದಂತಹ ಜೀವನದಿಗಳು ಹುಟ್ಟಿಕೊಂಡವು. ಈ ನದಿಗಳು ಪರ್ವತದ ಉದ್ದಕ್ಕೂ ಕಲ್ಲು ಮಣ್ಣನ್ನು ಕೊಚ್ಚಿ ಕೊಚ್ಚಿ ರಾಶಿ ರಾಶಿ ಹೂಳನ್ನು ತಂದು ತಗ್ಗಿಗೆ ಎಸೆದವು. ಫಲವತ್ತಾದ ತಗ್ಗಿನ ಉದ್ದಕ್ಕೂ ಗೋಂಡಾರಣ್ಯ ಬೆಳೆಯಿತು. ಗೋಂಡಾರಣ್ಯದ

ತುಂಬ ಜುಲಾನೆಗಳು, ಜಿರಾಫೆಗಳು, ಕಾಡುಹಂದಿಗಳು, ಕರಡಿಗಳು ಮತ್ತು ಮಂಗಗಳು ತುಂಬಿಕೊಂಡವು. ಅದೊಂದು ಪ್ರಾಣಿ ಮತ್ತು ಸಸ್ಯಜೀವ ಸಂಕುಲಗಳ ದಟ್ಟಕಾಡು. ಟಿಬೆಟ್ ಫಲಕದ ತಳದಲ್ಲಿ ಇಂಡಿಯಾ ಫಲಕ ನುಸುಳುತ್ತಿರುವುದರಿಂದ ಎರಡೂ ಫಲಕಗಳ ಮಧ್ಯ ಘರ್ಷಣೆ ಎಂದಿನಂತೆ ಇಂದೂ ಮುಂದುವರೆದಿದೆ. ಈ ಘರ್ಷಣೆಯಿಂದ ಫಲಕಗಳ ನಡುವೆ ಶೇಖರವಾಗುವ ಶಕ್ತಿಯಿಂದ ಭೂಮಿಯ ತಳದಲ್ಲಿ ಶಕ್ತಿ ಸ್ಫೋಟಗೊಂಡು ಹಿಮಾಲಯಗಳ ಉದ್ದಕ್ಕೂ ಭೂಕಂಪನಗಳು ಕಾಣಿಸಿಕೊಳ್ಳುತ್ತವೆ.

ಈಗ ನಮ್ಮ ಬಸ್ಸು ವಿಶಾಲ ಗಿರಿ ಶಿಖರಗಳನ್ನು ದಾಟಿ ಬೀಜಿಂಗ್‌ನ ಹೊರವಲಯದಲ್ಲಿ ಲಾಂಗ್‌ಫಾಂಗ್ ಪಟ್ಟಣದ ಕಡೆಗೆ ಓಡುತ್ತಿತ್ತು. ನಾವೆಲ್ಲ ಬೆಳಗ್ಗೆಯಿಂದ ಬ್ರೆಡ್ ಪೀಸುಗಳನ್ನು ತಿಂದುತಿಂದು ಏಗ್ಗುಟ್ಟುಹೋಗಿದ್ದೆವು. ನಮ್ಮನ್ನು ನೇರವಾಗಿ ಡೈನಿಂಗ್‌ಹಾಲ್‌ಗೆ ಕರೆದುಕೊಂಡುಹೋದರೆ ಸಾಕೆಂದು ತಹತಹಿಸಿಹೋಗಿದ್ದೆವು. ನಮ್ಮ ಮನಸನ್ನು ಅರಿತುಕೊಂಡಂತೆ ಬಸ್ಸು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಜರೋ ಎಂದು ಹಾರಿಹೋಗುತ್ತಿತ್ತು. ಅಂತೂ ಹೋಟಲ್ ತಲುಪಿ ಒಳ್ಳೆ ಊಟ ಮಾಡಿ ಮಲಗಿಕೊಂಡೆವು.



ಮಹಾ ಗೋಡೆಯ ಮೇಲೆ

ಚಂದ್ರನ ಮೇಲೆ ನಿಂತು ಭೂಮಿಯ ಕಡೆಗೆ ನೋಡಿದರೆ ಮನುಷ್ಯ ನಿರ್ಮಿಸಿದ ಏಕೈಕ ಸ್ಮಾರಕ ಕಾಣಿಸುತ್ತದೆ. ಅದೆ ಚೀನಾ ಮಹಾ ಗೋಡೆ.

ಸುಮಾರು ೨೦೦೦ ವರ್ಷಗಳು ಕಾಲ ಕಟ್ಟಿದ ಚೀನಾದ ಮಹಾಗೋಡೆ ಪೂರ್ಣವಾಗಿ ಮುಗಿದಾಗ ೬೪೦೦ ಕಿ.ಮೀ. ಉದ್ದವಾಗಿತ್ತು.

ಮರುದಿನ ಬೆಳಗ್ಗೆ ನಾವಿದ್ದ ಟೆಂಪೊ ಲಾಂಗ್‌ಫಾಂಗ್ ಪಟ್ಟಣದಿಂದ ಬದಲಾಂಗ್ ಪ್ರದೇಶದ ಕಡೆಗೆ ಹೊರಟಿತು. ಬೆಳಗ್ಗೆ ೭:೧೫ ಗಂಟೆಯಾಗಿದ್ದರೂ ಸೂರ್ಯ ಮೋಡಗಳಿಂದ ಹೊರಕ್ಕೆ ಇಣುಕುವ ದೈರ್ಯ ಮಾಡಿರಲಿಲ್ಲ. ಉಷ್ಣಾಂಶ ೪–೫ ಡಿಗ್ರಿ ಇದ್ದು ಸುತ್ತಲು ಮಂಜಿನ ಮಳೆ ಸುರಿದಿತ್ತು. ಬೆಚ್ಚನೆ ಉಡುಪೇರಿಸಿಕೊಂಡಿದ್ದ ಮಧ್ಯ ವಯಸ್ಸಿನವರು, ವಯಸ್ಸಾದವರು ಗುಂಪು ಗುಂಪಾಗಿ ರಸ್ತೆಗಳಲ್ಲಿ ಓಡಾಡುತ್ತಿದ್ದರು. ಕೆಲವರು ರಸ್ತೆಗಳ ಇಕ್ಕೆಲಗಳಲ್ಲಿರುವ ವಿವಿಧ ರೀತಿಯ ಸಾರ್ವಜನಿಕ ಫಿಟ್‌ನೆಸ್ ವ್ಯಾಯಾಮ ಸಲಕರಣೆಗಳ ಜೊತೆಗೆ ವ್ಯಾಯಾಮದಲ್ಲಿ ತೊಡಗಿಕೊಂಡಿದ್ದರು. ಚೀನಿಯರು ಬೆಳಗ್ಗೆ ಸಾಯಂಕಾಲ ವ್ಯಾಯಾಮ ಮಾಡುವುದನ್ನು ತಮ್ಮ ದಿನ ನಿತ್ಯದ ಹವ್ಯಾಸವಾಗಿಸಿಕೊಂಡಿದ್ದು ಮಕ್ಕಳು ಮುದುಕರೆನ್ನದೆ ಎಲ್ಲರೂ ಪ್ರತಿಯೊಂದಕ್ಕೂ ಸೈಕಲ್‌ಗಳನ್ನೆ ಗೊಂಬೆಗಳಂತೆ ಉಪಯೋಗಿಸುತ್ತಾರೆ. ಪ್ರತಿಯೊಂದು ನಗರದಲ್ಲೂ ಸೈಕಲ್ ಸವಾರರಿಗೆ ವಿಶೇಷ ರಸ್ತೆಗಳನ್ನು ನಿರ್ಮಿಸಲಾಗಿದೆ.

ಟೆಂಪೊ ಸರ್ರನೆ ಹೋಗುತ್ತಿದ್ದಂತೆ ಕಿಟಕಿ ಪಕ್ಕದಲ್ಲಿ ಕುಳಿತಿದ್ದ ನಾನು ಚೀನಿಯರ ಚಟುವಟಿಕೆಗಳನ್ನು ಆಶ್ಚರ್ಯದಿಂದ ನೋಡುತ್ತಿದ್ದೆ. ಲಾಂಗ್‌ಫಾಂಗ್ ನಗರ ದಾಟಿದ ಟೆಂಪೊ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಒಂದೇ ವೇಗದಲ್ಲಿ ಧಾವಿಸುತ್ತಿತ್ತು. ಬದಲಾಂಗ್ ಪ್ರದೇಶ ಬೀಜಿಂಗ್‌ನ ಉತ್ತರ–ಪಶ್ಚಿಮದಲ್ಲಿದ್ದು ನಮ್ಮ ಬಸ್ಸು ಈಗ ಬೀಜಿಂಗ್‌ನ ರಿಂಗ್‌ರಸ್ತೆಯಲ್ಲಿ ಸಾಗುತ್ತಿದ್ದು ದೂರದಲ್ಲಿ ಗಿರಿಶಿಖರಗಳ ಮಾಲೆ ಕಾಣಿಸಿಕೊಂಡಿತು.

ಅದೇ ಗಿರಿ ಶಿಖರಗಳ ಮೇಲೆ ಚೀನಾ ಮಹಾ ಗೋಡೆ ಕಾಣಿಸಿಕೊಂಡಿತು.

ನಾವೆಲ್ಲ ಅದೋ ಅಲ್ಲಿ ಚೀನಾ ಮಹಾ ಗೋಡೆಗಳು ಎಂದು ಒಬ್ಬರಿಗೊಬ್ಬರು ದೂರದ ಪವತಗಳ ಕಡೆಗೆ ಕೈ ತೋರಿಸಿಕೊಂಡೆವು. ಟೆಂಪೊ ಚೀನಾ ಮಹಾ ಗೋಡೆಗಳನ್ನು ನೋಡುವ ಆತುರದಲ್ಲಿ ಇನ್ನಷ್ಟು ಆತುರದಲ್ಲಿ ವೇಗವಾಗಿ ಧಾವಿಸುತ್ತಿತ್ತು. ನಮ್ಮ ಟೆಂಪೊ ಸರಿಯಾಗಿ ೮:೪೫ ಗಂಟೆಗೆ ಬದಲಾಂಗ್ ಪ್ರದೇಶದ ಚೀನಾ ಮಹಾ ಗೋಡೆಗಳ ಎದುರಿಗೆ ನಿಂತಿತು. ನಮ್ಮ ಜೊತೆಯಲ್ಲಿದ್ದ ಶೆಂಡಿಂಗ್ ಒಬ್ಬೊಬ್ಬರಿಗೆ ೪೦ ಯುಯಾನ್‌ಗಳಂತೆ ೭ ಜನರಿಗೆ ಟಿಕೆಟ್ಟುಗಳನ್ನು ತೆಗೆದುಕೊಂಡು ನಮ್ಮನ್ನೆಲ್ಲ ಒಂದು ಹೆಬ್ಬಾಗಿಲಿನ ಒಳಕ್ಕೆ ಕರೆದುಕೊಂಡು ನಡೆದ.



ಚೀನಾ ಮಹಾಗೋಡೆಯ ಮೇಲೆ

ಅದೊಂದು ಚೀನಿ ಶೈಲಿಯ ದ್ವಾರ. ದ್ವಾರದ ಸುತ್ತಲಿದ್ದ ಅಂಗಡಿಗಳಲ್ಲಿ ಹಲವಾರು ರೀತಿಯ ಚೀನಿ ವಸ್ತುಗಳಿದ್ದು ಚೀನಿ ಮಹಿಳೆಯರು ನೋಡಿದವರೆನೆಲ್ಲ "ಹಲೋ... ಹಲೋ..." ಎಂದು ತಮ್ಮ ಅಂಗಡಿಗಳಲ್ಲಿರುವ ವಸ್ತುಗಳನ್ನು ಎತ್ತಿ ತೋರಿಸುತ್ತ "ಫೈವ್ ಯುವಾನ್... ಟೆನ್ ಯುವಾನ್..." ಎಂದು ಕರೆಯುತ್ತಿದ್ದರು. ನಾವು ನಿಂತಿದ್ದ ಕಣಿವೆಯಿಂದ ಎರಡೂ ಕಡೆಯೂ ಶಿಖರಗಳ ಮೇಲೆ ಹಾದುಹೋಗಿದ್ದ ಚೀನಾ ಮಹಾ ಗೋಡೆಗಳ ಕಡೆಗೆ ಕಣ್ಣು ನೆಟ್ಟು ಪ್ರವೇಶ ದ್ವಾರವನ್ನು ತಲುಪಿದ ಕೆಲವೇ ಕ್ಷಣಗಳಲ್ಲಿ ಪ್ರಪಂಚ ಪ್ರಖ್ಯಾತ ಚೀನಾ ಮಹಾ ಗೋಡೆಗಳ ಮೇಲಿದ್ದೆವು. ಆಗಲೇ ಆ ಡ್ರ್ಯಾಗನ್ ಗೋಡೆಗಳ ಮೇಲೆ ನೂರಾರು ಜನರು ಹೆಜ್ಜೆಗಳನ್ನಾಕಿ ಹೆಮ್ಮೆಯಿಂದ ನಡೆಯುತ್ತಿದ್ದರು.

ಸುತ್ತಲು ಆಕಾಶದ ಕೆಳಗೆ ಮೋಡಗಳ ಜೊತೆಗೆ ಸಾಗರದ ಅಲೆಗಳಂತೆ ಕಣ್ಣು

ಹಾಯುವವರೆಗೂ ಬೆರೆತುಹೋಗಿರುವ ಅನಂತ ಗಿರಿ ಶಿಖರ ಮಾಲೆಗಳು. ತಣ್ಣಗೆ ರಾತ್ರಿಯಲ್ಲಿ ಚಳಿಯ ರಗ್ಗನ್ನೊದ್ದು ಮಲಗಿ ಈಗಲೆ ಎದ್ದು ಕಣ್ಣುಜ್ಜಿಕೊಂಡು ಪೂರ್ವದಲ್ಲಿ ಬೆಟ್ಟಗಳ ಕಡೆಗೆ ನೋಡುತ್ತಿರುವ ಸೂರ್ಯ. ಮಧ್ಯ ಬಿಳಿ ಮುಗಿಲು ಮತ್ತು ಮಂಜಿನ ತೆರೆಗಳ ಸರಸ. ಎಲ್ಲವನ್ನು ತೂರಿಕೊಂಡು ಆಕಾಶವನ್ನೆ ಮೆಟ್ಟಿಲು ಮಾಡಿಕೊಂಡು ಗಿರಿ ಶಿಖರಗಳ ಮೇಲೆ ಎದ್ದು ಬಿದ್ದು ಚಾಚಿ ಮಲಗಿರುವ ಡ್ರ್ಯಾಗನ್ ಗೋಡೆಗಳು.

ನಾವು ಸುತ್ತಲಿನ ರಮಣೀಯ ದೃಶ್ಯಗಳನ್ನು ನೋಡುತ್ತ ಉತ್ತರ ದಿಕ್ಕಿಗೆ ಬೆಳೆದುನಿಂತಿದ್ದ ಗೋಡೆಗಳ ಮೇಲೆ ಹೆಜ್ಜೆಗಳನ್ನಿಡುತ್ತ ಸಾಗುತ್ತಿದ್ದೆವು. ಶೆಂಡಿಂಗ್ ನಮ್ಮನ್ನು ಮಧ್ಯ ಮಧ್ಯ ನಿಲ್ಲಿಸಿ ಡಿಜಿಟಲ್ ಕ್ಯಾಮರಾದಲ್ಲಿ ಫೋಟೋಗಳನ್ನು ತೆಗೆಯುತ್ತಿದ್ದ. ಒಂದು ಶಿಖರದ ತುತ್ತ ತುದಿಯನ್ನು ಹತ್ತಿದ್ದೆ ಅದರ ಬೆನ್ನಲ್ಲೇ ಇನ್ನೊಂದು ಎತ್ತರದ ಶಿಖರ ಕಾಣಿಸಿಕೊಳ್ಳುತ್ತದೆ. ಇಷ್ಟಕ್ಕೂ ಈ ಶಿಖರಗಳು ಮತ್ತು ಗೋಡೆಗಳು ಎಲ್ಲಿಂದ ಎಲ್ಲಿಗೆ ಸಾಗಿವೆ ಎನ್ನುವುದೇ ಅರ್ಥವಾಗಲಿಲ್ಲ.

ಎತ್ತರದಲ್ಲಿ ದೂರದೂರಕ್ಕೆ ಕಣ್ಣು ಹಾಯಿಸಿದಾಗ ಹತ್ತಿರದ ಶಿಖರಗಳ ಮೇಲೆ ಒಂದು ಗೋಡೆ, ಅದರ ಹಿಂದೆ ಇನ್ನೊಂದು, ಅದರ ಹಿಂದೆ ಮತ್ತೊಂದು. ಹೀಗೆ ಒಂದೇ ನೋಟಕ್ಕೆ ಐದು ಗೋಡೆಗಳು ಸಮುದ್ರದ ಅಲೆಗಳಂತೆ ಕಾಣಿಸತೊಡಗಿದವು. ಗೋಡೆಯ ಎತ್ತರ ೨೦ ರಿಂದ ೪೦ ಅಡಿಗಳಿದ್ದು ಕೆಳಗಿನ ತಳಪಾಯದ ಅಗಲ ಸುಮಾರು ೨೫ ಅಡಿಗಳಿದ್ದರೆ ಮೇಲೆ ೧೫ ಅಡಿಗಳಿದೆ. ಮುಖ್ಯ ಗೋಡೆಗಳ ಎರಡೂ ಕಡೆ ೫ ರಿಂದ ೧೦ ಅಡಿ ಎತ್ತರದ ಮಣ್ಣಿನಲ್ಲಿ ನಿರ್ಮಿಸಿದ ತಡೆ ಗೋಡೆಗಳಿವೆ. ಗೋಡೆಗಳ ಮಧ್ಯ ಕಿಟಿಕಿಗಳಿರುವಂತೆ ಖಾಲಿ ಸ್ಥಳಗಳನ್ನು ಬಿಡಲಾಗಿದೆ. ಪ್ರತಿ ೧೦೦ ಅಡಿಗಳ ಅಂತರದಲ್ಲಿ ವೀಕ್ಷಣಾ ಗೋಪುರಗಳಿವೆ.

ಮಿಂಗ್ ಮತ್ತು ಕ್ವಿಂಗ್ ರಾಜರ ಕಾಲದಲ್ಲಿ ಸೈನಿಕರು ಈ ಗೋಪುರಗಳ ಮೇಲೆ ನಿಂತುಕೊಂಡು ಶತ್ರುಗಳನ್ನು ಕಾಯುತ್ತಿದ್ದರು.ಕ್ರಿ.ಪೂರ್ವ ೨೨೧ ರಿಂದ ಕ್ರಿ.ಶ.೧೬೫೦ ರವರೆಗೆ ಅನೇಕ ರಾಜರು ಈ ಗೋಡೆಗಳನ್ನು ಸುಮಾರು ೨೦೦೦ ವರ್ಷಗಳ ಕಾಲ ಕಟ್ಟುತ್ತಲೆ ಇದ್ದರು. ಹಲವು ಸಲ ನೂರಾರು ಕಡೆ ಶತ್ರುಗಳಿಂದ ಈ ಗೋಡೆಗಳು ಜಖಂಗೊಂಡಿವೆ.

೧೧ ಗಂಟೆಯವರೆಗೆ ಉತ್ತರದ ದಿಕ್ಕಿಗೆ ಹಾದುಹೋಗಿದ್ದ ಗೋಡೆಗಳ ಮೇಲೆ ಹತ್ತಿ ಇಳಿದು ಸುಮಾರು ದೂರ ನಾವು ಸಾಗಿಹೋಗಿದ್ದೆವು. ಕೆಲವು ಕಡೆಗಳಲ್ಲಂತೂ ಗೋಡೆಯ ಪಕ್ಕದಲ್ಲಿದ್ದ ಉಕ್ಕಿನ ಪೈಪನ್ನು ಗಟ್ಟಿಯಾಗಿ ಹಿಡಿದುಕೊಂಡು ಹತ್ತಬೇಕಾಯಿತು. ಮೆಟ್ಟಿಲುಗಳು ತೀರಾ ಇಳಿಜಾರಾಗಿದ್ದವು. ನೂರಾರು ಸಲ ಗೋಡೆಗಳನ್ನು ಕಟ್ಟಿರುವುದರಿಂದ ಮರಳು, ಗರಜು ಮಣ್ಣಿನಲ್ಲಿ ತಯಾರಿಸಿರುವ ಇಟ್ಟಿಗೆಗಳು ಮತ್ತು ಗ್ರಾನೈಟ್ ಶಿಲೆಗಳನ್ನು ಉಪಯೋಗಿಸಲಾಗಿತ್ತು. ಪ್ರಪಂಚ ಪ್ರಖ್ಯಾತ ಚೀನಾ ಮಹಾ ಗೋಡೆಗಳನ್ನು ನಿರ್ಮಿಸುವಾಗ ಎಷ್ಟು ಜನರು ಕೈಕಾಲುಗಳನ್ನುಕಳೆದುಕೊಂಡಿರಬಹುದು?

ಎಷ್ಟು ಜನರು ಪ್ರಾಣ ಕಳೆದುಕೊಂಡಿರಬಹುದು? ಎನ್ನುವ ಆಲೋಚನೆ ನನ್ನನ್ನು ಕಾಡುತ್ತಿತ್ತು. ನಾವು ಆ ದಿನವೆ ಫರ್‌ಬಿಡನ್ ಸಿಟಿ ನೋಡಲು ಹೋಗಬೇಕಾಗಿದ್ದರಿಂದ ಗೋಡೆಗಳ ಮೇಲಿಂದ ಇಳಿಯತೊಡಗಿದೆವು. ಇಳಿಯುವಾಗ ಗೋಡೆಗಳನ್ನು ಮತ್ತೊಮ್ಮೆ ಕಣ್ಣುಗಳ ತುಂಬಾ ತುಂಬಿಕೊಂಡು ಹಿಂದಕ್ಕೆ ಹೆಜ್ಜೆಯಾಕತೊಡಗಿದೆವು.

ಅಷ್ಟೊತ್ತಿಗೆ ಗೋಡೆಗಳ ಮೇಲೆಲ್ಲ ಜನರು ತುಂಬಿಹೋಗಿದ್ದರು. ಮಕ್ಕಳು, ಮುದುಕರು, ಯುವಕರು, ಯುವತಿಯರು ಎಲ್ಲರೂ ಚೀನಾ ಗೋಡೆಗಳನ್ನು ಹತ್ತಿದ ಸಂಭ್ರಮದಲ್ಲಿ ಉಬ್ಬಿಹೋಗಿದ್ದರು. ಚೀನಾದ ಜನರೆಲ್ಲ ಆ ಗೋಡೆಗಳ ಮೇಲೆಯೆ ಇರುವಂತೆ ತೋರುತ್ತಿತ್ತು. ಅನೇಕ ಯುರೋಪಿಯನ್ನರು ಬೆರಗು ಕಣ್ಣುಗಳಿಂದ ಗೋಡೆಗಳ ಮೇಲೆ ಓಡಾಡುತ್ತಿದ್ದರು. ನಮ್ಮ ದೇಶದಿಂದ ಬಂದ ಒಬ್ಬರನ್ನೂ ಗೋಡೆಗಳ ಮೇಲೆ ನೋಡಲಿಲ್ಲ. ವೆಸ್ಟ್ ಇಂಡೀಸ್ ಕ್ರಿಕೆಟ್ ಮಾಜಿ ಆಟಗಾರರಂತೆ ತೋರುವ ಮೂವರು ನೀಗ್ರೋಗಳು ಮಾತ್ರ ಯಾರನ್ನೂ ಲೆಕ್ಕಿಸದೆ ದೊಡ್ಡ ದೊಡ್ಡ ಹೆಜ್ಜೆಗಳನ್ನಾಕಿಕೊಂಡು ಹೋಗುತ್ತಿದ್ದರು. ಪ್ರತಿಯೊಬ್ಬರ ಕೈಗಳಲ್ಲೂ ಕ್ಯಾಮರಾಗಳಿದ್ದು ಹಿಡೀ ಭೂಮಿ ಆಕಾಶವನ್ನು ಚಿತ್ರಿಸುವಂತೆ ಎಲ್ಲರೂ ಫೋಟೋಗಳನ್ನು ಹಿಡಿಯುತ್ತಿದ್ದರು. ಬರುಬರುತ್ತಾ ಪ್ರಿಯಾಗಿ ಹೆಜ್ಜೆಯಾಕುವುದೆ ಕಷ್ಟವಾಗಿ ಜನರು ತುಂಬಿಹೋಗಿದ್ದರು. ಚೀನಿಯರು ವಿಧವಿಧ ತಿಂಡಿಗಳನ್ನು ತಿನ್ನುತ್ತಾ ಪ್ಲಾಸ್ಟಿಕ್ ಪೇಪರುಗಳನ್ನು ಡಸ್ಟ್‌ಬಿನ್ನುಗಳಿಗೆ ಹಾಕುತ್ತಿದ್ದರು.

ಚಿತ್ರಕಾರರು ಅಲ್ಲಲ್ಲಿ ಗೋಡೆಗಳ ಮೇಲೆ ಸುತ್ತಲಿನ ದೃಶ್ಯಗಳನ್ನು ಚಿತ್ರಿಸುತ್ತಿದ್ದರು. ಒಂದು ಶಿಖರದಿಂದ ಇನ್ನೊಂದು ಶಿಖರಕ್ಕೆ ಹಾದುಹೋಗುತ್ತಿರುವ ರೋಪ್‌ವೇಗಳು, ಕೆಳಗಿಂದ ಮೇಲಕ್ಕೆ ಮೇಲಿಂದ ಕೆಳಕ್ಕೆ ಸರ್ರನೆ ಇಳಿದು ಹತ್ತುತ್ತಿರುವ ಟಾಯ್ ಟ್ರೈನ್‌ಗಳು ಮತ್ತು ಚೀನಾದಲ್ಲಿ ತಯಾರಿಸದ ಅನೇಕ ರೀತಿಯ ವಸ್ತುಗಳ ಅಂಗಡಿಗಳು ತುಂಬಿಹೋಗಿದ್ದವು. ೧೦ ರಿಂದ ೪೦ ಯುವಾನ್‌ಗಳನ್ನು ಕೊಟ್ಟರೆ ಬ್ರಾಸ್‌ನಲ್ಲಿ ಚೀನಾ ಮಹಾ ಗೋಡೆ ಇರುವ ಚಿತ್ರದ ಜೊತೆಗೆ ನಮ್ಮ ಹೆಸರನ್ನು ಕೆತ್ತಿ ಕೊಡುವುದಾಗಿ ಅಂಗಡಿಯವರು ಹೇಳುತ್ತಿದ್ದರು. "ಐ ಕ್ಲೈಂಬಡ್ ಗ್ರೇಟ್‌ವಾಲ್ ಆಫ್ ಚೀನಾ" ಎನ್ನುವ ಅಕ್ಷರಗಳಿರುವ ಟೀ ಶರ್ಟ್‌ಗಳು ಅಲ್ಲಿ ಬಿಸಿಬಿಸಿಯಾಗಿ ಮರಾಟವಾಗುತ್ತಿದ್ದವು. ನಾವು ಇದೆಲ್ಲವನ್ನು ನೋಡುತ್ತ ಗ್ರೇಟ್‌ವಾಲ್ ಆಫ್ ಚೀನಾ ಗೋಡೆಗಳನ್ನು ಹತ್ತಿದ ಸಂಭ್ರಮದಲ್ಲಿ ಕೆಳಕ್ಕೆ ಇಳಿಯತೊಡಗಿದೆವು.

* * *

ಪ್ರಪಂಚದ ವಿಸ್ಮಯಗಳಲ್ಲಿ ಚೀನಾ ಮಹಾಗೋಡೆ ಒಂದು. ಈ ಮಹಾಗೋಡೆ ಭೂಮಿಯ ಮೇಲ ನೂರಾರು ತಲೆಗಳ ಡ್ರ್ಯಾಗನ್‌ನಂತೆ ಪರ್ವತ, ಕಣಿವೆ, ನದಿ, ಮರಳುಗಾಡು, ಹುಲ್ಲುಗಾಡುಗಳೆನ್ನದೆ ಪೂರ್ವದಿಂದ ಪಶ್ಚಿಮಕ್ಕೆ ೬೪೦೦ ಕಿ.ಮೀ.ಗಳು ದೂರ ಉದ್ದವಾಗಿ ಹಾಸಿಕೊಂಡಿದೆ. ಈ ಗೋಡೆಗೆ ಸುಮಾರು ೨ ಸಾವಿರ ವರ್ಷಗಳ

ಹಿತಿಹಾಸವಿದೆ.

ಕ್ವಿಂಗ್ ಸಾಮ್ರಾಜ್ಯದ ಷೀ ಹುಹಾಡೀನ್‌ಗ್ಡಿ ಕ್ರಿಪೂ ೨೨೧. ರಿಂದ ಕ್ರಿಪೂ ೨೧೦ರ ಮಧ್ಯ ಈ ಮಹಾ ಗೋಡೆಗಳನ್ನು ಕಟ್ಟಲು ಮೊದಲು ಪ್ರಾರಂಭಿಸಿದ ಎಂದು ಹೇಳಲಾಗುತ್ತದೆ. ಮೊದಲಿಗೆ ಕಲ್ಲುಗಳನ್ನು ಮಾತ್ರ ಈ ಗೋಡೆಕಟ್ಟಲು ಬಳಸಲಾಗಿತ್ತು. ಅನಂತರ ಇಟ್ಟಿಗೆ ಗರಜು ಸುಣ್ಣವನ್ನು ಉಪಯೋಗಿಸಲಾಯಿತು. ಈ ಗೋಡೆಗಳ ಹಲವು ಭಾಗಗಳು ಕಾಲಾಂತರದಲ್ಲಿ ಭೂಕಂಪ, ನೆರೆ, ಮಳೆ, ಚಳಿ, ಗಾಳಿಗಳಿಂದ ಶಿಥಿಲಗೊಂಡಿದ್ದರೂ ಇಂದಿಗೂ ಹೆಚ್ಚು ಸ್ಥಳಗಳಲ್ಲಿ ಸದೃಢವಾಗಿ ಕಾಲಕ್ಕೆ ಎದುರಾ' ನಿಂತುಕೊಂಡು ಚರಿತ್ರೆಯ ವೈಭವವನ್ನು ಮೆಲಕು ಹಾಕುತ್ತಿವೆ.



ಚೀನಾ ಮಹಾಗೋಡೆಯ ಮೇಲೆ

ಪ್ರಪಂಚದ ವಿಸ್ಮಯ ಸ್ಮಾರಕಗಳಲ್ಲಿ ಒಂದಾದ ಚೀನಾ ಮಹಾಗೋಡೆಗಳು ಇಂದಿಗೂ ಪ್ರಪಂಚದಾದ್ಯಂತ ಜನರನ್ನು ತನ್ನ ಕಡೆಗೆ ಆಕರ್ಷಿಸುತ್ತಿವೆ. ಪೂರ್ವದ ಗನ್ಸು ಪ್ರದೇಶದಿಂದ ಪ್ರಾರಂಭವಾಗುವ ಈ ಗೋಡೆಗಳು ಪಶ್ಚಿಮದಲ್ಲಿ ಷಾನ್‌ಹೈಗುಹಾನ್‌ನ ಬೋಹೈ ಕ್ಯಾಸ್ಪಿಯನ್ ಸಮುದ್ರದವರೆಗೂ ಚಾಚಿನಿಂತಿವೆ. ಮೊದಲಿಗೆ ಯಾನ್, ಜೋ ಮತ್ತು ಕ್ವಿನ್ ರಾಜ್ಯಗಳು ತಮ್ಮ ರಾಜ್ಯಗಳನ್ನು ಶತ್ರುಗಳಿಂದ ರಕ್ಷಿಸಿಕೊಳ್ಳಲು ಗೋಡೆಗಳನ್ನು ಕಟ್ಟಲು ಪ್ರಾರಂಭಿಸಿದ್ದರು. ಅನಂತರದ ದಿನಗಳಲ್ಲಿ ಮುಂದಿನ ಸಾಮ್ರಾಜ್ಯಗಳು ಕೂಡ ನಿರಂತರವಾಗಿ ಈ ಗೋಡೆಗಳನ್ನು ಇನ್ನಷ್ಟು ಮತ್ತಷ್ಟು ಎತ್ತರವಾಗಿ ಉದ್ದವಾಗಿ ಕಟ್ಟುತ್ತ ರಿಪೇರಿ ಮಾಡುತ್ತಾಹೋದರು. ಕ್ವಿಂಗ್, ಹ್ಯಾನ್ ಸುಯಿ ಮತ್ತು ಮಿಂಗ್ ರಾಜರು ಮೊದಲಿಗೆ ಈ ಗೋಡೆಗಳನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಸ್ವಾತಂತ್ರ್ಯವಾಗಿ ಕಟ್ಟಿದರು.

ಎಲ್ಲಾ ರಾಜ್ಯಗಳನ್ನು ಒಟ್ಟುಗೂಡಿಸಿದ ಕ್ವಿನ್ ಸಾಮ್ರಾಟರು ಉತ್ತರದಲ್ಲಿ ಊಣರ ತೊಂದರೆಗಳನ್ನು ಎದುರಿಸಲು ಎಲ್ಲಾ ಗೋಡೆಗಳನ್ನು ಒಟ್ಟುಗೂಡಿಸಿ ಚೀನಾ ಮಹಾಗೋಡೆಗೆ ನಾಂದಿ ಹಾಡಿದರು. ಅಲ್ಲಿಂದ ಈ ಮಹಾಗೋಡೆ ಚೀನಿಯರ ಚರಿತ್ರೆಯಲ್ಲಿ ಆತ್ಮಗೌರವದ ಒಂದು ದೊಡ್ಡ ಸಂಕೇತವಾಗಿ ಬೆಳೆಯುತ್ತಾ ಹೋಯಿತು. ಈ ಗೋಡೆಯನ್ನು ನೋಡಲು ಹೋಗುವುದೆಂದರೆ ಚರಿತ್ರೆಯ ಜೊತೆಗೆ ಹೆಜ್ಜೆಯಾಕಿ ನಡೆದಂತೆ. ಈ ಗೋಡೆಗಳನ್ನು ಸೈನಿಕರು, ಕೈದಿಗಳು, ಕಳ್ಳರು, ಯುದ್ಧಗಳಲ್ಲಿ ಸೋತು ರಾಜರಿಗೆ ಸೆರೆ ಸಿಕ್ಕಿದ ಗುಲಾಮರು, ಸ್ಥಳೀಯ ಜನರು ಒಟ್ಟುಗೂಡಿ ನಿರ್ಮಿಸಿದ್ದಾರೆ. ಗೋಡೆಗಳನ್ನು ನಿರ್ಮಿಸುವಾಗ ಅಪಘಾತಗಳಲ್ಲಿ ಸತ್ತವರನ್ನು ಗೋಡೆಗಳ ಒಳಗೆ ಹಾಕಿ ಹೂಳಲಾಯಿತು ಎನ್ನಲಾಗಿದೆ.

ಇತ್ತೀಚಿನ ಒಂದು ಸಂಶೋಧನೆಯಂತೆ ಮೂಲವಾಗಿ ಈ ಗೋಡೆಗಳನ್ನು ಕ್ರಿ.ಪೂ.೧೧೦೦-ಕ್ರಿ.ಪೂ.೨೨೩ ರನಡುವೆ ಚೂ ಸಾಮ್ರಾಟರ ಕಾಲದಲ್ಲಿ ಮೊದಲಿಗೆ ಪ್ರಾರಂಭಿಸಲಾಯಿತು ಎನ್ನಲಾಗದೆ. ಅನಂತರ ಇತರ ಸಾಮ್ರಾಟರು ಗೋಡೆಗಳನ್ನು ಇನ್ನಷ್ಟು ಬೆಳೆಸಿದರು ಎನ್ನುವುದು ಈ ಸಂಶೋಧಕರ ವಾದ. ಅಂದರೆ ಚೂ ಜನರೆ ಈ ಗೋಡೆಗಳ ಮೂಲಕರ್ತರು ಎನ್ನುವುದು ಇವರ ವಾದ. ಆ ಕಾಲದಲ್ಲಿ ಅನೇಕ ರಾಜರಿದ್ದು ಒಬ್ಬರ ಮೇಲೆ ಇನ್ನೊಬ್ಬರು ದಂಡೆತ್ತಿ ಹೋಗುತ್ತಿದ್ದು, ಅದನ್ನು ನಿವಾರಿಸಲು ತಮ್ಮ ತಮ್ಮ ರಾಜ್ಯಗಳ ಸುತ್ತಲು ಗೋಡೆಗಳನ್ನು ಕಟ್ಟಲು ಪ್ರಾರಂಭಿಸಿದ್ದರು ಎಂದು ತಿಳಿಯಲಾಗಿದೆ.

ಇದರ ಆಧಾರದ ಮೇಲೆ ಭಾರತದಲ್ಲೂ ರಾಜರು ತಮ್ಮ ಪ್ರದೇಶಗಳ ಸುತ್ತಲೂ ಕೋಟೆಗಳನ್ನು ಕಟ್ಟಿಕೊಳ್ಳುತ್ತಿದ್ದು ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಕ್ಕಾಗಿಯೆ ಎಂಬುದಾಗಿ ಚರಿತ್ರೆಕಾರರು ನಂಬಿದ್ದಾರೆ. ಚೀನಾ ಚರಿತ್ರೆ ಪ್ರಾರಂಭವಾಗುವುದಕ್ಕೆ ಮುಂಚೆಯೆ ಇಂತಹ ಗೋಡೆಗಳನ್ನು ಪ್ರಪಂಚದ ಹಲವು ಪ್ರದೇಶಗಳಲ್ಲಿ ಕಟ್ಟುತ್ತಿದ್ದುದಾಗಿ ಹೇಳಿದರೂ ಅದಕ್ಕೆ ಇದುವರೆಗೂ ಯಾವ ಆಧಾರಗಳು ದೊರಕಿಲ್ಲ.

ಚೀನಾದ ರಾಜಧಾನಿ ಬೀಜಿಂಗ್ ಹತ್ತಿರದ ಬದಲಾಂಗ್ ಪ್ರದೇಶದಲ್ಲಿ ಈ ಗೋಡೆಯನ್ನು ಕ್ರಿ.ಶ.೧೩೬೮ ರಿಂದ ಕ್ರಿ.ಶ.೧೬೪೪ರ ನಡುವೆ ಆಧುನಿಕವಾಗಿ ಮಿಂಗ್ ಸಾಮ್ರಾಟರು ಕಟ್ಟಿ ಮುಗಿಸಿದ್ದರು. ಇಲ್ಲಿನ ಭಾಗಗಳನ್ನು ಕಮೂನಿಷ್ಟ್ ಸರಕಾರ ಕ್ರಿ.ಶ.೧೯೪೯ರ ನಂತರ ಇನ್ನಷ್ಟು ರಿಪೇರಿ ಮಾಡಿ ಸುಂದರಗೊಳಿಸಿತು. ಈ ಪ್ರದೇಶ ಪ್ರಸ್ತುತ ಹೆಚ್ಚು ಜನರನ್ನು ಆಕರ್ಷಿಸುವ ಪ್ರದೇಶವಾಗಿದೆ.



ಫರ್‌ಬಿಡನ್‌ಸಿಟಿ ಮತ್ತು ಟಿಯನ್‌ಮಿನ್ ಚೌಕ

ಚೀನಾದಲ್ಲಿರುವ ಮುಖ್ಯ ಧರ್ಮಗಳು: ಕನ್‌ಫ್ಯೂಷಿಯಸ್, ಟಾಯಿಸಂ, ಬುದ್ಧಿಸಂ, ಕ್ರೈಸ್ತ (ಶೇಕಡ ೧) ಮತ್ತು ಮುಸ್ಲಿಮ್ ಧರ್ಮ (ಶೇಕಡ ೨).

೩.೧೧.೨೦೦೫ರ ತಣ್ಣನೆಯ ಮಧ್ಯಾಹ್ನ ೨ ಗಂಟೆಗೆ ನಮ್ಮ ಬಸ್ಸು ಪ್ರಪಂಚದ ಅತಿ ವಿಶಾಲವಾದ ಟಿಯನ್‌ಮಿನ್ ಚೌಕದ ಮುಂದೆ ನಿಂತುಕೊಂಡಿತ್ತು. ಟಿಯನ್‌ಮಿನ್ ಚೌಕ ಎಂದರೆ ಚೀನಾದ ಅತಿ ಮುಖ್ಯ ಘಟನೆಗಳು ನಡೆದಿರುವ ಮತ್ತು ಮುಂದಿನ ದಿನಗಳಲ್ಲಿ ನಡೆಯಬಹುದಾದ ಸ್ಥಳ. ಇಡೀ ವಿಶಾಲ ಚೌಕದ ತುಂಬಾ ಜನರು ತುಂಬಿಹೋಗಿದ್ದರು. ಎಲ್ಲರ ಕೈಗಳಲ್ಲೂ ಕೆಂಪು ಬಾವುಟಗಳು. ಅಲ್ಲಿ ತುಂಬಿರುವ ಜನರ ಗದ್ದಲ ಸಮುದ್ರದ ಅಲೆಗಳಂತೆ ಬೋರ್ಗರೆಯುತ್ತ ದಡಕ್ಕೆ ಅಪ್ಪಳಿಸುವಾಗ ಕೇಳಿಸುವಂತೆ ಪ್ರತಿಧ್ವನಿಸುತ್ತಿದೆ. ಕ್ರಿ.ಶ.೧೯೮೯ರಲ್ಲಿ ಸುಮಾರು ೧೦ ಸಾವಿರ ಯುವಕರು ಸ್ವಾತಂತ್ರ್ಯ ಕೇಳಲು ಹೋಗಿ ಕಮ್ಯೂನಿಸ್ಟ್ ಸರಕಾರದಿಂದ ಇಲ್ಲಿ ಪ್ರಾಣ ಕಳೆದುಕೊಂಡಿದ್ದರು. ಈ ವಿಶಾಲ ಚೌಕದ ಪೂರ್ವದಲ್ಲಿ ಚೀನಾ ಚರಿತ್ರೆಯ ಮೂಸಿಯಂ ಮತ್ತು ಚೀನಾ ದಂಗೆಯ ಮೂಸಿಯಂ ಮತ್ತು ಪಶ್ಚಿಮದಲ್ಲಿ ಚೀನಾ ಜನರ ಗ್ರೇಟ್‌ಹಾಲ್ ಕಟ್ಟಡವಿದೆ. ಚೀನಾ ಜನರ ಗ್ರೇಟ್‌ಹಾಲ್ ಭವ್ಯವಾಗಿ ಎದ್ದುಕಾಣುತ್ತಿದ್ದು ಅದರ ಮುಂದೆ ನಡೆದಾಡುವ ಜನರು ಇರುವೆಗಳಂತೆ ಕಾಣುತ್ತಿದ್ದರು. ಎತ್ತರವಾದ ಕಂಭಗಳು, ದ್ವಾರಗಳು ಮತ್ತು ಕಿಟಿಕಿಗಳು ಅತಿ ಭವ್ಯವಾಗಿ ಕಾಣುತ್ತಿದ್ದವು.

ಈ ಚೌಕದ ಎರಡೂ ಕಡೆ ಎರಡು ಭವ್ಯವಾದ ಕಟ್ಟಡಗಳಿದ್ದು ಉತ್ತರದಲ್ಲಿ ಕ್ವಿಂಗ್ ಮತ್ತು ಮಿಂಗ್ ರಾಜರ ಕಾಲದ ಫರ್‌ಬಿಡನ್ ಸಿಟಿಯ ಹೆಬ್ಬಾಗಿಲಿದೆ. ಕಟ್ಟಡದ ಮಧ್ಯ ಮಾಹೋ ಭಾವ ಚಿತ್ರ ವಿಶೇಷವಾಗಿ ಎದ್ದು ಕಾಣಿಸುತ್ತಿದೆ. ಎಲ್ಲೆಲ್ಲೂ ಕಟ್ಟಡಗಳ ಮೇಲೆಲ್ಲ ಕೆಂಪು ಬಣ್ಣಗಳು ಮತ್ತು ಕೆಂಪು ಭಾವುಟಗಳು. ಜನರು ಗ್ರೇಟ್‌ಹಾಲ್, ಚೀನಾ ಚರಿತ್ರೆಯ ಮೂಸಿಯಂ ಮತ್ತು ಚೀನಾ ದಂಗೆಯ ಮೂಸಿಯಂಗಳ ಮುಂದೆ ನಿಂತು ಫೋಟೊಗಳನ್ನು ಹಿಡಿದುಕೊಳ್ಳುತ್ತಿದ್ದಾರೆ. ಅಲ್ಲಿಂದ ಎದುರಿಗಿದ್ದ ಫರ್‌ಬಿಡನ್

ಸಿಟಿ ಹೆಬ್ಬಾಗಿಲಿನ ಮುಂದಕ್ಕೆ ನಾವೆಲ್ಲ ಬಂದೆವು.

ಅಲ್ಲಿಯೂ ಹೆಣ್ಣು ಗಂಡೆನ್ನದೆ ಜನರು ಕಟ್ಟಡಗಳ ಎದುರಿಗೆ ನಿಂತುಕೊಂಡು ಫೋಟೊಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ವಿಶೇಷವಾಗಿ ಹಳ್ಳಿಗಳಿಂದ ಬಂದಿರುವ ಚೀನಿಯರನ್ನು ಗುಂಪುಗಳಾಗಿ ನಿಲ್ಲಿಸಿದ ಗೈಡ್ಸ್ ಅಲ್ಲಿನ ವಿಶೇಷಗಳ ಬಗ್ಗೆ ವಿವರಿಸುತ್ತಿದ್ದಾರೆ. ಎಲ್ಲರೂ ಕೈಯಲ್ಲಿ ಕೆಂಪು ಭಾವುಟಗಳನ್ನು ಹಿಡಿದುಕೊಂಡೆಹೋಗುತ್ತಿದ್ದಾರೆ.



ಕ್ವಿನ್ ಮತ್ತು ಮಿಂಗ್ ರಾಜರು ವಿಹರಿಸುತ್ತಿದ್ದ ಫರ್‌ಬಿಡನ್ ಅರಮನೆ ಆವರಣ

ಫರ್‌ಬಿಡನ್ ಸಿಟಿಯ ಹೆಬ್ಬಾಗಿಲಿನ ಮುಂದೆ ಅಮೃತ ಶಿಲೆಗಳಲ್ಲಿ ಕೆತ್ತಿರುವ ಹತ್ತಾರು ಸಿಂಹಗಳನ್ನು ನಿಲ್ಲಿಸಲಾಗಿದೆ. ಆ ಸಿಂಹಗಳ ಕತ್ತುಗಳಿಗೆ ಕೆಂಪು ವಸ್ತ್ರಗಳನ್ನು ಸುತ್ತಲಾಗಿದೆ. ಆ ದ್ವಾರವನ್ನು ದಾಟಿದ ಮೇಲೆ ಒಂದು ವಿಶಾಲವಾದ ಪ್ರಾಂಗಣ ಕಾಣಿಸಿಕೊಂಡಿತು. ಮುಂದೆ ಅಂತದೆ ಒಂದು ಹೆಬ್ಬಾಗಿಲು. ಅದರ ಮೇಲೆ ಒಂದು ದೊಡ್ಡ ಕಟ್ಟಡ ಕಾಣಿಸಿಕೊಂಡಿತು. ಉಳಿದ ಎರಡು ಕಡೆ ದೊಡ್ಡ ದೊಡ್ಡ ಅರಮನೆಗಳು. ಅಲ್ಲಿ ಟಿಕೆಟ್ಟುಗಳನ್ನು ತೆಗೆದುಕೊಂಡು ಒಳಕ್ಕೆ ಹೋದೆವು. ಒಳಕ್ಕೆ ಹೋದರೆ ಮತ್ತೊಂದು ಅಂತಹುದೆ ಕಟ್ಟಡ. ಸುತ್ತಲು ವಿಶಾಲ ಪ್ರಾಂಗಣ. ಎರಡೂ ಕಡೆಯಲ್ಲೂ ಅರಮನೆಗಳು.



ಚೀನಾದಲ್ಲಿ ನಡೆಯುವ ಎಲ್ಲ ದಂಗೆಗಳ ಟಿಯನ್ ಮಿನ್ ಚೌಕ



ಚೀನಾದ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿರುವ ಡ್ರ್ಯಾಗನ್ ಚಿತ್ರ

ನಾವು ಮುಂದಕ್ಕೆ ಮುಂದಕ್ಕೆ ಹೋಗುತ್ತಿದ್ದಂತೆ ಒಂದರ ಹಿಂದೆ ಒಂದು ಅದೇ ರೀತಿಯ ಅರಮನೆಗಳು, ವಿಶಾಲ ಪ್ರಾಂಗಣಗಳು. ಎತ್ತರವಾದ ಹೆಬ್ಬಾಗಿಲುಗಳು. ಅವುಗಳ ಮೇಲೆ ಭವ್ಯವಾದ ಚೀನಿ ಶೈಲಿಯ ಕಟ್ಟಡಗಳು. ಅಲ್ಲಲ್ಲಿ ಆ ಕಟ್ಟಡಗಳನ್ನು ಕಟ್ಟಿದ ರಾಜರು ಮತ್ತು ಅವರ ವಂಶವೃಕ್ಷಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಬರೆಯಲಾಗಿದೆ. ಮುಖ್ಯ ಕಟ್ಟಡಗಳ ಒಳಗೆ ರಾಜರು ಕುಳಿತುಕೊಳ್ಳುತ್ತಿದ್ದ ಸಿಂಹಾಸನಗಳು ಮತ್ತಿತರ ವಸ್ತುಗಳನ್ನು ಇಡಲಾಗಿದೆ.

ಕೆಲವು ಸಿಂಹಾಸನಗಳಂತು ದೆಹಲಿಯಲ್ಲಿರುವ ಔರಂಗ್‌ಜೇಬ್‌ನ ಸಿಂಹಾಸನದಂತೆ ಕಾಣಿಸಿತು. ಆದರೆ ಮೊಘಲರ ಕಾಲದ ಕರಕುಶಲ ಮತ್ತು ಕೌಶಲ್ಯ ಇಲ್ಲಿ ಕಾಣಿಸಲಿಲ್ಲ. ನಾಲ್ಕಾರು ಕಡೆ ಹಿತ್ತಾಳೆಯ ದೊಡ್ಡ ಹಂಡೆಗಳನ್ನು ಇಟ್ಟು ಚಳಿಗಾಳದಲ್ಲಿ ರಾಜರ ಕಾಲದಲ್ಲಿ ನೀರು ಕಾಯಿಸುತ್ತಿರುವುದಾಗಿ ಬರೆಯಲಾಗಿತ್ತು. ರಾಜಸ್ಥಾನದ ಒಬ್ಬ ರಾಜ ಸಮುದ್ರದ ಮೇಲೆ ಪ್ರಯಾಣಿಸುವಾಗ ನೀರನ್ನು ಹೊತ್ತೊಯ್ಯುತ್ತಿದ್ದ ಇದಕ್ಕಿಂತ ದೊಡ್ಡ ಹಂಡೆಗಳನ್ನು ನಾನು ಜಯಪುರದ ಅರಮನೆಗಳಲ್ಲಿ ನೋಡಿದ್ದೆ. ಇಲ್ಲಿನ ೧೪ ಪ್ರಾಂಗಣಗಳು, ಎರಡು ಕಡೆಯೂ ಇದ್ದ ಅರಮನೆಗಳ ಅನೇಕ ಭಾಗಗಳು ಕುಸಿದಿದ್ದು ಅವುಗಳ ರಿಪೇರಿ ಜೋರಾಗಿ ನಡೆಯುತ್ತಿತ್ತು. ಕ್ರಿ.ಶ.೨೦೦೮ ರಲ್ಲಿ ಬೀಜಿಂಗ್‌ನಲ್ಲಿ ನಡೆಯುವ ಒಲಂಪಿಕ್ಸ್‌ಗೆ ಮುಂದೆ ಈ ಕಟ್ಟಡಗಳಿಗೆಲ್ಲ ಇನ್ನಷ್ಟು ಮೆರಗು ನೀಡುವುದಾಗಿ ತಿಳಿದು ಬಂದಿತು. ಈ ಕ್ವಿಂಗ್ ಮತ್ತು ಘುಂಗ್ ರಾಜರು ಆಳಿದ್ದ ಈ ಅರಮನೆಗಳ ಒಳಗೆ ನಾವು ಸುಮಾರು ಎರಡು ಕಿ.ಮೀ. ದೂರ ನಡೆದಿದ್ದವು. ಒಟ್ಟು ೧೪ ಮುಖ್ಯ ಅರಮನೆಗಳು. ಅರಮನೆಗಳ ಮುಂದೆ ಪ್ರಾಂಗಣಗಳು ಮತ್ತು ಅಕ್ಕಪಕ್ಕದಲ್ಲಿದ್ದ ಸಣ್ಣ ಸಣ್ಣ ಅರಮನೆಗಳು. ಕೊನೆಯದಾಗಿ ರಾಜರು ಓಡಾಡುತ್ತಿದ್ದ ಹೂವಿನ ತೋಟಗಳು ಕಾಣಿಸಿಕೊಂಡವು.


ಆ ತೋಟಗಳ ನಾಲ್ಕು ಕಡೆ ಪುಟ್ಟ ಪುಟ್ಟ ಅರಮನೆಗಳಿದ್ದು ಆ ಅರಮನೆಗಳಲ್ಲಿ ರಾಜರ ಮನೆತನದ ೨೪ ತಲೆಮಾರುಗಳು ಮತ್ತು ಅವರ ಸಹಾಯಕ ಸಿಬ್ಬಂದಿ ವಾಸಿಸುತ್ತಿತ್ತು. ಈ ಅರಮನೆಗಳನ್ನು ಕ್ರಿ.ಶ.೧೪೦೬ ರಲ್ಲಿ ಯಾಂಗ್ಲೆ ರಾಜನ ಕಾಲದಲ್ಲಿ ಕಟ್ಟಲು ಪ್ರಾರಂಭಿಸಲಾಯಿತು. ಈ ಅರಮನೆಗಳನ್ನು ೭೨೦೦೦೦ ಚ.ಮೀ.ಗಳ ವಿಸ್ತೀರ್ಣದಲ್ಲಿ ಕಟ್ಟಲಾಗಿದ್ದು ಇಲ್ಲಿ ಒಟ್ಟು ೮೭೦೭ ಕೋಣೆಗಳಿವೆ. ಇಲ್ಲಿನ ಅರಮನೆಗಳನ್ನು ಮರಗಳಲ್ಲಿಯೆ ಕಟ್ಟಿರುವುದು ಇನ್ನೊಂದು ವಿಶೇಷ. ಇಂದಿಗೂ ಉತ್ತಮವಾಗಿ ಉಳಿದುಕೊಂಡಿರುವ ಈ ಅರಮನೆಗಳು ಪ್ರಪಂಚದಲ್ಲಿಯೇ ಅತ್ಯಂತ ಹಳೆಯ ಮತ್ತು ಉತ್ತಮ ಮನೆಗಳೆಂದು ಹೇಳಲಾಗುತ್ತದೆ. ಈ ಅರಮನೆಗಳಿಂದ ಹೊರಕ್ಕೆ ಬಂದಿದ್ದೆ ಎದುರಿಗೆ ಬೆಟ್ಟದ ಮೇಲೆ ಇನ್ನೊಂದು ಎತ್ತರವಾದ ಅರಮನೆ ಕಾಣಿಸಿಕೊಂಡಿತು.


ಅರಮನೆ ಮೇಲ್ಛಾವಣಿಯಲ್ಲಿ ಬಿಡಿಸಿರುವ ಕುಸುರಿ ಕಲೆ

ಅಲ್ಲಿಂದ ಬಸ್ಸಿನಲ್ಲಿ ಬೀಜಿಂಗ್‌ನ ರಸ್ತೆಗಳಲ್ಲಿ ಸುತ್ತಿ ಬಳಸಿ ಸುಮಾರು ದೂರಹೋದ ಮೇಲೆ ನಮ್ಮ ಬಸ್ಸು ಒಂದು ಸಣ್ಣ ದ್ವೀಪದ ಬಾಗಿಲಲ್ಲಿ ನಿಂತುಕೊಂಡಿತು. ಬೀಜಿಂಗ್‌ನ ಚಿತ್ರಗಳನ್ನು ನೋಡಿದ್ದ ನನಗೆ ಅದು ಬೇಸಿಗೆ ಅರಮನೆ ಎಂದು ತಿಳಿದುಹೋಯಿತು. ಅಲ್ಲಿ ಟಿಕೆಟ್ಟುಗಳನ್ನು ಪಡೆದು ಒಳಕ್ಕೆ ನಡೆದೆವು. ಬೀಜಿಂಗ್‌ನ ಉತ್ತರ-ಪಶ್ಚಿಮದಲ್ಲಿರುವ ಈ ಬೇಸಿಗೆ ಅರಮನೆ ಲಾಂಜಿವಿಟಿ ಎಂಬ ಒಂದು ಸುಂದರ ಗುಡ್ಡದ ಮೇಲೆ ನಿರ್ಮಿಸಲಾಗಿದೆ. ಒಂದು ಕಡೆ ಗ್ರಾನೈಟ್ ಗುಡ್ಡಗಳು ಮತ್ತೊಂದು ಕಡೆ ಕಮ್ಮಿಂಗ್ ಸರೋವರ. ಮಧ್ಯ ಹಸಿರುಗುಡ್ಡ. ಈ ಗುಡ್ಡ ಹಚ್ಚ ಹಸಿರಾದ ಗಿಡ ಮರಗಳಿಂದ ಕಂಗೊಳಿಸುತ್ತಿದ್ದು ಅದೆ ಚೀನಿ ಶೈಲಿಯ ಅರಮನೆಗಳು ಮತ್ತು ಗೋಪುರಗಳು ಗುಡ್ಡದ ತುಂಬಾ ಅಲ್ಲಲ್ಲಿ ಹಸಿರು ರಾಶಿಯ ನಡುವೆ ಹೊರಕ್ಕೆ ಇಣಿಕಿ ನೋಡುತ್ತಿದ್ದವು.

ಸರೋವರದ ಉದ್ದಕ್ಕೂ ನಿಲ್ಲಿಸಿದ್ದ ತೆಪ್ಪಗಳು ಪುಟ್ಟ ಪುಟ್ಟ ಅರಮನೆಗಳನ್ನು ಜೋಡಿಸಿರುವಂತೆ ತೋರುತ್ತಿದ್ದವು. ಈ ಅರಮನೆಗಳನ್ನು ಅಣಿಕಿಸುವಂತೆ

ಶೃಂಗಾರಗೊಂಡಿದ್ದ ಪುಟ್ಟ ಪುಟ್ಟ ದೋಣಿಗಳು ಸರೋವರದಲ್ಲಿ ಓಡಾಡುತ್ತಿದ್ದವು. ಚೀನಿಯರ ಸಾಂಸ್ಕೃತಿಕ ಹೂವಿನ ತೋಟಗಳಲ್ಲಿ ಈ ಬೇಸಿಗೆ ಅರಮನೆಗೆ ಮೊದಲನೆಯ ಹೆಸರು. ಕ್ರಿ.ಶ.೧೧೫೩ ರಲ್ಲಿ ಜಿನ್ ರಾಜರ ಚಕ್ರವರ್ತಿ ಜೆನ್‌ಯುಯಾನ್ ಕಾಲದಲ್ಲಿ ಇದನ್ನು ಕಟ್ಟಲಾಯಿತು. ಕ್ರಿ.ಶ.೧೮೮೮ ರಲ್ಲಿ ಡೋವಾಗರ ಕ್ಸೀ ಎಂಬ ರಾಣಿ ಮಿಲಿಯಗಟ್ಟಲೆ ಹಣವನ್ನು ಈ ಅರಮನೆಗಳನ್ನು ಸುಂದರಗೊಳಿಸಲು ನೀಡಿದಳೆಂದು ತಿಳಿದುಬರುತ್ತದೆ. ಅನಂತರ ಇದನ್ನು ಬೇಸಿಗೆ ಅರಮನೆಯೆಂದು ಕರೆಯಲಾಯಿತು. ಅರಮನೆಗಳಿರುವ ಈ ಬೇಸಿಗೆ ಗುಡ್ಡದ ಒಟ್ಟು ಪ್ರದೇಶ ೨೯೦ ಹೆಕ್ಟೇರುಗಳು. ಆಗಲೆ ಸಾಯಂಕಾಲವಾಗಿದ್ದು ನಾವು ಚಳಿಗೆ ಗಡ ಗಡನೆ ನಡುಗುತ್ತಿದ್ದೆವು. ಸೂರ್ಯ ನಮಗೆ ಗೊತ್ತಿಲ್ಲದೆಯೆ ಆಗಲೆ ಚಳಿಗೆ ಮೋಡಗಳ ಮರೆಯಲ್ಲಿ ಜಾರಿಕೊಂಡಿದ್ದ. ಅರಮನೆಯ ಬಾಗಿಲಿಂದ ಹೊರಗೆ ಬಂದಿದ್ದೆ ನಾವು ಬಿರುಬಿರನೆ ನಡೆದುಹೋಗಿ ಟೆಂಪೊದಲ್ಲಿ ಕುಳಿತುಕೊಂಡೆವು.



ಚೀನಿಯರ ಕಾರ್ಯದಕ್ಷತೆ

ಚೀನಾದಲ್ಲಿ ಒಂದು ದಂಪತಿಗೆ ಒಂದೇ ಮಗು, ಎರಡು ಮಕ್ಕಳಾದರೆ ಗಂಡ ಹೆಂಡತಿ ಇಬ್ಬರೂ ಸರಕಾರ, ಅರೆ ಸರಕಾರ, ಖಾಸಗಿ ಕಂಪನಿಗಳಲ್ಲಿದ್ದರೂ ಕೆಲಸಗಳನ್ನು ಕಳೆದುಕೊಳ್ಳುತ್ತಾರೆ. ರೈತರು, ಇತರರಾದರೆ ೨೦೦೦೦ ಯುಯಾನ್ ಹಣವನ್ನು ಸರಕಾರಕ್ಕೆ ಕೂಡಲೆ ದಂಡ ನೀಡಬೇಕಾಗುತ್ತದೆ, ಜೊತೆಗೆ ಎಲ್ಲಾ ರೀತಿಯ ಸರಕಾರಿ ಸವಲತ್ತುಗಳನ್ನು ಕಳೆದುಕೊಳ್ಳಬೇಕಾಗುತ್ತದೆ.

ಮರುದಿನ ೪.೧೧.೨೦೦೫ ರಂದು ಲಾಂಗ್‌ಪಾಂಗ್‌ನಲ್ಲಿದ್ದ ರಾಸಾಯನಿಕ ಲ್ಯಾಬೊರೇಟರಿಯನ್ನು ನೋಡಲು ಹೊರಟೆವು. ಚೀನಿಯರು ಈಗ ರಾಸಾಯನಿಕ ಧಾತುಗಳ ಸಮೀಕ್ಷೆಯಲ್ಲಿ ಪ್ರಪಂಚದಲ್ಲಿಯೆ ಹೆಚ್ಚು ಪ್ರಗತಿಯನ್ನು ಸಾಧಿಸಿದವರಾಗಿದ್ದಾರೆ. ಇಲ್ಲಿನ ಅನೇಕ ರೀತಿಯ ಯಂತ್ರಗಳು ಮತ್ತು ಅವರ ಕಾರ್ಯದಕ್ಷತೆಯನ್ನು ನೋಡಿ ನಮಗೆ ಸ್ವಲ್ಪ ನಾಚಿಕೆ ಸ್ವಲ್ಪ ಅಸೂಯೆ ಮೂಡಿತ್ತು. ಅವರು ಮಾಡುವ ಕೆಲಸದ ಶೈಲಿ ಮತ್ತು ನಮ್ಮ ದೇಶದಲ್ಲಿ ನಡೆಯುವ ಕೆಲಸದ ಶೈಲಿಯನ್ನು ಇಲ್ಲಿ ಹೋಲಿಕೆ ಮಾಡಲು ನನಗೆ ಇಷ್ಟವಿಲ್ಲ. ಆದರೆ ನಿಜವಾಗಿಯೂ ನಮ್ಮ ಸರಕಾರ ಮತ್ತು ನಾವು ಸರಕಾರದ ಸೇವೆಯಲ್ಲಿರುವವರು ಈಗ ಪ್ರಪಂಚದ ಅನೇಕ ದೇಶಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನದಲ್ಲಿ ಇಟ್ಟುಕೊಂಡು ಕೆಲಸ ನಡೆಸಬೇಕಾಗಿದೆ. ನಮ್ಮ ದೇಶದಲ್ಲಿ ಅನೇಕ ಕಾರ್ಖಾನೆಗಳನ್ನು ಯಾಕಾದರು ಮುಚ್ಚಬೇಕಾಯಿತು? ಇದಕ್ಕೆ ಸರಕಾರ ಹೊಣೆ ಎನ್ನುವುದಕ್ಕಿಂತ ಅಲ್ಲಿ ಸೇವೆ ಮಾಡುತ್ತಿರುವವರೆ ಹೊಣೆ ಎನ್ನುವುದು ಹೆಚ್ಚು ಉಚಿತ.

ಲಾಂಗ್‌ಪಾಂಗ್‌ನ ಲ್ಯಾಬೊರೇಟರಿಯಲ್ಲಿ ಕೇವಲ ೨೫ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದು ವರ್ಷಕ್ಕೆ ೪೦೦೦೦ ದಿಂದ ೫೦೦೦೦ ಸ್ಯಾಂಪಲುಗಳನ್ನು ವಿಶ್ಲೇಷಿಸುವುದಾಗಿ ತಿಳಿಯಿತು. ನಮ್ಮ ವಿಭಾಗದಲ್ಲಿ ಅದೇ ರೀತಿಯ ಯಂತ್ರಗಳಿದ್ದರೂ ನಾನು ಎರಡು ವರ್ಷಗಳ ಹಿಂದೆ ಕಳುಹಿಸಿದ ೪೦೦ ಸ್ಯಾಂಪಲುಗಳ ಫಲಿತಾಂಶ ಇದುವರೆಗೂ ಬಂದಿಲ್ಲ.

ತರಬೇತಿಯ ಸಮಯದಲ್ಲಿ ಮುಖ್ಯವಾಗ ನಮ್ಮ ಸಂಪರ್ಕದಲ್ಲಿದ್ದವರೆಂದರೆ ಪ್ರೊ.ಜೀಝಿಂಗ್, ವಯಸ್ಸು ಸುಮಾರು ೭೦ ವರ್ಷ, ಭೂರಾಸಾಯನಿಕ ತಜ್ಞ (ನಿವೃತ್ತರಾಗಿದ್ದರೂ ವಿಶೇಷ ಸಲಹೆಗಾರರಾಗಿ ಕಛೇರಿಗೆ ಬರುತ್ತಿದ್ದರು) ಮತ್ತು ಚೀನಾ ದೇಶ ಈ ಕ್ಷೇತ್ರದಲ್ಲಿ ಇಷ್ಟೊಂದು ಅಗಾಧ ಪ್ರಗತಿ ಸಾಧಿಸಲು ಇವರೆ ಕಾರಣಕರ್ತರು. ಇವರ ೬೫ ವರ್ಷ ವಯಸ್ಸಿನ ಪತ್ನಿ ಯಾವಾಗಲೂ ತರಗತಿಗಳಲ್ಲಿ ಕುಳಿತು ಪಾಠಗಳನ್ನು ಆಲಿಸುತಿದ್ದರು. ಅವರಿಗೆ ಇಂಗ್ಲಿಷ್ ಬರುತ್ತಿರಲಿಲ್ಲ. ಆದರೆ ಚೀನಾ ಭಾಷೆಯಲ್ಲೆ ಹೆಚ್ಚು ಮಾತನಾಡುತ್ತಿದ್ದರಿಂದ ಮತ್ತು ಇಂಗ್ಲಿಷನ್ನು ಚೀನಾಗೆ ತರ್ಜುಮೆ ಮಾಡುತ್ತಿದ್ದರಿಂದ ಅವರಿಗೆ ಎಲ್ಲವೂ ಅರ್ಥವಾಗುತ್ತಿರಬೇಕು.



ಶಾಂಗೈ ನಗರದ ಒಂದು ಜನನಿಬಿಡ ಪ್ರದೇಶ

ಡಾ.ವಾಂಗ್ ಜೇಕಿಯ್ಕು ೫೫ ವರ್ಷ ವಯಸ್ಸಿನ ದಕ್ಷ ಮತ್ತು ವಲವಿಕೆಯ ಭೂರಾಸಾಯನಿಕ ತಜ್ಞ, ವಿದ್ಯಾಲಯದ ಮುಖ್ಯ ಅಧಿಕಾರಿ ಮತ್ತು ಇಂಗ್ಲಿಷ್ ಭಾಷೆಯನ್ನು ಚನ್ನಾಗಿ ಬಲ್ಲ ಅಧಿಕಾರಿ. ಡಾ.ಚೆಂಗ್ ಜೇ ಜೋಂಗ್, ಭೂವಿಜ್ಞಾನಿ, ಸ್ವಲ್ಪ ಸ್ವಲ್ಪ ಇಂಗ್ಲಿಷ್ ಅರ್ಥಮಾಡಿ ಕೊಳ್ಳುತ್ತಿದ್ದರೂ ಮಾತನಾಡಲು ಭಾರಿ ಕಷ್ಟಪಡುತ್ತಿದ್ದರು. ಮಿಸ್. ಲಿನ್ ಹಾಂಗ್ ಯುವಾನ್ ಪಿ.ಎಚ್‌ಡಿ ಮಾಡುತ್ತಿರುವ ಯುವತಿ. ಇಂಗ್ಲಿಷನ್ನು ಸ್ವಲ್ಪ ಸ್ವಲ್ಪ ಮಾತನಾಡುತ್ತಿದ್ದಳು. ಆಕೆಗೆ ಒಂದೊಂದೇ ಪದವನ್ನು ನಿಧಾನವಾಗಿ ಹೇಳಬೇಕು. ಇಲ್ಲವೆಂದರೆ ಅರ್ಥವಾಗುತ್ತಿರಲಿಲ್ಲ.

ಜೋ ಶೆಂಡಿಗ್, ಸ್ನಾತಕೋತ್ತರ ವಿದ್ಯಾರ್ಥಿ, ಕುಳ್ಳಗೆ ಬದನೆಕಾಯಿಯಂತೆ ತುಂಬಾ ಸ್ಮಾರ್ಟಾಗಿದ್ದು ಎಲ್ಲರ ಜೊತೆಗೂ ಮಾತನಾಡುತ್ತ ನಾವಿದ್ದ ಒಂದು ತಿಂಗಳಲ್ಲಿಯೆ ಇಂಗ್ಲಿಷ್ ಪದಗಳನ್ನು ಸಾಕಷ್ಟು ಕಲಿತುಕೊಂಡಿದ್ದು ಎಲ್ಲರಿಗಿಂತ ಚನ್ನಾಗಿ ಇಂಗ್ಲಿಷ್ ಮಾತನಾಡುತ್ತಿದ್ದ. ಸನ್ ಬಿನ್ ಬಿನ್, ಡಿಗ್ರಿ ಓದುತ್ತಿದ್ದು ಎತ್ತರದ ಟಿಪಿಕಲ್ ಹಳ್ಳಿ ಯುವಕ. ಇವನೂ ಶೆಂಡಿಗ್‌ನಂತೆ ಇಂಗ್ಲಿಷ್ ಮಾತನಾಡುತ್ತಿದ್ದ. ಯಾವುದೇ ಕೆಲಸಕ್ಕಾಗಲಿ, ಸ್ಮಾರಕಗಳನ್ನು, ಶಾಪಿಂಗ್ ಮಾಡಲು ಹೋಗುವಾಗ ಹೀಗೆ ಎಲ್ಲೇ ಹೋಗಲಿ ಇವರಲ್ಲಿ ಒಬ್ಬರು ನಮ್ಮ ಜೊತೆಗೆ ಬರುತ್ತಿದ್ದರು.

ಝೆಂಗ್ ಜಿಯಾನ್‌ಹೂ, ಚಾಲಕ. ಯಾವುದೇ ಸಮಯದಲ್ಲಿ ಎಲ್ಲಿಗಾದರೂ ಸರಿ

ಹೇಳಿದ ಸಮಯಕ್ಕೆ ಸರಿಯಾಗಿ ಬಂದುಬಿಡುತ್ತಿದ್ದ. ಸಮಸ್ಯೆ ಎಂದರೆ ಅವನಿಗೆ ಮೊದಲೆ ವಿಳಾಸ ಅಥವಾ ವಿಷಯವನ್ನು ಚೀನಿ ಭಾಷೆಯಲ್ಲಿ ತಿಳಿಸಿಬಿಡಬೇಕು. ಇಲ್ಲವೆಂದರೆ ಅವನಿಗೆ ನಾವು ಏನು ಹೇಳಿದರೂ ಅರ್ಥವಾಗುತ್ತಿರಲಿಲ್ಲ. ಇವರ ಜೊತೆಗೆ ಮಹಿಳೆಯೊಬ್ಬಳು ಚಹಾ, ಕಾಫೀ ಕೊಡಲು ಮತ್ತು ಬಟ್ಟಲುಗಳನ್ನು ತೊಳೆಯುವುದು ಇನ್ನಿತರ ಕೆಲಸಗಳನ್ನು ಮಾಡುತ್ತಿದ್ದಳು. ಎಲ್ಲರೂ ಒಳ್ಳೆ ಬೆಲೆ ಬಾಳುವ ಕೋಟ ಶರ್ಟು, ಪ್ಯಾಂಟು ಮತ್ತು ಉಣ್ಣೆ ಸ್ವೆಟರುಗಳನ್ನು ಧರಿಸಿರುತ್ತಿದ್ದರು.

ನಾವು ತರಬೇತಿ ಪಡೆಯುತ್ತಿದ್ದ ಇನ್‌ಸ್ಟಿಟ್ಯೂಟ್ ಬಹುಮಹಡಿಯ ಚೌಕಾಕಾರ ಕಟ್ಟಡಗಳ ಸಂಕೀರ್ಣವಾಗಿತ್ತು. ಅದರಲ್ಲಿ ಉತ್ತರದ ಕಡೆಗಿದ್ದ ೫ ಮಹಡಿಗಳಲ್ಲಿ ಭೂರಾಸಾಯನಿಕ ತರಬೇತಿ ಕೇಂದ್ರ ಇತ್ತು. ಮೆಟ್ಟಿಲುಗಳು, ನೆಲಕ್ಕೆ ಮತ್ತು ಗೋಡೆಗಳಿಗೆ ಗ್ರಾನೈಟ್ ಮತ್ತು ಮೊಸಾಯಿಕ್ ಹಾಕಲಾಗಿದ್ದು, ಕಟ್ಟಡದ ಒಳಗೆ ಮತ್ತು ಹೊರಗೆ ಎಲ್ಲವೂ ಸ್ವಚ್ಛವಾಗಿತ್ತು. ನಮ್ಮ ದೇಶದಲ್ಲಿ ಹಳ್ಳಿಯಿಂದ ದೆಲ್ಲಿಯವರೆಗೆ ಸಾರ್ವಜನಿಕ ಸ್ಥಳಗಳಾದ ಬಸ್ಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಅಂಗಡಿ ಮುಗ್ಗಟ್ಟುಗಳು, ಹಾದಿ ಬೀದಿಗಳು, ಕಛೇರಿಗಳು, ಶಾಲೆ ಕಾಲೇಜುಗಳೆನ್ನದೆ ಎಲ್ಲೆಲ್ಲೂ ಉಗಿದೂ ಉಗಿದೂ, ಉಚ್ಚೆ ಹೋಯ್ದು, ಕಕ್ಕಸ್ಸು ಮಾಡಿ ಗಬ್ಬೆಬ್ಬಿಸುಬಿಡುತ್ತಾರೆ. ಎಲ್ಲೆಲ್ಲೂ ಕೋಣೆಗಳ ಮೂಲೆಗಳಲ್ಲಿ, ಮೆಟ್ಟಿಲುಗಳ ತಿರುವುಗಳಲ್ಲಿ ಉಗಿದೂ ಉಗಿದೂ ಗಬ್ಬೆದ್ದು ಹೋಗಿರುವ ಕೊಚ್ಚೆಯ ತೊಟ್ಟಿಲುಗಳನ್ನು ನೋಡಬಹುದು. ಆದರೆ ಇಲ್ಲಿ ಎಲ್ಲಿಯೂ ಅಂತಹ ಸ್ಥಳಗಳನ್ನು ಆ ಕಟ್ಟಡದಲ್ಲಿ ನೋಡಲಿಲ್ಲ.

ಭೂರಾಸಾಯನಿಕ ವಿದ್ಯಾಲಯದ ಮುಖ್ಯ ಅಧಿಕಾರಿಯಾದ ಡಾ.ವಾಂಗ್ ಜೇಕಿಯ್ಯು, ಒಂದು ದಿನ ಬೆಳಗ್ಗೆ ಟಾಯ್‌ಲೆಟ್ಟನ್ನು ಮಾಪ್‌ನಲ್ಲಿ ಸ್ವಚ್ಛ ಮಾಡುತ್ತಿದ್ದುದ್ದನ್ನು ನೋಡಿದ ನಾನು ಬೆರಗಾಗಿಹೋಗಿದ್ದೆ. ಇಲ್ಲಿ ಯಾರು ಯಾವ ಕೆಲಸವನ್ನು ಮಾಡಬೇಕು ಎನ್ನುವ ನಿಯಮವೆ ಇಲ್ಲ. ಟಾಯ್‌ಲೆಟ್ಟುಗಳನ್ನು ಸ್ವಚ್ಛ ಮಾಡುವುದರಿಂದ ಹಿಡಿದು ಕಂಪ್ಯೂಟರ್ ಮತ್ತು ಲ್ಯಾಪ್‌ಟಾಪ್ ಹ್ಯಾಂಡಲ್ ಮಾಡುವುದರವರೆಗೆ ಪ್ರೊ.ಜೀಝಿಂಗ್‌ನಿಂದ ಹಿಡಿದು ವಿದ್ಯಾರ್ಥಿಗಳವರೆಗೆ ಎಲ್ಲರೂ ಮಾಡುತ್ತಿದ್ದರು. ಆಶ್ಚರ್ಯವೆಂದರೆ ನಾವಿದ್ದ ಇಡೀ ಕಟ್ಟಡದಲ್ಲಿ ಒಬ್ಬ ಜವಾನ ಗುಮಾಸ್ತ ಲೆಕ್ಕಾ ಅಧಿಕಾರಿ ಯಾರೂ ಇರಲಿಲ್ಲ. ಎಲ್ಲವನ್ನೂ ಅವರೆ ನೋಡಿಕೊಳ್ಳುತ್ತಿದ್ದರು.

ನಮ್ಮ ಕಛೇರಿಗಳಲ್ಲಿ ಇಬ್ಬ ಜವಾನನನ್ನು ಟೇಬಲು ಒರೆಸುವಂತೆ ಹೇಳಿದರೆ, ಅದು ನನ್ನ ಕೆಲಸವಲ್ಲ ನನ್ನ ಕೆಲಸ ಏನಿದ್ದರೂ ಬೆಳಗ್ಗೆ ಒಂದು ಸಲ ನೀರು ಕೊಡುವುದು ಮಾತ್ರ ಎನ್ನುವವರಿದ್ದಾರೆ. ಪಕ್ಕದ ಕೋಣೆಗೆ ಹೋಗಿ ಒಂದು ಫೈಲು ಕೊಡ್ತಾರೆ ತೆಗೆದುಕೊಂಡು ಬಾ ಎಂದರೆ, ಇಲ್ಲ ಸಾರ್ ನನ್ನ ಡ್ಯೂಟಿ ಏನಿದ್ದರು ಇಲ್ಲಿಂದ ಈ ಕಡೆಗೆ ಮಾತ್ರ ಎನ್ನುವವರೂ ಇದ್ದಾರೆ. ಇವರ ಬೆಂಗಾವಲಿಗೆ ಯೂನಿಯನ್‌ಗಳು ಇರುತ್ತವೆ. ಇದರ ಬೆಗ್ಗೆ ಬರೆದರೆ ಸಾವಿರಾರು ಕೃತಿಗಳೆ ನಿರ್ಮಾಣವಾಗುತ್ತವೆ. ಇನ್ನು ನಮ್ಮ ದೇಶದಲ್ಲಿ ಯಾವ ಯಾವ ರೀತಿಯ ಅಧಿಕಾರಿಗಳಿದ್ದಾರೆ ಎನ್ನುವುದು ನಮಗೆಲ್ಲ

ಗೊತ್ತ ಇದೆ. ಚೀನಾದಲ್ಲಿ ಭ್ರಷ್ಟ ಅಧಿಕಾರಿಗಳಿಗೆ ಯಾವ ಶಿಕ್ಷೆ ದೊರಕುತ್ತದೆ ಎನ್ನುವುದನ್ನು ಆಮೇಲೆ ವಿವರಿಸುತ್ತೇನೆ.

ಊಟ ಮಾಡುವ ಸಮಯದಲ್ಲಿ ಲಕ್ಚರ್ ಕೊಡುವ ಸಮಯದಲ್ಲಿ ಎಲ್ಲರೂ ಒಟ್ಟಾಗಿಯೆ ಇರುತ್ತಿದ್ದರು. ಊಟ ಮಾಡುವಾಗ ಪ್ರೊಫೆಸರರಿಂದ ಚಾಲಕನವರೆಗೂ ಎಲ್ಲರೂ ಪಕ್ಕ ಪಕ್ಕದಲ್ಲಿಯೆ ಕುಳಿತು ಊಟದ ಜೊತೆಗೆ ಡ್ರಿಂಕ್ಸ್ ಕೂಡ ತೆಗೆದುಕೊಳ್ಳುತ್ತಿದ್ದರು. ಪ್ರೊಫೆಸರ್ಸ್ ಮತ್ತು ವಿದ್ಯಾರ್ಥಿಗಳು ಒಟ್ಟಾಗಿ ಕುಳಿತುಕೊಂಡು ಕುಡಿಯುವುದನ್ನು ನಾನು ಮೊದಲ ಬಾರಿಗೆ ನೋಡಿದ್ದೆ. ಯಾರೂ ಯಾವುದೇ ಕೆಲಸವನ್ನು ನಿರ್ವಹಿಸುವುದರ ಜೊತೆಗೆ ಪ್ರೊ.ಜೀರಿಝಂಗ್ ಮತ್ತು ಡಾ.ವಾಂಗ್ ಜೀಕಿಯಕ್ಕು ಹೇಳುವುದೇ ಕೊನೆ. ಅವರು ಹೇಳುವ ಯಾವುದೇ ವಿಷಯಕ್ಕೂ ಯಾರೂ ಮರು ಉತ್ತರ ನೀಡುತ್ತಿರಲಿಲ್ಲ. ನಾವಿದ್ದ ಒಂದು ತಿಂಗಳಲ್ಲಿ ಒಂದೂ ಸಲವೂ ಯಾರೂ ಮುಖ ಸಿಂಡರಿಸಿ ಕೊಂಡು ಮಾತನಾಡಿರಲಿಲ್ಲ. ಒಬ್ಬರ ಮೇಲೆ ಒಬ್ಬರು ಚಾಡಿ ಹೇಳಿದ್ದು, ಗೇಲಿ ಮಾಡಿದ್ದು ಅಥವಾ ಹಿಂದೆ ಮಾತನಾಡಿದ್ದನ್ನು ನಾನು ನೋಡಲಿಲ್ಲ.


ಚೀನಾ ದೇಶದ ಎಲ್ಲ ಮನೆ, ಕಟ್ಟಡಗಳ ಮುಂದೆ ಕಾಣಿಸುವ ಸಿಂಹ ಶಿಲ್ಪಗಳು

ಭಾರತ ದೇಶಕ್ಕೆ ಅನೇಕ ಧರ್ಮಗಳು, ಜನಾಂಗಗಳು ಬಂದವು ಮತ್ತು ಭಾರತವನ್ನು ಅನೇಕರು ಆಳಿದರು. ಆದರೆ ಭಾರತೀಯರು ಇದರಿಂದ ಏನಾದರು ಕಲಿತುಕೊಂಡರೆ? ಪ್ರಪಂಚಕ್ಕೆ ಏನಾದರು ಕಲಿಸಿದರೆ? ಚೀನಾ ದೇಶವನ್ನು ಬ್ರಿಟನ್ ಮತ್ತು ಯುರೋಪಿನ ಕೆಲವು ದೇಶಗಳು ಒಂದೆರಡು ಶತಮಾನಗಳ ಕಾಲ ಅರೆ ಬರೆ ಆಳಿದರು ಚೀನಾ ಸಂಸ್ಕೃತಿ, ಭಾಷೆ ಮತ್ತು ಅವರ ಧರ್ಮಗಳ ಮೇಲೆ ಯಾವ ಪ್ರಭಾವವನ್ನೂ ಬೀರಲಾಗಲಿಲ್ಲ. ಚೀನಿಯರಿಗೆ ದಾಸ್ಯ ಎನ್ನುವುದು ಅಷ್ಟಾಗಿ ಗೊತ್ತಿರಲಿಲ್ಲ. ಆದರೆ ಅವರ ರಾಜರು ಮತ್ತು ಜಮೀನುದಾರರೆ ಅವರನ್ನು ಗುಲಾಮರನ್ನಾಗಿ, ಅತ್ಯಂತ ಹೀನವಾಗಿ ನಡೆಸಿಕೊಂಡಿದ್ದರು. ಕ್ರಿ.ಶ.೧೯೪೯ರ ನಂತರ ಬಂದ ಕಮ್ಯೂನಿಷ್ಟರು ಅಷ್ಟೇ ಕಟ್ಟುನಿಟ್ಟಾಗಿ ನಡೆದುಕೊಂಡಿದ್ದರು. ಜಾತಿಗಳ ತಾರತಮ್ಯ, ಅಸ್ಪೃಶ್ಯತೆಯೆಂಬ ಕಿಡಿಗೇಡಿತನ ಮತ್ತು

ಧರ್ಮಗಳ ಬೋಳೆತನ ಚೀನಿಯರಿಗೆ ಗೊತ್ತೆ ಇಲ್ಲ ಎನ್ನಬಹುದು. ಈ ಕಾರಣಗಳಿಂದಲೆ ಚೀನಾ ಇಂದು ಅತ್ಯಂತ ದೃಢವಾದ, ಒಗ್ಗಟ್ಟಿನ, ಶಿಸ್ತಿನ ಒಂದು ದೇಶವಾಗಿದೆ.

ಜಾಗತೀಕರಣದ ಹೆಸರಿನಲ್ಲಿ ಪ್ರಪಂಚವನ್ನೇ ನುಂಗಿಹಾಕುತ್ತಿರುವ ಅಮೆರಿಕಾ ಮತ್ತು ಯುರೋಪಿನ ದೇಶಗಳಿಗೆ ಚೀನಾ ದೇಶ ಇಂದಿಗೂ ಕಬ್ಬಿಣದ ಕಡಲೆಯಾಗಿಯೆ ಉಳಿದಿದೆ. ಒಂದು ಕಾಲಕ್ಕೆ ಪ್ರಪಂಚಕ್ಕೆ ಬಹಳ ದೂರವಾಗಿ, ನಿಗೂಢವಾಗಿ ಉಳಿದಿದ್ದ ಚೀನಾ ಅತ್ಯಂತ ಬಡ ದೇಶವಾಗಿತ್ತು. ಆದರೆ ಕಳೆದ ಒಂದೆರಡು ದಶಕಗಳಲ್ಲಿ ಚೀನಾ ಜಾಗತೀಕರಣವನ್ನು ಅತ್ಯಂತ ಎಚ್ಚರಿಕೆಯಿಂದ ಅಳವಡಿಸಿಕೊಳ್ಳುತ್ತ ಪ್ರಪಂಚದ ಅಭಿವೃದ್ಧಿಶೀಲ ಮಹಾದೇಶವಾಗಿ ಅಮೆರಿಕಾಗೆ ಸೆಡ್ಡು ಹೊಡೆದು ನಿಂತಿತು.

ಭಾರತ ಶತಮಾನಗಳ ಹಿಂದೆಯೆ ನಾಗರಿಕತೆಯ ಉತ್ತುಂಗ ಸ್ಥಿತಿಯಲ್ಲಿತ್ತು. ಹಲವು ರೀತಿಯಲ್ಲಿ ಅಭಿವೃದ್ಧಿಶೀಲ ದೇಶಗಳ ಸಹಾಯವನ್ನು ಪಡೆದುಕೊಂಡಿತ್ತು. ಆದರೆ ಇಂದು ಅತ್ಯಂತ ಹೀನಾಯ ಸ್ಥಿತಿಯನ್ನು ತಲುಪಿದೆಯಾದರು ಯಾತಕ್ಕೆ? ಬ್ರಿಟನ್ ಮತ್ತು ಯುರೋಪಿನ ದೇಶಗಳು ಭಾರತಕ್ಕೆ ಬರದೆ ಇದ್ದಿದ್ದರೆ ಭಾರತ ದೇಶ ಇನ್ನೆಷ್ಟು ಹಿಂದೆ ಉಳಿಯುತ್ತಿತ್ತೊ ಏನೋ? ಇಷ್ಟಕ್ಕೂ ಕೆಲವು ಕ್ಷೇತ್ರಗಳಲ್ಲಿ ಭಾರತದಲ್ಲಿರುವ ಸಂಪತ್ತು ಚೀನಾದಲ್ಲೂ ಇಲ್ಲ. ಅಭಿವೃದ್ಧಿ ಹೊಂದಿದ ಎಷ್ಟೊ ದೇಶಗಳನ್ನು ಭಾರತಕ್ಕೆ ಹೋಲಿಸಿ ನೋಡಿದರೆ ಏನೂ ಇಲ್ಲ. ಎಲ್ಲವೂ ಎರವಲು. ಇಷ್ಟಾದರು ನಮ್ಮ ದೇಶ ಎಷ್ಟೊ ದೇಶಗಳಿಗಿಂತ ಹಿಂದಕ್ಕೆ ಹೋಗುತ್ತಿದೆ. ಯಾವ ನೈಸರ್ಗಿಕ ಸಂಪತ್ತು ಇಲ್ಲದ, ವಿಜ್ಞಾನ ತಂತ್ರಜ್ಞಾನದ ಗಿಮಿಕ್‌ನಿಂದ ಈ ದಿನ ಎಷ್ಟೋ ದೇಶಗಳು ಸಮೃದ್ಧಶೀಲ ದೇಶಗಳಾಗಿ ಮೆರೆಯುತ್ತಿವೆ. ಚೀನಾ ದೇಶವಂತು ಇತ್ತೀಚೆಗೆ ಭಾರತಕ್ಕಿಂತ ಎಷ್ಟೊ ಪಟ್ಟು ಹೆಚ್ಚು ಅಭಿವೃದ್ಧಿಯನ್ನು ಸಾಧಿಸಿ ಮುಂದಕ್ಕೆ ಸಾಗುತ್ತಿದೆ. ಅಮೆರಿಕಾ ದೇಶವು ಚೀನಾ ದೇಶವನ್ನು ನೋಡಿ ಬೆರಗುಗೊಂಡಿದೆ. ಭಾರತ ಏನು ಮಾಡಬೇಕು ಎನ್ನುವುದು ಗೊತ್ತಿಲ್ಲದೆ ಕಣ್ಣುಜ್ಜಿಕೊಂಡು ನೋಡುತ್ತಿದೆ. ಭಾರತ ಸ್ವಾತಂತ್ರ್ಯದ ನಂತರ ಮೊದಲಿಗೆ ಮಾಡಿದ, ಮಾಡುತ್ತಿರುವ ತಪ್ಪನ್ನು ಇಂದಿಗೂ ಸರಿಪಡಿಸದೆ ಕಣ್ಣುಮುಚ್ಚಿಕೊಂಡಿರುವ ತಪ್ಪೆಂದರೆ ಜನಸಂಖ್ಯೆಯನ್ನು ನಿಯಂತ್ರಣ ಮಾಡದೆ ಇರುವುದು. ಭಾರತ, ಚೀನಾ ದೇಶವನ್ನು ಜನಸಂಖ್ಯೆಯಲ್ಲಿ ಕೇವಲ ಇನ್ನು ಒಂದು ದಶಕದಲ್ಲಿ ಮೀರಿಸಿಬಿಡುತ್ತದೆ. ಭೂಮಿಯ ಮೇಲೆ ಜನಸಂಖ್ಯೆ ಎಷ್ಟು ಹೆಚ್ಚುತ್ತದೊ ಅಷ್ಟು ನೈಸರ್ಗಿಕ ಸಂಪತ್ತು ಲೂಟಿಯಾಗಿ ಪರಿಸರ ಮಾಲಿನ್ಯವಾಗುತ್ತದೆ. ಇಡೀ ಪ್ರಪಂಚದಲ್ಲಿಯೆ ಹೆಚ್ಚು ಸಂಖ್ಯೆಯ ರೋಗಿಗಳಿರುವುದು ಭಾರತದಲ್ಲಿಯೆ. ಅದು ಹೃದಯ ರೋಗಿಗಳಾಗಿರಬಹುದು, ರಕ್ತದೊತ್ತಡ, ಮಧುಮೇಹ, ಏಡ್ಸ್, ಜಾಂಡೀಸ್, ಕುರುಡರು, ಕಿವುಡರು–ಮೂಗರು, ಪೋಷ್ಟಿಕಾಂಶ ಆಹಾರ ದೊರಕದೆ ಇತರೆ ಖಾಯಿಲೆಗಳಿಂದ ಸಾಯುವವರು, ಹೀಗೆ ಯಾವುದೇ ರೋಗವನ್ನು ಭಾರತದ ಜನರ ಜೊತೆಗೆ ಸೇರಿಸಿಬಿಡಬಹುದು.



ಚೀನಾ ತಿನಿಸುಗಳು ಮತ್ತು ಡೈನಿಂಗ್ ಟೇಬಲ್ ಸುತ್ತ

ಚೀನಾ ಹೆಸರು ಬಂದಿರುವುದು ಅಲ್ಲಿನ ರಾಜರಾದ ಕ್ವಿನ್ ಪರಂಪರೆಯಿಂದ. ಕ್ವಿನ್‌ನಿಂದ ಚಿನ್ ಚೈನಾ ಚೀನಾ ಆಯಿತು ಎನ್ನಲಾಗಿದೆ.

ಸಮಯ ೧೧ ಗಂಟೆಯಾಗಿದ್ದೆ ಎಲ್ಲರೂ ಒಟ್ಟಾಗಿ ಹತ್ತಿರದಲ್ಲೆ ಇದ್ದ ರೆಸ್ಟಾರೆಂಟಿಗೆ ಹೋದೆವು. ನಾನು ಈಗಾಗಲೆ ಹಲವು ಸಲ ಚೀನಿ ತಿಂಡಿಗಳ ಬಗ್ಗೆ ಹೇಳಿರುವುದರಿಂದ ಮತ್ತೆ ಅದೇ ವಿಷಯ ಹೇಳಬಾರದು ಎಂದುಕೊಳ್ಳುತ್ತೇನೆ. ಆದರೂ ಕೆಲವು ವಿಷಯಗಳನ್ನು ಹೇಳಲೆಬೇಕೆನಿಸುತ್ತದೆ ಚೀನಾಗೆ ಬರುವುದಕ್ಕಿಂತ ಮುಂಚೆ ನನ್ನ ಮನಸಿನಲ್ಲಿದ್ದ ಚಿತ್ರಣವೆ ಬೇರೆ. ಆದರೆ ಚೀನಾದಲ್ಲಿ ನೋಡುತ್ತಿರುವ ಚಿತ್ರಣವೆ ಬೇರೆ. ಬೆಂಗಳೂರಿನಲ್ಲಿರುವ ಚೀನಿಯರ ತಿನಿಸುಗಳಿಗೂ ಇಲ್ಲಿನ ತಿನಿಸುಗಳಿಗೂ ಅಜಗಜಾಂತರ ವ್ಯತ್ಯಾಸವಿದೆ. ಒಂದು ಸಣ್ಣ ಸಂದೇಹವೆಂದರೆ ನನಗೆ ಇಲ್ಲಿ ಚೀನಾದಲ್ಲಿ ಸಣ್ಣಪುಟ್ಟ ಹೋಟಲುಗಳಲ್ಲಿ ತಿನ್ನುವ ಅವಕಾಶ ಬರಲಿಲ್ಲ. ಬಹುಶಃ ಸಣ್ಣ ಹೋಟಲುಗಳಲ್ಲಿನ ತಿನಿಸುಗಳಿಗೂ ನಾನು ತಿನ್ನುತ್ತಿದ್ದ ದೊಡ್ಡ ದೊಡ್ಡ ಹೋಟಲುಗಳ ತಿನಿಸುಗಳಿಗೂ ವ್ಯತ್ಯಾಸವಿರಬಹುದು.



ಟಿಗಕ್ಷಭ ಯಂಠ್ರಿ ಗಿಂಟ

ನಾವು ಉಳಿದುಕೊಳ್ಳುತ್ತಿದ್ದ ರೆಸ್ಟಾರೆಂಟುಗಳಲ್ಲಿ ಒಳ್ಳೆಯ ತಿನಿಸುಗಳನ್ನು ನಮಗೆ ದಿನಾಗಲೂ ಬಡಿಸುತ್ತಿದ್ದರು. ಹಸಿ ತರಕಾರಿ, ಹಸಿ ಎಲೆಗಳು ಮತ್ತು ಫ್ರೈ ಮಾಡಿದ ಬರಿ ತರಕಾರಿ ಎಲೆಗಳನ್ನು ಬಿಟ್ಟರೆ ಉಳಿದ ಭಕ್ಷ್ಯಗಳೆಲ್ಲ ರುಚಿಯಾಗಿರುತ್ತಿದ್ದವು. ಒಂದೊಂದು ತಿಂಡಿಯನ್ನು ಒಂದೊಂದು ರೀತಿಯಲ್ಲಿ ವಿಶೇಷವಾಗಿ ತಯಾರಿಸುತ್ತಿದ್ದರು. ಮೀನು, ಸಮುದ್ರ ಮೀನು, ಸ್ನೈಲ್, ಶೀಗಡಿ, ಕೋಳಿ, ಬಾತುಕೋಳಿ, ಕಿಂಗ್ ಬಾತುಕೋಳಿ, ಕೆಂಟಕಿ ಚಿಕನ್, ಬೀಫ್, ಪೋರ್ಕ್, ಮಟನ್, ಮಶ್ರೂಮ್ ಹೀಗೆ ಪ್ರತಿಯೊಂದು ಭಕ್ಷ್ಯೆಯನ್ನು ಚನ್ನಾಗಿ ರುಚಿಯಾಗಿ ತಯಾರಿಸುತ್ತಿದ್ದರು. ಇನ್ನೊಂದು ವಿಶೇಷವೆಂದರೆ ಒಂದು ದಿನ ಬರೀ ಕಾಲು ಎಲುಬುಗಳು, ಇನ್ನೊಂದು ದಿನ ಬರೀ ತೊಡೆಮಾಂಸ, ಎದೆಯ ಎಲುಬುಗಳು, ಹೀರಲು ಹೀಗೆ ತಯಾರಿಸುತ್ತಿದ್ದರು. ಇವುಗಳ ಜೊತೆಗೆ ಹುರಿದ ಗೋಡಂಬಿ, ಮೆಕ್ಕೆಜೋಳ, ಕಳ್ಳೆಬೀಜ, ಎಳ್ಳುಪುಡಿ, ಫ್ರೂಟ್‌ಸಾಲಡ್ ಮತ್ತು ತಂಪು ಪಾನೀಯಗಳಾದ ಬೀರು, ಸ್ಪ್ರೈಟ್, ಕೋಕೋಕೋಲಾ ಹೀಗೆ. ಸ್ಥಳೀಯರ್‍ಯಾರೂ ನೀರು ಕುಡಿಯುತ್ತಿರಲಿಲ್ಲ. ಬೀರು, ಸ್ಪ್ರೈಟ್, ಕೋಕೋಕೋಲಾನೆ ಕುಡಿಯುತ್ತಿದ್ದರು. ಕೈ ತೊಳೆದುಕೊಳ್ಳುವುದಕ್ಕೆ ಬಾಯಿ ಒರೆಸಿಕೊಳ್ಳುವುದಕ್ಕೆ ಟಿಸ್ಯೂ ಪೇಪರ್ ಉಪಯೋಗಿಸುತ್ತಿದ್ದರು.



ಬೀಜಿಂಗ್‌ನಗರದ ಹೊಟೇಲ್ ಬಾಗಿಲಿನಲ್ಲಿ ಅತಿಥಿಗಳನ್ನು ಸ್ವಾಗತಿಸಲು ಕಾದಿರುವ ಸುಂದರಿ

ಬೀಜಿಂಗ್‌ನಲ್ಲಿ ಕಳೆದ ಮೂರು ವರ್ಷಗಳಿಂದ ಸರಿಯಾಗಿ ಮಳೆ ಆಗದೆ ಕುಡಿಯುವ ನೀರಿಗೆ ಭಾರಿ ತೊಂದರೆಯಂತೆ. ಆದರೆ ಈ ವರ್ಷ ಹೇರಳ ಮಳೆ ಬಿದ್ದಿರುವುದಾಗಿ ತಿಳಿಯಿತು. ದೂರದ ನದಿಯೊಂದರಿಂದ ನೀರನ್ನು ತರುವ ಯೋಜನೆ ವೇಗವಾಗಿ ನಡೆಯುತ್ತಿದ್ದು ೨೦೦೮ರ ಬೀಜಿಂಗ್ ಒಲಂಪಿಕ್ಸ್ ನಡೆಯುವ ಹೊತ್ತಿಗೆ ನೀರು ಬರುತ್ತಂತೆ. ನಾವು ನೀರಿಲ್ಲದೆ ಯಿದ್ದರೆ ಹೋಗಲಿ ಬಿಸಿ ನೀರು ಕೊಡಿ ಎಂದಾಗ ಮಾತ್ರ ನೀರು ಕೊಡುತ್ತಿದ್ದರು. ೭೫೦ ಮಿ.ಲೀಟರಿನ ಒಂದು ಬೀರು ಬಾಟಲು ಬೆಲೆ ಕೇವಲ ೪ ಯುವಾನಾದರೆ, ಅರ್ಧ ಲೀಟರು ನೀರಿನ ಬೆಲೆ ೨ ಯುಯಾನ್. ನಾವಿದ್ದ ಯಾವುದೆ

ಹೋಟಲುಗಳಲ್ಲಿ ಮಗ್ಗು ಮತ್ತು ಬಕೆಟ್ಟುಗಳನ್ನು ನೋಡಲಿಲ್ಲ. ಇಲ್ಲಿನ ಜನ ಮನೆಗಳಲ್ಲಿ ಬಟ್ಟೆಗಳನ್ನು ಹೇಗೆ ಒಗೆಯುತ್ತಾರೊ ಗೊತ್ತಿಲ್ಲ. ಮಧ್ಯಾಹ್ನದ ಊಟ ಮುಗಿದ ಮೇಲೆ ನಾನು ವಾಂಗ್ ಹಿಂದೆ ಅವರ ಕೋಣೆಗೆ ಹೋದೆ. ನಾಲ್ಕಾರು ದಿನಗಳಿಂದ ಚೀನಾದ ಬಗ್ಗೆ ಪುಸ್ತಕಗಳಿದ್ದರೆ ಬೇಕೆಂದು ವಾಂಗ್ ಹಿಂದೆ ಬಿದ್ದಿದ್ದೆ.

ಇನ್ಸ್‌ಟಿಟ್ಯೂಟ್‌ನಲ್ಲಿದ್ದ ವಾಂಗ್‌ರ ಕೋಣೆಯಿಂದ ನನ್ನನ್ನು ನೇರವಾಗಿ ಗ್ರಂಥಾಲಯಕ್ಕೆ ಕರೆದುಕೊಂಡು ಹೊರಟರು. ಅಲ್ಲಿ ಇಂಗ್ಲಿಷ್ ಭಾಷೆಯ ಯಾವುದೇ ಪುಸ್ತಕಗಳು ಇರಲಿಲ್ಲ. ಜೊತೆಗೆ ಅದು ಭೂವಿಜ್ಞಾನದ ಗ್ರಂಥಾಲಯವಾಗಿದ್ದರಿಂದ ಭೂವಿಜ್ಞಾನಕ್ಕೆ ಸಂಬಂಧಪಟ್ಟ ಪುಸ್ತಕಗಳು ಮಾತ್ರ ಇದ್ದವು. ಅದರಲ್ಲೂ ಎಲ್ಲವೂ ಚೀನಿ ಭಾಷೆಯಲ್ಲಿ. ಅಲ್ಲಿಂದ ಅವರ ಕೋಣೆಗೆ ಹೋಗಿ ಕುಳಿತುಕೊಂಡೆ. ಅವರು ಈ ದಿನ ಬಹಳ ಬಿಜಿಯಾಗಿದ್ದರಿಂದ "ನಿಮ್ಮ ಕೆಲಸ ನೀವು ಮಾಡಿಕೊಳ್ಳಿ" ಎಂದು ಅವರ ಕೋಣೆಯಲ್ಲಿದ್ದ ಪುಸ್ತಕಗಳ ಮೇಲೆ ಕಣ್ಣಾಡಿಸಿದೆ. ಒಂದು ಮೂಲೆಯಲ್ಲಿ ವಿಜ್ಞಾನ ಮಾಸಿಕ ಮತ್ತು ಬೀಜಿಂಗ್ ರಿವ್ಯೂವ್ ವಾರ ಪತ್ರಿಕೆಗಳು ಕಂಡುಬಂದವು. ವಿಜ್ಞಾನ ಮಾಸಿಕ ಪತ್ರಿಕೆ ನಮ್ಮ ಬೆಂಗಳೂರಿನ ಕಛೇರಿಯಲ್ಲೂ ಬರುತ್ತದೆ. ಬೀಜಿಂಗ್ ರಿವ್ಯೂವ್ ವಾರ ಪತ್ರಿಕೆಗಳನ್ನು ತೆಗೆದುಕೊಂಡು ನೋಡತೊಡಗಿದೆ.

ನಮ್ಮ ಇಂಡಿಯಾ ಟುಡೆ ಮತ್ತು ವೀಕ್ ಪತ್ರಿಕೆಗಳನ್ನು ಬ್ಲೆಂಡ್ ಮಾಡಿದರೆ ಹೇಗಿರುತ್ತದೊ ಆ ರೀತಿಯ ಪತ್ರಿಕೆ ಬೀಜಿಂಗ್ ರಿವ್ಯೂವ್. ಸುಮಾರು ೩ ಗಂಟೆ ಕಾಲ ಆ ಪತ್ರಿಕೆಗಳನ್ನು ತಿರುವಿಹಾಕಿದೆ. ಪ್ರಸ್ತುತ ವಿದ್ಯಮಾನಗಳಿಗೆ ಸಂಬಂಧ ಪಟ್ಟ ಕೆಲವು ಒಳ್ಳೆ ಲೇಖನಗಳಿದ್ದವು. ಕೆಲವನ್ನು ಓದಿ ಒಂದಷ್ಟು ಟಿಪ್ಪಣಿ ಮಾಡಿಕೊಂಡೆ. ಅಲ್ಲಿಗೆ ಸಾಯಂಕಾಲ ೫ ಗಂಟೆಯಾಗಿತ್ತು. ಕೋಣೆಯಲ್ಲಿ ಒಂದೇ ಚಳಿ. ವಾಂಗ್ ತಮ್ಮ ಲ್ಯಾಪ್‌ಟಾಪ್‌ನಲ್ಲಿ ಏನೋ ಟೈಪ್ ಮಾಡುತ್ತ ಪ್ರಿಂಟ್ ಮಾಡಿಕೊಳ್ಳುತ್ತಿದ್ದರು. "ಡಾ.ವಾಂಗ್ ಇವೊತ್ತು ತುಂಬಾ ಚಳಿ ಇದೆಯಲ್ಲ?" ಎಂದೆ. "ಓ ಹೌದಲ್ಲ ಮರೆತೆಬಿಟ್ಟೆ" ಎಂದಿದ್ದೆ ರಿಮೋಟ್ ಕಂಟ್ರೋಲ್ ತೆಗೆದುಕೊಂಡು ಗೋಡೆ ಕಡೆಗೆ ತೋರಿಸಿದರು. ಗೋಡೆಯಲ್ಲಿದ್ದ ಯಂತ್ರ ಬುರ್ರನೆ ಚಲಿಸುತ್ತ ಕೋಣೆಯನ್ನು ಕೆಲವೆ ಕ್ಷಣಗಳಲ್ಲಿ ಬೆಚ್ಚನೆಯಾಗಿಸಿತು.

ಅಷ್ಟರಲ್ಲಿ ಅವರ ಪತ್ನಿ ಕೋಣೆ ಒಳಗೆ ಬಂದು "ಮೈ ವೈಫ್" ಎಂದರು. "ಎಸ್ ಐ ನ್ಯೂ" ಎಂದೆ. ಆ ಯಮ್ಮನಿಗೆ ಎಷ್ಟು ಇಂಗ್ಲಿಷ್ ಗೊತ್ತೊ ಏನೋ. ನಾನು ಅವರನ್ನು ಮಾತನಾಡಿಸುವ ಸಾಹಸಕ್ಕೆ ಹೋಗಲಿಲ್ಲ. ಕೋಣೆಯ ಬಾಗಿಲಲ್ಲಿ ಕೆಳಗೆ ಡಿಸೈನ್ ಮಾಡಿದ್ದ ಗೆರೆಗಳಲ್ಲಿ ತೂತುಗಳಿದ್ದು ಚಳಿ ಗಾಳಿ ಕೋಣೆಯ ಒಳಕ್ಕೆ ಬರುತ್ತಿತ್ತು. ಶ್ರೀಮತಿ ವಾಂಗ್ ಒಂದಷ್ಟು ಪೇಪರುಗಳನ್ನು ತೆಗೆದುಕೊಂಡು ಆ ತೂತುಗಳನ್ನು ಮುಚ್ಚಲು ಪ್ರಯತ್ನಿಸಿದರು. ವಾಂಗ್ ಲ್ಯಾಪ್‌ಟಾಪ್ ಆಫ್ ಮಾಡಿ ಬಂದು ಬೇರೆ ಉದ್ದವಾದ ಪೇಪರುಗಳನ್ನು ತೆಗೆದುಕೊಂಡು ಮುಚ್ಚಲು ಪ್ರಯತ್ನಿಸಿದರು. ಅವರು ಅದು ಸರಿ ಎಂದರೆ, ಇವರು ಇದು ಸರಿ ಎಂದು ಸ್ವಲ್ಪ ಹೊತ್ತು ಇಬ್ಬರೂ ಎತ್ತು ಏರಿಗೆ ಎಂದರೆ ಕೋಣ ನೀರಿಗೆ ಎನ್ನುವಂತೆ ಚೀನಿ ಭಾಷೆಯಲ್ಲಿ ಸ್ವಲ್ಪ ಹೊತ್ತು ಕಿತ್ತಾಡಿದರು.

ಅನಂತರ ಇಬ್ಬರೂ ಸೇರಿ ಕಾಗದವನ್ನು ಅಡ್ಡ ಇಟ್ಟು ಸೆಲೋಟೇಪ್ ಹಚ್ಚಿದರು. ವಾಂಗ್ ಸುಮಾರು ೪೫ರ ಗಡಿಯಲ್ಲಿದ್ದರೆ ಅವರ ಪತ್ನಿ ಸುಮಾರು ಮೂವತ್ತೈದರ ಗಡಿಯಲ್ಲಿರಬಹುದು.

ವಾಂಗ್ "ಲೆಟ್ ಅಸ್ ಗೊ. ದಿಸ್ ಈಸ್ ಸಪರ್ ಟೈಮ್" ಎಂದು ದೀಪಗಳನ್ನು ಹಾರಿಸಿ ಕೋಣೆಗೆ ಬೀಗ ಹಾಕಿ ಹೊರಟರು. ನಾನು ಅವರ ಜೊತೆಗೆ ನಡೆದೆ. ಕಟ್ಟಡದ ಹೊರಗೆ ಸಣ್ಣಗೆ ಮಳೆ ಹನಿಯುತ್ತಿತ್ತು. ಮೂವರು ಹತ್ತಿರದಲ್ಲೆ ಇದ್ದ ರೆಸ್ತಾರೆಂಟಿಗೆ ಬೇಗನೆ ಹೆಜ್ಜೆಯಾಕಿ ಹೊರಟೆವು. ನಾನು ಮಧ್ಯಾಹ್ನ ಗಡದ್ ಲಂಚ್ ಮಾಡಿದ್ದರಿಂದ ಕಡಿಮೆ ತಿನ್ನಬೇಕೆಂದು ತೀರ್ಮಾನಿಸಿದ್ದೆ. ಎಲ್ಲರೂ ಎರಡು ಗುಂಪುಗಳಾಗಿ ಎರಡು ಟೇಬಲುಗಳ ಮೇಲೆ ಕುಳಿತುಕೊಂಡೆವು.

ನಾವಿದ್ದ ಟೇಬಲ್ ಮುಂದೆ ಇಬ್ಬರು ನೀಗ್ರೋಗಳು, ನಾವು ಮೂವರು, ದಕ್ಷಿಣ ಆಫ್ರೀಕಾದಿಂದ ಬಂದಿದ್ದ ಜರ್ಮನ್ ಯುವತಿ, ಇನ್ಸ್‌ಟಿಟ್ಯೂಟ್‌ನ ಇಬ್ಬರು ಯುವಕರು ಮತ್ತು ಯುವತಿಯೊಬ್ಬಳು ಕುಳಿತುಕೊಂಡೆವು. ಊಟ ಮಾಡುತ್ತ ಮಧ್ಯದಲ್ಲಿ ಬೆನಿನ್ ದೇಶದ ನೀಗ್ರೋ ಯುವಕ ಊಟಬಡಿಸುತ್ತಿದ್ದ ಚೀನಿ ಯುವತಿಯ ಕಡೆಗೆ ಬೆರಳು ತೋರಿಸಿ "ಐ ವಾಂತ್ ದಿಸ್" ಎಂದ. ನಾವೆಲ್ಲ ಇವನು ಏನು ಹೇಳುತ್ತಿದ್ದಾನೆಂದು ಒಂದೆರಡು ಕ್ಷಣ ಆಶ್ಚರ್ಯದಿಂದ ಅವನ ಕಡೆಗೆ ನೋಡಿದೆವು.



ಚೀನಾದ ಅತ್ಯಂತ ಪುರಾತನ ಬೀಜಿಂಗ್‌ನ ಉದ್ಯಾನವನ

ಅವನೂ ಮತ್ತೆ ಅದೇ ರೀತಿ ಕೆಂಪು ಬಣ್ಣದ ಉಡುಗೆಯಲ್ಲಿದ್ದ ಯುವತಿಯ ಕಡೆಗೆ ಬೆರಳು ತೋರಿಸಿ "ಐ ವಾಂತ್ ದಿಸ್" ಎಂದ. ನಾವೆಲ್ಲ ಇನ್ನಷ್ಟು ದಂಗಾಗಿ ಅವನ ಕಡೆಗೆ ನೋಡಿದೆವು. ಅನಂತರ "ಐ ವಾಂತ್ ದಿಸ್ ತೈಪ್ ಆಫ್ ಮೆತಿರಿಯಲ್"

ಎಂದ. ಅವಳು ತೊಟ್ಟಿರುವ ಬಟ್ಟೆಗಳು ಅವನಿಗೆ ಬೇಕೆನ್ನುವುದು ಅವನ ಇಚ್ಛೆ. ನಾವೆಲ್ಲ ಸ್ವಲ್ಪ ನಿರಾಳವಾದೆವು. ಎದುರಿಗಿದ್ದ ಜಗಬಂಧು "ಇಫ್ ಯು ವಾಂಟ್ ದಿಸ್ ಮೆಟಿರಿಯಲ್. ಯು ಯಾವ್ ಟು ವರ್ಕ್ ಇನ್ ದಿಸ್ ಹೋಟಲ್ ಫಾರ್ ಒನ್ ವೀಕ್ ಅಂಡರ್ ಡೆಪುಟೇಶನ್" ಎಂದುಬಿಟ್ಟ. ಎಲ್ಲರೂ ಗೊಳ್ಳನೆ ನಕ್ಕರು. "ನೋ ನೋ. ಐ ವಾಂತ್ ದಿಸ್ ಮೆತಿರಿಯಲ್ ಓನ್ಲೀ" ಎಂದು ಬೆನಿನ್ ದೇಶದ ನೀಗ್ರೋ ಯುವಕ ವಾದಿಸಿದ.

ಇನ್ನೇನು ಊಟ ಮುಗಿಯುವ ಹೊತ್ತು. ತಾಂಜೇನಿಯಾದಿಂದ ಬಂದಿದ್ದ ಇನ್ನೊಬ್ಬ ಯುವಕ ಚೀನಾ ಯುವತಿಯ ಪಕ್ಕದಲ್ಲಿ ಕುಳಿತು ಅವನದೆ ಇಂಗ್ಲಿಷ್ ಭಾಷೆಯಲ್ಲಿ ಇಂಗ್ಲಿಷ್ ಪದಗಳಿಗೆ ಚೀನಾ ಭಾಷೆಯ ಸರಿಯಾದ ಪದಗಳನ್ನು ಕೇಳಿ ಅರ್ಥ ಪಡೆದುಕೊಳ್ಳುತ್ತಿದ್ದ. ಜಗಬಂಧುಗೆ ಏನಾಯಿತೊ ಏನೋ ದೊಡ್ಡ ಮೀನನ್ನು ತಿನ್ನುತ್ತಿದ್ದರಿಂದ ಹಾಗಾಯಿತೊ ಏನೋ "ಈವನ್ ಇಫ್ ಯು ಲರ್ನ್ ಚೈನಾ ಲಾಂಗ್ವೇಜ್. ದೇ ವಿಲ್ ನಾಟ್ ಅಲೋ ಯು ಇನ್ ಚೈನಾ" ಎಂದುಬಿಟ್ಟ. ನೀಗ್ರೋ ಯುವಕ "ವೈ?" ಎಂದು ಪ್ರಶ್ನಿಸಿದ. "ಬಿಕಾಸ್ ಆಫ್ ಯುವರ್ ಕಲರ್" ಎಂದುಬಿಡುವುದೇ? ನೀಗ್ರೋ ಯುವಕ ಜಗಬಂಧು ಮಾತು ಕೇಳಿ ತಬ್ಬಿಬ್ಬಾಗಿಬಿಟ್ಟ. ಅವನ ಮುಖದ ಸ್ನಾಯುಗಳು ಒಡನೆಯೇ ಸ್ಥಗಿತಗೊಂಡುಬಿಟ್ಟವು. ಜಗಬಂಧು ಮಾತುಗಳನ್ನು ನನ್ನಿಂದ ಜೀರ್ಣಿಸಿಕೊಳ್ಳಲಾಗಲಿಲ್ಲ. ಪಕ್ಕದಲ್ಲಿದ್ದ ದಾಸ್ ಮುಖವು ಸಪ್ಪಗಾಗಿತ್ತು. ಸಾವರಿಸಿಕೊಂಡ ನೀಗ್ರೊ ಯುವಕ ಪಕ್ಕದಲ್ಲಿದ್ದ ಸನ್ ಬಿನ್ ಕಡೆಗೆ ನೋಡಿ "ನನ್ನನ್ನು ಚೀನಾದಲ್ಲಿರಲು ನೀವು ಬಿಡುವುದಿಲ್ಲವೇ?" ಪ್ರಶ್ನಿಸಿದ. ಸನ್ ಬಿನ್ "ನೋ ನೋ. ನೀವು ಇಲ್ಲೇ ಇರಬಹುದು" ಎಂದ.

ನೀಗ್ರೊ ಯುವಕ "ತಾಂಜೇನಿಯದಲ್ಲಿ ಬೇಕಾದಷ್ಟು ಇಂಡಿಯನ್ಸ್ ಇದ್ದಾರೆ. ಕೆಲವರು ಮಿನಿಷ್ಟ್ರಗಳಾಗಿದ್ದಾರೆ..." ಹೀಗೆ ಒಂದಷ್ಟು ಬ್ರಾಡ್ ಆಗಿ ಮಾತನಾಡತೊಡಗಿದ. ದಾಸ್ ನಿಧಾನವಾಗಿ ಎದ್ದು ಹೊರಕ್ಕೆ ನಡೆದ. ಊಟ ಬಡಿಸುವ ಯುವತಿ ಕೊನೆಯದಾಗಿ ಕಟ್ ಮಾಡಿದ ಕಲ್ಲಂಗಡಿ ಮತ್ತು ಆಪಲ್ ಹಣ್ಣುಗಳನ್ನು ತಂದಿಟ್ಟಳು. ಎಲ್ಲರೂ ಒಂದೊಂದು ಹೋಳನ್ನು ತಿಂದು ಹೊರಗಡೆಗೆ ಬಂದೆವು. ದಾಸ್ ಹೊರಗಡೆ ನಮಗಾಗಿ ಕಾಯುತ್ತಿದ್ದ.

*   *   *

ಇನ್ನೊಂದು ಸಲ ಊಟ ಮಾಡುತ್ತಿದ್ದಾಗ ಡಾ.ವಾಂಗ್ ಅವರನ್ನು "ಚೀನಿಯರು ಕಡ್ಡಿಗಳಲ್ಲಿ ಊಟ ಮಾಡುವುದು ಏಕೆ?' ಕೇಳಿದ್ದೆ. ವಾಂಗ್ "ಕಡ್ಡಿಗಳಲ್ಲಿ ಊಟ ಮಾಡುವುದರಿಂದ ಬುದ್ಧಿ ಆರೋಗ್ಯವಾಗಿರುತ್ತದೆ" ಎಂದರು. "ಅದು ಹೇಗೆ?" ಸ್ವಲ್ಪ ಆಶ್ಚರ್ಯದಿಂದ ಕೇಳಿದೆ. "ಕಡ್ಡಿಗಳಲ್ಲಿ ಊಟ ಮಾಡುವುದರಿಂದ ಬೆರಳುಗಳ ಮೇಲೆ ನಿಮ್ಮ ಜ್ಞಾನ ಇರುತ್ತದೆ. ಬೆರಳುಗಳು ವ್ಯಾಯಾಮದಲ್ಲಿರುವಾಗ ಇಡೀ ದೇಹದಲ್ಲಿ ರಕ್ತ ಚಲನೆ ಉಂಟಾಗುತ್ತದೆ. ಮುಖ್ಯವಾಗಿ ಮೆದುಳಿಗೆ. ಆಗ ನಿಮ್ಮ ಮನಸಿಗೆ ಏಕಾಗ್ರತೆ

ದೊರಕುತ್ತದೆ. ವಯಸ್ಸಾದವರಿಗಂತು ಇದು ಬಹಳ ಒಳ್ಳೆಯದು" ಎಂದರು.

ವಾಂಗ್‌ರ ಮಾತುಗಳಲ್ಲಿ ಸ್ವಲ್ಪವಾದರು ಉರುಳಿದೆ ಎಂದುಕೊಳ್ಳುತ್ತಿದಂತೆ ಅದೇ ಸಮಯಕ್ಕೆ ಊಟ ಬಡಿಸುತ್ತಿದ್ದ ಹುಡುಗ ತಟ್ಟೆಯಲ್ಲಿ ಒಂದು ಭಕ್ಷ್ಯ ತಂದಿಟ್ಟು "ಬೀಜಿಂಗ್ ಡಕ್" ಎಂದ. ಪ್ರತಿಯೊಂದು ತುಂಡಿನಲ್ಲೂ ಅರ್ಧ ಚರ್ಮ ಅರ್ಧ ಮಾಂಸಪಿತ್ತು. ಬರೀ ಎಣ್ಣೆಯಲ್ಲಿ ಕರಿಯಲಾಗಿದೆ. ಅದರ ಪಕ್ಕದಲ್ಲಿ ಎರಡು ಅಪ್ಪಳ ದಪ್ಪದ ರೋಟಿಗಳು ಮತ್ತು ಕಪ್ಪು ಬಣ್ಣದ ಚಟ್ನಿಯನ್ನು ತಂದಿಡಲಾಯಿತು. ರೋಟಿಯ ಮಧ್ಯದಲ್ಲಿ ಒಂದೆರಡು ತುಂಡುಗಳನ್ನಿಟ್ಟುಕೊಂಡು ಅದರ ಮೇಲೆ ಚಟ್ನಿಯಾಕಿಕೊಂಡು ರೋಟಿಯನ್ನು ಮಡಚಿ ತಿನ್ನಬೇಕೆಂದು ವಾಂಗ್ ತೋರಿಸಿದರು. ನಾನು ಆಗಲೆ ಒಂದು ಮಾಂಸದ ತುಂಡನ್ನು ಬಾಯಲ್ಲಿಟ್ಟುಕೊಂಡು ಚಪ್ಪರಿಸಿದ್ದೆ. ರುಚಿ ಅಷ್ಟರಲ್ಲೆ ಇತ್ತು.

ಪಕ್ಕದಲ್ಲಿದ್ದ ಜರ್ಮನ್ ಮಹಿಳೆಗೆ "ನಿಮಗೆ ಬೇಡವೆ?" ವಾಂಗ್ ಕೇಳಿದರು. ಆಕೆ "ವೆರಿ ರಿಚ್" ಎಂದಳು. "ರಿಚ್ ಮೀನ್ಸ್ ಪ್ಯಾಟಿ?" ಎಂದರು ವಾಂಗ್. "ಎಸ್" ಎಂದಳು ಆಕೆ. "ವೀ ಮೇಕ್ ಯು ಮೋರ್ ಬ್ಯೂಟಿಫುಲ್" ಎಂದ ವಾಂಗ್ ಮಾತಿಗೆ ಎಲ್ಲರೂ ಜೋರಾಗಿ ನಕ್ಕರು. "ನಾವು ಚೀನಿಯರು ಹೆಚ್ಚು ಕೊಬ್ಬು ತಿಂದರೂ ಸ್ಲಿಮ್ಮಾಗಿದ್ದೀವಿ. ಯುರೋಪಿಯನ್ಸ್ ಕಡಿಮೆ ಕೊಬ್ಬು ತಿಂದರೂ ದಪ್ಪವಾಗಿರ್ತಾರೆ ಯಾಕೆ?" ಎಂದ ವಾಂಗ್ ಪ್ರಶ್ನೆಗೆ ಆಕೆ ಸುಮ್ಮನೆ ನಕ್ಕಳು.

ಎದುರುಗಿದ್ದ ಕೆನ್ಯಾದ ಜೋಸಫ್ ತಟ್ಟೆಯಲ್ಲಿದ್ದ ಗೋಡಂಬಿ ಬೀಜಗಳ ಕಡೆಗೆ ಬೆರಳು ತೋರಿಸಿ "ವಾತ್ ಈಸ್ ದಿಸ್?" ಎಂದ. "ಓ ಯು ದೋಂತ್ ನೋ?" ಮೋಜಾಂಬಿಕ್‌ನಿಂದ ಬಂದಿದ್ದ ದಿಲ್ವ ಪ್ರಶ್ನಿಸಿದ. ಜೋಸಫ್ "ನೋ ನನಗೆ ನಿಜವಾಗಿಯೂ ಗೊತ್ತಿಲ್ಲ" ಎಂದ. ಪಕ್ಕದಲ್ಲಿದ್ದವರು "ಕ್ಯಾಸೂವ್‌ನಟ್ಸ್" ಎಂದರು. "ಓ ದಿಸ್ ಈಸ್ ಕ್ಯಾಸೂವ್‌ನತ್ಸ್?" ಎಂದು ಬೆರಳುಗಳಲ್ಲಿ ಒಂದನ್ನು ತೆಗೆದುಕೊಂಡು ಬಾಯಿಗೆ ಹಾಕಿಕೊಂಡ. ದಿಲ್ವ "ಯು ಆರ್ ಜೋಕಿಂಗ್ ಮೆನ್" ಎಂದ. "ನೋ. ಐ ಯಾಮ್ ದೆದ್ಲಿ ಸೀರಿಯಸ್" ಎಂದ. "ಯಾವ್ ಯು ನಾತ್ ಸೀನ್ ಇನ್ ಟಿವಿ? ಆರ್ ಇನ್ ಪೇಪರ್ಸ್?" ದಿಲ್ವ ಪ್ರಶ್ನೆಗೆ ಎಲ್ಲರೂ ನಕ್ಕರು.

ಅಷ್ಟರಲ್ಲಿ ವಾಂಗ್ "ನಮ್ಮ ಹೋಟಲುಗಳಲ್ಲಿ ಅರ್ಧಕ್ಕಿಂತ ಹೆಚ್ಚು ತಿನ್ನದೆ ಬಿಟ್ಟುಬಿಟ್ಟರೆ ಹೋಟಲಿನವರು ಮನೆಗೆ ಪ್ಯಾಕ್ ಮಾಡಿ ಕಳಸ್ತಾರೆ. ಜಾಸ್ತಿ ತಟ್ಟೆಗಳಲ್ಲಿ ಬಿಡೂದು ನಮಗೆ ಇಷ್ಟ ಆಗೂದಿಲ್ಲ. ನೀವೂ ಅಷ್ಟೆ. ಇದನ್ನೆಲ್ಲ ಮುಗಿಸಿಬಿಡಿ" ಅಂದರು. "ಮುಗಿಸೂದು ಹೇಗೆ ಅಂತ ಸ್ವಲ್ಪ ತೋರಿಸಿ" ಅಂದ ದಕ್ಷಿಣ ಆಫ್ರೀಕಾದ ರೂಡಿ "ಓ ನಾನು ತೋರಿಸ್ತೀನಿ ನೋಡಿ" ಎಂದಿದ್ದೆ ವಾಂಗ್ ತಟ್ಟೆಯಲ್ಲಿದ್ದ ಹಸಿರು ಅವರೆ ಕಾಯಿಗಳನ್ನು ತನ್ನ ತಟ್ಟೆಗೆ ಸುರಿದುಕೊಳ್ಳುತ್ತ "ನೀವೆಲ್ಲ ನಾನ್‌ವೆಜ್ ಮುಗಿಸುಬಿಡಿ" ಎಂದರು. ನಾವೆಲ್ಲ ಆಗಲೆ ಮಿತಿಮೀರಿ ತಿಂದು ಸುಮ್ಮನಾಗಿದ್ದೆವು.

ಆ ದಿನ ಒಂದು ಹಸುಪಿನ ತೊಡೆಯನ್ನು ಪೂರ್ಣವಾಗಿ ರೋಸ್ಟ್ ಮಾಡಿ

ಮಧ್ಯ ಮಧ್ಯದಲ್ಲಿ ಕತ್ತರಿಸಿ ದೊಡ್ಡ ತಟ್ಟೆಯಲ್ಲಿ ತಂದಿಟ್ಟಿದ್ದರು. ಅದಕ್ಕೊಂದು ಬಣ್ಣದ ರಿಬನ್ ಬೇರೆ ಕಟ್ಟಿದ್ದರು. ಅದರಿಂದ ತುಂಡುಗಳನ್ನು ಪ್ರತ್ಯೇಕಿಸಲು ಕೆಲವರು ಮಿತಿಮೀರಿ ಹೆಣಗಾಡತೊಡಗಿದರು. "ಇಷ್ಟು ಜನರಿಗೆ ಅಷ್ಟೊಂದು ಭಕ್ಷ್ಯ ಕೊಡುವುದರಿಂದ ತಿನ್ನಲಾಗದೆ ವೇಸ್ಟ್ ಆಗುತ್ತದೆ" ಎಂದೆ. ಪಕ್ಕದಲ್ಲಿದ್ದವರು "ಹೌದೌದು" ಎಂದರು. "ನಿಮಗೆ ನಾವಿನ್ನೂ ಹಾವು ನಾಯಿ ಕೋತಿ ಭಕ್ಷ್ಯಗಳನ್ನು ತಿನ್ನಿಸಲಿಲ್ಲ" ಎಂದರು. "ಓ ಬೇಡ ಬೇಡ ಇವೆ ಸಾಕಾಗಿದೆ" ಎಂದರು ಎಲ್ಲರೂ.

"ನಮ್ಮ ಚೀನಾದ ಲೂನಾರ್ ಕ್ಯಾಲೆಂಡರ್ ಪ್ರಕಾರ ೧೨ ವರ್ಷಗಳು. ಒಂದೊಂದು ವರ್ಷಕ್ಕೆ ಒಂದೊಂದು ಪ್ರಾಣಿ ಇರುತ್ತೆ. ಮೊದಲನೇ ವರ್ಷವೆ ನಾಯಿಯದು. ನಾನು ಹುಟ್ಟಿದ್ದು ಹುಲಿ ವರ್ಷದಲ್ಲಿ. ಕೋತಿ ವರ್ಷದಲ್ಲಿ ಹುಟ್ಟಿದವರು ತುಂಬಾ ಆಕ್ಟೀವ್ ಮತ್ತು ನಾಟಿಯಂತೆ" ವಾಂಗ್ ಹೇಳುತ್ತಿದ್ದಂತೆ ಎಲ್ಲರೂ ಜೋರಾಗಿ ನಕ್ಕರು. ಊಟ ಮುಗಿಸಿ ಹೊರಗೆ ಬಂದಾಗ ನಮ್ಮ ದಾಸ್ "ಸಾಬ್ ನಾನು ಡೆಲ್ಲಿಗೋಗಿ ಒಳ್ಳೆ ಚಹ ಕುಡಿಯಬೇಕು" ಎಂದ. ಜಗಬಂಧು "ಅರೆ ಸಾಬ್ ನಾನು ಕಲಕತ್ತಾಗೆ ಹೋಗಿ ಚಾವಲ್ ಮಚಲಿ ತಿನ್ನಬೇಕು" ಎಂದು ಗೋಳಾಡಿದ. ಒಂದು ತಿಂಗಳಲ್ಲಿ ಎಷ್ಟೆಷ್ಟೋ ಒಳ್ಳೆಯ ಭಕ್ಷ್ಯಗಳನ್ನು ಚಪ್ಪರಿಸಿದ್ದರು ಒಂದೇ ರೀತಿಯ ಭಕ್ಷ್ಯಗಳನ್ನು ತಿಂದೂ ತಿಂದು ಸ್ಯಾಚೂರೇಷನ್ ಪಾಯಿಂಟ್ ತಲುಪಿದಂತೆ ತೋರುತ್ತಿತ್ತು. ಈಗ ನಾವೆಲ್ಲ ಹೋಮ್ ಸಿಕ್‌ನೆಸ್‌ನಿಂದ ನರಳುತ್ತಿದ್ದೆವು.

ಊಟ ಮಾಡಿದ ಮೇಲೆ ನಾವು ಮೂವರು ಖರೀದಿ ಮಾಡಲು ಲಾಂಗ್‌ಫಾಂಗ್ ರಸ್ತೆಗಳಲ್ಲಿ ಹೊರಟೆವು. ಉಷ್ಣಾಂಶ ೬ ರಿಂದ ೧೦ ಡಿಗ್ರಿಗಳ ಒಳಗಿದ್ದು, ಸೂರ್ಯ ದಟ್ಟ ಮಂಜಿನ ತೆರೆಯ ಹಿಂದೆ ಎಲ್ಲೋ ಅಡಗಿ ಕುಳಿತುಕೊಂಡಿದ್ದ. ಹತ್ತಾರು ಅಡಿಗಳು ದೂರದಲ್ಲಿದ್ದವರು ಎದುರಿಗೆ ಮಸುಕು ಮಸುಕಾಗಿ ಕಾಣಿಸುತ್ತಿದ್ದರು. ನಾವು ಮುಖ್ಯರಸ್ತೆಗಳನ್ನು ಬಿಟ್ಟು ಸಣ್ಣಪುಟ್ಟ ರಸ್ತೆಗಳಲ್ಲಿ ಸುತ್ತತೊಡಗಿದೆವು. ಭಾರತದಲ್ಲಿ ಕೇಂದ್ರ ಸರಕಾರದ ಕಛೇರಿಗಳಂತೆ ಚೀನಾದಲ್ಲೂ ಶನಿವಾರ ಮತ್ತು ಭಾನುವಾರ ರಜಾ ದಿನಗಳು. ಈ ಎರಡೂ ದಿನಗಳಲ್ಲಿ ಜನರು ಮಾರ್ಕೆಟಿಂಗ್ ಮಾಡುವುದರ ಜತೆಗೆ ಮನೆಗಳಲ್ಲಿ ವಿಶ್ರಾಂತಿ ಪಡೆಯುತ್ತಾರೆ. ಯುವಕರು ಮತ್ತು ಯುವತಿಯರು ತೋಳ ಮೇಲೆ ತೋಳಾಕಿಕೊಂಡು ಊರೆಲ್ಲ ಓಡಾಡುತ್ತಿರುತ್ತಾರೆ, ಇಲ್ಲ ಸಿನಿಮಾ ನೋಡುತ್ತಾರೆ.

ಬೀಜಿಂಗ್‌ನಿಂದ ಸಣ್ಣ ಪಟ್ಟಣಗಳವರೆಗೆ ಯುವಕರು ಮತ್ತು ಯುವತಿಯರು ಚಳಿಯಲ್ಲಿ ಹಗಲು ರಾತ್ರಿಯನ್ನದೆ ತೆಕ್ಕೆಯಾಕಿಕೊಂಡು ಓಡಾಡುತ್ತಿದ್ದರು. ಅಲ್ಲಲ್ಲಿ ಒಬ್ಬರನ್ನೊಬ್ಬರು ತಬ್ಬಿಕೊಂಡು ನಿಂತಿರುತ್ತಿದ್ದರು. ಕಪ್ಪು ಕೂದಲನ್ನು ಕಂದು ಮತ್ತು ಬೂದು ಬಣ್ಣಗಳಿಂದ ಡೈಯಿಂಗ್ ಮಾಡಿಕೊಂಡು ಕೂದಲನ್ನು ತಲೆಯ ಸುತ್ತಲು ಮತ್ತು ಮುಖದ ಮೇಲೆ ಬಾಚಿಕೊಂಡಿರುತ್ತಿದ್ದರು. ಕೆಲವರು ಕೆದರಿದ ಮುಳ್ಳುಗಳಂತೆ ಕೂದಲನ್ನು ಡಿಸೈನ್ ಮಾಡಿಕೊಂಡಿದ್ದರು. ಹೆಚ್ಚು ಚಳಿ ಪ್ರದೇಶವಾದರಿಂದ ಹೆಣ್ಣು ಗಂಡೆನ್ನದೆ ಎಲ್ಲರೂ ಒಂದೇ ರೀತಿಯಲ್ಲಿ ಪ್ಯಾಂಟು ಜೊತೆಗೆ ವಿಧವಿಧ ಬೆಚ್ಚನೆಯ

ಶರ್ಟು ಟಿಶರ್ಟು ಕೋಟುಗಳನ್ನು ಧರಿಸಿದ್ದರು. ೧೦೦ಕ್ಕೆ ೮೦ರಷ್ಟು ಜನರ ದಿರಿಸು ಕಪ್ಪು. ತಲೆಗೊಂದು ಟೊಪ್ಪಿಯಾಕಿ ಕೈಗಳಿಗೆ ಗ್ಲೌಸು ತೊಡಗಿಕೊಂಡು ಸೈಕಲ್‌ಗಳಲ್ಲಿ ಸರ್ರನೆ ಹೋಗುತ್ತಿದ್ದರು. ಪ್ರತಿ ಸೈಕಲ್ಲಿನ ಹಿಂದೆ ಅಥವಾ ಮುಂದೆ ಒಂದು ಬುಟ್ಟಿ. ಅದರಲ್ಲಿ ಮಕ್ಕಳು ಕುಳಿತಿರುತ್ತಾರೆ. ಹಿಂದಿನ ಬುಟ್ಟಿಯನ್ನು ತೆಗೆದುಬಿಟ್ಟರೆ ದೊಡ್ಡವರು ಕುಳಿತುಕೊಳ್ಳಬಹುದು. ಇವರ ಜೊತೆಗೆ ಅನೇಕ ರೀತಿಯ ಮೂರು ಚಕ್ರದ ಸೈಕಲ್ಲುಗಳು. ಇವುಗಳಲ್ಲಿ ಎಲ್ಲಾ ರೀತಿಯ ವಸ್ತುಗಳನ್ನು ತುಂಬಿಕೊಂಡು ಓಡಾಡುತ್ತಿದ್ದರು.

ಮಹಿಳೆಯರಂತೂ ಹಳ್ಳಿ, ಪಟ್ಟಣ, ನಗರಗಳಲ್ಲಿ ಎಲ್ಲಾ ರೀತಿಯ ಕೆಲಸಗಳಲ್ಲಿ ತೊಡಗಿಕೊಂಡಿರುವುದು ಕಾಣಿಸುತ್ತಿತ್ತು. ನಾವು ಉಳಿದುಕೊಂಡಿದ್ದ ಎಲ್ಲಾ ಹೋಟಲುಗಳಲ್ಲೂ ರಿಸಿಪ್ಷನಿಷ್ಟ್‌ರಿಂದ ಹಿಡಿದು ರೆಸ್ಟಾರೆಂಟ್‌ಗಳಲ್ಲಿ ಊಟ ಬಡಿಸುವವರು ಕೋಣೆಗಳನ್ನು, ಬಾಥ್‌ರೂಮುಗಳನ್ನು ಸ್ವಚ್ಛ ಮಾಡುವವರು ಎಲ್ಲರೂ ಮಹಿಳೆಯರೆ. ಎಲ್ಲಾ ರೀತಿಯ ಅಂಗಡಿಗಳಲ್ಲಿ ಮಹಿಳೆಯರನ್ನು ನೋಡಬಹುದು. ತರಕಾರಿ ಅಂಗಡಿಗಳಲ್ಲಿ, ದಾಬಾಗಳಲ್ಲಿ ಮಹಿಳೆಯರೆ ಕಾಣಿಸುತ್ತಿದ್ದರು. ಕಛೇರಿಗಳಲ್ಲಿ ಮಾತ್ರ ಗಂಡಸರ ಸಂಖ್ಯೆ ಹೆಚ್ಚಿರುವುದು ಕಾಣಿಸುತ್ತಿತ್ತು. ಹೊಲಗದ್ದೆಗಳಲ್ಲಿ ದುಡಿಯುವುದರಲ್ಲೂ ಮಹಿಳೆಯರನ್ನು ನೋಡಬಹುದು. ಬೀಜಿಂಗ್ ಮತ್ತು ಇನ್ನಿತರ ಪಟ್ಟಣಗಳಲ್ಲಿ ಚೌರ ಮಾಡುವ ಅಂಗಡಿಗಳಲ್ಲಿ ಮಹಿಳೆಯರೆ ಹೆಚ್ಚು ಕೆಲಸ ಮಾಡುತ್ತಿರುವುದು ಕಂಡುಬಂದಿತು.

* * *

ಅದು ಏನೇ ಆಗಲಿ ೧.೧೦ ಬಿಲಿಯನ್‌ಗಿಂತ ಹೆಚ್ಚು ಜನಸಂಖ್ಯೆ ಇರುವ ಪ್ರಜಾಪ್ರಭುತ್ವದ ಭಾರತದೇಶ ೧.೪ ಬಿಲಿಯನ್ ಜನಸಂಖ್ಯೆ ಇರುವ ಕಮ್ಯೂನಿಷ್ಟ್ ದೇಶವಾದ ಚೀನಾ ದೇಶಗಳು ಪ್ರಪಂಚದಲ್ಲಿ ಎಂದಿಗೂ ಅಭಿವೃದ್ಧಿಶೀಲ ದೇಶಗಳಾಗಲಾರವು ಎಂಬುದಾಗಿ ಗೆಳೆಯ ದಾಸ್ ನನ್ನ ಜೊತೆಗೆ ವಾದಿಸಿದ್ದರು. ಚೀನಾದಲ್ಲಿ ನಾನು ಹೆಚ್ಚು ದಿನಗಳನ್ನು ಕಳೆಯುತ್ತಿದ್ದಂತೆ ಈ ಮಾತುಗಳಲ್ಲಿ ಸ್ವಲ್ಪವಾದರು ನಿಜಾಂಶ ಇದೆ ಎನ್ನುವುದು ದೃಢವಾಗತ್ತಾ ಹೋಗುತ್ತಿತ್ತು. ಬೀಜಿಂಗ್‌ಗೆ ಬಂದ ಮೊದಲೆರಡು ದಿನಗಳಲ್ಲಿ ಬೀಜಿಂಗ್ ನಗರದ ಗಗನಚುಂಬಿ ಕಟ್ಟಡಗಳು ಸ್ವಚ್ಛವಾದ ರಸ್ತಗಳು ಲಕ್ಸುರಿ ರೆಸ್ಟಾರೆಂಟುಗಳು, ಜನರ ಉಡುಗೆ ತೊಡಿಗೆ ಓಡಾಡುವ ಶಿಸ್ತು ಎಲ್ಲವೂ ನನ್ನನ್ನು ದಂಗುಬಡಿಸಿದ್ದವು. ಬೀಜಿಂಗ್ ಬಿಟ್ಟು ಸಣ್ಣ ಪುಟ್ಟ ಪಟ್ಟಣಗಳು ಮತ್ತು ಹಳ್ಳಿಗಳ ಕಡೆಗಿನ ಚಿತ್ರಣಗಳನ್ನು ನೋಡುತ್ತಿದ್ದಂತೆ ನನ್ನ ಮನಸಿನಲ್ಲಿ ಮೂಡಿದ್ದ ಚೀನಾ ಬಗೆಗಿನ ವಿಚಾರಗಳು ಸ್ವಲ್ಪ ಸ್ವಲ್ಪವಾಗಿ ಚದುರುತ್ತಾ ಹೋಗುತ್ತಿದ್ದವು.

ಮಣ್ಣು ಇಟ್ಟಿಗೆ ಹೆಂಚಿನ ಮನೆಗಳು, ಅಗಾದವಾದ ಬೋಳು ಬೋಳು ಪರ್ವತಮಾಲೆಗಳು, ವಿಶಾಲ ಬಂಜರು ಪ್ರದೇಶಗಳು. ಸಣ್ಣಪುಟ್ಟ ಗಲ್ಲಿಗಳು, ಕೊಳಕು ಮಾರ್ಕೆಟ್ ಬೀದಿಗಳು, ಹಳ್ಳಿಗರ ಕೊಳಕು ಬಟ್ಟೆಗಳು. ಸಿಮೆಂಟ್ ಕಲ್ಲಿದ್ದಲು ಇನ್ನಿತರ ಸಣ್ಣಪುಟ್ಟ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರ ಚಹರೆಗಳು. ರಸ್ತೆಗಳ ಪಕ್ಕದಲ್ಲಿದ್ದ

ಸಣ್ಣ ಸಣ್ಣ ಢಾಬಾ ಅಂಗಡಿಗಳು, ಅಲ್ಲಿ ಮಾರುತ್ತಿದ್ದ ತರಕಾರಿ ಗೆಡ್ಡೆಗೆಣಸು, ಮಾಂಸದ ತುಂಡುಗಳು, ಕಡಿಮೆ ಬೆಲೆಯ ಬಟ್ಟೆಗಳು ಚಪ್ಪಲಿಗಳು ಇನ್ನಿತರ ವಸ್ತುಗಳು, ಹಳ್ಳಿ ಪಟ್ಟಣಗಳಲ್ಲಿ ಬಡವರು ವಾಸಿಸುವ ಇಕ್ಕಾಟ್ಟಾದ ಕೊಳಕು ಪ್ರದೇಶಗಳು ಹೀಗೆ ಎಲ್ಲವೂ ನಮ್ಮ ದೇಶದ ಚಿತ್ರಣಗಳನ್ನು ಆಗಾಗ ನೆನೆಪಿಸುತ್ತಿದ್ದವು.


ಹಳ್ಳಿ ಪಟ್ಟಣ ಮತ್ತು ನಗರಗಳ ಕೊಳಕು ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ದಿನನಿತ್ಯ ಸಣ್ಣ ಪುಟ್ಟ ಕೆಲಸಗಳು ದೊರಕುತ್ತವೊ ಏನೋ ಗೊತ್ತಿಲ್ಲ. ಆದರೆ ದೂರದ ಹಳ್ಳಿಗಾಡು ಬರ ಪ್ರದೇಶಗಳಲ್ಲಿರುವ ಜನರ ಚಿತ್ರಣಗಳು ನನ್ನಿಂದ ದೂರವೆ ಉಳಿದಿದ್ದವು. ನಮ್ಮ ಒರಿಸ್ಸಾದ ಕೋರಾಪುಟ್, ಕಾಲಾಹಂದಿ ಬಿಹಾರ್ ಮತ್ತು ರಾಜಸ್ಥಾನದ ಕೆಲವು ಬರ ಪ್ರದೇಶಗಳಲ್ಲಿ ಜನರು ಆಹಾರವಿಲ್ಲದೆ ಸಾವುಗೀಡಾಗುತ್ತಿರುತ್ತಾರೆ. ಚೀನಾದಲ್ಲಿ ಎಲ್ಲಾದರು ಇಂತಹ ವಿಷಯಗಳು ಇವೆಯೇ ಎಂದು ಕೇಳಿದಾಗ ಇಲ್ಲ ಎನ್ನುವ ಉತ್ತರ ಬರುತ್ತಿತ್ತು.

ಹಳ್ಳಿಗಳಲ್ಲಿ ಶೇಕಡ ೨೦ರಷ್ಟು ಜನರು ಮಾತ್ರ ನಿರುದ್ಯೋಗಿಗಳು. ಉಳಿದ ೮೦ರಷ್ಟು ಜನರು ಯಾವುದೋ ಒಂದು ಕೆಲಸವನ್ನು ಮಾಡುತ್ತಿರುತ್ತಾರಂತೆ. ಅದು ಯಾವುದು ಎಂದರೆ ಕೃಷಿ ಎನ್ನುವ ಉತ್ತರ ದೊರಕುತ್ತಿತ್ತು. ಈ ಉತ್ತರ ನನಗೆ ಅಷ್ಟೊಂದು ಸಮಂಜಸವೆನಿಸಲಿಲ್ಲ. ಚೀನಾದಲ್ಲಿ ಬೇಕಾದಷ್ಟು ಬಡತನ ರೋಗರುಜಿನಗಳು ಇರುವುದು ಕಾಣಿಸುತ್ತಿತ್ತು. ಹಳ್ಳಿ ಪಟ್ಟಣಗಳಿಗಿಂತ ನಗರಗಳನ್ನು ಚೀನಿಯರು ಹೆಚ್ಚು ಸ್ವಚ್ಛ ಮತ್ತು ದೃಢವಾಗಿ ಬೆಳೆಸುತ್ತಿದ್ದಾರೆ ಎನ್ನುವುದು ಮಾತ್ರ ನಿಜವಾಗಿತ್ತು. ಹಳ್ಳಿ ಪಟ್ಟಣಗಳ ಬೆಳವಣಿಗೆಯ ಕಡೆಗೆ ಗಮನ ಹರಿಸುತ್ತಿದ್ದರೂ ಅದು ಅಷ್ಟು ಸುಲಭವಾದ ಕೆಲಸವಾಗಿ ಕಾಣಿಸುತ್ತಿಲ್ಲ.

ಬಡತನದ ಜೊತೆಗೆ ಪ್ರಾಸ್ಟೂಷನ್ ಕೂಡ ಚೀನಾದಲ್ಲಿ ರಾಜಾರೋಷವಾಗಿಯೆ ನಡೆಯುತ್ತಿರುವುದು ಎದ್ದು ಕಾಣಿಸುತ್ತಿತ್ತು. ಮಂಗೋಲಿಯಾದ ಘಟನೆಯ ನಂತರ ಬೀಜಿಂಗ್‌ಗೆ ಕೇವಲ ೬೦ ಕಿ.ಮೀ. ದೂರದಲ್ಲಿದ್ದ ಲಾಂಗ್‌ಫಾಂಗ್ ನಗರದಲ್ಲಿಯೂ ಅದೆ ರೀತಿಯ ಚಟುವಟಿಕೆಗಳು ನಡೆಯುತ್ತಿರುವುದು ನಮ್ಮ ಗಮನಕ್ಕೆ ಬಂದಿತ್ತು. ನಾವು ಇನ್ನು ಕೆಲವೆ ದಿನಗಳಲ್ಲಿ ಲಾಂಗ್‌ಪಾಂಗ್ ಬಿಟ್ಟು ಭಾರತಕ್ಕೆ ಹಿಂದಿರುಗಬೇಕಾಗಿತ್ತು. ಒಂದು ರಾತ್ರಿ ನಾವಿದ್ದ ಎಲ್ಲಾ ಕೋಣೆಗಳಿಗೂ ಎನಿ ಸರ್ವೀಸ್... ಎನಿ ಸರ್ವೀಸ್... ಎನ್ನುವ ಹೆಣ್ಣು ಧ್ವನಿ ಫೋನ್‌ನಲ್ಲಿ ಮೊಳಗಿತ್ತು. ದಕ್ಷಿಣ ಆಫ್ರಿಕಾದಿಂದ ಬಂದಿದ್ದ ಯುರೋಪಿಯನ್ ಮೂಲದ ಜೋಡಾನ್ ಮತ್ತು ರೂಡಿ ದೈತ್ಯಾಕಾರದ ದೇಹಗಳನ್ನೊಂದಿದ್ದು ನೋಡುವುದಕ್ಕೆ ಒಳ್ಳೆ ರಜಲರ್ಸ್ ತರಹ ಕಾಣಿಸುತ್ತಿದ್ದರು. ಅವರಿಬ್ಬರು ರಾತ್ರಿ ೧೦ ಗಂಟೆಗೆ ಕೋಣೆಯಲ್ಲಿ ಕುಡಿಯುತ್ತಾ ಹರಟೆ ಹೊಡೆಯುತ್ತಿದ್ದರಂತೆ ಬಾಗಿಲು ಬಡಿಯುವ ಸದ್ದಾಗಿ ಬಾಗಿಲು ತೆಗೆದಿದ್ದೆ ಒಬ್ಬ ಚೀನಿ ಕಡ್ಡಿ ಪೈಲ್ವಾನ್ ಜೊತೆಗೆ ಮೂವರು ಹುಡುಗಿಯರು ಕೋಣೆಯ ಒಳಕ್ಕೆ ನುಗ್ಗಿ ಬಾಗಿಲು ಮುಚ್ಚಿ ಕುಳಿತುಕೊಂಡರಂತೆ. ಕಡ್ಡಿ ಪೈಲ್ವಾನ್‌ನನ್ನು ನೋಡಿ ಆಶ್ಚರ್ಯದಿಂದ "ಎಸ್ ಜಂಟ್ಲ್‌ಮನ್"

ಎಂದಿದ್ದಾರೆ. "ಎನಿ ಸರ್ವೀಸ್... ಸರ್ವೀಸ್... ಹಾಫ್ ನೈಟ್ ತು ಹಂದ್ರೆದ್, ಫುಲ್ ನೈಟ್ ಫೈವ್ ಹಂದ್ರೆದ್ ಯುಯಾನ್" (ಕಡ್ಡಿ ಪೈಲ್ವಾನ್ ಹುಡುಗಿಯರ ಕಡೆಗೆ ಕೈತೋರಿಸುತ್ತ) "ಎನಿ ಗರ್ಲ್" ಎಂದಿದ್ದಾನೆ.

ರೂಡಿ ಬೆಳಗ್ಗೆ ನಮ್ಮ ಜೊತೆಗೆ "ಹೀ ದೋಂತ್ ಯಾವ್ ಬೋನ್ಸ್ ಇನ್ ದಿ ಬಾಡಿ. ಬ್ಲೆಡಿ ಫೆಲೋ ಹೀ ಕೇಮ್ ತು ಮೈ ರೂಂ" ಎಂದು ಗಂಭೀರವಾಗಿ ತನ್ನದೆ ಶೈಲಿಯಲ್ಲಿ ಹೇಳಿದ. ಸುತ್ತಲಿದ್ದವರೆಲ್ಲ ನಗುತ್ತಿದ್ದರು. "ಕಿಟಿಕಿ ಬಾಗಿಲು ಸಂದುಗಳಲ್ಲಿ ಎಲ್ಲೆಂದರಲ್ಲಿ ತೂರಬಹುದು ಅಂತ ಅವನ್ನ ಆಯ್ಕೆ ಮಾಡಿದ್ದಾರೆ" ಎಂದೆ. ಮತ್ತೆ ಎಲ್ಲರೂ ನಕ್ಕರು. "ಅನಂತರ ಏನು ಮಾಡಿದೆ?" ಜಗಬಂಧು ತನ್ನದೇ ಶೈಲಿಯಲ್ಲಿ ಕೇಳಿದ. "ಐ ಜೆಸ್ಟ್ ತ್ರೂ ದೆಂ ಔಟ್" ಎಂದ. ಬಡತನಕ್ಕೆ ಪ್ರಾಸ್ಟೂಷನ್ ಒಂದು ಕಾರಣ. ಹಾಗೆ ನೋಡಿದರೆ ಸಿಂಗಾಪೂರ್ ಹಾಂಗ್‌ಕಾಂಗ್ ಕೊಲಲಂಪೂರ್‌ಗಳಲ್ಲಿ ಪ್ರಾಸ್ಟೂಷನ್ ನಡೆಯುತ್ತದೆ. ಅಭಿವೃದ್ಧಿ ಶೀಲ ದೇಶಗಳಲ್ಲೂ ಗಂಡಸರನ್ನು ಹೆಂಗಸರು, ಹೆಂಗಸರನ್ನು ಗಂಡಸರು ಬದಲಾಯಿಸುತ್ತಲೆ ಇರುತ್ತಾರೆ. ಇಂಗ್ಲೆಂಡಿನ ಪ್ರಧಾನಿ ಮಾರ್ಗ್ರೆಟ್ ಥ್ಯಾಚರ್ ೮ ಜನ ಗಂಡಸರನ್ನು ಬದಲಾಯಿಸಿದ್ದಾರೆ. ಸಿರಿತನವಿರಲಿ ಬಡತನವಿರಲಿ ಹೆಣ್ಣು ಗಂಡು ನಡುವಿನ ಆಕರ್ಷಣೆ ಪ್ರಪಂಚವೆಲ್ಲ ಒಂದೇ. ಕಾರಣಗಳು ಮಾತ್ರ ಹಲವು. ಒಟ್ಟಿನಲ್ಲಿ ಇದೆಲ್ಲದರ ಮೇಲೆಯೂ ಚೀನಾ ತನ್ನ ಕಮ್ಯೂನಿಷ್ಟ್ ಸರಕಾರದ ಹಿಡಿತದಿಂದ ಇಷ್ಟು ದೊಡ್ಡ ಜನಸಂಖ್ಯೆಯ ದೇಶವನ್ನು ಸ್ವಲ್ಪ ಮಟ್ಟಿಗಾದರೂ ಶಿಸ್ತಿನಿಂದ ಇಟ್ಟಿರುವುದು ಕಾಣಿಸುತ್ತದೆ. ಭಾರತಕ್ಕಿಂತ ಇಲ್ಲಿನ ಜನ ಹೆಚ್ಚು ಶಿಸ್ತನ್ನು ಪಾಲಿಸುತ್ತಿದ್ದಾರೆ ಹಾಗೂ ದೇಶದ ಅಭಿವೃದ್ಧಿಯಲ್ಲಿ ತಮ್ಮನ್ನು ಹೆಚ್ಚಾಗಿ ತೊಡಗಿಸಿಕೊಂಡಿದ್ದಾರೆ ಎನ್ನುವುದು ಮಾತ್ರ ನಿಜ.



ಶಾಲೆ ಮತ್ತು ಮಕ್ಕಳು

ಚೀನಿಯರು ಮೊದಲಿಗೆ ದಿಕ್ಕು ಸೂಚಿಸುವ ಕಾಂಪಾಸ್, ಫೋರ್ಸ್‌ಲೀನ್, ಉಣ್ಣೆ ಮತ್ತು ಕಾಗದವನ್ನು ಪ್ರಪಂಚಕ್ಕೆ ಕೊಡುಗೆಯಾಗಿ ನೀಡಿದರು.

ಪ್ರಾಥಮಿಕ ಮತ್ತು ಮಧ್ಯಮಿಕ ಶಾಲೆಗಳಲ್ಲಿ ಓದುವ ಮಕ್ಕಳು "ನನ್ನ ಬ್ಯಾಗು ನಮ್ಮ ತರಗತಿಯಲ್ಲೆ ದೊಡ್ಡದು, ನಮ್ಮ ಮನೆಯಲ್ಲಿ ಎಲ್ಲರಿಗಿಂತ ಮುಂಚೆ ಶಾಲೆಗೆ ಹೋಗಿ ಕೊನೆಯದಾಗಿ ಬರುವವನು ನಾನೆ. ರಾತ್ರಿ ಹೊತ್ತು ಹೋಂವರ್ಕ್ ಮಾಡಿ ಲೇಟಾಗಿ ಮಲಗುವವನು ನಾನೆ" ಇತ್ಯಾದಿ ಮಾತುಗಳನ್ನು ಮಕ್ಕಳಿಂದ ಕೇಳುವುದು ಅವರ ಬಗ್ಗೆ ಕನಿಕರ ಮೂಡಿಸುತ್ತದೆ. ಚೀನಾದಲ್ಲಿ ಪ್ರಾಥಮಿಕ ಶಾಲೆಯ ಮಗು ಕನಿಷ್ಠ ೨ ಕೆಜಿ ತೂಕದ ಬ್ಯಾಗನ್ನು ಹೆಗಲ ಮೇಲೆ ಹೊರಬೇಕಾಗುತ್ತದೆ. ಜೂನಿಯರ್ ಮಧ್ಯಮಿಕ ಶಾಲೆಯ ಮಕ್ಕಳು ಬೆಳಗ್ಗೆ ೬ ಗಂಟೆಗೆ ಎದ್ದು ಹೊರಟರೆ ಸಾಯಂಕಾಲ ೫ ಗಂಟೆಗೆ ಹಿಂದಿರುಗಿ ಬರುತ್ತವೆ. ಬಹಳಷ್ಟು ಶಾಲೆಗಳ ಅಧ್ಯಾಪಕರು ಮಕ್ಕಳಿಗೆ ಮನೆಯಲ್ಲಿ ಹೋಂವರ್ಕ್ ಮಾಡಲು ಕೊಟ್ಟಿರುತ್ತಾರೆ. ವಾರದ ಕೊನೆ ಈ ಮಕ್ಕಳಿಗೆ ವಿಶ್ರಾಂತಿ ದೊರಕುವುದೆಂದರೆ ದೊಡ್ಡ ಭಾಗ್ಯವೆ ಸರಿ. ಹೆಚ್ಚು ಮಕ್ಕಳಿಗೆ ಓದುವುದೆಂದರೆ ಹಿಂಸೆ. ತಮ್ಮ ಮಕ್ಕಳು ತಮ್ಮಂತೆ ಆಟ ಅಡುವ ಭಾಗ್ಯವನ್ನೆ ಕಳೆದುಕೊಂಡಿದ್ದಾರೆ ಎನ್ನುವುದು ಪೋಷಕರ ಅಳಲು.

ಇದು ಹೀಗೆ ಮುಂದುವರಿದರೆ ಮಕ್ಕಳು ಮನೋವೈಫಲ್ಯಗಳಿಗೆ ಸಿಲುಕಿಕೊಳ್ಳುತ್ತಾರೆ ಎನ್ನುವುದು ಶಿಕ್ಷಣ ತಜ್ಞರು ಮತ್ತು ಬುದ್ಧಿ ಜೀವಿಗಳ ಯೋಚನೆಯಾಗಿದೆ. ವಿದ್ಯಾಧಿಕಾರಿಯೊಬ್ಬರು ಹೇಳುವಂತೆ ಏಷಿಯಾದಲ್ಲಿಯೆ ಹೆಚ್ಚು ವಿಷಯಗಳನ್ನು ಚೀನಿ ಶಾಲೆ ಮಕ್ಕಳು ಓದುತ್ತಿದ್ದು ಹೆಚ್ಚು ಒತ್ತಡಕ್ಕೆ ಒಳಗಾಗಿದ್ದಾರಂತೆ. ಇದರಿಂದ ಮಕ್ಕಳ ಮನೋಸ್ಥಿತಿಗೆ ದಕ್ಕೆಯಾಗಿ ಅವರ ಜ್ಞಾನದ ಆತ್ಮಸ್ಥೈರ್ಯ ಕುಗ್ಗಿ, ದೈಹಿಕ ಕುಂಟಿತಕ್ಕೆ ಒಳಗಾಗುವ ಸಾಧ್ಯತೆಗಳಿವೆ ಎಂದು ನಂಬಲಾಗಿದೆ.

೨೦೦೧ ರಲ್ಲಿ ವಿದ್ಯಾಮಂತ್ರಿಗಳು ಒಂದು ದೂರವಾಣಿ ಸಭೆಯನ್ನು ನಡೆಸಿ ಮಕ್ಕಳ ಓದಿನ ಹೊರೆಯನ್ನು ಹೇಗೆ ಕಡಿಮೆ ಮಾಡಬೇಕೆಂದು ಚರ್ಚೆ ನಡೆಸಿದರು. ಈ ಚರ್ಚೆಯಲ್ಲಿ ತಿಳಿದುಬಂದಂತೆ ಹೆಚ್ಚು ವಿಷಯಗಳುಳ್ಳ ಪಠ್ಯ ಪುಸ್ತಕಗಳು, ತರಬೇತಿಗಳು, ಪರೀಕ್ಷೆಗಳು, ಸ್ಪರ್ಧೆಗಳು ಮತ್ತು ಹೆಚ್ಚೆಚ್ಚು ಹೋಂವರ್ಕ್ ಮಕ್ಕಳ ಮೇಲೆ ಒತ್ತಡವನ್ನು ತಂದಿದೆ ಎಂದು ತಿಳಿಯಿತು.



ಚೀನಾ ಭಾಷೆ ಕಲಿಯುತ್ತಿರುವ ವಿದೇಶಿಯರು

ಇದರ ನಂತರ ಮಂತ್ರಿಗಳು ದೇಶದಾದ್ಯಂತ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿಗೆ ವರದಿ ಕಳುಹಿಸಿ ಮಕ್ಕಳ ಮೇಲಿನ ಹೊರೆಯನ್ನು ಕಡಿತಗೊಳಿಸುವಂತೆ ಮತ್ತು ಇದನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರುವಂತೆ ಆದೇಶಿಸಲಾಯಿತು. ಶಾಲೆಗಳ ಮೇಲೆ ನಿಗಾ ವಹಿಸುವಂತೆ ಅಧಿಕಾರಿಗಳ ತಂಡಗಳನ್ನು ನೇಮಿಸಲಾಯಿತು. ಶಾಲೆಗಳು ಮೂರು ಅಥವಾ ಆರು ತಿಂಗಳ ಕೊನೆಯಲ್ಲಿ ವಿದ್ಯೆಯ ಗುಣುಮಟ್ಟದ ವರದಿಯನ್ನು ತಯಾರಿಸುತ್ತಿದ್ದವು. ಈ ವರದಿಗೆ ಮೊದಲಿಗೆ ವಿದ್ಯಾರ್ಥಿಗಳಿಂದ ಅಂಕಗಳನ್ನು, ಅಧ್ಯಾಪಕರಿಂದ ಗ್ರೇಡ್ಸನ್ನು, ಪೋಷಕರಿಂದ ತಮ್ಮ ಮಕ್ಕಳ ಚಟುವಟಿಕೆಗಳ ಬಗ್ಗೆ ಅಂಕಗಳನ್ನು ತೆಗೆದುಕೊಂಡು ಕೊನೆಯದಾಗಿ ಎಲ್ಲವನ್ನು ಕೂಡಿ ಸರಾಸರಿ ತೆಗೆದು ವಿದ್ಯಾರ್ಥಿಗಳ ಗುಣಮಟ್ಟವನ್ನು ಅಳೆಯುತ್ತಿದ್ದರು. ಇದರಿಂದ ಶಾಲೆಯ ಒಳಗೆ ಮತ್ತು ಹೊರಗಿನ ಚಟುವಟಿಕೆಗಳು ವಿದ್ಯಾರ್ಥಿಯ ಒಟ್ಟಾರೆ ಗುಣಮಟ್ಟ ದೊರಕುತ್ತದೆ.

* * *

ಶಾಳೆ ಮಕ್ಕಳ ಸಮಯವನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲ ಎನ್ನುವುದು ಕೆಲವರ ವಾದ. ಚೀನಾದಲ್ಲಿ ಪ್ರಸ್ತುತ ಹೆಚ್ಚು ಕುಟುಂಬಗಳಲ್ಲಿ ಒಂದೇ ಮಗು ಇದ್ದು,


ತಮ್ಮ ಮುದ್ದು ಮಗುವಿನ ಮೇಲೆ ಹೆಚ್ಚು ಒತ್ತಡ ತರಲು ಪೋಷಕರು ಹಿಂದೆ ಮುಂದೆ ನೋಡುತ್ತಿರುವುದರಿಂದ ಮಕ್ಕಳು ಓದುವುದರಲ್ಲಿ ಸಹಜವಾಗಿಯೆ ಕುತೂಹಲವನ್ನು ಕಳೆದುಕೊಳ್ಳುತ್ತಿದ್ದಾರಂತೆ. ಈ ಕಾರಣದಿಂದ ಕಡಿಮೆ ಸಿಲಬಸ್, ಕಡಿಮೆ ಓದು ಅವರನ್ನು ಸೋಮಾರಿಗಳನ್ನಾಗಿ ಮಾರ್ಪಡಿಸುವುದಕ್ಕೆ ಕಾರಣವಾಗಿದೆ. ಹಾಗಾಗಿ ಶಾಲೆ ಮಕ್ಕಳ ಮೇಲೆ ಸ್ವಲ್ಪ ಮಟ್ಟಿಗೆ ಓದಿನ ಒತ್ತಡ ಇರಲೇಬೇಕು ಎನ್ನುವುದು ಕೆಲವರ ವಾದ. ವಿಧೇಯ ಮಕ್ಕಳು ಓದಿನಲ್ಲಿ ಹೆಚ್ಚೆಚ್ಚು ಆಸಕ್ತಿ ತೋರಿಸಿದರೆ ಅವಿಧೇಯ ಮಕ್ಕಳು ಓದದೆ ಮನೆಯಲ್ಲಿ ಮತ್ತು ಶಾಲೆಯಲ್ಲಿ ದಾಂಧಲೆ ನಡೆಸುತ್ತಿವೆ. ಇನ್ನೂ ಕೆಲವು ಮಕ್ಕಳು ಇದೇ ಸಾಕೆಂದು ಯಾವಾಗಲೂ ಟಿವಿ, ಕಂಪ್ಯೂಟರುಗಳ ಮುಂದೆ ಕುಳಿತು ಕಾಲ ಕಳೆಯುತ್ತಿವೆ.

ಬುದ್ಧಿಜೀವಿಗಳು ಕೆಲವರು ಹೇಳುವಂತೆ, ಹೋಂವರ್ಕ್ ಮಾಡುವುದರಲ್ಲಿ ಸಡಲಿಕೆ ಇರಬೇಕು. ಶಾಲೆಯ ತರಗತಿಗಳ ನಂತರ ಒಂದು ಮಾದರಿ ತರಗತಿ ಇರಬೇಕು. ಇಲ್ಲಿ ಮಕ್ಕಳ ಮನಸು ಮನೋವೃದ್ಧಿಯಾಗುವ ಭಿನ್ನವಾದ ಚಟುವಟಿಕೆಗಳನ್ನು ನಡೆಸಬೇಕು. ಅವರ ಯೋಚನಾಶಕ್ತಿ ಬೆಳೆಯುವಂತೆ ನೋಡಿಕೊಳ್ಳಬೇಕು. ಇದಕ್ಕಾಗಿ ಇಲ್ಲಿ ಶಾಲೆಯ ಸಿಬ್ಬಂದಿ, ಪೋಷಕರು ಮತ್ತು ಸಾರ್ವಜನಿಕರು ಒಟ್ಟುಗೂಡಿ ಕೆಲಸ ಮಾಡಬೇಕು ಎನ್ನುವ ಆಲೋಚನೆಗಳು ಪ್ರಸ್ತುತ ಚೀನಾದಲ್ಲಿ ನಡೆಯುತ್ತಿವೆ. ಕೆಲವು ಕಡೆ ಇದನ್ನು ಈಗಾಗಲೆ ಅನುಷ್ಠಾನಗೊಳಿಸಲಾಗಿದೆ.

ಈ ಹೊತ್ತಿನಲ್ಲಿ ಮಕ್ಕಳ ನೀತಿ, ಬುದ್ಧಿಶಕ್ತಿ, ಕಲೆ, ವೈಜ್ಞಾನಿಕ ಮನೋಭಾವ, ದೈಹಿಕಶಕ್ತಿ, ಉದ್ಯೋಗ ಕೌಶಲ್ಯ ಇತ್ಯಾದಿಗಳನ್ನು ಗುರುತಿಸಿ ಆ ಮಗುವಿಗೆ ಅದೇ ಜಾಡಿನಲ್ಲಿ ತರಬೇತಿ ಕೊಡಬೇಕು ಎನ್ನುವುದು ಇದರ ಒಟ್ಟಾರೆ ಉದ್ದೇಶ. ಇದರ ಜೊತೆಗೆ ಮಕ್ಕಳಿಗಾಗಿ ಹೆಚ್ಚೆಚ್ಚು ವಿಜ್ಞಾನ-ತಂತ್ರಜ್ಞಾನದ ಮ್ಯೂಸಿಯಂಗಳನ್ನು, ಸಂಗ್ರಾಲಯಗಳನ್ನು, ಗರಡಿ ಮನೆಗಳನ್ನು, ಮನೋವಿಕಾಸಕ್ಕೆ ಹಾದಿಯಾಗುವ ಇತರ ಯಾವುದೇ ರೀತಿಯ ಉಲ್ಲಾಸ ಪಡಿಸುವ ವಿಷಯಗಳನ್ನು ಮಕ್ಕಳಿಗೆ ತೋರಿಸಿ ಅದರಲ್ಲಿ ತೊಡಗಿಸಿಕೊಳ್ಳುವಂತೆ ಮಾಡಬೇಕಿದೆ. ಹಾಗೆ ಡಿಗ್ರಿ ಮತ್ತು ಸ್ನಾತಕೋತ್ತರ ಡಿಗ್ರಿ ಪಡೆದಿರುವ ಒಳ್ಳೆ ಅಧ್ಯಾಪಕರನ್ನು ಶಾಲೆಗಳಲ್ಲಿ ನೇಮಿಸಿಕೊಳ್ಳುವುದು ಮತ್ತು ಅವರಿಗೆ ಒಳ್ಳೆ ಸಂಬಳ ಕೊಡುವುದು ಮುಖ್ಯ. ಈ ಎರಡು ವಿಷಯಗಳನ್ನು ಗಮನಿಸದೆ ಅಧ್ಯಾಪಕರಿಂದ ಹೆಚ್ಚು ನಿರೀಕ್ಷಿಸುವುದು ಕಷ್ಟ ಎನ್ನುವುದನ್ನು ತಿಳಿದುಕೊಂಡಿರುವ ತಜ್ಞರು ಈ ನಿಟ್ಟಿನಲ್ಲಿ ಕೆಲಸ ನಿರ್ವಹಿಸಲು ಮುಂದಾಗಿದ್ದಾರೆ.

ಶಾಲೆಗಳೆ ಮಕ್ಕಳಿಗೆ ಎಲ್ಲವನ್ನೂ ಹೇಳಿಕೊಡಲು ಸಾಧ್ಯವಿಲ್ಲ. ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ಬೆಳೆಸುವಲ್ಲಿ ಶಾಲೆಗಳ ಜೊತೆಗೆ ಪೋಷಕರು ಮತ್ತು ಸಮಾಜವು ಅಷ್ಟೇ ಮುಖ್ಯವಾಗಿದೆ. ನಮ್ಮ ದೇಶದಲ್ಲಿ ಅಕ್ಷರಸ್ಥರ ಸಂಖ್ಯೆ ತೀರ ಕಡಿಮೆ ಇರುವುದರಿಂದ ಮಕ್ಕಳ ಓದಿನ ಬಗ್ಗೆ ಮತ್ತು ಅವರ ಹೋಂವರ್ಕ್ ಬಗ್ಗೆ ನಿರಕ್ಷರ ಪೋಷಕರು ಏನೂ ಮಾಡಲಾರದ ಸ್ಥಿತಿ ಇದೆ. ದೇಶದ ಸಮಸ್ತ ಜನರಿಗೆ ಕನಿಷ್ಠ ಅಕ್ಷರ ಜ್ಞಾನ ಕೂಡಬೇಕಾದುದು

ದೇಶದ ಕರ್ತವ್ಯವಾಗಿದೆ. ಆದರೆ ಅದನ್ನು ಸಾಧಿಸಬೇಕಾದರೆ ನಮ್ಮ ದೇಶಕ್ಕೆ ಇನ್ನೂ ಎಷ್ಟು ದಶಕಗಳು ಬೇಕೊ ಎನೋ?



ಚೀನಾ ದೇಶದ ಗ್ರಾಮೀಣ ಪ್ರದೇಶದ ಒಂದು ಶಾಲೆ

ಚೀನಾ ಸರಕಾರ ಶಾಲೆಗಳಲ್ಲಿ ಮಕ್ಕಳ ಮೇಲಿನ ಹೆಚ್ಚು ಸಿಲಬಸ್ ಮತ್ತು ಹೋಂವರ್ಕ್ ಹೊರೆಯನ್ನು ಕಡಿಮೆ ಮಾಡಿದ ಮೇಲೆ ಪೋಷಕರು ತಮ್ಮ ಮಕ್ಕಳನ್ನು ಮನೆ ಪಾಠಕ್ಕೆ ಕಳುಹಿಸತೊಡಗಿದರು. ಹಣವಂತ ಪೋಷಕರು ತಮ್ಮ ಮನೆಗಳಿಗೆ ಅಧ್ಯಾಪಕರನ್ನು ಕರೆಸಿಕೊಂಡು ಮಕ್ಕಳಿಗೆ ಪಾಠ ಹೇಳಿಸತೊಡಗಿದರು. ಜೊತೆಗೆ ಪೋಷಕರು ತಮಗೆ ಇಷ್ಟವಾದ ಮತ್ತು ಅಧ್ಯಾಪಕರು ಹೇಳಿದ ಹೇರಳ ಪುಸ್ತಕಗಳನ್ನು ಮಕ್ಕಳಿಗೆ ಕೊಡಿಸುತ್ತ ಮನೆಗಳಲ್ಲಿಯೆ ಅವರ ಮೇಲೆ ಒತ್ತಡ ಹೇರತೊಡಗಿದರು.

ಪೋಷಕರು ತಮ್ಮ ಮಕ್ಕಳ ಮೇಲೆ ಏರುವ ಒತ್ತಡ ಮತ್ತು ಅವರ ಮೇಲೆ ಇಟ್ಟಿರುವ ನಿರೀಕ್ಷೆ ಶಾಲೆಗಳಿಗಿಂತ ಹೆಚ್ಚಾಗಿದೆ. ಬಹಳಷ್ಟು ಅಧ್ಯಾಪಕರು ಮಕ್ಕಳು ಹೆಚ್ಚು ಅಂಕಗಳನ್ನು ತೆಗೆದುಕೊಳ್ಳುವುದರ ಬಗ್ಗೆ ಗಮನ ಹರಿಸಿದರು. ಪೋಷಕರು ಸಹ ತಮ್ಮ ಮಕ್ಕಳ ಬಗ್ಗೆ ಹೆಚ್ಚು ಮೆಟರೀಲಿಸ್ಟಿಕ್ ಅಂದರೆ ಹೆಚ್ಚು ಹಣ ಸಂಪಾದಿಸುವ, ಇಲ್ಲ ದೊಡ್ಡ ಮೊತ್ತದ ಸಂಬಳ ಪಡೆಯುವ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವಂತೆ ಒತ್ತಾಯಿಸತೊಡಗಿದರು. ಅಧ್ಯಾಪಕರು ಮತ್ತು ಪೋಷಕರು ವಿದ್ಯಾರ್ಥಿಗಳಿಗೆ ಇಷ್ಟವಾದ ವಿಷಯಗಳನ್ನು ತೆಗೆದುಕೊಳ್ಳುವಲ್ಲಿ ಸಹಕಾರ ತೋರಿಸುತ್ತಿಲ್ಲ. ಈ ಕಾರಣದಿಂದ ಪೋಷಕರು ಮತ್ತು ಅಧ್ಯಾಪಕರ ಬಗ್ಗೆ ವಿದ್ಯಾರ್ಥಿಗಳು ಮನಸ್ತಾಪ ಬೆಳೆಸಿಕೊಳ್ಳುತ್ತಿರುವುದಾಗಿ ತಿಳಿದುಬರುತ್ತದೆ.



ಹೊಸ ತಲೆಮಾರು

ಈ ತಲೆಮಾರು ಅತ್ಯುತ್ತಮವಾದುದು ಮತ್ತು ವರ್ತಮಾನದ ಸುಧಾರಣೆಯ ಕಡೆಗೆ ಹೊಸ ಹೆಜ್ಜೆಯಾಕುತ್ತ ದೇಶವನ್ನು ಪ್ರಗತಿಯ ಪಥದಲ್ಲಿ ಮುನ್ನಡೆಸುತ್ತದೆ ಎಂಬುದಾಗಿ ಹೆಚ್ಚು ಚೀನಿಯರು ನಂಬಿದ್ದಾರೆ. ಚೀನಾದ ಹೊಸ ತಲೆಮಾರಿನ ಯುವಕ ಯುವತಿಯರು ಈಗ ಹೊಸ ಹೊಸ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಅವರು ಕೂದಲುಗಳನ್ನು ಬಣ್ಣ ಬಣ್ಣವಾಗಿ ಡೈಮಾಡಿಕೊಳ್ಳುತ್ತಿದ್ದಾರೆ. ವಿವಿಧ ರೀತಿಯ ಮಾಲೆಗಳನ್ನು ಎದೆಗಳ ಮೇಲೆ ಹಾಕಿಕೊಂಡು, ಮಣಿಕಟ್ಟುಗಳ ಮೇಲೆ ವಿಧ ವಿಧ ಮಣಿಗಳನ್ನು ಕಟ್ಟಿಕೊಳ್ಳುತ್ತಾರೆ. ನಾಸಿಕೆಗಳ ಮೇಲೆ ಮೂಗುತಿಗಳು ಹೊಳೆಯುತ್ತಿದ್ದರೆ, ಕಿವಿಗಳಲ್ಲಿ ಓಲೆಗಳು ಓಲಾಡುತ್ತಿವೆ. ತೆರೆದ ಎದೆಗಳ ಮೇಲೆ ಹಲೋ ಕಿಟ್ಟಿ ಎಂಬುದಾಗಿ ಪಚ್ಚೆ ಹಾಕಿಕೊಳ್ಳುತ್ತಾರೆ. ಬಣ್ಣ ಬಣ್ಣದ ಉಡುಪುಗಳ ಮೇಲೆ ಇನ್ನಿಲ್ಲದ ವಿನ್ಯಾಸಗಳು ಆವರಿಸಿಕೊಂಡಿವೆ. ಹೆಚ್ಚಾಗಿ ಕಪ್ಪು ಮತ್ತು ಮಿಂಚುವ ಬಣ್ಣಗಳ ಉಡುಪುಗಳನ್ನು ಧರಿಸಿ ಉದ್ದ ಮತ್ತು ಎತ್ತರವಾದ ಬೂಟುಗಳನ್ನು ತೊಟ್ಟಿರುತ್ತಾರೆ. ಹುಡುಗರು ಹುಡುಗಿಯರು ತೋಳತೆಕ್ಕೆಗಳಲ್ಲಿ ಬಂದಿಯಾಗಿ ದ್ವಿಚಕ್ರ ವಾಹನಗಳಲ್ಲಿ ಬುರ್ರನೆ ರಸ್ತೆಗಳಲ್ಲಿ ವೇಗವಾಗಿ ಹಾರಿಹೋಗುತ್ತಿರುತ್ತಾರೆ.

ಕಂಪ್ಯೂಟರುಗಳಿಗೆ ಮೆತ್ತಿಕೊಂಡಿರುವ ಇವರು ಆನ್‌ಲೈನ್, ಈ-ಮೇಲ್‌ಗಳ ಮೂಲಕ ವ್ಯವಹರಿಸುತ್ತಿರುತ್ತಾರೆ. ಇಂಟರ್‌ನೆಟ್‌ಗೆ ತಗಲಿಕೊಂಡರೆಂದರೆ ಅದರಲ್ಲಿ ನೇತಾಡುತ್ತಲೆ ಇರುತ್ತಾರೆ. ಆದರೆ ತಮ್ಮ ಹಿಂದಿನ ತಲೆಮಾರುಗಳಿಗಿಂತಲೂ ಹೆಚ್ಚು ವಿಷಯಗಳನ್ನು ತಿಳಿದುಕೊಂಡಿರುತ್ತಾರೆ. ಮುದ್ದು ಮುಖಗಳ ಇವರು ಯಾವಾಗಲೂ ನಗು ನಗುತ್ತಲೆ ಇರುತ್ತಾರೆ. ತಮಗೆ ತೋಚಿದ ವಿಷಯಗಳನ್ನೇ ಮಾಡುತ್ತಾರೆ. ಹಿಂದಿನ ತಲೆಮಾರಿನ ಜನರಿಗೆ ವಿಸ್ಮಯವಾಗಿ ಕಾಣುವ ಇವರೆ ಇಂದಿನ ಅತ್ಯಾಧುನಿಕ ಯುವಕ ಮತ್ತು ಯುವತಿಯರು.

ಕೆಲವು ವರ್ಷಗಳ ಹಿಂದೆ ಈ ತಲೆಮಾರಿನವರನ್ನು ಜಪಾನ್ ಮತ್ತು ತೈವಾನ್‌ನಲ್ಲಿ

ಎಕ್ಸ್ ಮತ್ತು ವೈ ಎಂದು ಕರೆಯುತ್ತಿದ್ದರು. ಆದರೆ ಅಮೆರಿಕಾದಲ್ಲಿ ಬಹಳ ಹಿಂದೆಯೆ ಈ ಹೆಸರುಗಳು ಇದ್ದವು. ಪ್ರಸ್ತುತ ಹಿಂದಿನ ತಲೆಮಾರಿನವರು ಇವರನ್ನು ಸಹಿಸಿಕೊಳ್ಳುವುದರ ಜೊತೆಗೆ ಹೊಸ ಹೊಸ ಆಲೋಚನೆಗಳಿರುವವರು ಎಂದು ಆಧರಿಸುತ್ತಿದ್ದಾರೆ. ಇವರಿಗೆ ಸರಿಯಾದ ತಿಳುವಳಿಕೆಯನ್ನು ಹೇಳಿ ಮಾಮೂಲಿ ಮನುಷ್ಯರನ್ನಾಗಿಸಬಹುದು ಎನ್ನುವುದು ಸಾಮಾನ್ಯ ಚೀನಿಯರ ನಂಬಿಕೆ.

ನಾವು ಹೊಸ ತಲೆಮಾರಿನವರು ಅತ್ಯಂತ ಮುಖ್ಯವಾದ ಸ್ಥಿತ್ಯಂತರ ಕಾಲದಲ್ಲಿದ್ದು ಆಧುನಿಕ ತಂತ್ರಜ್ಞಾನದಿಂದ ಹಳೆ ಚೀನಾ ಪ್ರಪಂಚದ ಜೊತೆಗೆ ಹೆಜ್ಜೆ ಹಾಕುತ್ತಿದ್ದೇವೆ. ಹಳೆಯ ಸಂಸ್ಕೃತಿ ಮತ್ತ ಚರಿತ್ರೆಯನ್ನು ಕಟ್ಟಿಕೊಂಡು ಏನು ಮಾಡಬೇಕಾಗಿದೆ? ಭವಿಷ್ಯ ಮುಖ್ಯ ಎನ್ನುವುದು ಹೊಸ ತಲೆಮಾರಿನ ವಿದ್ಯಾರ್ಥಿಗಳ ವಾದ. ಒಟ್ಟಿನಲ್ಲಿ ಈ ತಲೆಮಾರು ಅತ್ಯುತ್ತಮವಾದುದು ಮತ್ತು ವರ್ತಮಾನದ ಸುಧಾರಣೆಯ ಕಡೆಗೆ ಹೊಸ ಹೆಜ್ಜೆಯಾಕುತ್ತ ದೇಶವನ್ನು ಪ್ರಗತಿಯ ಪಥದಲ್ಲಿ ಮುನ್ನಡೆಸುತ್ತದೆ ಎನ್ನುವುದು ಹೆಚ್ಚು ಚೀನಿಯರ ವಾದ.

* * *

ಡೈ ಹಚ್ಚಿದ ಕೂದಲು ದಕ್ಷಿಣ ಕೊರಿಯಾದ ಬ್ಯಾಗಿ ಧಿರಸುಗಳನ್ನು ಹೆಚ್ಚಾಗಿ ಬಳಸುವ ಈ ಹೊಸ ತಲೆಮಾರಿನ ಯುವ ಜನತೆಯ ತುಟಿಗಳಲ್ಲಿ ಯಾವಾಗಲು ಜಪಾನ್ ಮತ್ತು ಕೊರಿಯ ಹಾಡುಗಾರರು ಮತ್ತು ನಟ ನಟಿಯರ ಹೆಸರುಗಳೆ ಸುಳಿದಾಡುತ್ತಿರುತ್ತವೆ. ಇವರಲ್ಲಿ ಬಹಳಷ್ಟು ಮಂದಿ ತಾವು ಜಪಾನ್ ಮತ್ತು ಕೊರಿಯಾ ದೇಶಕ್ಕೆ ಸೇರಿದವರು ಎನ್ನುವಂತೆ ಹೆಮ್ಮೆ ಪಟ್ಟುಕೊಳ್ಳುತ್ತಿರುತ್ತಾರೆ. ಈ ದೇಶಗಳ ನಟ ನಟಿಯರ ಚಿತ್ರಗಳನ್ನು ನೋಡುವುದು ಮತ್ತು ಸಂಗೀತ ಕೇಳುವುದೆಂದರೆ ಇವರಿಗೆ ಎಲ್ಲಿಲ್ಲದ ಉತ್ಸಾಹ. ಈಗೀಗ ಹಾಲಿವುಡ್ ಮತ್ತು ಇನ್ನಿತರ ದೇಶಗಳ ಇಂಗ್ಲಿಷ್ ಸಿನಿಮಾಗಳನ್ನು ನೋಡುತ್ತಾರೆ. ಹಾಗೆ ಜಪಾನ್ ಮತ್ತು ಕೊರಿಯಾ ಹೋಟಲುಗಳ ತಿಂಡಿಗಳೆಂದರೆ ಇವರಿಗೆ ಎಲ್ಲಿಲ್ಲದ ಪ್ರೀತಿ. ಇತ್ತೀಚೆಗೆ ಮೆಕ್‌ಡೊನಾಲ್ಡ್ ಆಹಾರ ಇವರ ತಿನಿಸುಗಳ ಪಟ್ಟಿಯಲ್ಲಿ ಸೇರಿಕೊಂಡಿದೆ. ಎಂಬತ್ತರ ದಶಕದಲ್ಲಿ ಹಾಂಗ್‌ಕಾಂಗ್ ಮತ್ತು ತೈವಾನ್ ದೇಶಗಳನ್ನು ಅನುಕರಿಸುತ್ತಿದ್ದರೆ, ತೊಂಬತ್ತರ ದಶಕದಲ್ಲಿ ಜಪಾನ್ ಮತ್ತು ಕೊರಿಯಾ ದೇಶಗಳನ್ನು ಅನುಕರಿಸುತ್ತಿದ್ದರು.

ಬಹಳಷ್ಟು ಹಣವುಳ್ಳ ವಿದ್ಯಾರ್ಥಿಗಳು ಬೀಜಿಂಗನ ಜಿಡಾನ್ ಪ್ರದೇಶದಲ್ಲಿರುವ ದಕ್ಷಿಣ ಕೊರಿಯಾ ಮಾರ್ಕೆಟ್ಟಿಗೆ ವಾರಕ್ಕೆ ಒಂದು ಸಲವಾದರು ಭೇಟಿ ನೀಡುತ್ತಾರೆ. ಇವರು ಅಲ್ಲಿನ ಮಾಮೂಲಿ ಗಿರಾಕಿಗಳಾಗಿದ್ದು, ಅಂಗಡಿಯವರು ಹೊಸ ವಿನ್ಯಾಸದ ಬಟ್ಟೆ, ಚಪ್ಪಲಿ ಇನ್ನಿತರ ವಸ್ತುಗಳನ್ನು ಇವರಿಗೆ ವಿಶೇಷವಾಗಿ ತೋರಿಸುತ್ತಾರೆ. ಕೆಲವು ಹುಡುಗಿಯರು ಯಾವುದೇ ಹೊಸ ವಿನ್ಯಾಸದ ಚಪ್ಪಲಿಗಳು ಬಂದರು ಅವುಗಳನ್ನು ಮೆಟ್ಟಿ ಬಿಜೀಂಗ್‌ನಲ್ಲಿ ಇನ್ನೆಲ್ಲೂ ದೊರಕುವುದಿಲ್ಲ ಎಂದು ಹೆಮ್ಮೆಯಿಂದ ಓಡಾಡುತ್ತಿರುತ್ತಾರೆ.

ಬೀಜಿಂಗ್‌ನ ರಸ್ತೆಗಳಲ್ಲಿ ಎಲ್ಲರೂ ನಮ್ಮ ಚಪ್ಪಲಿಗಳನ್ನು ನೋಡಿ ನಮ್ಮನ್ನು ನಿಲ್ಲಿಸಿ ಈ ಚಪ್ಪಲಿಗಳು ಎಲ್ಲಿ ದೊರಕುತ್ತವೆ? ಎಂದು ಕೇಳುತ್ತಾರೆ ಎಂದು ಹೇಳುವುದು ಇವರಿಗೆ ಎಲ್ಲಿಲ್ಲದ ಹೆಮ್ಮೆ.



ಆಧುನಿಕ ಫ್ಯಾಷನ್ ಯುವತಿಯರು

ಹೊಸ ತಲೆಮಾರಿನ ಈ ಜನಾಂಗಕ್ಕೆ ಹೊಸಹೊಸ ಹವ್ಯಾಸಗಳೆಂದರೆ ಭಾರಿ ಕುತೂಹಲ ಇಂಟರ್‌ನೆಟ್ ಮೂಲಕ ನಡೆಸಿದ ಒಂದು ಸಮೀಕ್ಷೆಯ ಪ್ರಕಾರ ಶೇಕಡ ೨೫.೫ ಜನರು ಸ್ಪೈಡರ್ ಕ್ರೀಡೆಯನ್ನು ಆನಂದಿಸುತ್ತಾರೆ. ಶೇಕಡ ೩೧ ಜನರು

ಇದು ಅಸಹಜ ಎಂದರೆ, ಶೇಕಡ ೧೪.೬ ಜನರು ಇದು ಅವಿವೇಕಿತನ ಎನ್ನುತ್ತಾರೆ. ಉಳಿದ ೧೯.೧ ಜನರು ಇದು ಯುವಜನರ ಮನಸ್ಥಿತಿಯನ್ನು ಬೇರೆ ಕಡೆಗೆ ತಿರುಗಿಸುವ ವಿಧಾನ ಎನ್ನುತ್ತಾರೆ.

ಇನ್ನೂ ಕೆಲವರು ಒಳ್ಳೆ ಪತ್ನಿ ಅಥವಾ ಪತಿಯನ್ನು ಪಡೆಯುವುದಕ್ಕೆ ಮುಂಚೆ ಕೆಲವರ ಜೊತೆಗೆ ಪ್ರೀತಿಯ ಸಂಬಂಧಗಳನ್ನು ಬೆಳೆಸಿ ಅನುಭವ ಪಡೆದುಕೊಳ್ಳುವುದು ಒಳ್ಳೆಯದು ಎನ್ನುತ್ತಾರೆ. ಇತ್ತೀಚಿನ ಜನಾಂಗ ರಚಿಸಿರುವ ಬಹಳಷ್ಟು ಸಾಹಿತ್ಯ ಖಾಸಗಿ ಅನುಭವ ಮತ್ತು ಇಂದ್ರಿಯ ಸುಖದ ಅಭಿಲಾಷೆಗಳಿಂದ ಕೂಡಿರುವುದೆ ಆಗಿದೆ. ಇದರ ಜೊತೆಗೆ ರೆಸ್ಟಾರೆಂಟ್ ಮತ್ತು ಬಾರಿನ ದೃಶ್ಯಗಳು ಮತ್ತು ಸೆಕ್ಸ್ ಅನುಭವಗಳಿಂದ ಕೂಡಿರುತ್ತವೆ. ಜೊತೆಗೆ ಹೆಚ್ಚಾಗಿ ನಿರುದ್ಯೋಗಗಳು, ಅರೆಬರೆ ಉದ್ಯೋಗ ಹೊಂದಿರುವವರು ಮತ್ತು ಪ್ರತ್ಯೇಕವಾಗಿ ಜೀವಿಸುವವರ ಬಗೆಗಿನ ವಿಚಾರಗಳೆ ಹೆಚ್ಚೆಚ್ಚು ಇರುತ್ತವೆ ಎಂದು ದೂರಲಾಗುತ್ತಿದೆ.

ಪ್ರಸ್ತುತ ಚೀನಾದಲ್ಲಿ ೩ ವರ್ಷದ ಮಗೂ ಕೂಡ ತಾಯಿ, ತಂದೆಯರು ಹೊಡೆದರೆ ೧೧೦ ಸಂಖ್ಯೆಗೆ ಫೋನ್ ಮಾಡಿ ಪೋಲಿಸರನ್ನು ಸಂಪರ್ಕಿಸುತ್ತವೆ. ಪೋಷಕರು ಮಕ್ಕಳನ್ನು ಹೊಡೆಯುವುದು ಅಪರಾಧ ಎನ್ನುವುದು ಮಕ್ಕಳಿಗೆ ಗೊತ್ತಿದೆ. ಅಂಗಡಿಯಲ್ಲಿ ಕೆಲಸ ಮಾಡುವವರು ಯಾವುದೇ ರೀತಿಯಲ್ಲಿ ಮಕ್ಕಳಿಗೆ ಮೋಸ ಮಾಡಿದರೆ ಅವರು ಕೂಡಲೆ ಅಂಗಡಿ ಮಾಲಿಕನ ಹತ್ತಿರಕ್ಕೆ ಹೋಗಿ ದೂರು ಸಲ್ಲಿಸುತ್ತವೆ. ಚೀನಾ ಮಕ್ಕಳೂ ಭಾರತೀಯ ಮಕ್ಕಳಂತೆ ಪುಸ್ತಕಗಳ ಮೂಟೆಗಳನ್ನು ಬೆನ್ನುಗಳ ಮೇಲಾಕಿಕೊಂಡು ಹೋಗುತ್ತವೆ. ಮಕ್ಕಳ ಮೇಲೆ ಓದಿನ ಒತ್ತಡ ಎಷ್ಟಿದೆಯೆಂದರೆ ಅವರು ಕೆಲವೊಮ್ಮೆ ಮಾನಸಿಕ ಒತ್ತಡಗಳಿಂದ ರೋಗಿಗಳಾಗಿ ಪರಿವರ್ತನೆಗೊಳ್ಳುತ್ತಾರೆ. ಕೆಲವೊಂದು ಸಲ ಭಾರಿ ಒತ್ತಡದಿಂದ ವಿದ್ಯಾರ್ಥಿಗಳು ಪೋಷಕರನ್ನು ಸಾಯಿಸಿದ ಘಟನೆಗಳೂ ನಡೆದಿವೆ.

ಚೀನಾ ಸರಕಾರ ತಂದಿರುವ ಕಾನೂನಿನ ಪ್ರಕಾರ ಯುವಕರು ಮತ್ತು ಯುವತಿಯರು ಸರಕಾರದಿಂದ ಅಪ್ಪಣೆ ದೊರೆತ ಮೇಲೆಯೆ ಮದುವೆ ಮಾಡಿಕೊಳ್ಳಬೇಕು. ಯುವಕನಿಗೆ ೨೨ ವರ್ಷ, ಯುವತಿಗೆ ೨೦ ವರ್ಷ ಆಗಿರಲೇಬೇಕು. ಇನ್ನೊಂದು ಸಮಸ್ಯೆ ಎಂದರೆ ಪದವಿ ಪೂರ್ವ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮದುವೆ ಮಾಡಿಕೊಳ್ಳುವಂತಿಲ್ಲ. ಪ್ರಸ್ತುತದ ಪ್ರಶ್ನೆಯೆಂದರೆ ಈ ಕಾನೂನನ್ನು ಮುಂದುವರಿಸಬೇಕೆ ಅಥವಾ ೨೨ ವರ್ಷ ಮತ್ತು ೨೦ ವರ್ಷ ವಯಸ್ಸಾದವರು ಪದವಿ ಪೂರ್ವ ತರಗತಿಗಳಲ್ಲಿ ಓದುತ್ತಿದ್ದರು ಮದುವೆ ಮಾಡಿಕೊಳ್ಳಲು ಬಯಸಿದರೆ ಅಪ್ಪಣೆ ಕೊಡಬೇಕೆ ಎನ್ನುವ ಪ್ರಶ್ನೆ ಸರಕಾರ ಮತ್ತು ಸಾರ್ವಜನಿಕರನ್ನು ಕಾಡುತ್ತದೆ. ಈ ರೀತಿಯ ಕಾನೂನು ಬೇರೆ ಯಾವುದೇ ದೇಶದಲ್ಲೂ ಇಲ್ಲ.

ನಾನು ಗಮನಿಸಿದ ಹಾಗೆ ಚೀನಾದಲ್ಲಿ ಸರಕಾರ ನಡೆಸುವ ಒಂದು ಶಾಲೆ, ಕಾಲೇಜು ಅಥವಾ ತರಬೇತಿ ಕೇಂದ್ರ ಎಂದರೆ ಅಲ್ಲಿ ಬರೀ ತರಗತಿಗಳು ಮಾತ್ರ

ನಡೆಯುವುದಿಲ್ಲ. ತರಗತಿಗಳು ನಡೆಯುವ ಸ್ವಚ್ಛವಾದ ಕೋಣೆಗಳು. ಒಳ್ಳೆಯ ಗ್ರಂಥಾಲಯ, ವೈದ್ಯಕೀಯ ತಪಾಸಣೆ ಕೇಂದ್ರ, ಮಾನಸಿಕ ಒತ್ತಡಗಳನ್ನು ಶಮನಗೊಳಿಸುವ ಕೇಂದ್ರ, ಆರೋಗ್ಯ ಕೇಂದ್ರ, ದೈಹಿಕ ಫಿಟ್ನೆಸ್ ಕೇಂದ್ರ, ಸೋಲಾರ್ ಶಕ್ತಿಯಿಂದ ನಡೆಯುವ ಟಾಯ್‌ಲೆಟ್‌ಗಳು ಮತ್ತು ಸ್ನಾನದ ಕೋಣೆಗಳು. ಆಟದ ಮೈದಾನಗಳು, ಈಜುಕೊಳಗಳು ಮತ್ತು ವಸತಿ ಸಮುಚ್ಚಯಗಳು. ಹೀಗೆ ಎಲ್ಲವೂ ಇರುತ್ತವೆ.



ಆರೋಗ್ಯ ಮತ್ತು ಸ್ಥೂಲಕಾಯ

ಕ್ರಿ.ಶ.೧೯೪೯ರಲ್ಲಿ ಚೀನಾದ ಕಮ್ಯೂನಿಷ್ಟರು ಮೊದಲ ಬಾರಿಗೆ ರಾಷ್ಟ್ರೀಯವಾದಿಗಳನ್ನು ಸೋಲಿಸಿ ದೇಶವನ್ನು ತಮ್ಮ ಕೈಗೆ ತೆಗೆದುಕೊಂಡರು.

ಚೀನಿಯರು ದುಂಡನೆಯ ಕೆನ್ನೆಗಳ ಪುಟಾಣಿಗಳನ್ನು ಹೆಚ್ಚು ಇಷ್ಟಪಡುತ್ತಾರೆ. ಕಾರಣ ಅವು ನೋಡಲು ಸುಂದರವಾಗಿರುತ್ತವೆ. ಆದರೆ ಪ್ರಸ್ತುತ ಹೆಚ್ಚು ಪೋಷಕರು ಅದೇ ತಮ್ಮ ದುಂಡನೆ ಕೆನ್ನೆಯ ಮಕ್ಕಳಿಂದ ಯೋಚನೆಗೆ ಒಳಗಾಗಿದ್ದಾರೆ. ಒಂದು ಅಂದಾಜಿನ ಪ್ರಕಾರ ೧೯೮೨ ರಿಂದ ೨೦೦೨ಕ್ಕೆ ೧೫ ವರ್ಷಗಳ ಒಳಗಿನ ಮಕ್ಕಳಲ್ಲಿ ಶೇಕಡ ೧೫ ರಿಂದ ೩೦ ರಷ್ಟು ಮಕ್ಕಳು ಓವರ್ ವೆಯಿಟ್‌ನಿಂದ ನರಳುತ್ತಿದ್ದಾರೆ.

ಚೀನಾ ದೇಶ ಪ್ರಗತಿಯನ್ನು ಸಾಧಿಸುತ್ತಿದ್ದಂತೆ ಹೆಚ್ಚೆಚ್ಚು ಪೋಷ್ಟಿಕಾಂಶದ ಆಹಾರ ತಿನ್ನುವ ಐಶ್ವರ್ಯವಂತರ ಮಕ್ಕಳು ಕೊಬ್ಬಿನಿಂದ ದೇಹದ ಭಾರವನ್ನು ಹೆಚ್ಚಿಸಿಕೊಂಡು ಅನೇಕ ರೋಗಗಳಿಂದ ನರಳುತ್ತಿದ್ದಾರೆ. ಅದರಲ್ಲೂ ಮುಖ್ಯವಾಗಿ ಸ್ಥೂಲಕಾಯ, ರಕ್ತದೊತ್ತಡ, ಕೊಬ್ಬಿನಿಂದ ಪಿತ್ತಾಶಯ, ಹೃದಯ ಮತ್ತು ಮೆದುಳಿಗೆ ಸಂಬಂಧ ಪಟ್ಟ ರೋಗಗಳಿಗೆ ತುತ್ತಾಗಿದ್ದಾರೆ. ಇಂತಹ ಕಾಯಿಲೆಗಳು ಸಾಧಾರಣ ಚೀನಿಯರಲ್ಲಿ ಕಾಣಿಸುತ್ತಿಲ್ಲ. ಪ್ರಸ್ತುತ ಚೀನಾದಲ್ಲಿ ಲಕ್ಷಾಂತರ ಜನರು ಸ್ಥೂಲಕಾಯದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಹಾಗೆ ಒಂದು ದಿನಕ್ಕೆ ಸರಾಸರಿ ೩ ಸಾವಿರ ಜನರು ರಕ್ತದೊತ್ತಡ ಕಾಯಿಲೆಗೆ ಗುರಿಯಾಗುತ್ತಿದ್ದಾರೆ. ಅಂದರೆ ಒಂದು ವರ್ಷಕ್ಕೆ ಸುಮಾರು ಶೇಕಡ ೨.೫ ರಷ್ಟು ಜನರು ಈ ಕಾಯಿಲೆಗೆ ಸಿಲುಕಿಕೊಳ್ಳುತ್ತಿದ್ದು ಪ್ರಸ್ತುತ ಚೀನಾದಲ್ಲಿ ಒಂದು ಕೋಟಿ ರಕ್ತದೊತ್ತಡ ರೋಗಿಗಳಿದ್ದಾರೆ.

ಚೀನಾದ ಚರಿತ್ರೆಯನ್ನು ಒಮ್ಮೆ ಮೆಲಕು ಹಾಕಿದರೆ ಚೀನಾ ಯಾವಾಗಲೂ ಹಸಿವು ಮತ್ತು ಯುದ್ಧಗಳಿಂದ ನರಳುತ್ತಿದ್ದುದ್ದೆ ಹೆಚ್ಚು. ಬಡತನ ಮತ್ತು ಹಸಿವಿನಿಂದ ನರಳುತ್ತಿದ್ದ ಚೀನಾದಲ್ಲಿ ಒಂದು ಕಾಲದಲ್ಲಿ ಪ್ಲೇಗು, ಮಲೇರಿಯಾ, ಸಿಡುಬು ಮುಂತಾದ

ರೋಗಗಳಿಂದ ಲಕ್ಷಾಂತರ ಜನರು ಪ್ರಾಣ ಕಳೆದುಕೊಳ್ಳುತ್ತಿದ್ದರು. ಕ್ರಿ.ಶ.೧೯೪೯ ರಲ್ಲಿ ಚೀನಾದಲ್ಲಿ ಗಣರಾಜ್ಯ ಸ್ಥಾಪನೆಯಾದ ಮೇಲೆ ಚೀನಾ ಸರಕಾರ ಆರೋಗ್ಯದ ಬಗ್ಗೆ ಹೆಚ್ಚು ಗಮನ ಹರಿಸಿ ಅನೇಕ ಸಾಂಕ್ರಾಮಿಕ ರೋಗಗಳನ್ನು ಪೂರ್ಣವಾಗಿ ನಿಯಂತ್ರಣಕ್ಕೆ ತಂದಿತು. ಒಂದು ಕಾಲದಲ್ಲಿ ಚೀನಿಯರನ್ನು "ಸಿಕ್‌ಮೆನ್ ಆಫ್ ಈಸ್ಟ್ ಏಷೀಯಾ" ಎಂದು ಕರೆಯುವುದನ್ನು ದೂರಮಾಡಿದರು. ೧೯೪೯ರಲ್ಲಿ ಚೀನಿಯರ ಸರಾಸರಿ ಆಯುಷ್ಯ ೩೫ ವರ್ಷಗಳಿದ್ದು, ಈಗ ಅದು ೭೨ ವರ್ಷಕ್ಕೆ ತಲುಪಿದೆ. ಇದು ಯಾವುದೇ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಜನರ ಹೆಚ್ಚು ಸರಾಸರಿ ಆಯುಷ್ಯ. ಅಂದರೆ ಈಗ ಚೀನಾದಲ್ಲಿ ವೃದ್ಧರ ಸಮಸ್ಯೆಗಳು ಪ್ರಾರಂಭವಾಗಿವೆ. ಭಾರತೀಯರ ಸರಾಸರಿ ಆಯುಷ್ಯ ಈಗ ೬೫ ವರ್ಷಗಳಿಗಿಂತ ಹೆಚ್ಚು.



ಅಭಿವೃದ್ಧಿ ಹೊಂದುತ್ತಿರುವ ಚೀನಾ ದೇಶದಲ್ಲಿ ಸ್ಥೂಲಕಾಯ ಮಕ್ಕಳ ಸಮಸ್ಯೆ

ಸಿರಿತನ ಅನಾರೋಗ್ಯಕ್ಕೆ ಕಾರಣ ಎನ್ನುವುದು ಒಂದು ಗಾದೆ ಮಾತು. ಈಗ ಜನರು ಹೆಚ್ಚು ಪೋಷ್ಠಿಕ ಆಹಾರ ಮತ್ತು ತಿಂಡಿಗಳನ್ನು ತಿನ್ನುತ್ತಾ ಕಡಿಮೆ ವ್ಯಾಯಾಮ ಮಾಡುವುದು ಸ್ಥೂಲಕಾಯಕ್ಕೆ ಮುಖ್ಯಕಾರಣ ಎನ್ನಲಾಗಿದೆ. ಕೆಲವರು ಇತ್ತೀಚೆಗೆ ಇದಕ್ಕೆ ಬದಲಾಗಿ ಹೆಚ್ಚು ಹಸಿರು ತರಕಾರಿ, ಹಣ್ಣು ಮತ್ತು ಕಾಳುಗಳನ್ನು ತಿಂದು ವ್ಯಾಯಾಮ ಮಾಡುವುದರ ಬಗ್ಗೆ ಹೆಚ್ಚು ಗಮನ ಹರಿಸಿದ್ದಾರೆ. ಹಲವರು ಮನೆಗಳ ಒಳಗೆ ಫಿಟ್‌ನೆಸ್ ಕೇಂದ್ರಗಳನ್ನು ಸ್ಥಾಪನೆ ಮಾಡಿಕೊಂಡು ಬೆವರು ಸುರಿಸುತ್ತಿದ್ದಾರೆ. ಆದರೆ ಪಲಿತಾಂಶ ಮಾತ್ರ ಸೊನ್ನೆ.

* * *

ನನ್ನ ಮಗ ಮೆಕ್‌ಡೊನಾಲ್ಡ್ ಮತ್ತು ಕೆಎಫ್‌ಸಿ ತಿಂಡಿಗಳೆಂದರೆ ಪ್ರಾಣಬಿಡುತ್ತಾನೆ. ನನ್ನನ್ನು ಕೊಡಿಸುವಂತೆ ದಿನಾಗಲೂ ಹಿಂಸೆ ಮಾಡುತ್ತಾನೆ. ಅವನ ವಯಸು ಈಗ ತಾನೆ ೮ ವರ್ಷ. ತೂಕವೊ ೪೫ ಕೆಜಿ. ನನಗೆ ಏನು ಮಾಡಬೇಕೊ ಅರ್ಥವಾಗುತ್ತಿಲ್ಲ. ಅನೇಕ ಚೀನಿಯರು ತಮ್ಮ ಮಕ್ಕಳ ಬಗ್ಗೆ ಈ ರೀತಿ ಹೇಳಿಕೊಳ್ಳುತ್ತ ಚಿಂತಾಕ್ರಾಂತರಾಗಿದ್ದಾರೆ. ಬೀಜಿಂಗ್‌ನಲ್ಲಿ ನಡೆಸಿದ ಆರೋಗ್ಯ ತಪಾಸಣೆ ಒಂದರಲ್ಲಿ ಪ್ರಾಥಮಿಕ ಶಾಲೆಯ



15 ವರ್ಷದ ಸ್ಥೂಲಕಾಯ ಬಾಲಕ

ಶೇಕಡ ೨೭.೮ ಮಕ್ಕಳು ಓವರ್ ವೇಯಿಟ್‌ನಿಂದ ನರಳುತ್ತಿದ್ದಾರೆ. ಈ ದಡೂತಿ ಮಕ್ಕಳು ಇನ್ನಿತರ ಮಕ್ಕಳಿಗಿಂತ ಎಲ್ಲಾ ರೀತಿಯ ಚಟುವಟಿಕೆಗಳಲ್ಲೂ ಹಿಂದೆ ಬಿದ್ದಿದ್ದಾರೆ. ಅದರಲ್ಲೂ ಆಟಗಳಲ್ಲಂತೂ ಭಾರಿ ಹಿಂದೆ. ಅಂದರೆ ಈ ಮಕ್ಕಳ ಮುಂದಿನ ಭವಿಷ್ಯ ಫಲಪ್ರದವಲ್ಲ ಎನ್ನುತ್ತಾರೆ ಅಧ್ಯಾಪಕರು. ಪ್ರಸ್ತುತ ಚೀನಾ ಐಶ್ವರ್ಯವಂತರ ಮಕ್ಕಳು ಅಭಿವೃದ್ಧಿ ದೇಶಗಳ ಸ್ಥೂಲಕಾಯ ಮಕ್ಕಳನ್ನು ಸರಿಗಟ್ಟುವಲ್ಲಿ ಸಫಲರಾಗಿದ್ದಾರೆ. ಜೊತೆಗೆ ಅವರ ಚಟುವಟಿಕೆಗಳು ಕುಂಟಿತಗೊಂಡು ಅನೇಕ ರೋಗಗಳಿಗೆ ಈಡಾಗುತ್ತಿದ್ದಾರೆ. ಸ್ಥೂಲಕಾಯ ಮಕ್ಕಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೆ ಹೋಗುತ್ತಿದೆ.

೨೦೦೦ನೇ ವರ್ಷದಲ್ಲಿ ಚೀನಾ ನಗರಗಳ ಮಕ್ಕಳಲ್ಲಿ ಶೇಕಡ ೧೦ ರಷ್ಟು ಗಂಡು ಮಕ್ಕಳು ಸ್ಥೂಲಕಾಯರಾದರೆ, ಬೀಜಿಂಗ್‌ನಲ್ಲಿ ಶೇಕಡ ೧೫ ರಷ್ಟು ಸ್ಥೂಲಕಾಯ ಮಕ್ಕಳು ಇದ್ದರು. ೧೯೯೦ರಲ್ಲಿ ಇವರ ಸಂಖ್ಯೆ ಮೇಲಿನ ಸಂಖ್ಯೆಯ ಅರ್ಧ ಮಾತ್ರ ಇತ್ತು. ಈಗ ಉಳಿದಿರುವ ಉಪಾಯವೆಂದರೆ ಮಕ್ಕಳಿಗೆ ಎಷ್ಟು ಪೋಷ್ಟಿಕಾಂಶ ಆಹಾರ ಬೇಕೋ ಅಷ್ಟು ಮಾತ್ರ ಕೊಡಬೇಕಾಗಿದೆ. ಓಡುವುದು, ನಡೆಯುವುದು, ಬೈಸಿಕಲ್ ತುಳಿಯುವುದು, ಈಜುವುದು ಮುಂತಾದ ವ್ಯಾಯಾಮಗಳಲ್ಲಿ ಮಕ್ಕಳನ್ನು ತೊಡಗಿಸಬೇಕಾಗಿದೆ. ಒಟ್ಟಿನಲ್ಲಿ ಕೊಬ್ಬು ಮಕ್ಕಳ ದೇಹದಲ್ಲಿ ಶೇಖರಣೆಯಾಗದಂತೆ ನೋಡಿಕೊಳ್ಳಬೇಕಿದೆ.



ನಿರುದ್ಯೋಗ ಮತ್ತು ಭ್ರಷ್ಟತೆ

ಪ್ರಸ್ತುತ ಒಂದು ವರ್ಷಕ್ಕೆ ೨೦೦ ಬಿಲಿಯನ್ ಯುಯಾನ್ ಹಣವನ್ನು ಚೀನಾದಲ್ಲಿ ಕಪ್ಪು ಹಣದ ವ್ಯವಹಾರದಲ್ಲಿ ತೊಡಗಿಸುತ್ತಿರುವುದಾಗಿ ಅಂದಾಜು ಮಾಡಲಾಗಿದೆ. ಇದು ೨೦೦೧ ರಲ್ಲಿ ಚೀನಾದ ಶೇಕಡ ೨ ಜಿಡಿಪಿಗೆ ಸಮ. ಅಂದರೆ ೯.೫೯ ಟ್ರಿಲಿಯನ್ ಯುಯಾನ್ ಅಥವಾ ಶೇಕಡ ೧೧ ರಷ್ಟು ಹಣ. ಇದು ೨೧೨.೨ ಬಿಲಿಯನ್ ಡಾಲರ್ ವಿದೇಶಿ ವಿನಿಮಯಕ್ಕೆ ಸಮ.

ಚೀನಾ ಜಾಗತೀಕರಣಕ್ಕೆ ತೆರೆದುಕೊಂಡಿದ್ದೆ, ಸರಕಾರಿ ಅಧಿಕಾರಿಗಳು, ವ್ಯಾಪಾರಿಗಳು ಮತ್ತು ಹೊರದೇಶಗಳವರು ಸಹ ಚೀನಾದಲ್ಲಿ ಕಪ್ಪು ಹಣವನ್ನು ಪರಿವರ್ತಿಸುವುದು, ಬಡ್ಡಿ ವ್ಯವಹಾರ ನಡೆಸುವುದು, ಲಂಚ ಪಡೆಯುವುದು, ಖಾಸಗಿ ಕಂಪನಿಗಳನ್ನು ಸ್ಥಾಪಿಸಿ ಕಪ್ಪು ಹಣವನ್ನು ಬಿಳಿ ಹಣವನ್ನಾಗಿ ಪರಿವರ್ತಿಸುವುದು ಚೀನಾ ಸರಕಾರಕ್ಕೆ ತಲೆ ನೋವಾಗಿಬಿಟ್ಟಿದೆ. ಇದರಿಂದ ದೇಶದ ಹಣ ಹೊರಗಡೆಗೆ ಹೋಗುತ್ತಿರುವುದು ಕಂಡುಬಂದಿದೆ. ಹಾಗೆ ರಾಜ್ಯಗಳಿಗೆ ಬರುವ ತೆರಿಗೆ ಹಣದ ಪ್ರಮಾಣವೂ ಕಡಿಮೆಯಾಗಿದೆ. ದೇಶಕ್ಕೆ ಬರುತ್ತಿದ್ದ ವಿದೇಶಿ ವಿನಿಮಯವೂ ಕಡಿಮೆಯಾಗಿದೆ. ಇದನ್ನು ತಡೆಗಟ್ಟಲು ಸರಕಾರ ಎರಡು ವಿಶೇಷ ದಳಗಳನ್ನು ಸ್ಥಾಪಿಸಿದೆ.

ಒಂದು ವರ್ಷಕ್ಕೆ ೨೦೦ ಬಿಲಿಯನ್ ಯುಯಾನ್ ಹಣವನ್ನು ಕಪ್ಪು ಹಣದ ವ್ಯವಹಾರದಲ್ಲಿ ತೊಡಗಿಸುತ್ತಿರುವುದಾಗಿ ಅಂದಾಜು ಮಾಡಲಾಗಿದೆ. ಇದು ೨೦೦೧ ರಲ್ಲಿ ಚೀನಾದ ಶೇಕಡ ೨ ಜಿಡಿಪಿಗೆ ಸಮವಾಗಿತ್ತು. ಅಂದರೆ ೯.೫೯ ಟ್ರಿಲಿಯನ್ ಯುಯಾನ್ ಮತ್ತು ಶೇಕಡ ೧೧ ರಷ್ಟು ಅಂದರೆ ೨೧೨.೨ ಬಿಲಿಯನ್ ಡಾಲರ್ ವಿದೇಶಿ ವಿನಿಮಯವಾಗಿತ್ತು. ಈ ಹಣದಿಂದ ಚೀನಾದ ೬೪ ರಷ್ಟು ಬಜೆಟ್‌ನ (೩೯೮ ಬಿಲಿಯನ್ ಯುಯಾನ್) ನಷ್ಟವನ್ನು ತುಂಬುಬಹುದು. ಡ್ರಗ್ ಕಳ್ಳಸಾಗಾಣಿಕೆ, ಕಪ್ಪು ಹಣ ತೊಡಗಿಸುವವರು, ಭ್ರಷ್ಟ ಅಧಿಕಾರಿಗಳು ಮತ್ತು ಕಳ್ಳ ವ್ಯವಹಾರದಿಂದ ದೇಶ

ದೊಡ್ಡ ಪ್ರಮಾಣದಲ್ಲಿಯೆ ಆರ್ಥಿಕ ನಷ್ಟವನ್ನು ಅನುಭವಿಸುತ್ತಿದೆ.

ಪ್ರಪಂಚದ ಅನೇಕ ದೇಶಗಳು ಇದನ್ನು ತಡೆಗಟ್ಟಲು ೧೯೮೦ ರಲ್ಲಿಯೆ ಅನೇಕ ಕಾನೂನುಗಳನ್ನು ತಂದಿದ್ದು, ಚೀನಾ ೧೯೯೭ ರಲ್ಲಿ ತನ್ನ ಕಾನೂನನ್ನು ಇನ್ನಷ್ಟು ಬಿಗಿಗೊಳಿಸಿತ್ತು. ಚೀನಾಗೆ ಭ್ರಷ್ಟ ಸರಕಾರಿ ನೌಕರರದೆ ದೊಡ್ಡ ತಲೆನೋವಾಗಿದೆ. ನ್ಯಾಷನಲ್ ಪೀಪಲ್ಸ್‌ನ ಮಾಜಿ ಕಾಂಗ್ರೆಸ್ ಅಧ್ಯಕ್ಷ ಚೆಂಗ್ ಕೆಜ್ಜಿ ಎಂಬಾತ ತನ್ನ ಪತ್ನಿಯ ಮೂಲಕ ೪೧.೦೯ ಮಿಲಿಯ ಯುಯಾನ್ ಹಣವನ್ನು ಹಾಂಗ್‌ಕಾಂಗ್‌ನ ವ್ಯಾಪಾರಿಗೆ ಬಡ್ಡಿ ವ್ಯವಹಾರಕ್ಕಾಗಿ ನೀಡಿದ್ದ. ಆ ವ್ಯಾಪಾರಿ ಚೆಂಗ್ ಕೆಜ್ಜಿಯ ಪತ್ನಿಗೆ ೧೧.೫ ಮಿಲಿಯನ್ ಯುಯಾನ್ ಬಡ್ಡಿ ನೀಡಿದ್ದ.

ಇದೇ ರೀತಿ ಅನೇಕ ಅಧಿಕಾರಿಗಳು ತಮ್ಮ ಸಂಬಂಧಿಗಳ ಹೆಸರಿನಲ್ಲಿ ಖಾಸಗಿ ಕಂಪನಿಗಳನ್ನು ಸ್ಥಾಪಿಸಿದರು. ಭ್ರಷ್ಟ ಅಧಿಕಾರಿಗಳು ಹಣವನ್ನು ಕೂಡಾಕಿ ನಿವೃತ್ತಿ ಹೊಂದಿದ ಮೇಲೆ ಹಣವನ್ನು ಹಲವು ರೂಪಗಳಲ್ಲಿ ತೊಡಗಿಸಿದರು. ಅನೇಕ ಅಧಿಕಾರಿಗಳು ದೇಶದ ಒಳಗೆ ಮತ್ತು ಹೊರಗೆ ವ್ಯಾಪಾರಿಗಳ ಮೂಲಕ ಹಣವನ್ನು ತೊಡಗಿಸಿದರು. ಇದನ್ನು ತಡೆಗಟ್ಟುವ ಯಾವುದೇ ನಿಯಮಗಳನ್ನು ಕಾನೂನಿನಲ್ಲಿ ಅಳವಡಿಸಲಿಲ್ಲ ಎನ್ನುವುದು ಖೇದದ ವಿಷಯ ಎನ್ನುವುದು ಕೆಲವು ಅಧಿಕಾರಿಗಳ ಅಭಿಪ್ರಾಯ. ಕಮ್ಯೂನಿಷ್ಟ್ ಸರಕಾರ ಹೊಂದಿರುವ ಚೀನಾ ದೇಶದ ಸ್ಥಿತಿಯೆ ಈ ಗತಿಯಾದರೆ ನಮ್ಮ ಮಹಾನ್ ಪ್ರಜಾಪ್ರಭುತ್ವ ದೇಶದ ಗತಿ ಏನಾಗಿರಬೇಕು? ಊಹಿಸೂವುದೆ ಕಷ್ಟ.

* * *

ಪ್ರಸ್ತುತ ಚೀನಿಯರಿಗೆ ಉದ್ಯೋಗದ್ದೆ ಯೋಚನೆ. ಉದ್ದಿಮೆಗಳು ಹೆಚ್ಚು ಓದಿರುವ ವಿದ್ಯಾವಂತರನ್ನು ಮಾತ್ರ ಆರಿಸಿಕೊಳ್ಳುತ್ತಿವೆ. ಹಳ್ಳಿಗಳಿಂದ ನಗರಗಳಿಗೆ ವಲಸೆ ಬರುತ್ತಿರುವವರ ಸಂಖ್ಯೆ ಭಾರತದಂತೆ ಇಲ್ಲಿಯೂ ಹೆಚ್ಚಾಗಿದೆ. ಒಂದು ಲೆಕ್ಕಾಚಾರದಂತೆ ಚೀನಾದ ನಗರಗಳಲ್ಲಿ ಈಗ ತುರ್ತಾಗಿ ಸುಮಾರು ೧ ಕೋಟಿ ಜನರಿಗೆ ಉದ್ಯೋಗ ಸೃಷ್ಟಿಸಬೇಕಾಗಿದೆ. ಹಳ್ಳಿಗಳಲ್ಲಿ ೬೦ ಲಕ್ಷ ಕೆಲಸಗಾರರಿಗೆ ವಿವಿಧ ಉದ್ಯೋಗಗಳಿಗಾಗಿ ತರಬೇತಿಯನ್ನು ನೀಡಬೇಕಾಗಿದೆ. ಇವರ ಜೊತೆಗೆ ೧೫ ಕೋಟಿ ಹಳ್ಳಿಗರು ಕೆಲಸವಿಲ್ಲದೆ ಇದ್ದಾರೆ. ೮ ಕೋಟಿ ಹಳ್ಳಿಗರು ನಗರಗಳಿಗೆ ವಲಸೆ ಹೋದ ಕಾರಣ ನಗರಗಳಿಗೆ ನಿರುದ್ಯೋಗದ ಹೆಚ್ಚು ಒತ್ತಡ ತಗಲಿದೆ. ೨೦ ಲಕ್ಷಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಡಿಗ್ರಿ ಮುಗಿಸಿ ಉದ್ಯೋಗಕ್ಕಾಗಿ ಕಾಯುತ್ತಿದ್ದಾರೆ.

ಇವರ ಜೊತೆಗ ಖಾಸಗೀಕರಣದಿಂದ ಕೆಲಸ ಕಳೆದುಕೊಂಡ ೪೦ ಲಕ್ಷ ನಿರುದ್ಯೋಗಿಗಳು ಇದ್ದಾರೆ. ೨೦೦೩ ರಲ್ಲಿ ೮೦ ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿರುವುದಾಗಿ, ಅದೇ ವರ್ಷದಲ್ಲಿ ಕಾಲೇಜುಗಲ್ಲಿ ಡಿಗ್ರಿ ಮುಗಿಸಿದ ಶೇಕಡ ೬೯ ರಷ್ಟು ೨೦೦೨ ರಿಂದ ೨೦೧೦ರ ನಡುವೆ ೬೦ ಲಕ್ಷ ಗ್ರಾಮಾಂತರ ಜನರನ್ನು ವಿವಿಧ

ಪ್ರಕಾರಗಳಲ್ಲಿ ತರಬೇತಿ ನೀಡಿ ಕೃಷಿಯೇತರ ಉದ್ಯೋಗಗಳಲ್ಲಿ ನೆಲೆಸುವಂತೆ ಮಾಡುವ ಯೋಜನೆಯನ್ನು ಚೀನಾ ಹಾಕಿಕೊಂಡಿದೆ. ೨೦೦೩ರಲ್ಲಿ ಖಾಸಗೀಕರಣದಿಂದ ಕೆಲಸ ಕಳೆದುಕೊಂಡ ೧ ಕೋಟಿ ನಿರುದ್ಯೋಗಿಗಳಿಗೆ ಗುರುತಿನ ಚೀಟಿ ಕೊಟ್ಟು, ಅವರನ್ನು ಕೆಲಸದಲ್ಲಿ ತೊಡಗಿಸುವ ಮರು ಪ್ರಯತ್ನವನ್ನು ನಡೆಸಲಾಗುತ್ತಿದೆ. ಈಗಾಗಲೆ ಚೀನಾದ ಹಲವು ಮುಖ್ಯ ನಗರಗಳಲ್ಲಿ ಕೆಲಸ ಕಳೆದುಕೊಂಡವರು ಮತ್ತು ವಯಸ್ಸಾದವರಿಗೆ ನಿರುದ್ಯೋಗಿ ಭತ್ಯವನ್ನು ನೀಡಲಾಗುತ್ತಿದೆ.

ಪ್ರಸ್ತುತ ಚೀನಾದಲ್ಲಿ ಸರಾಸರಿ ಆದಾಯ ೮೦೦ ಯುಎಸ್ ಡಾಲರುಗಳು. ಇದು ಮಧ್ಯಮ ವರ್ಗದ ಕೆಳಮಟ್ಟದ ಆದಾಯ. ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೨೦ ರಷ್ಟು ಜನರು ದೇಶದ ೮೦ ರಷ್ಟು ಹಣವನ್ನು ಬ್ಯಾಂಕುಗಳ ಉಳಿತಾಯ ಖಾತೆಗಳಲ್ಲಿ ಜಮೆ ಮಾಡಿದ್ದಾರೆ. ಉಳಿದ ಶೇಕಡ ೮೦ ಜನರ ಉಳಿತಾಯ ಶೇಕಡ ೨೦ ಮಾತ್ರ. ೨೦೦೨ರಲ್ಲಿ ಚೀನಾದ ೧೦ ಲಕ್ಷ ಜನರು ೧ ಮಿಲಿಯನ್ ಯುಯಾನ್‌ಗಿಂತ ಹೆಚ್ಚು ಹಣವನ್ನು ಹೊಂದಿದ್ದರೆ, ೧ ವರ್ಷಕ್ಕೆ ೧ ಲಕ್ಷ ಯುಯಾನ್ ಆದಾಯ ಇರುವವರ ಸಂಖ್ಯೆ ಶೇಕಡ ೧ (೧.೪ ಲಕ್ಷ). ನಗರಗಳಲ್ಲಿ ವಾಸಿಸುವ ಜನರ ಸರಾಸರಿ ಆದಾಯ ೭,೭೦೩ ಯುಯಾನ್. ಗ್ರಾಮಾಂತರ ಪ್ರದೇಶದ ೮೩೦ ಮಿಲಿಯ ಜನರು ಕಡಿಮೆ ಆದಾಯ ಹೊಂದಿದ್ದಾರೆ.



ಲಂಚಭ್ರಷ್ಟರು ಮತ್ತು ಶಿಕ್ಷೆ

ಚೀನಾದ ಹಿಮಾಲಯಗಳು ಕೂಡ ಪ್ರಪಂಚದ ಒಂದು ಎತ್ತರದ ಪರ್ವತ ಶ್ರೇಣಿಗಳಾದರೆ, ಮಧ್ಯ ಚೀನಾದ ಟರ್ಪಾನ್ ಪ್ರದೇಶ ಸಮುದ್ರ ಮಟ್ಟದಿಂದ ೫೦೫ ಅಡಿಗಳ ಕೆಳಗಿದೆ.

ಚೀನಾದ ಕಮ್ಯೂನಿಷ್ಟ್ ಸರಕಾರ ೫೮ ವರ್ಷಗಳ ಕಾಲ ಸರಕಾರ ನಡೆಸಿದ ಮೇಲೆ ಈಗ ಇಕ್ಕಟ್ಟಿಗೆ ಸಿಲುಕಿಕೊಂಡಿದೆ. ಉನ್ನತ ಸ್ಥಾನಗಳಲ್ಲಿರುವ ಸರಕಾರಿ ಅಧಿಕಾರಿಗಳ ಭ್ರಷ್ಟತೆಯಿಂದ ಸರಕಾರ ಒಂದು ಅವರ ಮೇಲೆ ತೀವ್ರ ಕ್ರಮ ಜರುಗಿಸಬೇಕಿದೆ ಇಲ್ಲ ಭಾರತದ ರಾಜಕಾರಣಿಗಳ ರೀತಿಯಲ್ಲಿ ನಡೆದುಕೊಳ್ಳಬೇಕಿದೆ. ಆದರೆ ಚೀನಾ ಸರಕಾರ ಇಂದಿಗೂ ಭ್ರಷ್ಟ ಅಧಿಕಾರಿಗಳನ್ನು ಸಹಿಸಿಕೊಳ್ಳದೆ ಅವರ ಮೇಲೆ ತೀವ್ರ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ೨೦೦೩ ರಲ್ಲಿ ಸರಕಾರ ಕೆಲವು ಭ್ರಷ್ಟ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳ ವಿವರಣೆ ಹೀಗಿದೆ:

೧. ಲಿಯು ಪಂಗ್ರೆನ್: ಈತ ೧.೮೯ ಮಿಲಿಯ ಯುಯಾನ್ ಲಂಚ ಪಡೆದಿದ್ದ. ಬ್ಯೂಟಿಪಾರ್‌ಲರ್ ನಡೆಸುತ್ತಿದ್ದ ಮದುವೆಯಾದ ಮಹಿಳೆಯ ಜೊತೆಗೆ ಅನೇಕ ವರ್ಷಗಳ ಕಾಲ ಅಕ್ರಮ ಸಂಬಂಧ ಹೊಂದಿದ್ದ ಈತನನ್ನು ಸಿಪಿಸಿ ಪಕ್ಷದಿಂದ ಉಚ್ಚಾಟನೆ ಮಾಡಲಾಯಿತು.

೨. ಲಿ ಜಿಯಾಟಿಂಗ್: ಈತ ಯುನಾನ್ ಪ್ರಾವಿನ್ಸ್‌ನ ಮಾಜಿ ರಾಜ್ಯಪಾಲ ಮತ್ತು ಸಿಪಿಸಿ ಸಂಚಾಲಕ. ಆಡಳಿತದಲ್ಲಿದ್ದಾಗ ೧೦ ಜನರಿಗೆ ಅಕ್ರಮವಾಗಿ ಸಹಾಯ ಮಾಡಿದ್ದ. ತನ್ನ ಮಗನ ಮೂಲಕ ಮತ್ತು ತಾನೆ ೩೦ ಸಲ ಒಟ್ಟು ೧೮.೧ ಮಿಲಿಯ ಯುಯಾನ್ ಹಣವನ್ನು ಲಂಚವಾಗಿ ಪಡೆದಿದ್ದ. ಅದನ್ನೆಲ್ಲ ಸರಕಾರ ಮುಟ್ಟುಗೋಲು ಹಾಕಿಕೊಂಡು ಈತನನ್ನು ನೇಣು ಹಾಕಲಾಯಿತು.

೩. ಕಾಂಗ್ ಪುಕುಯಿ: ಹೆಬ್ಬೈ ರಾಜ್ಯದ ಮಾಜಿ ಸಿಪಿಸಿ ಡೆಪ್ಯೂಟಿ ಎಕ್ಸಿಕ್ಯೂಟೀವ್ ಗೌರ್ನರ್. ಈತ ಅಧಿಕಾರದಲ್ಲಿದ್ದಾಗ ೯.೩೬ ಮಿಲಿಯ ಯುಯಾನ್ ಹಣವನ್ನು ಲಂಚ ಪಡೆದಿದ್ದು ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡಿದ್ದ. ಈತನ ಎಲ್ಲಾ ಸ್ವತ್ತನ್ನು

ಸರಕಾರ ವಶಪಡಿಸಿಕೊಂಡು ಗಲ್ಲು ಶಿಕ್ಷೆ ನೀಡಿತು.

೪. ಪನ್ ಗೊಂಗ್ವುಯನ್: ಶೆಂಡಿಂಗ್ ರಾಜ್ಯದ ಕೈಗಾರಿಕ ಮತ್ತು ವಾಣಿಜ್ಯ ಮಾಜಿ ಚೇರ್ಮನ್. ಈತ ಅಧಿಕಾರದಲ್ಲಿದ್ದಾಗ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದ್ದಲ್ಲದೆ ೩೧ ಸಲ ಒಟ್ಟು ೧.೫೪ ಮಿಲಿಯ ಲಂಚವನ್ನು ಪಡೆದಿದ್ದ. ಸರಕಾರ ಎಲ್ಲವನ್ನೂ ವಶಕ್ಕೆ ತೆಗೆದುಕೊಂಡು ಈತನನ್ನು ಜೀವಾವಧಿ ಜೈಲು ಶಿಕ್ಷೆಗೆ ಗುರಿಪಡಿಸಲಾಯಿತು.

೫. ಟಯನ್ ಪೆಂಗ್‌ಕ್ವಿ: ಲಯೊನಿಂಗ್ ರಾಜ್ಯದ ಈತನಿಗೂ ಭ್ರಷ್ಟತೆಯ ಕಾರಣದಿಂದ ಪನ್ ಗೊಂಗ್ವುಯನ್‌ನಂತೆ ಜೀವಾವಧಿ ಜೈಲು ಶಿಕ್ಷೆಗೆ ಗುರಿಪಡಿಸಲಾಯಿತು.

೬. ವಾಂಗ್ ಜೋಂಗ್ಲು: ಬೀಜಿಂಗ್ ರಾಜ್ಯದ ಮಾಜಿ ಅಂತರಾಷ್ಟ್ರೀಯ ಸಮತಿಯ ಮಾಜಿ ಚೇರ್‌ಮನ್. ಅಧಿಕಾರದಲ್ಲಿದ್ದಾಗ ಅನೇಕರಿಂದ ಲಂಚ ಪಡೆದಿದ್ದ. ಸಮತಿಯ ಇತರರನ್ನು ಲೆಕ್ಕಿಸದೆ ತಾನೇ ಸಾಲ ಕೊಟ್ಟು ಸಮತಿಗೆ ಅಪಾರ ಹಣ ನಷ್ಟ ಮಾಡಿದ್ದ. ವಾಂಗ್‌ಗೂ ಶಿಕ್ಷೆ ನೀಡಲಾಯಿತು.



ಕಮ್ಯೂನಿಸ್ಟ್ ಸರ್ಕಾರ ಭ್ರಷ್ಟ ಉನ್ನತ ಅಧಿಕಾರಿಯೊಬ್ಬರನ್ನು ಗಲ್ಲಿಗೇರಿಸುವ ಮುನ್ನ - 2003

೭. ಚೆಂಗ್ ಫಿಗೋನ್: ಈತ ಹೆಬೈ ರಾಜ್ಯದ ಸಿಪಿಸಿ (ಕಮ್ಯೂನಿಸ್ಟ್ ಪಾರ್ಟಿ ಆಫ್ ಚೀನಾ) ಪ್ರಾವಿನ್ಸಿಯಲ್ ಕಮಿಟಿಯ ಸಂಚಾಲಕ ಮತ್ತು ಚೇರ್‌ಮನ್ ಆಗಿದ್ದವನು. ತಾನು ಅಧಿಕಾರ ದಲ್ಲಿದ್ದಾಗ ತನ್ನ ಕುಟುಂಬ ಸದಸ್ಯರ ಮೂಲಕ ಲಂಚ ಮತ್ತು ಹಲವು ಒಡವೆಗಳನ್ನು ಪಡೆದಿದ್ದ. ತನ್ನ ಮಗ ಮತ್ತಿತರರಿಗಾಗಿ ಪ್ರಭಾವ ಮಾಡಿದ ಕಾರಣ ರಾಜ್ಯ ಸರಕಾರಕ್ಕೆ ಹಣದ ನಷ್ಟವಾಗಿತ್ತು. ಈತನ ಬಗ್ಗೆ ಸರಕಾರಕ್ಕೆ ತಿಳಿಸಿದ ಅಧಿಕಾರಿ ಗಳನ್ನು ಬೆದರಿಸದ್ದಲ್ಲದೆ ಕೆಟ್ಟ ಮಾತುಗಳಲ್ಲಿ ನಿಂದಿಸಿದ್ದ. ಮೇಲಿನ ಕಾರಣಗಳಿಂದ ಈತನನ್ನು ಸಿಪಿಸಿ ಪಕ್ಷದಿಂದ ಉಚ್ಛಾಟನೆ ಮಾಡಲಾಯಿತು. ಕೆಲಸದಿಂದ ವಜಾಗೊಳಿಸಿ, ಅಕ್ರಮವಾಗಿ ಗಳಿಸಿದ್ದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು.

ಮೇಲಿನ ತೀರ್ಮಾನಗಳನ್ನು ನೋಡಿದರೆ ಹೆಚ್ಚು ಲಂಚ ಪಡೆದವರಿಗೆ ಗಲ್ಲು ಶಿಕ್ಷೆ ವಿಧಿಸಿರುವುದು ಕಂಡುಬರುತ್ತದೆ. ಕಡಿಮೆ ಲಂಚ ಪಡೆದವರಿಗೆ ಅಥವಾ ಭ್ರಷ್ಟರಿಗೆ

ಜೈಲು ಶಿಕ್ಷೆಯನ್ನು ನೀಡಿರುವುದು ಗೊತ್ತಾಗುತ್ತದೆ.

೧೯೯೭ ರಿಂದ ೨೦೦೨ ರವರೆಗೆ ದೇಶದಾದ್ಯಂತ ಗ್ರಾಮೀಣ ಪ್ರದೇಶಗಳಲ್ಲಿ ೨೮೯೬ ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಯಿತು. ಜಿಲ್ಲಾಮಟ್ಟದ ಕಛೇರಿಗಳಲ್ಲಿ ೨೪೨೨ ಅಧಿಕಾರಿಗಳು, ರಾಜ್ಯಮಟ್ಟದಲ್ಲಿ ೯೮ ಶಾಸಕರ ವಿರುದ್ಧ ಕ್ರಮ ಕೈಗೊಳ್ಳಲಾಯಿತು. ರಾಜ್ಯಮಟ್ಟದಲ್ಲಿ ವರ್ಷಕ್ಕೆ ಶೇಕಡ ೧ ರಿಂದ ೨ ಅಧಿಕಾರಿಗಳು ಭ್ರಷ್ಟರ ಪಟ್ಟಿಗೆ ಹೊಸದಾಗಿ ಸೇರುತ್ತಿರುವುದಾಗಿ ಅಂಕಿ ಅಂಶಗಳು ತಿಳಿದುಬರುತ್ತಿವೆ ಎಂದು ಸರಕಾರ ಹೇಳಿಕೆ ಕೊಟ್ಟಿದೆ.

ಅತ್ಯುನ್ನತ ರಾಜ್ಯಮಟ್ಟದ ಅಧಿಕಾರಿಯಾಗಿದ್ದ ಚೆಂಗ್ ಕೆಜಿ ಎಂಬ ಮಾಜಿ ಎನ್‌ಪಿಸಿ ಚೇರ್‌ಮನ್ ಮತ್ತು ಜಂಷಿಹು ಪ್ರಾವಿನ್ಸ್‌ನ ಚಾಂಗ್‌ಕಿಂಗ್ ಎಂಬ ಉಪಗೌರ್‍ನರ್‌ನನ್ನು ಮೊದಲ ಬಾರಿಗೆ ೨೦೦೩ ರಲ್ಲಿ ಸರಕಾರ ನೇಣುಗಂಬಕ್ಕೆ ಏರಿಸಿತು. ೧೯೯೦ನೇ ದಶಕದ ಎರಡು ವರ್ಷಗಳಲ್ಲಿ ಅಧಿಕಾರಗಳ ಭ್ರಷ್ಟತೆಯಿಂದ ೯೮೭.೫ ಮಿಲಿಯನ್ ಯುಯಾನ್ ಮತ್ತು ೧.೨೬ ಟ್ರಿಲಿಯನ್ ಯುಯಾನ್ ನಷ್ಟವನ್ನು ಸರಕಾರ ಅನುಭವಿಸಿತ್ತು. ಇದು ದೇಶದ ಶೇಕಡ ೧೩ ರಿಂದ ೧೭ ರಷ್ಟು ಜಿಡಿಪಿ ಮೊತ್ತದ ಹಣ.



ಕಮ್ಯೂನಿಸ್ಟ್ ಸರ್ಕಾರ ಉನ್ನತ ಅಧಿಕಾರಿಯೊಬ್ಬರಿಗೆ ಗಲ್ಲು ಶಿಕ್ಷೆ ವಿಧಿಸುತ್ತಿರುವುದು

ಚೀನಾ ಸರಕಾರ ೧೯೭೮ ರಲ್ಲಿ ಕೆಲವು ಸುಧಾರಣೆಗಳನ್ನು ತಂದಿದ್ದೆ ಭ್ರಷ್ಟತೆ ಹೆಚ್ಚುತ್ತಾಹೋಯಿತು. ೧೯೯೦ರ ನಂತರ ಅದು ತೀವ್ರವಾಗಿ ಏರತೊಡಗಿದೆ. ೧೯೯೨ ರವರೆಗೆ ಯಾರೂ ೧ ಲಕ್ಷ ಯುಯಾನ್‌ಗಿಂತ ಹೆಚ್ಚು ಲಂಚವನ್ನು ಪಡೆದಿರಲಿಲ್ಲ. ಅನಂತರ ೨೭ ಅಧಿಕಾರಿಗಳು ೧ ಲಕ್ಷ ಯುಯಾನ್‌ಗಿಂತ ಹೆಚ್ಚು ಲಂಚ ಪಡೆದರೆ ೪ ಅಧಿಕಾರಿಗಳು ೧೦ ಲಕ್ಷಕ್ಕಿಂತ ಹೆಚ್ಚು ಲಂಚವನ್ನು ಪಡೆದಿದ್ದರು.

* * *

ಚೀನಾ ಸರಕಾರ ೧೯೯೮ ರಲ್ಲಿ ಲಿಜಿನ್‌ವೊರನ್ನು ಆಡಿಟರ್ ಜನರಲ್ ಆಗಿ ನೇಮಿಸಿ ದೇಶದಾದ್ಯಂತ ಆಹಾರ ಧಾನ್ಯಗಳ ವ್ಯವಹಾರದಲ್ಲಿ ಹುದುಗಿರುವ ಭ್ರಷ್ಟತೆಯನ್ನು ಹೊರಗೆಡುವುವಂತೆ ಕೋರಿತು. ಲಿಜಿನ್‌ವೊ ಇತರ ೮ ಪಿಭಾಗಗಳ ಜೊತೆಗೆ ಒಟ್ಟು ೫೦ ಸಾಪಿರ ಅಧಿಕಾರಿಗಳನ್ನು ಬಳಸಿಕೊಂಡು ೫ ತಿಂಗಳಲ್ಲಿ ಆಡಿಟ್ ಮಾಡಿ ಮುಗಿಸಿತು. ಈ ಸಮಯದಲ್ಲಿ ೩೦೮೫೦ ಆಹಾರ ಕಂಪನಿಗಳನ್ನು, ೨೪೯೯ ಕೃಷಿ ಅಭಿವೃದ್ಧಿ ಬ್ಯಾಂಕುಗಳನ್ನು, ೨೬೮೧ ಆಹಾರ ಪಿಭಾಗಗಳನ್ನು ಮತ್ತು ೨೪೯೪ ಹಣಕಾಸು ವಿಭಾಗಗಳನ್ನು ಲೆಕ್ಕ ಪರಿಶೋಧನೆಗೆ ಒಳಪಡಿಸಲಾಯಿತು.

೧೯೯೦ ರಲ್ಲಿ ತಯಾರಿಸಿದ ವರದಿಯಂತೆ ಎಲ್ಲಾ ಮೂಲಗಳಿಂದ ಒಟ್ಟು ೫೫.೭೦ ಬಿಲಿಯನ್ ಯುಯಾನ್ ಸರಕಾರಕ್ಕೆ ನಷ್ಟವಾಗಿತ್ತು. ಅನಂತರ ೧೯೯೯ ರಿಂದ ೨೦೦೩ ರವರೆಗೆ ೫ ವರ್ಷಗಳಲ್ಲಿ ದೇಶದಾದ್ಯಂತ ೭೧೦೦೦೦ ಸರಕಾರಿ ಕಛೇರಿಗಳಲ್ಲಿ ಲೆಕ್ಕ ಪರಿಶೋಧನೆಯನ್ನು ನಡೆಸಲಾಯಿತು. ಇದರಿಂದ ೧೦೮.೧ ಬಿಲಿಯನ್ ಯುಯಾನ್ ಹಣವನ್ನು ಸರಕಾರ ವಶಪಡಿಸಿಕೊಂಡು ೬೧೪೨ ಅಧಿಕಾರಿಗಳನ್ನು ಶಿಕ್ಷೆಗೆ ಒಳಪಡಿಸಲಾಯಿತು.

* * *

ನಾವು ಚೀನಾ ಬಿಡಲು ಇನ್ನು ಮೂರು ದಿನಗಳು ಮಾತ್ರ ಉಳಿದಿತ್ತು. ನಾನು ವಾಂಗ್ ಕೋಣೆಯಲ್ಲಿ ಬೀಜಿಂಗ್ ರಿವಿವ್ಯೂ ಪತ್ರಿಕೆಗಳನ್ನು ಹರಡಿಕೊಂಡು ಕುಳಿತಿದ್ದೆ. ಅಲ್ಲಿದ್ದ ಪತ್ರಿಕೆಗಳಲ್ಲಿ ಕೆಲವನ್ನು ಆಯ್ಕೆ ಮಾಡಿಕೊಂಡು "ಇವುಗಳನ್ನು ತೆಗೆದುಕೊಳ್ಳಬಹುದೆ?" ಕೇಳಿದೆ. "ಇರಿ ನಾನೊಂದು ಸಲ ನೋಡ್ತೀನಿ" ಎಂದ ವಾಂಗ್ ಎಲ್ಲವನ್ನು ಒಂದು ಸಲ ನೋಡಿದ ಮೇಲೆ "ನಿಮಗೆ ತೊಂದರೆ ಇಲ್ಲ ಅಂದರೆ ಬೇಕಾಗಿದ್ದನ್ನು ಮಾರ್ಕ್ ಮಾಡಿಕೊಡಿ. ಜಿರಾಕ್ಸ್ ಮಾಡಿಕೊಡ್ತೀನಿ" ಎಂದರು. "ಹಾಗೆ ಮಾಡಿ" ಎಂದು ನಿಧಾನವಾಗಿ ನೋಡಿ ಮಾರ್ಕ್ ಮಾಡಿ ಕೊಟ್ಟೆ.

ನಾನು ವ್ಯಾಲಿಡಿಕ್ಟರಿ ಸಮಾರಂಭದಲ್ಲಿ ಮಾತನಾಡುವ ವಿಷಯವನ್ನು ಲ್ಯಾಪ್‌ಟಾಪ್‌ನಲ್ಲಿ ಟೈಪ್ ಮಾಡಿ ವಾಂಗ್ ಅವರಿಗೆ ತೋರಿಸಿದೆ. ವಾಂಗ್ ಲ್ಯಾಪ್‌ಟಾಪ್ ಪರದೆಯ ಮೇಲೆ ಓದುತ್ತಾ ಓದುತ್ತಾ ಒಳಗೊಳಗೆ ನಗುತ್ತಾ "ಇತ್ ಹೀಸ್ ಗುದ್" ಎಂದರು. ನಾನು "ವಿಷಯ ಹೆಚ್ಚಾಯಿತೊ ಅಥವಾ ಏನಾದರೂ ಬದಲಾಯಿಸಬೇಕೆ?" ಕೇಳಿದೆ. "ಎಲ್ಲೂ ಬದಲಾಯಿಸಬೇಡಿ. ಜಾಸ್ತಿ ಏನೂ ಇಲ್ಲ. ಇಂಗ್ಲಿಷ್ ಭಾಷೆಗಿಂತ ಚೀನಿ ಭಾಷೆಯಲ್ಲಿ ಹೇಳುವಾಗ ತುಂಬಾ ಕಡಿಮೆ ಪದಗಳಿರುತ್ತವೆ" ಎಂದರು. ಅದರಲ್ಲಿ ನಾನು ಸೇರಿಸಿದ್ದ ಕೆಲವು ವಿಷಯಗಳಲ್ಲಿ "ಪೆಂಗ್‌ಷೂಯಿ (ಚೀನಿ ವಾಸ್ತು ಶಾಸ್ತ್ರ) ನಿಮಗೆ ಗೊತ್ತೆ?" ಎಂದರು. "ನಮ್ಮ ಕನ್ನಡ ಭಾಷೆಯಲ್ಲೂ ಪೆಂಗ್‌ಷೂಯಿಯ ಬಗ್ಗೆ ಪುಸ್ತಕಗಳಿವೆ" ಎಂದೆ "ಹೌದಾ?" ಎಂದು ವಾಂಗ್ ನಕ್ಕರು.

ಕೊನೆ ಡಿನ್ನರ್. ಲಾಂಗ್‌ಫಾಗ್‌ನ ಹೊಸ ಹೋಟಲೊಂದಕ್ಕೆ ನಾವು ಮೂವರು

ಸಾಯಂಕಾಲ ೬:೩೦ ಕ್ಕೆ ಹೋದೆವು. ಹೋಟಲಿನ ಹುಡುಗಿಯರು ಸುಸ್ವಾಗತ ಹೇಳಿ ಬರಮಾಡಿಕೊಂಡರು. ನಾವು ಮೂವರು ಮೇಲಿನ ಮಹಡಿಯಲ್ಲಿದ್ದ ಡೈನಿಂಗ್ ಹಾಲ್‌ಗೆ ಹೋದಾಗ ನಮಗಿಂತ ಮುಂಚೆಯೆ ಗಿನಿಯಾದ ನೆರೂಡ, ಕೆನ್ಯಾದ ಜೋಸೆಫ್ ಮತ್ತು ಈಜಿಪ್ಟ್‌ನ್ ಅಹ್ಮದ್ ಕುಳಿತಿದ್ದರು. ಅಹ್ಮದ ರೋಜಾ ದಿನಗಳಾದರಿಂದ ಲಂಚ್ ತೆಗೆದುಕೊಳ್ಳುತ್ತಿರಲಿಲ್ಲ. ಸೂರ್ಯ ಹುಟ್ಟುವುದಕ್ಕಿಂತ ಮುಂಚೆ ಏನು ತಿನ್ನುತ್ತಿದ್ದನೊ ಏನೋ ರಾತ್ರಿ ಮಾತ್ರ ನಮ್ಮ ಜೊತೆಗೆ ಡಿನ್ನರ್ ಮಾಡುತ್ತಿದ್ದ. ಆ ದಿನ ಬೆಳಗ್ಗೆಯಿಂದ ಮಳೆ ಬೀಳುತ್ತಿದ್ದು ಚಳಿ ಹೆಚ್ಚಾಗಿ ಒಂದೇ ಸಮನೆ ಮೈ ನಡುಗುತ್ತಿತ್ತು. ದಕ್ಷಿಣ ಆಫ್ರೀಕಾದಿಂದ ಬಂದಿದ್ದ ನಾಲ್ವರನ್ನು ಬೀಳ್ಕೊಡಲು ಬೆಳಗ್ಗೆ ಹೋಟಲಿಗೆ ಬಂದಿದ್ದ ವಾಂಗ್ ಮತ್ತು ಅವರ ಪತ್ನಿ ಹೋಟಲಿನ ರಿಸಿಪ್ಷನ್ ಹಾಲ್‌ನಲ್ಲಿ ಸಿಕ್ಕಿದ್ದರು.

ಹೋಟಲಿನ ಹೊರಗೆ ಒಂದೇ ಮಳೆ ಬೀಳುತ್ತಿದ್ದು ಮಳೆಯ ದೃಶ್ಯಗಳನ್ನು ನೋಡುತ್ತ ವಾಂಗ್ ಹತ್ತಿರಕ್ಕೆ ಹೋಗಿ "ಮಳೆ ಸುರಿಯುತ್ತಿದೆ" ಎಂದೆ. "ನೀವು ಹೋಗುವುದು ಬೇಡ ಅಂತ ಮಳೆ ಅಳ್ತಿದೆ" ಎಂದರು. ಟಿಪ್ಪು ಸುಲ್ತಾನ್ ಸತ್ತ ೩ ದಿನಗಳು ಶ್ರೀರಂಗಪಟ್ಟಣದಲ್ಲಿ ಧಾರಾಕಾರವಾಗಿ ಮಳೆ ಸುರಿದಿತ್ತಂತೆ. ಯಾಕೋ ಟಿಪ್ಪು ಸುಲ್ತಾನ್ ಜ್ಞಾಪಕಕ್ಕೆ ಬಂದಿದ್ದ. ನಾವು ಕುಳಿತುಕೊಳ್ಳುತ್ತಿದ್ದಂತೆ ವಾಂಗ್ ಮತ್ತು ಅವರ ಪತ್ನಿ ಜೊತೆಗೆ ಸನ್‌ಬಿನ್ ಬಂದಿದ್ದರು. ಬೆಳಗ್ಗೆ ಮಾರ್ಕ್ ಮಾಡಿಕೊಟ್ಟಿದ್ದ ಲೇಖನಗಳನ್ನು ಜೆರಾಕ್ಸ್ ಮಾಡಿ ತಂದಿದ್ದ ವಾಂಗ್ "ಇದೊ ನಿಮ್ಮ ಲೇಖನಗಳು" ಎಂದು ನನ್ನ ಕೈಗೆ ನೀಡಿದರು. "ಥ್ಯಾಂಕ್ಸ್" ಎಂದು ತೆಗೆದುಕೊಂಡೆ.

ಎಂದಿನಂತೆ ಚೀನಾ ಭಕ್ಷ್ಯಗಳು ಒಂದೊಂದಾಗಿ ಬರತೊಡಗಿದವು. "ಇವೊತ್ತು ಕೊನೆ ದಿನ. ಎಲ್ಲರೂ ಸ್ವಲ್ಪ ಕುಡಿಯಿರಿ. ಚೈನಾ ವೈನ್ ಬೇಕೆ?" ವಾಂಗ್ ಕೇಳಿದರು. "ನಮಗೆ ಬೇಡ. ಬೀರೆ ಸಾಕು" ಎಂದಿದ್ದೆ ಬೀರು ಬಾಟಲುಗಳ ಮುಚ್ಚಳಗಳು ತೆಗೆದುಕೊಂಡವು. "ಡಾ.ವಾಂಗ್. ನಾನು ನಿಮ್ಮ ಹತ್ತಿರ ಬಹಳ ಮಾತನಾಡಬೇಕು ಅಂದುಕೊಂಡಿದ್ದೆ. ಆದರೆ ಸಮಯಾನೆ ಸಿಕ್ಕಲಿಲ್ಲ" ಎಂದೆ. "ಹೌದು. ಎಲ್ಲಾ ಈಗಲೇ ಒಂದೇ ಭೇಟಿಯಲ್ಲಿ ಮಾತನಾಡಿಬಿಟ್ಟರೆ ಹೇಗೆ? ಎಲ್ಲವನ್ನು ಒಂದೇ ಸಲಕ್ಕೆ ತಿಳಿದುಕೊಂಡರೆ ಇನ್ನೇನು ಉಳಿಯುತ್ತೆ? ಮತ್ತೆ ನೀವು ಚೀನಾಗೆ ಬರ್ಬೇಕು" ವಾಂಗ್ ಹೇಳಿದರು.

ಅವರ ಮಾತು ಕೇಳಿ ನನಗೆ ನಗು ಬಂದಿತು "ಓಕೆ. ನಿಮ್ಮಲ್ಲಿರುವ ಮದುವೆ ಪದ್ಧತಿಗಳ ಬಗ್ಗೆ ಸ್ವಲ್ಪ ಹೇಳಿ? ನಿಮ್ಮಲ್ಲಿ ಹೆಚ್ಚಾಗಿ ಪ್ರೀತಿಸಿ ಮದುವೆಯಾಗ್ತಾರೋ ಇಲ್ಲ ಅರೆಂಜ್ಡ್ ಮದುವೆ ಮಾಡಿಕೊಳ್ತಾರೋ?" ಎಂದೆ. "ಈಗ ಒಂದು ೨೫ ರಿಂದ ೩೦ ವರ್ಷಗಳ ಹಿಂದಿನವರೆಗೆ ಅರೆಂಜ್ಡ್ ಮದುವೆಗಳೆ ನಡೆಯ್ತಿದ್ದವು. ಆದರೆ ಈಗ ಹುಡುಗ ಹುಡುಗಿ ಮೆಚ್ಚಿಕೊಂಡರೆ ಸಾಕು. ಅನಂತರ ಪೋಷಕರಿಗೆ ತಿಳಿಸಿ ಮದುವೆಯಾಗ್ತಾರೆ" ಎನ್ನುತ್ತಿದ್ದಂತೆ "ಮತ್ತೆ ಸಾಮಾಜಿಕ ಪದ್ಧತಿ ಅಥವಾ ಬಡವರು, ಹಣವಂತರು ಎನ್ನುವ ಬೇಧ ಭಾವಗಳೇನಾದರು ಇದಿಯೆ?" ಕೇಳಿದೆ. "ಇಲ್ಲ. ಅದ್ಯಾವುದೂ ಇಲ್ಲ. ಯಾರು ಯಾರನ್ನಾದರೂ ಪ್ರೀತಿಸಬಹುದು. ಆದರೆ ಹುಡುಗನ ಕಡೆಯಿಂದ ಹುಡುಗಿಯ

ಕಡೆಗೆ ಬಹುಮಾನಗಳು ಕೊಡಬೇಕು. ಟಿವಿ, ಫ್ರಿಜ್ಜು, ಮನೆ, ಸೈಟು, ಹಣ ಇತ್ಯಾದಿ" ಎಂದರು. "ಮತ್ತೆ ಅಕ್ಕನ ಮಗಳೊ ಅತ್ತೆ ಮಗಳೊ ಹೀಗೆ ಸಂಬಂಧಿಗಳಲ್ಲಿ ಮದುವೆಗಳು ನಡೆಯುತ್ತದೆಯೇ?" ಪ್ರಶ್ನಿಸಿದೆ. "ಇಲ್ಲ ಇಲ್ಲ. ಒಂದೇ ಕುಟುಂಬದಲ್ಲಿ ಮದುವೆ ಮಾಡಿಕೊಳ್ಳುವುದಿಲ್ಲ. ರಕ್ತ ಸಂಬಂಧವನ್ನು ಬಿಟ್ಟು, ಅಂದರೆ ಬೇರೆ ಕುಟುಂಬದಲ್ಲಿ ಮದುವೆ ಮಾಡಿಕೊಳ್ತಾರೆ" ಎಂದರು. ಅನಂತರ "ಒಂದು ಪ್ರಾವಿನ್ಸ್ ನವರು ಇನ್ನೊಂದು ಪ್ರಾವಿನ್ಸ್‌ನವರನ್ನ ಮದುವೆ ಮಾಡಿಕೊಳ್ಳಬಹುದು. ಈಗ ನೋಡಿ. ನನ್ನ ಪತ್ನಿಗೂ ನನ್ಗೆ ವಿಶ್ವವಿದ್ಯಾಲಯದಲ್ಲಿ ಓದುವಾಗ ಗೆಳೆತನ ಬೆಳೆಯಿತು. ಅನಂತರ ಮನೆಯಲ್ಲಿ ತಿಳಿಸಿ ಮದುವೆ ಮಾಡಿಕೊಂಡಿವಿ. ಇವಳು ತಾಯ್‌ವಾನ್" ಎಂದರು.

ಇನ್ನು ಮಕ್ಕಳ ಬಗ್ಗೆ ಪ್ರಶ್ನಿಸಿದಾಗ "ಪ್ರಸ್ತುತ ಚೀನಾದಲ್ಲಿ ಕಟ್ಟುನಿಟ್ಟಾಗಿ ಒಂದು ದಂಪತಿಗೆ ಒಂದೇ ಮಗು ಮಾತ್ರ ಇರಬೇಕು. ಸರಕಾರಿ ನೌಕರರಿಗೆ ಇಬ್ಬರು ಮಕ್ಕಳಾದರೆ ಗಂಡ ಹೆಂಡತಿ ಇಬ್ಬರೂ ನೌಕರಿ ಕಳೆದುಕೊಳ್ತಾರೆ. ಇನ್ನು ರೈತರಾದರೂ ಅಷ್ಟೆ. ಅವರು ಎಲ್ಲ ರೀತಿಯ ಸರಕಾರಿ ಸೌಲತ್ತುಗಳನ್ನು ಕಳೆದುಕೊಳ್ತಾರೆ. ಜೊತೆಗೆ ೨೦ ಸಾವಿರ ಯುಯಾನ್ ಹಣವನ್ನು ಸರಕಾರಕ್ಕೆ ದಂಡವಾಗಿ ಕೊಡಬೇಕು" ಎಂದರು. ನಾವು ಕೇಳುತ್ತಿದ್ದವರು ದಂಗುಬಡಿದವರಂತೆ ಅವರನ್ನೇ ನೋಡುತ್ತಿದ್ದೆವು. "ವಾತ್ ಎಬೌತ್ ಇನ್ ಇಂದಿಯಾ?" ಎಂದು ನಮ್ಮ ಕಡೆಗೆ ನೋಡಿದರು. "ಅಷ್ಟೇನು ಸ್ಟ್ರಿಕ್ಟ್ ಇಲ್ಲ. ನಮ್ಮ ಸವಲತ್ತುಗಳನ್ನು ನೋಡಿಕೊಂಡು ಮಕ್ಕಳ ಸಂಖ್ಯೆಯನ್ನು ನಾವೇ ನಿರ್ಧರಿಸಿಕೊಳ್ತೀವಿ" ಎಂದೆ. ನಾನು ಕೆನ್ಯಾದ ಜೋಸೆಫ್ ಬಗ್ಗೆ ಕೇಳಿ ತಿಳಿದುಕೊಂಡಿದ್ದರಿಂದ "ನೋಡಿ ಸರ್. ನಮ್ಮ ಜೋಸೆಫ್, ಅವರ ಪತ್ನಿಗೆ ಬಹಳ ಹಣ ಕೊಟ್ಟು ಸಾಲಗಾರರಾಗಿದ್ದಾರಂತೆ." ಎಂದೆ. ವಾಂಗ್ "ಹೌದೆ? ಎಷ್ಟು ಕೊಟ್ಟಿರಿ?" ಎಂದರು ನಗುತ್ತಾ. ಜೋಸೆಫ್ ತನ್ನದೇ ಶೈಲಿಯಲ್ಲಿ "ತೂ... ಮಚ್. ಹತ್ತು ಹಸು, ಒಂದು ಕುರಿ, ಒಂದು ಎಮ್ಮೆ ಇದು ಪದ್ಧತಿಯಂತೆ ಕೊಡಬೇಕು. ಜೊತೆಗೆ ಅವರ ತಂದೆ ತಾಯಿ ಕೇಳಿದ್ದನ್ನು ಕೊಡಬೇಕು. ನನ್ನ ಪತ್ನಿಗೆ ೩೦ ಸಾವಿರ ಡಾಲರ್ ಕೊಟ್ಟಿದ್ದೀನಿ" ಎಂದಿದ್ದೆ ಎಲ್ಲರೂ "೩೦ ಸಾವಿರ ಡಾಲರೆ?" ಎಂದರು. "ಹೌದು ನಮ್ಮ ದೇಶದ ಡಾಲರ್‌ಗಳಲ್ಲಿ ೩೦ ಸಾವಿರ ಡಾಲರ್" ಎಂದ ಜೊಸೆಫ್.

"ಯಾಕೆ ಹಾಗೆ? ಕಡಿಮೆ ಹಣಕ್ಕೆ ಹೆಣ್ಣುಗಳು ದೊರಕುವುದಿಲ್ಲವೆ?" ಸನ್‌ಬಿನ್ ಕೇಳಿದ. "ನೋ ನೋ. ಅದು ನಮ್ಮ ಶಕ್ತಿಗೆ ತಕ್ಕಂತೆ ನಾವು ಹೋಗ್ಬೇಕು. ಹಣ ಕಡಿಮೆ ಇದ್ದರೆ ಲೋನ್ ತೆಗೆದ್ಕೊಂಡು ಕೊಡ್ಬೇಕು. ಇಲ್ಲ ಇನ್‌ಸ್ಟಾಲ್‌ಮೆಂಟ್‌ನಲ್ಲಿ ಕೊಡ್ಬೇಕು. ಗಂಡುಮಕ್ಕಳು ಇದ್ದವರೆಲ್ಲ ಬಿಕ್ಷುಕರಾಗಿಬಿಟ್ಟಿದ್ದಾರೆ" ಎಂದ.

"ಅಕ್ಕಪಕ್ಕದ ದೇಶಗಳಿಂದ ಹುಡುಗಿಯರನ್ನ ಅಮದು ಮಾಡಿಕೊಳ್ಳಬಹುದಲ್ಲ?" ಒಂದು ಪುಕ್ಕಟೆ ಸಲಹೆ ಕೊಟ್ಟೆ. "ನೋ ನೋ. ಅದು ನಮ್ಮ ಪದ್ಧತಿಗೆ ವಿರುದ್ಧ. ನಾವು ಬೇರೆ ದೇಶದವರನ್ನ ಮದುವೆ ಮಾಡಿಕೊಂಡರೆ ನಮ್ಮ ಜನ ನಮ್ಮನ್ನ ಜೊತೆಗೆ ಬಾಳಲು ಬಿಡುವುದಿಲ್ಲ" ಜೋಸೆಫ್ ಒಂದು ಸಿಪ್ ಬೀರಿ ಕುಡಿದು ಪೆಚ್ಚುಮುಖ ಹಾಕಿಕೊಂಡ.

ಅವನನ್ನು ನೋಡಿದ ನನಗೆ ಅಯ್ಯೋ ಎನಿಸಿತು.

ಕೆಲವು ಕ್ಷಣಗಳ ನಂತರ ವಾಂಗ್ "ಚೀನಿ ಹುಡುಗಿಯರು ತುಂಬಾ ಮೃದು. ಗಂಡಸರನ್ನ ಮನೆಯಲ್ಲಿ ಏನೂ ಕೆಲಸ ಮಾಡಲು ಬಿಡುವುದಿಲ್ಲ. ಅದರೆ ಈಗ ನಗರಗಳಲ್ಲಿ ಗಂಡಸರ ಕೆಯಲ್ಲೆ ಎಲ್ಲಾ ಕೆಲಸಾನೂ ಮಾಡಿಸ್ತಾರೆ" ಎಂದರು ತಮ್ಮ ಪತ್ನಿಯ ಕಡೆಗೆ ನೋಡುತ್ತ. ಆಕೆಗೆ ಇಂಗ್ಲಿಷ್ ಬರೋದಿಲ್ಲವಾದರಿಂದ ಆಗಾಗ ಆಕೆಗೆ ಚೀನಿ ಭಾಷೆಯಲ್ಲಿ ಹೇಳುತ್ತಿದ್ದರು. "ಚೀನಾಗಿಂತ ಜಪಾನ್ ಮಹಿಳೆಯರು ತುಂಬಾ ಮೃದು ಅಂತೆ" ಸನ್‌ಬಿನ್ ಹೇಳಿದ. "ಚೀನಿ ಮಹಿಳೆಯರನ್ನ ಅಥವಾ ನನ್ನ ಪತ್ನೀನ ಯಾರಾದರು ನೀವು ತುಂಬಾ ಸುಂದರವಾಗಿದ್ದೀರಿ ಅಂದರೆ ಇಲ್ಲ! ಇಲ್ಲ! ಎನ್ನುತ್ತಾರೆ. ಆದರೆ ಯುರೋಪಿಯನ್ ಮಹಿಳೆಯರನ್ನ ನೀವು ತುಂಬಾ ಸುಂದರವಾಗಿದ್ದೀರಿ ಅಂದರೆ ವಂದನೆಗಳು ಎನ್ನುತ್ತಾರೆ" ಎಂದರು ವಾಂಗ್. "ಯಾ! ಯಾ!" ಎಂದು ಪ್ರಾರಂಭಿಸಿದ ಕೆನಡಾ ಮೂಲದ ನೆರೂಡ "ನನ್ನ ವಿಚ್ಛೇಧಿತ ಪತ್ನಿ ನನ್ನನ್ನು ಬಿಟ್ಟು ಹೋದ ಕೊನೆ ದಿನ ನಾನು ಸ್ವಲ್ಪ ದಪ್ಪವಾಗಿದ್ದೀನೆಯೇ? ಎಂದು ಕೇಳಿದ್ದಳು. ಆಕೆಗೆ ಸೊಂಟದ ಮೇಲೆ ಮಡಿಕೆಗಳು ಬಿದ್ದಿದ್ದವು. ನಾನು ಹೌದೆಂದೆ! ಅದು ನಾನು ಅವಳಿಗೆ ಹೇಳಿದ ಕೊನೆ ವಾಕ್ಯ" ಎಂದು ನಕ್ಕ. ಅವನ ತಲೆಗೆ ಏರಿರಬೇಕು ಎಂದುಕೊಂಡು "ಅನಂತರ ನಿಮ್ಮ ಪತ್ನಿಯ ಜೊತೆಗೆ ಮಾತನಾಡಲಿಲ್ಲವೆ?" ಕೇಳಿದೆ. "ಯಾ! ಒಂದೆರಡು ಸಲ ಫೋನ್‌ನಲ್ಲಿ ಮಾತನಾಡಿದ್ದೀನಿ" ಎಂದ. "ವಿಚ್ಛೇಧನ ಪಡೆದುಕೊಂಡು ಎಷ್ಟು ದಿನ ಆಯಿತು?" ಪ್ರಶ್ನಿಸಿದೆ. "ಎರಡು ವರ್ಷ ಆಗಿದೆ" ಎಂದ ನೆರೂಡ.

"ಇನ್ನು ಸ್ವಲ್ಪ ಬೀರ್ ತೆಗೆದುಕೊಳ್ಳಿ. ಇದು ಕೊನೆ ಸಫರ್" ವಾಂಗ್ ಹೇಳಿದರು. ಅವರ ಮಾತುಗಳನ್ನು ತಳ್ಳಲಾರದೆ ಎಲ್ಲರೂ ಸ್ವಲ್ಪ ಸ್ವಲ್ಪ ಬೀರನ್ನು ತಮ್ಮ ಗ್ಲಾಸುಗಳಿಗೆ ಸುರಿದುಕೊಂಡರು. ಮುಂದುವರಿದ ವಾಂಗ್ "ನಾನು ವಿಶ್ವವಿದ್ಯಾಲಯದಲ್ಲಿ ಇದ್ದಾಗ ಒಬ್ಬನೆ ೧ ಗಂಟೆ ಸಮಯದಲ್ಲಿ ೧೦ ಬೀರು ಬಾಟಲ್ ಕುಡಿದುಬಿಡುತ್ತಿದ್ದೆ" ಎಂದರು. ಎಲ್ಲರೂ "ಓ..." ಎಂದು ಒಂದು ಕ್ಷಣ ಹೌಹಾರಿದರು. ಮತ್ತೆ "ನಾನು ಹೈಸ್ಕೂಲ್‌ನಲ್ಲಿದ್ದಾಗ ಚೀನಾದಲ್ಲಿ ಸಾಂಸ್ಕೃತಿಕ ಆಂದೋಲನ ನಡೆಯುತ್ತಿತ್ತು. ದಿನಾಗಲೂ ತಿನ್ನುವುದಕ್ಕೆ ಗೆಣಸು ಗಡ್ಡೆ ಮಾತ್ರ ದೊರಕುತ್ತಿತ್ತು. ಅನಂತರ ಹತ್ತು ವರ್ಷ ಗೆಣಸು ಗೆಡ್ಡೇನ ನಾನು ಕೈಯಲ್ಲಿ ಮುಟ್ಟಲಿಲ್ಲ. ವಿಶ್ವವಿದ್ಯಾಲಯ ಬಿಟ್ಟ ಮೇಲೆ ಎಷ್ಟೋ ವರ್ಷ ಬೀರು ಕುಡಿಯುವುದು ಬಿಟ್ಟುಬಿಟ್ಟಿದ್ದೆ. ಮದುವೆಯಾದ ಮೇಲೆ ಮತ್ತೆ ಕುಡಿಯುವುದನ್ನ ಪ್ರಾಂಭಿಸಿದೆ" ಎಂದು ಪಕ್ಕದಲ್ಲಿದ್ದ ಪತ್ನಿಯ ಕಡೆಗೆ ನೋಡಿ ನಕ್ಕರು.

ಆಕೆ ಏನು ಹೇಳುತ್ತಿದ್ದೀಯ ಎನ್ನುವಂತೆ ವಾಂಗ್ ಕಡೆಗೆ ನೋಡಿದಳು. ವಾಂಗ್ ಬೇರೆ ಏನೊ ಹೇಳಿ ನಕ್ಕರು. ನಾವು ಒಳಗೊಳಗೆ ನಕ್ಕೆವು. ಅಲ್ಲಿಗೆ ಸಮಯ ೮:೩೦ ಆಗಿದ್ದು "ಓಕೆ ನಾಳೆ ಭೇಟಿಯಾಗೋಣ" ಎಂದು ವಾಂಗ್ ಎದ್ದರು. ಒಳ್ಳೆ ಮಾತುಕತೆ ನಡೆಯಿತು ಎಂದು ನಾವೆಲ್ಲ ಎದ್ದು ಹೊರಗೆ ಬರತೊಡಗಿದೆವು. ಗಲ್ಲಾ ಮೇಲೆ ಕುಳಿತಿದ್ದ ಹೋಟಲ್ ಮಾಲಿಕನಿಗೆ ಕೈ ನೀಡಿ "ಥ್ಯಾಂಕ್ಸ್" ಎಂದೆ. ನನ್ನ ಕೈಯನ್ನು

ಹಿಡಿದುಕೊಂಡೆ ಎದ್ದು ಬಂದ ಆತ ಚೀನಿ ಭಾಷೆಯಲ್ಲಿ "ಇವರೇನು ನಾಳೆ ಅವರ ದೇಶಕ್ಕೆ ಹೋಗ್ತಾರೇನು?" ಎಂದು ಕೇಳಿದ. ಆತ ಕೇಳಿದ ರೀತಿಯಲ್ಲೆ ನಾನು ಅರ್ಥಮಾಡಿಕೊಂಡೆ.

"ಇವರು ಇಂಢ್ಯ... ಇಂಢ್ಯ..." ಎನ್ನುತ್ತಿದ್ದು, ಇಂಡಿಯ ಪದವನ್ನು ಹೀಗೆ ಸಂಬೋಧಿಸುತ್ತಿದ್ದರು. ಅನಂತರ ಭಾರಿ ಖುಷಿಯಾಗಿ ನಾವೆಲ್ಲ ಒಂದೇ. ಎರಡೂ ದೇಶಗಳು ಒಟ್ಟಾಗಿರಬೇಕು. ಪರಸ್ಪರ ಸಹಕಾರ ಇರಬೇಕು. ಎನ್ನುತ್ತ ತನ್ನ ಎರಡೂ ಕೈಗಳನ್ನು ಗಟ್ಟಿಯಾಗಿ ಬಿಗಿದುಕೊಂಡು ತೋರಿಸಿ ಅನಂತರ ಮತ್ತೊಮ್ಮೆ ಎಲ್ಲರ ಕೈಗಳನ್ನೂ ಕುಲುಕಿದ. ವಾಂಗ್ ನಮ್ಮ ಬಗ್ಗೆ ಚೀನಿಯಲ್ಲಿ ಏನೋ ಹೇಳತೊಡಗಿದರು. ನಾವು ಹೊರಕ್ಕೆ ಬರುತ್ತಿದ್ದಂತೆ ಹೋಟಲಿನವ ನಮ್ಮ ಹಿಂದೆಯೆ ಸ್ವಲ್ಪ ದೂರ ಬಂದು ಚಳಿಯಲ್ಲಿ ಕೈ ಬೀಸುತ್ತಾ ನಿಂತಿದ್ದ. ನಾವು ಆತನ ಕಡೆಗೆ ಕೈ ಬೀಸಿ ಹತ್ತಿರದಲ್ಲೆ ಇದ್ದ ನಮ್ಮ ಹೋಟಲ್ ಕಡೆಗೆ ನಡೆದೆವು.



ಅಂತರಾಷ್ಟ್ರೀಯ ಹೋಟಲ್‌ನಲ್ಲಿ ಒಂದು ಪುಟ್ಟ ಭಾಷಣ

ಚೀನಾದ ಒಟ್ಟು ಜನಸಂಖ್ಯೆಯಲ್ಲಿ ೯೨ ರಷ್ಟು ಜನರು ಹ್ಯಾನ್ ಜನಾಂಗಕ್ಕೆ ಸೇರಿದವರಾದರೆ ಉಳಿದ ಜನ ೫೫ ಉಪ ಬುಡಕಟ್ಟುಗಳಿಗೆ ಸೇರಿದವರು.

ಚೀನಾದಲ್ಲಿ ಅದು ಕೊನೆ ರಾತ್ರಿಯಾಗಿತ್ತು. ಸಾಯಂಕಾಲ ೫ ಗಂಟೆಗೆ ನಾವೆಲ್ಲ ನಮ್ಮ ರೆಸ್ಟಾರೆಂಟಿಗೆ ಹತ್ತಿರದಲ್ಲಿದ್ದ ಲಾಂಗ್‌ಫಾಂಗ್ ಇಂಟರ್ ನ್ಯಾಷನಲ್ ಹೋಟಲ್ ಕಡೆಗೆ ನಡೆಯತೊಡಗಿದೆವು. ಸನ್ ಬಿನ್ ನಮ್ಮ ಮುಂದೆ ಮುಂದೆ ಸಾಗುತ್ತ ನಮ್ಮನ್ನ ಡಿಜಿಟಲ್ ಕ್ಯಾಮರಾಗಳಲ್ಲಿ ಸೆರೆಹಿಡಿಯುತ್ತಿದ್ದ. ಎಲ್ಲರೂ ತಮಗೆ ಇಷ್ಟವಾದ ಸೊಗಸಾದ ಉಡುಪುಗಳನ್ನು ಧರಿಸಿದ್ದರು. ನಾನು ಕೋಟಾಕಿಕೊಂಡು ಟೈ ಕಟ್ಟಿಕೊಂಡಿದ್ದೆ. ಚಳಿ ಸಣ್ಣಗೆ ನಡುಗಿಸುತ್ತಿತ್ತು. ಆ ಸಾಯಂಕಾಲ ಬೀಳ್ಕೊಡಿಗೆ ಸಮಾರಂಭವನ್ನು ಆ ಹೋಟಲಿನಲ್ಲಿ ಏರ್ಪಡಿಸಲಾಗಿತ್ತು. ಹೋಟಲ್ ತಲುಪಿದ್ದೆ ಅಲ್ಲಿ ನಮಗಾಗಿ ಕಾದಿದ್ದ ವಾಂಗ್ ಮತ್ತು ಅವರ ಸಿಬ್ಬಂಧಿ ನಮ್ಮನ್ನು ಸಮಾರಂಭ ನಡೆಯುವ ಹಾಲಿಗೆ ಕರೆದುಕೊಂಡು ಹೊರಟರು.




ಸುಸಜ್ಜಿತವಾದ ಸ್ಟಾರ್ ಹೋಟಲು. ದೊಡ್ಡದಾದ ಹಾಲು. ಜಗಮಗಿಸುವ ಅಲಂಕಾರ. ಪುಟ್ಟ ಡಯಾಸ್ ಮೇಲೆ ಹತ್ತು ಕುರ್ಚಿಗಳನ್ನು ಹಾಕಲಾಗಿದೆ. ಮುಂದೆ ಸುಮಾರು ೧೫೦ ಕುರ್ಚಿಗಳನ್ನು ಹಾಕಲಾಗಿದೆ. ಕುರ್ಚಿಗಳ ಮುಂದಿನ ಮೇಜುಗಳ ಮೇಲೆ ಆಹ್ವಾನಿತರ ಹೆಸರುಗಳನ್ನು ಬರೆದಿಡಲಾಗಿದೆ. ಎಲ್ಲರೂ ಅವರವರ ಹೆಸರುಗಳಿರುವ

ಕುರ್ಚಿಗಳಲ್ಲಿ ಕುಳಿತುಕೊಂಡೆವು. ಸರಿಯಾದ ಸಮಯಕ್ಕೆ ಕಾರ್ಯಕ್ರಮ ಪ್ರಾರಂಭವಾಯಿತು. ಲಾಂಗ್‌ಫಾಂಗ್ ಎಂಎಲ್‌ಎಗೆ ಮೊದಲ ಅವಕಾಶ ನೀಡಲಾಯಿತು. ಅವರು ಚೀನಾದಲ್ಲಿ ಮಾತನಾಡುತ್ತಿದ್ದಂತೆ ನಮ್ಮ ವಾಂಗ್ ಅವರು ಅವರ ಭಾಷಣವನ್ನು ಇಂಗ್ಲಿಷ್‌ಗೆ ಭಾಷಾಂತರಗೊಳಿಸುತ್ತಾಹೋದರು. ತಮ್ಮ ನಗರದ ಅಭಿವೃದ್ಧಿಯ ಬಗ್ಗೆ ಒಂದೊಂದನ್ನೆ ದೊಡ್ಡ ಪಟ್ಟಿಮಾಡಿ ಹೇಳುತ್ತಾ ಹೋದರು.

ಅವರ ಭಾಷಣವನ್ನು ಕೇಳುತ್ತಿದ್ದಂತೆ ನಿಜವಾಗಿಯೂ ಪ್ರಪಂಚದ ಎಲ್ಲಾ ರಾಜಕಾರಣಿಗಳೂ ಒಂದೇ ಪ್ರಬೇಧಕ್ಕೆ ಸೇರಿದವರಾಗಿರುತ್ತಾರೆ ಎನ್ನುವುದು ನನಗೆ ಖಾತರಿಯಾಯಿತು. ಒಟ್ಟಿನಲ್ಲಿ ನನ್ನ ತಲೆ ಚಿಟ್ಟಿಡಿದುಹೋಯಿತು. ಅನಂತರ ಅದೇ ರೀತಿಯ ಎರಡು ಭಾಷಣಗಳು ಮುಗಿದವು. ಸೆಕ್ರೆಟರಿ ಹಂತದ ಇಬ್ಬರು ಅಧಿಕಾರಿಗಳು ಸೊಗಸಾದ ಇಂಗ್ಲಿಷ್‌ನಲ್ಲಿ ಮಾತನಾಡಿ ನಮ್ಮನ್ನೆಲ್ಲ ದಂಗುಬಡಿಸಿರು. ದಕ್ಷಿಣ ಆಫ್ರಿಕಾದ ರಾಯಬಾರಿ ಬಂದಿದ್ದರಿಂದ ಅವರಿಗೂ ಮಾತನಾಡಲು ಅವಕಾಶ ಮಾಡಿಕೊಡಲಾಗಿತ್ತು. ಅವರು ಮಾತನಾಡಿದ ಮೇಲೆ ತರಬೇತಿಗೆ ಬಂದಿದ್ದ ನಮ್ಮಲ್ಲಿ ಇಬ್ಬರಿಗೆ ಅವಕಾಶ ಕೊಡಲಾಯಿತು. ಅದರಲ್ಲಿ ನಾನೂ ಒಬ್ಬ. ನನ್ನನ್ನು ಭಾಷಣ ಮಾಡಲು ವಾಂಗ್ ವೇದಿಕೆಗೆ ಕರೆದರು. ಮೊದಲೆ ತಯಾರಿಸಿದ್ದ ಇಂಗ್ಲಿಷ್ ಭಾಷಣವನ್ನು ತೆಗೆದುಕೊಂಡು ಒಂದೊಂದೆ ಪ್ಯಾರಾ ಓದತೊಡಗಿದೆ. ವಾಂಗ್ ಅವರು ಚೀನಿ ಭಾಷಗೆ ನಗುನಗುತ್ತ ಭಾಷಾಂತರಿಸಿದರು.

ಮಹಿಳೆಯರೆ ಮತ್ತ ಮಹನಿಯರೆ...



ಅಂತರಾಷ್ಟ್ರೀಯ ಹೋಟೇಲ್‌ನಲ್ಲಿ ಭಾಷಣ ನೀಡುತ್ತಿರುವ ಲೇಖಕ

ಎಲ್ಲರಿಗೂ ಸಂಧ್ಯಾಕಾಲದ ನಮಸ್ಕಾರಗಳು. ಪ್ರಿಯ ಲಾಂಗ್‌ಫಾಂಗ್ ಮಹಾನಗರಾಧ್ಯಕ್ಷರೆ, ಭೂಸಂಪನ್ಮೂಲ ಮಂತ್ರಿಗಳೆ, ಚೀನಾ ಭೂಸರ್ವೇಕ್ಷಣಾ ಅಧಿಕಾರಿಗಳೆ, ಚೀನಾ ಅಕಾಡೆಮಿ ಭೂವಿಜ್ಞಾನಿಗಳೆ, ಪ್ರಪಂಚ ಭೂವಿಜ್ಞಾನಿ ಸಮುದಾಯದ ಪ್ರಖ್ಯಾತ ಭೂವಿಜ್ಞಾನಿ ಪ್ರೊ. ಜೀಜಿಯ್ಯು ಮತ್ತು ಡಾ.ವಾಂಗ್ ಅವರೆ ಮತ್ತು ನನ್ನ ಪ್ರಿಯ

ಸಹೋದ್ಯೋಗಿ ಮಿತ್ರರೆ-

ಚೀನಾಗೆ ಬರುವುದಕ್ಕಿಂತ ಮುಂಚೆ ನಾನು ಬ್ರಿಟನಿಕಾ ಶಬ್ದಕೋಶದಲ್ಲಿ ಚೀನಾ ಬಗ್ಗೆ ೨೪೦ ಪುಟಗಳನ್ನು ಓದಿದೆ. ಆದರೆ ಅದರಲ್ಲಿ ಬಹಳಷ್ಟು ಹಳೆಯ ಚೀನಾ ಚರಿತ್ರೆ ಮತ್ತು ೧೯೭೦ರ ವರೆಗಿನ ಪ್ರಗತಿಯ ವಿವರಗಳು ಮಾತ್ರ ಇದ್ದವು. ಪ್ರೊ. ಜೀ ಮತ್ತು ಅವರ ಸಹೋದ್ಯೋಗಿಗಳು ಬರೆದಿರುವ ಅನೇಕ ಭೂವಿಜ್ಞಾನ ವರದಿಗಳನ್ನು ಓದಿರುವೆ.

ಭಾರತೀಯ ಭೂಸರ್ವೇಕ್ಷಣ ಸಮೀಕ್ಷೆಯ ಭೂವಿಜ್ಞಾನಿಗಳಾದ ನಮಗೆ ಇಲ್ಲಿ ಗ್ರೇಟ್ ಪೀಪಲ್ಸ್ ರಿಪಬ್ಲಿಕ್ ಚೀನಾದಲ್ಲಿರುವುದು ಸಂತೋಷದ ವಿಷಯವಾಗಿದೆ. ನಾನು ಚಿಕ್ಕಂದಿನಿಂದಲೂ ಎರಡು ಮಹಾನ್ ದೇಶಗಳ ಬಗ್ಗೆ ನಿರಂತರವಾಗಿ ಕೇಳುತ್ತಿದ್ದೆ. ಒಂದು ರಷ್ಯಾ, ಮತ್ತೊಂದು ಚೀನಾ. ಈ ಎರಡೂ ದೇಶಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳುವ ಆಸಕ್ತಿ ನನಗೆ ಎಂದಿನಿಂದಲೋ ಇತ್ತು. ಆದರೆ ಪುಸ್ತಕಗಳು, ಪತ್ರಿಕೆಗಳು ಮತ್ತು ರೇಡಿಯೊ ಮೂಲಕ ಬಹಳ ಕಡಿಮೆ ವಿಷಯಗಳು ತಿಳಿದುಬರುತ್ತಿದ್ದವು.

ನನ್ನ ಹೆಸರು ಚೀನಾ ಪ್ರವಾಸಕ್ಕೆ ಆಯ್ಕೆಯಾಗಿದೆ ಎಂದು ಕಛೇರಿಯಿಂದ ತಿಳಿದಾಗ ಭಾರೀ ರೋಮಾಂಚನಗೊಂಡು ಮೊದಲಿಗೆ ನಂಬಲಾರದೆ ಹೋಗಿದ್ದೆ. ನಾವು ಮೂವರು ನಮ್ಮ ದೇಶದ ಬೇರೆ ಬೇರೆ ಮೂಲೆಗಳಿಂದ ಎರಡನೇ ದಿನವೆ ದೆಹಲಿಗೆ ತಲುಪಿ ವೀಸಾಗೆ ಅರ್ಜಿ ಹಾಕಿದೆವು. ಹೆಬ್ಬೈ ರಾಜ್ಯದ ರಹದಾರಿ ದೊರಕದೆ ನಮಗೆ ತಕ್ಷಣ ವೀಸಾ ದೊರಕಲಿಲ್ಲ. ಡಾ.ವಾಂಗ್‌ರನ್ನು ಈ-ಮೇಲ್ ಮೂಲಕ ಸಂಪರ್ಕಿಸಿದ್ದೆ, ವಾಂಗ್ ನಮ್ಮ ಸಮಸ್ಯೆಯನ್ನು ನಿವಾರಿಸಿದ ಮರು ದಿನವೆ ನಾವು ಬೀಜಿಂಗ್ ತಲುಪಿದೆವು.

ನಮ್ಮ ತರಬೇತಿಯ ಸಮಯದಲ್ಲಿ ಜಿಯೋಕೆಮಿಕಲ್ ಮ್ಯಾಪಿಂಗ್‌ನ ವಿಧಾನವನ್ನು ಮತ್ತು ಕ್ಷೇತ್ರ ತಂತ್ರಜ್ಞಾನವನ್ನು ಚೀನಾದ ಐಜಿಜಿಇ ಇನ್ಸ್‌ಟಿಟ್ಯೂಟ್‌ನ ವಿಜ್ಞಾನಿಗಳು ಮತ್ತು ವಿದೇಶದಿಂದ ಬಂದ ವಿಜ್ಞಾನಿಗಳು ಕಲಿಸಿಕೊಟ್ಟಿದಾರೆ. ನಮ್ಮ ನಮ್ಮ ದೇಶಗಳಲ್ಲಿ ನಡೆದಿರುವ ಕೆಲಸದ ಬಗ್ಗೆ ಮಾತನಾಡಲು ಮತ್ತು ಪರಸ್ಪರ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಾರೆ.

ಚಂದ್ರನ ಮೇಲೆ ನಿಂತು ಭೂಮಿಯ ಕಡೆಗೆ ನೋಡಿದಾಗ ಕಾಣಿಸುವ ಏಕೈಕ ಮನುಷ್ಯ ನಿರ್ಮಿತ ಚೀನಾ ಮಹಾಗೋಡೆಯನ್ನು ನಮಗೆ ನೇರವಾಗಿ ತೋರಿಸಿದ್ದಾರೆ. ಕ್ವಿಂಗ್ ಮತ್ತು ಮಿಂಗ್ ರಾಜರು ನಿರ್ಮಿಸಿದ ಅದ್ಭುತ ಫರ್‌ಬಿಡನ್ (ನಿಷೇದಿತ) ಅರಮನೆಗಳನ್ನು, ಸ್ವರ್ಗ ದೇವಾಲಯ, ೫೦ ಲಕ್ಷ ವರ್ಷಗಳ ಹಿಂದೆ ಗುಹೆಮಾನವನಾದ ಪೆಕ್ಕಿಂಗ್‌ಮ್ಯಾನ್ ಜೀವಿಸಿದ್ದ ಗುಹೆಗಳನ್ನು, ಚೀನಾದ ಸುಂದರ ರಾಜಧಾನಿ ಬೀಜಿಂಗ್‌ನ ಗಗನಚುಂಬಿ ಕಟ್ಟಡಗಳ ಮಧ್ಯ ರಾಜ ರಸ್ತೆಗಳಲ್ಲಿ ಓಡಾಡಿಸಿದ್ದಾರೆ.

ಚೀನಾದ ಗಿರಿ ಶಿಖರಗಳ ಮಾಲೆ, ಪರ್ವತ ತಪ್ಪಲು ಸಮತಟ್ಟು ಪ್ರದೇಶಗಳು, ಪಟ್ಟಣಗಳು, ಇನ್ನರ್ ಮಂಗೋಲಿಯ ರಾಜ್ಯದ ಗೋಬಿ ಮರಳುಗಾಡಿನವರೆಗಿನ

ಚೀನಾದ ಸುಂದರ ದೃಶ್ಯಗಳನ್ನು ತೋರಿಸಿ ನಮ್ಮ ಕಣ್ಣುಗಳಿಗೆ ಹಬ್ಬವನ್ನೇ ಉಣಿಸಿದ್ದಾರೆ. ಈಗ ನಾವೆಲ್ಲ ನಿಮ್ಮ ಮುಂದೆ ಲಾಂಗ್‌ಫಾಂಗ್ ನಗರದಲ್ಲಿದ್ದೀವಿ.

ನಮ್ಮ ತರಬೇತಿಯ ಉದ್ದಕ್ಕೂ ಒಳ್ಳೆ ಸ್ಟಾರ್ ಹೋಟಲುಗಳಲ್ಲಿ ಇರಿಸಿ ಎಲ್ಲಾ ರೀತಿಯ ಚೀನೀಯ ರುಚಿಕರ ಸ್ವಾದಿಷ್ಟ, ತಿಂಡಿ ತೀರ್ಥಗಳನ್ನು ನೀಡಿ ಸಂತೋಷಗೊಳಿಸಿದ್ದಾರೆ. ಎಲ್ಲಾ ಸಮಯದಲ್ಲೂ ಚೀನಿಯರ ನಗುಮುಖದ ಅತಿಥ್ಯ ಸತ್ಕಾರ ಸ್ವೀಕರಿಸದ್ದೀವಿ. ಚೀನಿಯರ ತಿಂಡಿಗಳು ಹೆಚ್ಚೂ ಕಡಿಮೆ ಭಾರತೀಯರ ತಿಂಡಿಗಳಂತೆಯೆ ಇವೆ.

ಇಲ್ಲಿ ಚೀನಾದಲ್ಲಿ ಮಹಿಳೆಯರು ಎಲ್ಲಾ ರೀತಿಯ ಕೆಲಸಗಳಲ್ಲೂ ತೊಡಗಿಕೊಂಡಿರುವುದನ್ನು ಗಮನಿಸಿರುವೆ. ಹಾಗೆ ಮಹಿಳೆಯರು ಹೆಚ್ಚು ಗೌರವಕ್ಕೆ ಪಾತ್ರರಾಗಿದ್ದಾರೆ. ಯಾವುದೇ ದೇಶ ಅಥವಾ ಸಮಾಜ ಮಹಿಳೆಯರಿಗೆ ಹೆಚ್ಚು ಗೌರವ ಕೊಡುತ್ತದೊ ಆ ಸಮಾಜ ಹೆಚ್ಚು ಗೌರವ ಮತ್ತು ಅಂತಸ್ತನ್ನು ಹೊಂದಿರುತ್ತದೆ.

ಭಾರತದಲ್ಲಿ ಚೀನಾದ ಹಲವು ವಿಷಯಗಳು ಪ್ರಸಿದ್ಧಿ ಮತ್ತು ಪ್ರಖ್ಯಾತ ಹೊಂದಿವೆ. ಅವುಗಳಲ್ಲಿ ಮುಖ್ಯವಾಗಿ:

೧. ಚೀನಿ ರೆಸ್ಟಾರೆಂಟುಗಳಲ್ಲಿ ಚೀನಿ ಶೈಲಿಯ ಆಹಾರ

೨. ಚೀನಿ ಪದ್ಧತಿಯ ಆಕ್ಯೂಪಂಚರ್ ವೈದ್ಯ ಉಪಚಾರ

೩. ಫೆಂಗ್‌ಸೂಯಿ (ಚೀನಿ ವಾಸ್ತು ಶಾಸ್ತ್ರ)

೪. ಚೀನಿಯ ಎಲೆಕ್ಟ್ರಾನಿಕ್ ಉಪಕರಣಗಳು, ಬಟ್ಟೆ ಮತ್ತು ಬೊಂಬೆಗಳು

೫. ಗ್ರೇಟ್ ವಾಲ್ ಆಫ್ ಚೀನಾ

೬. ಒಲೆಂಪಿಕ್ಸ್‌ನಲ್ಲಿ ಚೀನಿಯರ ಸಾಧನೆ ಇತ್ಯಾದಿ...

ಗೆಳೆಯರೆ ನಾನು ಭೂವಿಜ್ಞಾನಿ ಮಾತ್ರವಲ್ಲ, ಸಣ್ಣ ಪ್ರಮಾಣದ ಲೇಖಕನು ಹೌದು! ನನ್ನ ೧೪ ಕೃತಿಗಳು ಹಲವು ಪ್ರಕಾರಗಳ ನೂರಾರು ಲೇಖನಗಳು ಕನ್ನಡ ಭಾಷೆಯಲ್ಲಿ ಪ್ರಕಟವಾಗಿವೆ. ಕನ್ನಡ ಭಾಷೆ ದಕ್ಷಿಣ ಭಾರತದ ಒಂದು ಪ್ರಧಾನ ಭಾಷೆ. ಭಾರತ ತಲುಪಿದ್ದ ಚೀನಾ ಪ್ರವಾಸ ಕತೆ ಬರೆಯುತ್ತೇನೆ.


ಇದೆಲ್ಲದರ ಮೇಲೆ ಹಲವು ದೇಶಗಳ ನನ್ನ ಸಹೋದ್ಯೋಗಿ ಮಿತ್ರರ ಪರವಾಗಿ ಮತ್ತು ನಮ್ಮ ಭಾರತೀಯರ ಪರವಾಗಿ ಚೀನಾ ಸರಕಾರಕ್ಕೆ, ಚೀನಾ ಜನತೆಗೆ ಮತ್ತು ಇನ್‌ಸ್ಟಿಟ್ಯೂಟ್‌ನ ಮಿತ್ರರಿಗೆ ಮತ್ತು ನಿಮ್ಮೆಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ನಮಸ್ಕಾರ.

ನನ್ನ ಮಾತುಗಳನ್ನು ಲೀಲಾಜಾಲವಾಗಿ ಭಾಷಾಂತರಿಸಿದ ವಾಂಗ್ ಮಧ್ಯ ಮಧ್ಯ

ನಗುನಗುತ್ತ ಕೆಲವು ವಿಷಯಗಳನ್ನು ಒತ್ತಿ ಒತ್ತಿ ಹೇಳಿದ್ದರು. ಅನಂತರ ಎಲ್ಲರಿಗೂ ಸುಂದರವಾದ ನೆನಪಿನ ಕಾಣಿಕೆಗಳನ್ನು, ತರಬೇತಿಯ ವಿಷಯಗಳು ತುಂಬಿದ ಒಂದು ಸಿ.ಡಿ. ಮತ್ತು ತರಬೇತಿಯ ಉದ್ದಕ್ಕೂ ಸೆರೆ ಹಿಡಿದಿದ್ದ ೪೦೦ ಫೋಟೋಗಳ ಒಂದು ಸಿ.ಡಿ. ಮತ್ತು ಚೀನಿ ಹಾಡುಗಳಿರುವ ಒಂದು ಸಿ.ಡಿ.ಯನ್ನು ಎಲ್ಲರಿಗೂ ನೀಡಲಾಯತು.

* * *

ಸಮಾರಂಭ ಮುಗಿದಿದ್ದೆ ಫೋಟೋ ಸೆಷನ್ ನಡೆಯಿತು. ಅನಂತರ ಎಲ್ಲರೂ ಗುಂಪು ಗುಂಪುಗಳಾಗಿ ನಿಂತುಕೊಂಡು ಮಾತನಾಡತೊಡಗಿದರು. ನನ್ನ ಹತ್ತಿರಕ್ಕೆ ಬಂದ ದಕ್ಷಿಣ ಆಫ್ರಿಕಾದ ಸುಮಾರು ೧೫೦ ಕೆಜಿ ತೂಕದ ಬಿಳಿ ರಾಯಭಾರಿ ನಗುತ್ತಾ ಮೆತ್ತಗೆ "ಆರ್ ಯು ಫ್ರಂ ಬೆಂಗ್ಳೂರ್?" ಕೇಳಿದರು. "ಎಸ್ ಐ ಯಾಮ್ ಫ್ರಂ ಬೆಂಗ್ಳೂರ್" ಎಂದೆ. "ನೈಸ್ ಪ್ಲೇಸ್" ಎಂದರು. "ಬೆಂಗ್ಳೂರ್ ನೋಡಿದ್ದೀರ?" ಕೇಳಿದೆ. "ಇಲ್ಲ ಬಾಂಬೆಗೆ ಎರಡು ಸಲ ಬಂದಿದ್ದೀನಿ. ಬೆಂಗ್ಳೂರ್ ನೋಡ್ಬೇಕು" ಎಂದರು. ಹತ್ತಿರವೆ ನಿಂತಿದ್ದ ಆಫ್ರಿಕಾದ ರೂಡಿಗೆ ಒಂದು ಸಿಗರೇಟು ಕೊಡುವಂತೆ ಹೇಳಿದರು. ರೂಡಿ ಸಿಗರೇಟ್ ಕೊಟ್ಟು ಸಿಗಾರನಲ್ಲಿ ಬೆಂಕಿ ಹೊತ್ತಿಸಿದ. ಹಾಗೆ ಮಾತನಾಡುತ್ತಿದ್ದಂತೆ ಡಿನ್ನರ್‌ಗೆ ಆಹ್ವಾನಿಸಲಾಯಿತು. ಡಿನ್ನರ್‌ನ್ನು ತುಂಬಾ ಚನ್ನಾಗಿ ಸಜ್ಜುಗೊಳಿಸಲಾಗಿತ್ತು. ವಿಶೇಷ ಚೀನಿ ಶೈಲಿಯ ಡ್ರಿಂಕ್ಸ್‌ಗಳನ್ನು ಸರಬರಾಜು ಮಾಡಲಾಗಿತ್ತು. ಕೆಲವರಂತೂ ಪೈಪೋಟಿ ಮೇಲೆ ಕುಡಿದರು.



ಪ್ರೊ. ಜಿ. ಜೀಕೂ ಮತ್ತು ಶ್ರೀಮತಿ ಜೀಕೂರವರೊಂದಿಗೆ

ನಮ್ಮ ಒಂದು ತಿಂಗಳ ಚೀನಾ ತರಬೇತಿಯಲ್ಲಿ ನಮಗೆ ಎಲ್ಲಯೂ ಯಾವುದೇ ರೀತಿಯ ಒಂದು ಕಹಿ ಅನುಭವವೂ ಆಗಿರಲಿಲ್ಲ. ಆದರೆ ಬೀಜಿಂಗ್‌ನ ಭಾರತದ ರಾಯಭಾರಿ ಕಛೇರಿಯಲ್ಲಿ ನಮಗೆ ಒಂದು ಸಣ್ಣ ಅವಮಾನವಾಗಿತ್ತು. ತರಬೇತಿಗೆ ಬಂದಿದ್ದವರೆಲ್ಲ ತಮ್ಮ ತಮ್ಮ ರಾಯಭಾರಿ ಕಛೇರಿಗಳಿಗೆ ಹೋಗಲು ಯೋಚಿಸುತ್ತಿದ್ದರು. ನಾವು ನಮ್ಮ ದೇಶದ ರಾಯಭಾರಿ ಕಛೇರಿಗೆ ಹೋಗಿ ಬರುವುದಾಗಿ ವಾಂಗ್ ಅವರಿಗೆ ಹೇಳಿದ್ವೆ. ಅವರು "ನೋ ಪ್ರಾಬ್ಲಂ ಯು ಫಿಕ್ಸ್ ದ ಡೇಟ್" ಎಂದರು. ನನಗೆ "ಫೋನ್ ಸಂಖ್ಯೆ ಗೊತ್ತಿಲ್ಲ" ಎಂದಿದ್ದಕ್ಕೆ ಎಲ್ಲೆಲ್ಲೊ ಹುಡುಕಿ ಫೋನ್ ಸಂಖ್ಯೆ ಕೊಟ್ಟರು. ನಾನು ಫೋನ್‌ನಲ್ಲಿ ಮಾತನಾಡಿ ವಿಷಯ ತಿಳಿಸಿದ್ದೆ ಚೀನಿ ಮಹಿಳೆಯೊಬ್ಬರು ಫೋನ್ ತೆಗೆದುಕೊಂಡು ಯಾವಾಗಲಾದರೂ ಬನ್ನಿ ತೊಂದರೆ ಇಲ್ಲ ಎಂದರು.



ಪ್ರೊ. ಜಿ. ಜೀಕೂರವರಿಂದ ನೆನಪಿನ ಕಾಣಿಕೆ ಸ್ವೀಕರಿಸುತ್ತಿರುವುದು

ನಾವು ಮೂವರು ಒಂದು ದಿನ ಮಧ್ಯಾಹ್ನ ತರಗತಿಗಳನ್ನು ಮುಗಿಸಿಕೊಂಡು ಕಾರಿನಲ್ಲಿ ಹೊರಟೆವು. ನಮ್ಮ ಜೊತೆಯಲ್ಲಿ ಬೆನಿನ್ ದೇಶದ ಯುವಕ ಅವರ ರಾಯಬಾರಿ ಕಛೇರಿಗೆ ಹೋಗಲು ಬಂದ. ಚಾಲಕ, ಬೆನಿನ್ ದೇಶದವರನ್ನು ಮೊದಲಿಗೆ ಅವರ ರಾಯಬಾರಿ ಕಛೇರಿಯ ಹತ್ತಿರ ಇಳಿಸಿ ನಮ್ಮನ್ನು ಭಾರತ ರಾಯಬಾರಿ ಕಛೇರಿಯ ಹತ್ತಿರಕ್ಕೆ ಕರೆದುಕೊಂಡು ಬಂದರು. ನಾವು ಅಲ್ಲಿ ಇಳಿದು ಗೇಟಿನಲ್ಲಿ ನಮ್ಮ ವಿಸಾ ತೋರಿಸಿ ಒಳಗೆ ಹೋದೆವು. ಹೋಗುವ ಮುನ್ನ ನಾವು ಮೊದಲೆ ಮಾತನಾಡಿಕೊಂಡಂತೆ ಚಾಲಕ ಮತ್ತೆ ಬೆನಿನ್ ರಾಯಬಾರಿ ಕಛೇರಿಗೆ ಹೋಗಿ ಮೊದಲಿಗೆ ಆತನನ್ನು ಪಿಕ್‌ಆಪ್ ಮಾಡಿಕೊಂಡ ಅನಂತರ ದಾರಿಯಲ್ಲಿ ನಮ್ಮನ್ನು ಪಿಕ್‌ಆಪ್ ಮಾಡುವುದಾಗಿ ನಮ್ಮನ್ನು ಅಲ್ಲಿ ಬಿಟ್ಟು ಚಾಲಕ ಹೊರಟುಹೋದ.

ನಾವು ಒಳಗೆ ಹೋಗುತ್ತಿದ್ದಂತೆ ಜೋಷಿ ಎಂಬವರು ಅಡ್ಡ ಸಿಕ್ಕಿ ವಿಷಯ ತಿಳಿಸಿದೆವು. ಆಯಿತು ಬನ್ನಿ ಎಂದು ಒಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಎದುರಿಗೆ ಕ್ಯಾಬಿನ್ ಒಳಗೆ ಕುಳಿತಿದ್ದವರಿಗೆ ಪರಿಚಯಿಸಿ ಹೊರಟುಹೋದರು. ಆತನ ಕೈಕುಲುಕಿ ಹೆಸರು ಮತ್ತು ಇಲಾಖೆಯ ಹೆಸರು ಹೇಳಿದೆ. ಆತ ನನ್ಹೆಸರು ಸುಂದರಂ ಪಿಆರ್‌ಓ ಎಂದರು. ಆತನನ್ನು ನೋಡಿದ್ದೆ ತಮಿಳು ನಾಡಿನವನು ಎನ್ನುವುದು ಗೊತ್ತಾಯಿತು. ನಾವು ಒಂದು ತಿಂಗಳು ಸರಕಾರದ ಕಡೆಯಿಂದ ಚೀನಾಗೆ ತರಬೇತಿಗೆ ಬಂದಿರುವುದಾಗಿ ತಿಳಿಸಿ "ಎಂಬಸಿ ಇದ್ದಾರೆಯೆ?" ಕೇಳಿದೆ "ಇಲ್ಲ ಅವರು ಸ್ಟೇಷನ್‌ನಲ್ಲಿ ಇಲ್ಲ. ನಮ್ಮಲ್ಲಿ ಏನಾದರೂ ಕೆಲಸ ಇದೆಯಾ?" ಕೇಳಿದರು. "ಇಲ್ಲ" ಎಂದೆ. "ಸುಮ್ಮನೆ ಬಂದರಾ" "ಹೌದು!" ಎಂದೆ. "ಹಾಗಾದರೆ ಅಲ್ಲಿ ಹೋಗಿ ಕುಳಿತುಕೊಳ್ಳಿ" ಎಂದ. ನಾವು ಮೂವರು ಒಳಗೆ ಹೋಗಿ ಹಾಲಿನಲ್ಲಿ ಕುಳಿತುಕೊಂಡೆವು. ಅದೊಂದು ಪುಟ್ಟ ಹಾಲು. ಯಾವುದೇ

ರೀತಿಯಲ್ಲೂ ಅದು ರಾಯಬಾರಿ ಕಛೇರಿಯಂತೆ ಕಾಣಿಸುತ್ತಿರಲಿಲ್ಲ. ಒಂದು ಹಳೆ ಕಾಲದ ಮನೆ ಎನ್ನಬಹುದು. ಭಾರತದ ಒಂದು ನಕ್ಷೆ, ಮಹಾತ್ಮ ಗಾಂಧಿ ಮತ್ತು ಇಂದಿರಾ ಗಾಂಧಿಯವರ ಫೋಟೊಗಳ ಜೊತೆಗೆ ಒಂದೆರಡು ಕ್ಯಾಲೆಂಡರುಗಳನ್ನು ಬಿಟ್ಟರೆ ಅಲ್ಲಿ ಏನೂ ಇರಲಿಲ್ಲ. ಎಂಬಸಿ ಈಗಿರುತ್ತದೆಯೆ? ನಿಜವಾಗಿಯೂ ನಿರಾಶೆಯಾಯಿತು. ಅದೇ ದೆಹಲಿಯಲ್ಲಿದ್ದ ಚೀನಾ ಎಂಬಸಿ ದೊಡ್ಡದಾಗಿ ವಿಶಾಲವಾಗಿ ಸುಂದರವಾಗಿತ್ತು. ಆಗಾಗ ಒಬ್ಬೊಬ್ಬರು ಆ ಕಡೆಯಿಂದ ಈ ಕಡೆಗೆ, ಈ ಕಡೆಯಿಂದ ಆ ಕಡೆಗೆ ಓಡಾಡುತ್ತಿದ್ದರು ಯಾರೂ ನಮ್ಮನ್ನು ಮಾತನಾಡಿಸಲಿಲ್ಲ. ದಾರಿಯಲ್ಲಿ ಬರುವಾಗ ಎಲ್ಲಾ ದೇಶಗಳ ರಾಯಬಾರಿ ಕಛೇರಿಗಳು ಮುಖ್ಯ ರಸ್ತೆಯಲ್ಲಿ ಚನ್ನಾಗಿ ಕಾಣಿಸುತ್ತಿದ್ದವು. ಆದರೆ ನಮ್ಮ ದೇಶದ ರಾಯಬಾರಿ ಕಛೇರಿ ಯಾವುದೊ ಒಂದು ಮೂಲೆಯಲ್ಲಿದ್ದು ಹುಡುಕಿ ಹುಡುಕಿ ಕಂಡಿಡಿದಿದ್ದೆವು.

ಹತ್ತು ನಿಮಿಷ ಆಯಿತು. ಹದಿನೈದು ನಿಮಿಷ ಆಯಿತು. ಮೂವತ್ತು ನಿಮಿಷ ಆಯಿತು. ಯಾರೂ ನಮ್ಮ ಕಡೆಗೆ ತಿರುಗಿಯೂ ನೋಡಲಿಲ್ಲ. ದಾಸ್ ಮತ್ತು ಘೋಷ್ ಇಬ್ಬರೂ ಗೊಣಗಾಡಲು ಪ್ರಾರಂಭಿಸಿದರು. ಘೋಷ್ ಇದ್ದಕ್ಕಿದ್ದಂತೆ "ಈ ಕಾಲಾ ಲೋಗ್ ಹೈಸಿ ಹೈ ಸಾಲಾ" ಎಂದ. ದಾಸ್ ನಕ್ಕರು. ಜಗಬಂಧು "ಜಾವ್. ಜಾಕೆ ಹಿಸ್ಕಾ ಸಾತ್ ತಮಿಳ್ ಮೇ ಬಾತ್ ಕರೊ" ಎಂದರು. "ಅವ್ನ ಜೊತೆ ತಮಿಳ್‌ನಲ್ಲಿ ಮಾತನಾಡಿದರೆ ಮಾತ್ರ ನಮ್ಮ ಜೊತೆ ಮಾತನಾಡಬೇಕಾ? ಅವ್ನ ಜೊತೆ ಏನು ಮಾತು! ನಡೆಯಿರಿ ಹೋಗೋಣ" ಎಂದು ಎದ್ದೆ ಬಿಟ್ಟೆ. ನಿಜವಾಗಿಯೂ ಒಂದು ಸ್ವಲ್ಪವಾದರೂ ಕರ್ಟಸಿ ಇದಿಯಾ ಇವರಿಗೆ? ಕನಿಷ್ಟ ದೆಹಲಿಯಲ್ಲಿ ಚೀನಿ ಎಂಬಸಿಯವರು ತೋರಿಸಿದ ಮರ್ಯಾದೆಯಾದರೂ ಬೇಡವೆ ಇವರಿಗೆ? ಈ ಇಂಡಿಯನ್ಸ್ ಎಲ್ಲಿಯೂ ಹೀಗೇನೆ. ಒಂದು ಚಹ ಕೊಡುವ ಯೋಗ್ಯತೆ ಇಲ್ಲವೆ ಇವರಿಗೆ? ತು: ನಾಚಿಕೆ. ನಾವು ಇಲ್ಲಿಗೆ ಬಂದಿದ್ದೆ ತಪ್ಪಾಯಿತು. ಬೇರೆ ಎಂಬಸಿಯವರು ಯಾಗೆ ಅವರ್ನ ನೋಡಿ ಕಳುಹಿಸಿದ್ದಾರೆ ನೋಡಿ! ಹೀಗೆ ಎಲ್ಲರೂ ಬಯ್ದುಕೊಂಡು ಹೊರೆಗ ಬಂದುಬಿಟ್ಟೆವು.

ಈಗ ಹೊರಗಡೆ ರಸ್ತೆಯಲ್ಲಿ ಎಷ್ಟೊತ್ತು ಕಾಯಬೇಕೊ? ಚಳಿ ಬೇರೆ. ನಾವು ಎಲ್ಲಿಗಾದರೂ ಹೋಗಿ ಸ್ವಲ್ಪ ಹೊತ್ತು ಕಾಲ ಕಳೆಯೋಣ ಎಂದರೆ, ಕಾರು ಯಾವಾಗ ಬರುತ್ತದೊ ಏನೋ? ಬೇರೆ ದಾರಿ ಇಲ್ಲದೆ ಸುಮಾರು ಎರಡು ಗಂಟೆಗಳ ಕಾಲ ನಾವು ಎಂಬಸಿಯ ಮುಂದಿದ್ದ ಕಾವಲುಗಾರನ ಜೊತೆಗೆ ನಿಂತಿದ್ದೆವು. ಚೀನಿ ಯೋಧರು ಆ ರಸ್ತೆಯಲ್ಲಿ ಟೀಕು ಟಾಕಾಗಿ ಕಾವಾಯತ್ ನಡೆಸುತ್ತಿದ್ದರು. ಒಂದು ದೊಡ್ಡ ರೋಲರ್ ರೀತಿಯ ಯಂತ್ರ ಅಲ್ಲಿ ಮರಗಳ ಕೆಳಗೆ ಬಿದ್ದಿದ್ದ ಎಲೆಗಳನ್ನೆಲ್ಲ ಗುಡಿಸಿ ತನ್ನ ಒಡಲಿಗೆ ತುಂಬಿಸಿಕೊಳ್ಳತ್ತ ಸಾಗುತ್ತಿತ್ತು. ಕೊನೆಗೂ ಬೆನಿನ್ ಯುವಕ ಕಾರಿನಲ್ಲಿ ಹಿಂದಕ್ಕೆ ಬಂದಿದ್ದು ನಾವು ಅವರ ಜೊತೆಗೆ ಕಾರಿನಲ್ಲಿ ಕುಳಿತು ಹೊರಟೆವು. ಬೆನಿನ್ ಯುವಕ ದಾರಿಯ ಉದ್ದಕ್ಕೂ ಅವರ ಎಂಬಸಿ ಬಗ್ಗೆ ಹೇಳುತ್ತಲೆ ಹೋಗುತ್ತಿದ್ದ. "ಅವರು ನನ್ನನ್ನು ಬಿಡಲೆ ಇಲ್ಲ. ಬೇಡ ಬೇಡ ಎಂದರೂ ಒಳ್ಳೆ ಊಟ ತಿನ್ನಿಸಿದರು. ಮತ್ತೆ ಸಮಯ ಸಿಕ್ಕರೆ ಬನ್ನಿ

ಎಂದಿದ್ದಾರೆ. ನಮ್ಮ ಎಂಬಸಿ ಇದ್ದಿದ್ದರೆ ಇನ್ನೂ ಚನ್ನಾಗಿತ್ತು. ಅವರು ಟೂರ್‌ನಲ್ಲಿದ್ದಾರಂತೆ. ನೋಡಿ ಈ ಗಿಫ್ಟ್ಸ್ ಕೊಟ್ಟರು" ಎಂದು ನಮಗೆ ತೋರಿಸಿದ. ನಾವು ಮೂವರು ಒಬ್ಬರನ್ನೊಬ್ಬರು ನೋಡಿಕೊಂಡೆವು. ಕಾರು ಒಂದೇ ಸಮನೆ ಓಡುತ್ತಿತ್ತು.



ಬೀಜಿಂಗ್ ವಿಮಾನ ನಿಲ್ದಾಣದಲ್ಲಿ

ಹಿಂದಿನ ರಾತ್ರಿ ಎಲ್ಲಾ ಪ್ಯಾಕ್ ಆದ ಮೇಲೆ ಸ್ವಲ್ಪ ನೋಟ್ಸ್ ಮಾಡಿಕೊಂಡು ಮಲಗಿಕೊಂಡೆ. ಬೆಳಗ್ಗೆ ಎಲ್ಲಾದರು ಪ್ರಯಾಣ ಹೋಗುವುದಿದ್ದರೆ ನನಗೆ ರಾತ್ರಿಯೆಲ್ಲ ಸರಿಯಾಗಿ ನಿದ್ದೆ ಬರುತ್ತಿರಲಿಲ್ಲ. ರಾತ್ರಿ ಮಲಗಿದ ಮೇಲೆ ಎಷ್ಟೋ ಹೊತ್ತಿಗೆ ನಿದ್ರೆ ಬಂದಿತ್ತು. ಬೆಳಗ್ಗೆ ೬ ಗಂಟೆಗೆ ಪಕ್ಕದ ಕೋಣೆಯಲ್ಲಿದ್ದ ದಾಸ್ ಮತ್ತು ಘೋಷ್‌ಗೆ ಫೋನ್ ಮಾಡಿದೆ. ಅವರಿಬ್ಬರೂ ಆಗಲೆ ಎದ್ದಿದ್ದರು. ನಾನು ಹಲ್ಲುಜ್ಜಿ, ಸೇವ್‌ಮಾಡಿಕೊಂಡು ಬಾಥ್‌ಟಬ್ಬಿನಲ್ಲಿ ನಿಂತುಕೊಂಡು ಬಿಸಿ ನೀರು ಬರುತ್ತಿದ್ದ ಷವರ್‌ನಲ್ಲಿ ಸ್ನಾನಮಾಡಿ ಬಟ್ಟೆ ಧರಿಸಿ ತಯಾರಾದೆ. ೭:೩೦ ಗಂಟೆಗೆ ಮೂವರು ಪಕ್ಕದ ರೆಸ್ಟಾರೆಂಟಿಗೆ ಹೋಗಿ ಉಪಹಾರ ಮಾಡಿ ಬರುತ್ತಿದ್ದಂತೆ ಕಾರು ಬಂದು ರೆಸ್ಟಾರೆಂಟ್ ಮುಂದೆ ನಿಂತುಕೊಂಡಿತು.

ನಮ್ಮ ಕೋಣೆಗಳಿಗೆ ಹೋಗಿ ಲಗೇಜ್ ತೆಗೆದುಕೊಂಡು ಹೊರಕ್ಕೆ ಬರುತ್ತಿದ್ದಂತೆ ಡಾ.ವಾಂಗ್ ಮತ್ತ ಶೆಂಢಿಂಗ್ ಬಂದರು. ನಮ್ಮಲ್ಲಿದ್ದ ಕೋಣೆಗಳ ಮ್ಯಾಗ್ನೆಟ್ ಕೀಗಳನ್ನು ಅವರ ಕೈಯಿಗೆ ಕೊಟ್ಟೆವು. ಶೆಂಢಿಂಗ್ ಮತ್ತು ಕಾರಿನ ಚಾಲಕ ನಮ್ಮ ಲಗೇಜ್‌ನ್ನು ಕಾರಿನಲ್ಲಿ ಜೋಡಿಸಿದರು. ನಾವು ಒಂದತ್ತು ನಿಮಿಷ ವಾಂಗ್ ಜೊತೆಗೆ ಮಾತನಾಡಿ ಸರಿಯಾಗಿ ೮:೨೦ಕ್ಕೆ ಲಾಂಗ್‌ಫಾಂಗ್ ನಗರ ಬಿಟ್ಟೆವು. ನಮ್ಮ ಜೊತೆಯಲ್ಲಿ ನೆರೂಡ ಕೂಡ ಇದ್ದರು. ಶೀತ ಗಾಳಿ ಒಂದೇ ಸಮನೆ ಬೀಸುತ್ತಿದ್ದು, ನಾವು ಕಾರಿನ ಎಲ್ಲಾ ಕಿಟಿಕಿಗಳನ್ನು ಮುಚ್ಚಿ ಮುದುಡಿ ಕುಳಿತುಕೊಂಡೆವು. ಕಾರು ಗಂಟೆಗೆ ೧೨೦ ಕಿ.ಮೀ. ವೇಗದಲ್ಲಿ ಧಾವಿಸುತ್ತಿತ್ತು.

ಬೀಜಿಂಗ್‌ನ ಹೊರವಲಯದ ರಿಂಗ್ ರಸ್ತೆಗಳ ಮೂಲಕ ೯:೩೦ಕ್ಕೆ ಬೀಜಿಂಗ್ ವಿಮಾನ ನಿಲ್ದಾಣ ತಲುಪಿದೆವು. ಮೊದಲನೇ ಬಾಗಿಲಲ್ಲಿ ಹಾಂಗ್‌ಕಾಂಗ್‌ಗೆ ಹೋಗುವ ವಿಮಾನಗಳ ವಿವರಗಳಿದ್ದು ಒಳಕ್ಕೆ ಹೊರಟೆವು. ನಾವು ಮೂವರು ಚೀನಾದ ಕರನ್ಸಿಯನ್ನು ಪೂರ್ಣವಾಗಿ ಖರ್ಚುಮಾಡಿ ಸ್ವಲ್ಪ ಯುಎಸ್ ಡಾಲರ್ಸ್ ಮಾತ್ರ ಇಟ್ಟುಕೊಂಡಿದ್ದೆವು.

ನಮ್ಮ ಲಗೇಜನ್ನು ಏರ್‌ಪೋರ್ಟ್‌ನವರು ಮತ್ತೊಮ್ಮೆ ಪ್ಯಾಕ್ ಮಾಡಿ ಒಂದೊಂದಕ್ಕೆ ೧೦ ಯುಯಾನ್‌ನಂತೆ ೬೦ ಯುಯಾನ್ ಕೊಡಬೇಕೆಂದರು. ನಮ್ಮ ಬಳಿ ೧ ಯುಯಾನ್ ಕೂಡ ಇಲ್ಲದೆ ಯುಎಸ್ ಡಾಲರ್ಸ್ ಕೊಟ್ಟೆವು.

ನಮ್ಮ ಜಗಬಂಧು "ತುತ್ತೆರಿಕೆ. ಸಾಲ ಸಭ್ ಸತ್ಯನಾಶ್ ಹೋಗಯ. ಬಹುತ್ ಬುಕ್ಸಾನ್ ಹೋಗಯ" ಎಂದು ಗೋಣಗಾಡುತ್ತ ಓಡಾಡತೊಡಗಿದರು. ಅಲ್ಲಿಂದ ಟ್ರಾನ್ಸ್‌ಫರ್ ಡೆಸ್ಕ್‌ಗೆ ಹೋಗಿ ನಮ್ಮ ಲಗೇಜನ್ನು ನೇರವಾಗಿ ದೆಹಲಿಗೆ ಕಳುಹಿಸಿ ಎಂದಿದ್ದೆ "ನೊ ಪ್ರಾಬ್ಲಮ್" ಎಂದು ಲಗೇಜನ್ನು ದೆಹಲಿಗೆ ಬುಕ್ ಮಾಡಿದರು. ನಮ್ಮ ಜೊತೆಯಲ್ಲಿ ಒಂದೊಂದು ಬ್ಯಾಗ್ ಮಾತ್ರ ಇಟ್ಟುಕೊಂಡೆವು. ೧೦:೩೦ಕ್ಕೆ ಎಲ್ಲಾ ಪಾರ್ಮ್ಯಾಲಿಟಿಸ್ ಮುಗಿಸಿ ಹಾಂಗ್‌ಕಾಂಗ್‌ನ ಡ್ರ್ಯಾಗನ್ ಏರ್ ವಿಮಾನಕ್ಕಾಗಿ ವೆಯಿಟಿಂಗ್ ಹಾಲ್‌ನಲ್ಲಿ ಕಾಯುತ್ತ ಕುಳಿತುಕೊಂಡೆವು.



ಬೀಜಿಂಗ್ ನಗರದ ರಾತ್ರಿಯ ನೋಟ

ನಮ್ಮ ವಿಮಾನ ಬೀಜಿಂಗ್‌ನಿಂದ ಮಧ್ಯಾಹ್ನ ೧೨:೧೫ ಕ್ಕೆ ಹೊರಟು ಸಾಯಂಕಾಲ ೪ ಗಂಟೆಗೆ ಹಾಂಗ್‌ಕಾಂಗ್ ತಲುಪಿದರೆ ಅಲ್ಲಿ ಸಾಯಂಕಾಲ ೫:೩೦ಕ್ಕೆ ಏರ್ ಇಂಡಿಯಾ ಹಿಡಿಯಬೇಕಿತ್ತು. ಡ್ರ್ಯಾಗನ್ ಏರ್ ಸರಿಯಾದ ಸಮಯಕ್ಕೆ ಹಾಂಗ್‌ಕಾಂಗ್ ತಲುಪಿದರೆ ನಮಗೆ ೧:೩೦ ಗಂಟೆ ಸಮಯವಿರುತ್ತದೆ. ಗೇಟನಲ್ಲಿ ಬೋರ್ಡಿಂಗ್ ಸಮಯ ೧೧:೪೫ ಎಂದು ಬರೆಯಲಾಗಿತ್ತು. ಸರಿಯಾಗಿ ೧೨:೧೫ಕ್ಕೆ ವಿಮಾನ ಹೊರಡುತ್ತದೆ ಎಂದುಕೊಂಡೆವು. ಸಮಯ ಹತ್ತಿರವಾದಂತೆ ಬೋರ್ಡಿನ ಮೇಲೆ ಹೊರಡುವ ಸಮಯ ೧೨:೧೫ ಎಂದು ಬದಲಾಯಿಸಲಾಯಿತು. ಇದನ್ನು ನೋಡಿದ ನನಗೆ ಟೆನ್ಶನ್ ಸಣ್ಣಗೆ ತಲೆಗೆ ಏರತೊಡಗಿತು. ಕಾರಣ ಏನು ಎಂದು ಕೇಳಿದಾಗ ತಾಂತ್ರಿಕ ತೊಂದರೆ ಎಂದರು. ನಾವು ೫:೩೦ಕ್ಕೆ ಹಾಂಗ್‌ಕಾಂಗ್‌ನಲ್ಲಿ ಏರ್ ಇಂಡಿಯಾ-೩೧೫ ವಿಮಾನ ಹಿಡಿಯಬೇಕು ಎಂದೆ. ಸದ್ಯಕ್ಕೆ ಏನೂ ತೊಂದರೆ ಇಲ್ಲ. ಒಂದು ಗಂಟೆಯವರೆಗ


ನೋಡಿ ಆಮೇಲೆ ಯೋಚಿಸೋಣ ಎಂದರು ಅಧಿಕಾರಿಯೊಬ್ಬರು. ನಾಳೆ ಒಳಗೆ ಡೆಲ್ಲಿ ತಲುಪಿದರೆ ಅಲ್ಲಿಂದ ಬೆಂಗಳೂರಿಗೆ ಹೊರಡುವ ಟಿಕೆಟ್ ಕೂಡ ನನ್ನಲ್ಲಿದ್ದು ಅದರ ಕಥೆ ಏನಾಗಬಹುದು? ಒಂದು ಕಡೆ ಎಡವಟ್ಟಾದರೆ ಎಷ್ಟು ತೊಂದರೆಯಾಗುತ್ತದೆ? ನಿಮಿಷ ನಿಮಿಷಕ್ಕೂ ಟೆನ್ಶನ್ ಇನ್ನಷ್ಟು ಮತ್ತಷ್ಟು ತಲೆಗೆ ಏರಿ ತಲೆ ಭಾರವಾದಂತೆ ಕಂಡಿತು.

ಸಮಾರು ೧೨:೪೦ ಕ್ಕೆ ಎಲ್ಲರೂ ಸಾಲಾಗಿ ಬನ್ನಿ ಎಂದಿದ್ದೆ ಎಲ್ಲರೂ ನಿಂತುಕೊಂಡೆವು. ಕೇವಲ ಕಾಲು ಗಂಟೆಯಲ್ಲಿ ವಿಮಾನ ತುಂಬಿಹೋಯಿತು. ಇನ್ನೇನು ವಿಮಾನ ಆಕಾಶಕ್ಕೆ ಹಾರುತ್ತದೆ ಎಂದುಕೊಳ್ಳುತ್ತಿದ್ದಂತೆ ನಮ್ಮ ಹಳ್ಳಿಯ ಬಸ್ಸಿನಂತೆ "ಕ್ಯೂ... ಕೀ... ಕ್..." ಎಂದು ಸದ್ದು ಮಾಡುತ್ತಾ ನಿಂತಲ್ಲೆ ನಿಂತಿತ್ತು. ಬರುವಾಗ ಬೆಂಗಳೂರಿನಿಂದ ಬೀಜಿಂಗ್‌ವರೆಗೂ ಟೆನ್ಶನ್ ಈಗ ಬೀಜಿಂಗ್‌ನಿಂದ ಎಲ್ಲಿಯವರೆಗೆ ಈ ಟೆನ್ಶನ್? ತಲೆ ಚಕ್ಕರ್ ಹೊಡೆಯುತ್ತಿತ್ತು. ಸಮಯ ೧:೧೫ ಗಂಟೆ. ನಮ್ಮ ವಿಮಾನ ಇನ್ನೂ ಬೀಜಿಂಗ್ ವಿಮಾನದಲ್ಲಿಯೆ ಬೆಂಗಳೂರಿನ ಅಟೋಗಳಂತೆ ಸುತ್ತಿ ಸುತ್ತಿ ಅಲ್ಲೆ ಬಂದು ನಿಂತುಕೊಳ್ಳುತ್ತಿತ್ತು. ತುಃ ಎಲ್ಲಾದರೂ ಹಾಳಾಗಿ ಹೋಗಲಿ, ಎಷ್ಟೊತ್ತಿಗಾದರೂ ಹೋಗಲಿ, ಎಂದು ನನ್ನ ಸೀಟಿನಲ್ಲಿ ಮುದುರಿ ಕುಳಿತುಕೊಂಡುಬಿಟ್ಟೆ. ಸರಿಯಾಗಿ ೧:೩೦ ಕ್ಕೆ ವಿಮಾನ ಆಕಾಶಕ್ಕೆ ಹಾರಿತು. ಬೀಜಿಂಗ್ ಮತ್ತು ಹಾಂಗ್‌ಕಾಂಗ್‌ನ ಮಧ್ಯ ೩:೪೦ ನಿಮಿಷಗಳ ಪ್ರಯಾಣವಿದ್ದು, (೧.೩೦ + ೩:೪೦) ಸಾಯಂಕಾಲ ೫ ಗಂಟೆ ೧೦ ನಿಮಿಷಕ್ಕೆ ತಲುಪಬಹುದು. ಅಲ್ಲಿ ಇಳಿದು ಡೆಸ್ಕ್‌ಟ್ರಾನ್ಸ್‌ಪರ್, ಲಗೇಜ್ ಚೆಕ್ಕಿಂಗ್ ಮುಗಿಸುವುದು ಯಾವಾಗ? ಹುಃ ಏನಾದರೂ ಆಗಲಿ ಎಂದು ಸುಮ್ಮನೆ ಕುಳಿತುಕೊಂಡೆ. ಒಂದು ಟಿನ್ನು ಬೀರು ಕುಡಿದು ಒಂದಷ್ಟು ಊಟ ಮಾಡಿ ಸ್ವಲ್ಪ ಸುಧಾರಿಸಿಕೊಂಡೆ.

ಪರದೆಯ ಮೇಲೆ "ಚಿಕಾಗೊ ೨೦೩೫" ಎನ್ನುವ ಇಂಗ್ಲಿಷ್ ಸಿನಿಮಾ ಬರುತ್ತಿದ್ದು, ಆ ಸಿನಿಮಾ ಮುಗಿಯುತ್ತಿದ್ದಂತೆ ಪರದೆಯ ಮೇಲೆ ವಿಮಾನದ ಬಗ್ಗೆ ವಿವರಗಳು ಕಾಣಿಸಿಕೊಂಡವು. ವಿಮಾನ ೩೯೫೦೦ ಅಡಿಗಳ ಮೇಲೆ ಹಾರುತ್ತಿದ್ದು ಹೊರಗಿನ ತಾಪಮಾನ -೬೫ ಡಿಗ್ರಿ ಸೆಲ್ಸಿಯಸ್ ಇದ್ದು ವಿಮಾನ ಗಂಟೆಗೆ ೯೦೦ ಕಿ.ಮೀ ವೇಗದಲ್ಲಿ ಹಾರುತ್ತಿತ್ತು. ೪೨ ನಿಮಿಷಗಳಲ್ಲಿ ವಿಮಾನ ಹಾಂಗ್‌ಕಾಂಗ್ ತಲುಪುವುದಾಗಿ ಪರದೆಯ ಮೇಲೆ ಕಾಣಿಸಿಕೊಂಡಿತು. ದಿಢೀರನೆ ಕೈಗಡಿಯಾರ ನೋಡಿಕೊಂಡೆ. ಸಮಯ ಸರಿಯಾಗಿ ೪ ಗಂಟೆ. ಅರೆ ೪:೪೨ ಕ್ಕೆ ಹಾಂಗ್‌ಕಾಂಗ್ ತಲುಪುತ್ತದೆ. ಅಂದರೆ ವಿಮಾನ ತನ್ನ ನಿಗದಿತ ವೇಗಕ್ಕಿಂತ ಹೆಚ್ಚು ವೇಗದಲ್ಲಿ ಹಾರುತ್ತಿದ್ದು, ಅರ್ಧಗಂಟೆ ಸಮಯವನ್ನು ಮೇಕ್‌ಅಫ್ ಮಾಡಿತ್ತು.

ಹಾಂಗ್‌ಕಾಂಗ್‌ನಲ್ಲಿ ೪೫ ನಿಮಿಷ ಸಮಯವಿದ್ದು, ಏರ್‌ಇಂಡಿಯಾ ಹಿಡಿಯಲು ತೊಂದರೆ ಇಲ್ಲ ಎಂದುಕೊಂಡೆ. ದಾಸ್ ಮತ್ತು ಜಗಬಂಧು ಒಂದು ಕಡೆ ಕುಳಿತಿದ್ದು, ನಾನು ಒಂದು ಕಿಟಕಿ ಪಕ್ಕ ಕುಳಿತುಕೊಂಡು ಹೊರಕ್ಕೆ ನೋಡುತ್ತಿದ್ದೆ. ಮನಸ್ಸು ಒಂದೇ

ಸಲಕ್ಕೆ ಸ್ವಲ್ಪ ನಿರಾಳವಾಗಿ ಅಬ್ಬಾ ದೇವರೆ ಎಂದುಕೊಂಡೆ. ಹತ್ತು ನಿಮಿಷ ನನ್ನ ಮನಸು ಹಗುರವಾಗಿತ್ತು ಅಷ್ಟೆ. ಇದ್ದಕ್ಕಿದ್ದಾಗೆ ವಿಮಾನ ದಾರಿ ತಪ್ಪಿದಂತೆ ಹಾಂಗ್‌ಕಾಂಗ್ ನಗರದ ಕಡೆಗೆ ತಿಕಾ ತೋರಿಸಿ ಸಮುದ್ರದ ಕಡೆಗೆ ಹೊರಟುಬಿಟ್ಟಿತು. ಈಗ ವಿಮಾನ ಹಾಂಗ್‌ಕಾಂಗ್‌ನಿಂದ ದೂರಕ್ಕೆ ಸಮುದ್ರದ ಮೇಲೆ ಹಾರುತ್ತಿತ್ತು. ನನಗೆ ಈಗ ಏನು ಮಾಡಬೇಕೊ ಯಾರಿಗೆ ಹೇಳಬೇಕೊ ಒಂದೂ ಅರ್ಥವಾಗಲಿಲ್ಲ. ವಿಮಾನ ಹಾರುತ್ತಿದ್ದ ದಿಕ್ಕು ಮತ್ತು ಇನ್ನಿತರ ವಿವರಗಳನ್ನು ನೋಡುತ್ತ ಕುಳಿತುಬಿಟ್ಟೆ. ಯಾಕೋ ಈ ದಿನ ನನ್ನ ಜೀವನದಲ್ಲಿ ಅತಿ ಕಠಿಯ ದಿನವಾಗಲಿದೆ ಎನ್ನಿಸಿತು. ಮತ್ತೆ ಏನಾದರೂ ಆಗಲಿ ಎಂದು ಕಿಟಕಿಯಲ್ಲಿ ಸುಮುದ್ರದ ಕಡೆಗೆ ಸುಮ್ಮನೆ ನೋಡತೊಡಗಿದೆ.



ಬೀಜಿಂಗ್ 2008 ಒಲಂಪಿಕ್ಸ್‌ಗೆ ಸಜ್ಜಾಗುತ್ತಿರುವ ಒಂದು ಕ್ರೀಡಾಂಗಣ

ವಿಮಾನ ಸಮುದ್ರದ ಮೇಲೆ ಹನುಮಂತನ ಬಾಲದಂತೆ ಒಂದು ಸುತ್ತಾಕಿ ಮತ್ತೆ ಹಾಂಗ್‌ಕಾಂಗ್ ಕಡೆಗೆ ಮುಖ ಮಾಡಿ ಚಲಿಸುತ್ತಿತ್ತು. ಕೊನೆಗೆ ಸಮುದ್ರದ ಮೇಲೆ ಹಾರುತ್ತ ಕೆಳಕ್ಕೆ ಇಳಿಮುಖ ಮಾಡಿತು. ಇದೇನು ಸಮುದ್ರದಲ್ಲಿ ಬೀಳಲು ಹೋಗುತ್ತಿದಿಯಾ ಏನು? ಎನ್ನುವ ಅನುಮಾನ ಬಂದರು ಸುಮ್ಮನೆ ಕುಳಿತಿದ್ದೆ. (ಹಾಂಗ್‌ಕಾಂಗ್‌ನ ಈ ವಿಮಾನ ನಿಲ್ದಾಣವನ್ನು ನಿರ್ಮಿಸುವಾಗ ಸ್ಥಳವಿಲ್ಲದೆ ಸಮುದ್ರವನ್ನೇ ಹಿಂದಕ್ಕೆ ತಳ್ಳಿ ನಿಲ್ದಾಣ ಮಾಡಲಾಗಿತ್ತು. ೨೬ ಡಿಸೆಂಬರ್, ೨೦೦೪ ರಂದು ಸಂಭವಿಸಿದ ಸುನಾಮಿಯಿಂದ ಇದು ಪೂರ್ಣವಾಗಿ ತೊಂದರೆಗೊಳಗಾಗಿತ್ತು) ಸಾಯಂಕಾಲ ೫:೦೫ಕ್ಕೆ ಇನ್ನೇನು ಸಮುದ್ರದಲ್ಲಿ ಬೀಳುತ್ತದೆ ಎನ್ನುವಂತೆ ಸಮುದ್ರದ ದಂಡೆಯ ಮೇಲಿನ ವಿಮಾನ ನಿಲ್ದಾಣದಲ್ಲಿ ಇಳಿದುಕೊಂಡಿತು. ವಿಮಾನ ನಿಲ್ಲುತ್ತಿದ್ದಂತೆ, ನಾವು ಮೂವರು ಎಲ್ಲರನ್ನೂ ತಳ್ಳಿಕೊಂಡು ಹೊರಕ್ಕೆ ಓಡಿದೆವು. ಹೊರಗೆ ಬಾಗಿಲಲ್ಲಿ ನಾಲ್ಕಾರು ಜನ ಏರ್‌ಹೋಸ್ಟೆಸ್ ಫಲಕಗಳನ್ನು ಹಿಡಿದುಕೊಂಡು ನಿಂತಿದ್ದರು. ನಾವು ಯಾವುದನ್ನೂ ನೋಡದೆ ಒಂದೇ ಓಟ ಕಿತ್ತೆವು. ಗಗನಸಖಿಯೊಬ್ಬಳು ನಮ್ಮನ್ನು ನೋಡಿ "ಇಂದಿಯಾ... ಇಂದಿಯಾ..." ಎಂದು ಹಿಂದೆಯೆ ಓಡಿಬಂದಳು.


ಅವಳ ಕೈಯಲ್ಲಿ ಏಐ೩೧೫ ಇದ್ದದ್ದು ನೋಡಿ ನನಗೆ ಹೋಗಿದ್ದ ಪ್ರಾಣ

ಬಂದಂತಾಯಿತು.

"ನೀವು ಲಗೇಜ್ ಇಲ್ಲದೆ ಹೋಗ್ತೀರಾ?" ಆಕೆಯ ಮೊದಲ ಪ್ರಶ್ನೆ. "ಎಸ್" ಎಂದೆ. ಆಗಲೆ ನೂರು ಮೀಟರ್ ಮುಂದೆ ಹೋಗಿದ್ದ ದಾಸ್‌ನನ್ನು ಹಿಂದಕ್ಕೆ ಕರೆದೆ. ಗಗನಸಖಿ ಮುಂದೆ ನಾವು ಹಿಂದೆ. ಅಲ್ಲಿ ಇಲ್ಲಿ ಸುತ್ತಿ ಬಳಸಿ, ಹತ್ತಿ ಇಳಿದು ಎಲ್ಲವನ್ನೂ ಮುಗಿಸಿ ವಿಮಾನದಲ್ಲಿ ಕುಳಿತುಕೊಂಡಾಗ ಸಮಯ ೫:೨೦ ಗಂಟೆ. ಇನ್ನೇನಾದರೂ ಆಗಲಿ ಭಾರತ ತಲುಪಿಬಿಟ್ಟೆವೆಂದು ಉಸಿರು ಬಿಡುತ್ತ ಮೂವರು ನಮಗೆ ಸಿಕ್ಕಿದ್ದ ಬೇರೆ ಬೇರೆ ಸೀಟುಗಳಲ್ಲಿ ಕುಳಿತುಕೊಂಡೆವು.

ವಿಮಾನ ಸರಿಯಾದ ಸಮಯಕ್ಕೆ ಅಂದರೆ ೫:೩೦ಕ್ಕೆ ಆಕಾಶದ ಕಡೆಗೆ ಹಾರಿತು. ನೀರು ಮತ್ತು ಜ್ಯೂಸು ಕುಡಿದ ಮೇಲೆ ೨೫ ದಿನಗಳ ಮೇಲೆ ನನ್ನ ಕೈಯಿಗೆ ಮೊಸರು ಪಾಕೆಟ್ ಸಿಕ್ಕಿತ್ತು. ಒಂದಷ್ಟು ಪಾಯಸ ಮಸಾಲೆ ಹಾಕಿದ್ದ ಪಲ್ಯ, ಒಂದೆರಡು ಚಿಕನ್ ತುಂಡುಗಳು. ಎಲ್ಲವನ್ನು ತಿಂದ ಮೇಲೆ ಸ್ವಲ್ಪ ಸಮಾಧಾನವಾಯಿತು. ಹಿಂದಿ ಹಾಡುಗಳು, ಒಂದಷ್ಟು ಹಿಂದಿ ಧಾರಾವಾಹಿಗಳ ತುಣುಕುಗಳು ಪರದೆ ಮೇಲೆ ಬರುತ್ತಿದ್ದವು.

ಭಾರತದ ಸಮಯ ರಾತ್ರಿ ೯:೦೦ಕ್ಕೆ ದೆಹಲಿ ವಿಮಾನ ನಿಲ್ದಾಣದಲ್ಲಿ ನಾವಿದ್ದ ವಿಮಾನ ಇಳಿದಿತ್ತು. ಆಗ ನನ್ನ ಗಡಿಯಾರದಲ್ಲಿ ೧೧:೩೦ ತೋರಿಸುತ್ತಿತ್ತು. ಕೂಡಲೆ ಗಡಿಯಾರದ ಮುಳ್ಳುಗಳನ್ನು ೨ ಗಂಟೆ ೩೦ ನಿಮಿಷ ಹಿಂದಕ್ಕೆ ದೂಡಿದೆ. ನಮ್ಮ ಲಗೇಜ್ ಬಂದರೂ ಬರಬಹುದೆಂದು ಕೊನೆಯವರೆಗೂ ನೋಡಿದೆವು, ಬರಲಿಲ್ಲ. ನಮ್ಮ ಲಗೇಜ್ ಬಗ್ಗೆ ದೂರು ನೀಡಿದ ಮೇಲೆ ನಮ್ಮ ಲಗೇಜ್ ಬೆಳಗಿನ ಜಾವ ೧:೩೦ಕ್ಕೆ ದೆಹಲಿಗೆ ಬರುವ ಕ್ಯಾತೆ ಏರ್‌ವೇ ೭೫೩ ರಲ್ಲಿ ಬರಬಹುದೆಂದು ತಿಳಿದ ಮೇಲೆ ಲಗೇಜ್ ಪಡೆಯಲು ನಿಲ್ದಾಣದಲ್ಲಿಯೆ ಕಾಯುವುದಾಗಿ ತಿರ್ಮಾನಿಸೆದೆವು. ದಾಸ್‌ನನ್ನು ಹೊರಕ್ಕೆ ಕಳುಹಿಸಿ ನಮ್ಮ ದೆಹಲಿ ಕಛೇರಿಯ ಕಾರ್ ಡ್ರೈವರ್ ಬಂದಿದ್ದಾರೇನೋ ನೋಡಿ ಬಾ ಎಂದೆ. ದಾಸ್ ಹೊರಗೆ ನೋಡಿ ಬಂದು ಡ್ರೈವರ್ ಇಲ್ಲ ಎಂದು ತಿಳಿಸಿದ. ಸಮಯ ೧೦:೩೦ ಗಂಟೆ. ನಮಗಾಗಿ ಕಾದು ಕಾದು ಸಾಕಾದ ಡ್ರೈವರ್ ನಾವು ಬಂದಿಲ್ಲ ಎಂದು ಹಿಂದಕ್ಕೆ ಹೋಗಿರಬಹುದೆಂದು ನಿಲ್ದಾಣದ ಒಳಗೆಯೆ ಕುಳಿತುಕೊಂಡೆವು.



ಮಹಾಗೋಡೆಯ ಆರ್ಥಿಕ ಬೆಳವಣಿಗೆ

ಅಮೆರಿಕಾದ ಒಂದು ಡಾಲರ್‌ಗೆ ಚೀನಾದ ೮.೨೧ ಯುಯಾನ್ ಸಮ. ಅದೆ ಒಂದು ಯುಎಸ್ ಡಾಲರ್‌ಗೆ ಭಾರತದ ೪೭ ರೂಪಾಯಿಗಳು ಸಮ.

ಕ್ರಿ.ಶ.೧೯೮೫–೮೬, ಅಂದರೆ ಸರಿಯಾಗಿ ೨೨ ವರ್ಷಗಳ ಹಿಂದೆ ನಮ್ಮ ವಿಭಾಗದಲ್ಲಿ ಹೊಸದಾಗಿ ಆಯ್ಕೆಯಾದ ಭೂವಿಜ್ಞಾನಿಗಳಿಗೆ ಒಂದು ವರ್ಷ ಕಾಲ ಭಾರತದಾದ್ಯಂತ ತರಬೇತಿ ನೀಡಿದ್ದರು. ಆ ತರಬೇತಿಯಲ್ಲಿ ನಾನೂ ಇದ್ದೆ. ಅದೇ ರೀತಿಯ ತರಬೇತಿಯನ್ನು ನಮ್ಮ ವಿಭಾಗ ಇಂದಿಗೂ ನೀಡುತ್ತಾ ಬಂದಿದೆ. ಆ ಕಾಲಕ್ಕೆ ಚೀನಾ ದೇಶ ತೀರಾ ಬಡ ದೇಶವಾಗಿ ಪ್ರಪಂಚದ ಕಣ್ಣಿನಲ್ಲಿ "ಸಿಕ್‌ಮೆನ್ ಆಫ್ ಈಸ್ಟ್ ಏಷಿಯಾ" ಎನ್ನುವ ಹಣೆ ಪಟ್ಟಿಯನ್ನು ಕಟ್ಟಿಕೊಂಡಿತ್ತು. ಆ ತರಬೇತಿಗೆ ಚೀನಾದಿಂದ ಜಿಯಾಂಕೋ ಲೀ ಎಂಬ ಭೂವಿಜ್ಞಾನಿಯೊಬ್ಬರು ಭಾರತಕ್ಕೆ ಬಂದಿದ್ದರು. ಅವರು ಹೇಳಿದ ಒಂದು ಚೀನಿ ಕಥೆಯನ್ನು ನಾನು ಕನ್ನಡದಲ್ಲಿ ಬರೆದು ಅದು ಸುದ್ದಿ ಸಂಗಾತಿ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಭಾರತದಾದ್ಯಂತ ಓಡಾಡಿದ್ದ ಜಿಯಾಂಕೋ ಲೀ ಅಂದಿನ ಭಾರತದ ಕೆಲವು ಪ್ರಾಜೆಕ್ಟ್‌ಗಳನ್ನು ನೋಡಿ ಮುಖವನ್ನು ಊದಿಸಿಕೊಂಡಿದ್ದರು. ಅಂದರೆ ಅಸೂಯೆ ಪಟ್ಟಿದ್ದರು. ಆದರೆ ಈಗ ಚೀನಾದ ಪ್ರಗತಿಯನ್ನು ನೋಡಿದ ಮೇಲೆ ಅದೇ ರೀತಿಯ ಅಸೂಯೆ ಮತ್ತು ನಾಚಿಕೆ ನನ್ನಲ್ಲಿ ಉಂಟಾಗಿತ್ತು.

ಚೀನಾ ಕಳೆದ ಮೂರ ದಶಕಗಳಿಂದ ಆರ್ಥಿಕ ಅಭಿವೃದ್ಧಿಯಲ್ಲಿ ದೃಢವಾಗಿ ಬೆಳೆಯುತ್ತಿದೆ. ಭಾರತ ತೆರೆದ ಸಮಾಜವಾದರೆ ಚೀನಾ ಅದಕ್ಕೆ ವಿರುದ್ಧವಾದುದು, ಭಾರತದ ಗೋಜಲು ರಾಜಕೀಯವು ದೇಶದ ಆರ್ಥಿಕ ಅಭಿವೃದ್ಧಿಯ ಕುಂಟಿತಕ್ಕೆ ಸ್ವಲ್ಪ ಕಾರಣ ಎಂದು ಹೇಳಲಾಗುತ್ತಿದೆ. ಆದರೆ ಅದು ಸುಳ್ಳು ಎನ್ನುತ್ತಾರೆ ಕೆಲವು ಆರ್ಥಿಕ ತಜ್ಞರು. ಹಾಗಾದರೆ ಮುಖ್ಯವಾದ ಕಾರಣಗಳೇನು?

ಒಂದು ಕಾಲಕ್ಕೆ ಕಮ್ಯೂನಿಷ್ಟ್ ಸರಕಾರದ ವಶದಲ್ಲಿದ್ದ ಭೂಮಿಯನ್ನು ಚೀನಾ

೭೦ ರ ದಶಕದಲ್ಲಿ ರೈತರಿಗೆ ಒಪ್ಪಿಸಿ, ಕಾರ್ಖಾನೆಗಳನ್ನು ಸ್ಥಾಪಿಸಿ ಹಳ್ಳಿ, ಪಟ್ಟಣಗಳಲ್ಲಿ ಮಾರುಕಟ್ಟೆಗಳನ್ನು ಪ್ರಾರಂಭಿಸಿದ ಮೇಲೆ ಚೀನಾದವರ ಸರಾಸರಿ ಆದಾಯ ಹೆಚ್ಚುತ್ತಾ ಹೋಯಿತು. ಭಾರತದಲ್ಲಿ ಅಂತಹ ವ್ಯವಸ್ಥೆ ಯಾವಾಗಲೂ ಪೂರ್ಣವಾಗಿ ನಡೆಯಲಿಲ್ಲ. ಚೀನಾ ಈ ನಿಟ್ಟಿನಲ್ಲಿ ಭಾರತಕ್ಕಿಂತ ಮೊದಲೆ ಆರ್ಥಿಕ ಅಭಿವೃದ್ಧಿಗಳ ಮಾರ್ಪಾಟುಗಳನ್ನು ಅಳವಡಿಸಿಕೊಂಡು ಇಡೀ ದೇಶದ ಜನರನ್ನು ಅಕ್ಷರಸ್ಥರನ್ನಾಗಿಸಿ, ಆರೋಗ್ಯದ ಬಗ್ಗೆ ಹೆಚ್ಚು ಗಮನವನ್ನು ನೀಡಿತು.



ಬೀಜಿಂಗ್‌ನಗರದ ಒಂದು ನೋಟ

ನಿರುದ್ಯೋಗ, ಪ್ರಾದೇಶಿಕ ತಾರತಮ್ಯ ಮತ್ತು ಬಡತನ ಎರಡೂ ದೇಶಗಳ ಸಮಸ್ಯೆಗಳು. ಹಾಗೆ ಜನಸಂಖ್ಯೆ ಸಮಸ್ಯೆಯ ಜೊತೆಗೆ ಅಪಾರ ಸಂಪನ್ಮೂಲವನ್ನು ಕ್ರೂಡೀಕರಣ ಮಾಡಬೇಕಾಗಿದೆ. ೧೯೯೦ರವರೆಗೂ ಚೀನಾದ ಜಿಡಿಪಿ (ಗ್ರಾಸ್ ಡೊಮೆಸ್ಟಿಕ್ ಪ್ರಾಡೆಕ್ಟ್) ಭಾರತದ ಜಿಡಿಪಿಯನ್ನು ದಾಟಿರಲಿಲ್ಲ. ಭಾರತದ ಜಿಡಿಪಿ ೧೯೮೦ರಲ್ಲಿ ಶೇಕಡ ೫.೬ ರಷ್ಟಿದ್ದು ೧೯೯೧ ರಿಂದ ೨೦೦೩ ರ ನಡುವೆ ೫.೮ ಕ್ಕೆ ಏರಿತ್ತು. ಆದರೆ ಚೀನಾದ ಜಿಡಿಪಿ ೧೯೮೦ರಲ್ಲಿ ಶೇಕಡ ೯.೩ ರಷ್ಟಿದ್ದು ೧೯೯೧ ರಿಂದ ೨೦೦೩ ರ ನಡುವೆ ೯.೭ ಕ್ಕೆ ಏರಿತ್ತು ಈಗ ಅದು ೧೨ ದಾಟಿದೆ. ಇದಕ್ಕೆ ಮುಖ್ಯ ಕಾರಣ ಚೀನಾ ತನ್ನ ಜನಸಂಖ್ಯೆಯನ್ನು ಕಡಿಮೆ ಮಾಡಿಕೊಳ್ಳುತ್ತಾ ಹೋದರೆ ಭಾರತ ತನ್ನ ಜನಸಂಖ್ಯೆಯನ್ನು ಒಂದೇ ಸಮನೆ ಹೆಚ್ಚಿಸಿಕೊಳ್ಳುತ್ತಾ ಹೋಯಿತು. ಈ ಕಾರಣದಿಂದಾಗಿ ಭಾರತದ ಜಿಡಿಪಿ ಪೂರ್ಣವಾಗಿ ದಾರಿ ತಪ್ಪಿತ್ತು. ಭಾರತದ ಸರಾಸರಿ ಜಿಡಿಪಿ ಶೇಕಡ ೪ ಕ್ಕೆ ಇಳಿದರೆ, ಚೀನಾದ ಜಿಡಿಪಿ ೮.೫ ಕ್ಕೆ ಏರಿತು. ಇದರಿಂದ ಚೀನಾದ ಒಬ್ಬ ಮನುಷ್ಯನ ಸರಾಸರಿ ವರಮಾನ ೨೦೦೩ ರಲ್ಲಿ ೧೧೦೦ ಯುಎಸ್ ಡಾಲರಾದರೆ, ಅದೇ ಭಾರತದ ಒಬ್ಬ ಮನುಷ್ಯನ ಸರಾಸರಿ ವರಮಾನ ೫೩೦

ಯುಎಸ್ ಡಾಲರ್. ಇದರಿಂದ ಚೀನಾದವರ ಕೊಂಡುಕೊಳ್ಳುವ ಶಕ್ತಿ ಭಾರತೀಯರಿಗಿಂತ ೨೦ ಪಟ್ಟು ಹೆಚ್ಚಿತು.

ಇದರಿಂದ ಅಂತರಾಷ್ಟ್ರೀಯ ವ್ಯವಹಾರದಲ್ಲಿ ಇನ್ನೂ ಹೆಚ್ಚಿನ ವ್ಯತ್ಯಾಸ ಕಾಣಿಸಿಕೊಂಡಿತು. ೧೯೯೦ ರಲ್ಲಿ ಚೀನಾ ಪ್ರಪಂಚದ ಒಟ್ಟು ವ್ಯಾಪಾರದಲ್ಲಿ ಶೇಕಡ ೧.೯ ರಷ್ಟು ರಫ್ತು ಮಾಡಿ, ಶೇಕಡ ೧.೬ ರಷ್ಟು ಅಮದು ಮಾಡಿಕೊಂಡಿತು. ೨೦೦೩ ರಲ್ಲಿ ಚೀನಾದ ರಫ್ತು ಪ್ರಪಂಚದ ಒಟ್ಟು ರಫ್ತಿನಲ್ಲಿ ಶೇಕಡ ೫.೮ ಇದ್ದು ಆಮದು ಶೇಕಡ ೫.೩ ಆಯಿತು. ಕಳೆದ ವರ್ಷ ಮತ್ತೆ ಅದರ ಆಮದು ಮತ್ತು ರಫ್ತು ಶೇಕಡ ೩೬ ವೃದ್ಧಿಸಿ ಜಪಾನ್ ದೇಶವನ್ನು ಹಿಂದಕ್ಕೆ ಹಾಕಿ ಪ್ರಪಂಚದಲ್ಲಿ ಮೂರನೇ ಸ್ಥಾನಕ್ಕೆ ಏರಿತು. ಅಮೆರಿಕಾ ಮೊದಲನೆ ದೇಶವಾದರೆ ಜರ್ಮನಿ ಎರಡನೆ ದೇಶ. ಭಾರತದ ಒಟ್ಟು ಆಮದು ಮತ್ತು ರಫ್ತು ವ್ಯವಹಾರ ಪ್ರಪಂಚದಲ್ಲಿ ಕೇವಲ ೧ ಭಾಗಕ್ಕಿಂತ ಕಡಿಮೆ. ಭಾರತ, ಚೀನಾ ದೇಶವನ್ನು ಯಾವ ರೀತಿಯಲ್ಲಿ ಹಿಂದಕ್ಕೆ ಹಾಕಲು ಸಾಧ್ಯವೊ ಅರ್ಥ ತಜ್ಞರೆ ಹೇಳಬೇಕು.

ಮೇಲಿನ ಎಲ್ಲಾ ಕಾರಣಗಳಿಂದ ಚೀನಾ ಜನಸಂಖ್ಯೆ ಬಡತನ ರೇಖೆಯಿಂದ ಮೇಲಕ್ಕೆ ಹೋಯಿತು. ಅಂದರೆ ೧೯೮೧ ರಿಂದ ೨೦೦೧ ರ ಒಳಗೆ ದಿನಕ್ಕೆ ಒಂದು ಡಾಲರ್ ಕೆಳಗೆ ವರಮಾನವಿದ್ದ ೪೦ ಕೋಟಿ ಜನರ ಆದಾಯ ಹೆಚ್ಚಾಯಿತು. ಇದಕ್ಕೆ ವಿರುದ್ಧ ಎನ್ನುವಂತೆ ಭಾರತದಲ್ಲಿ ೧೯೭೭ ರಿಂದ ೨೦೦೦ರ ಒಳಗೆ ಬಡತನ ರೇಖೆಗಿಂತ ಮೇಲಿದ್ದ ೭ ಕೋಟಿ ಜನರು ಬಡತನ ರೇಖೆಯ ಒಳಕ್ಕೆ ಬಿದ್ದುಬಿಟ್ಟರು. ಭಾರತದಲ್ಲಿ ಶೇಕಡ ೩೫ ರಷ್ಟು ಜನರ ಆದಾಯ ೧ ಡಾಲರ್‌ಗಿಂತ ಕಡಿಮೆಯಿದ್ದರೆ ಚೀನಾದಲ್ಲಿ ಶೇಕಡ ೧೭ ರಷ್ಟು ಜನರ ಆದಾಯ ಮಾತ್ರ ಇದು.



ಝಗಮಗಿಸುತ್ತಿರುವ ವಿದ್ಯುತ್ ದೀಪಗಳಲ್ಲಿ ಬೀಜಿಂಗ್ ಮೇಲುಸೇತುವೆಗಳು

ಪ್ರಪಂಚದಲ್ಲಿಯೆ ಹೆಚ್ಚು ವಿದೇಶಿ ಬಂಡವಾಳವನ್ನು ಪ್ರಸ್ತುತ ಚೀನಾದಲ್ಲಿ ಹೂಡಲಾಗುತ್ತಿದೆ. ಕಳೆದ ವರ್ಷ ೬೦ ಬಿಲಿಯನ್ ಡಾಲರ್ ವಿದೇಶಿ ಬಂಡವಾಳ

ಚೀನಾಗೆ ಹರಿದುಬಂದಿದೆ. ಇದು ಭಾರತದಲ್ಲಿ ತೊಡಗಿಸಿರುವ ಬಂಡವಾಳಕ್ಕಿಂತ ೧೨ ಪಟ್ಟು ಹೆಚ್ಚು. ಚೀನಾ ವಿದೇಶಿಯರನ್ನು ಆಕರ್ಷಿಸುತ್ತಿರುವ ವಿಷಯಗಳೆಂದರೆ ದೇಶದೊಳಗಿನ ಖರೀದಿ ಶಕ್ತಿ ಮತ್ತು ಅದರ ರಫ್ತು ಮಾಡುವ ವ್ಯವಸ್ಥೆ. ಚೀನಾ ೩೫ ಸಾವಿರ ಕಿ.ಮೀ.ದೂರದ ಎಕ್ಸ್‌ಪ್ರೆಸ್ ರಸ್ತೆಯನ್ನು ನಿರ್ಮಿಸಿದೆ. ಭಾರತದ ಎಕ್ಸ್‌ಪ್ರೆಸ್ ರಸ್ತೆ ೧೦ ಸಾವಿರ ಕಿ.ಮೀ.ಗಿಂತ ಕಡಿಮೆ. ೧೦ ಪಟ್ಟು ಹೆಚ್ಚು ಮೊಬೈಲ್ ಮತ್ತು ದೂರವಾಣಿ ವ್ಯವಸ್ಥೆಯನ್ನು ಅದು ಹೊಂದಿದೆ.

ಭಾರತಕ್ಕಿರುವ ಅನುಕೂಲತೆಗಳೆಂದರೆ ಮಧ್ಯಮ ವರ್ಗದವರ ಇಂಗ್ಲಿಷ್ ಮಾಧ್ಯಮ ವಿದ್ಯಾಭ್ಯಾಸ ಮತ್ತು ಆರ್ಥಿಕ ಮಾರುಕಟ್ಟೆ. ಆದರೆ ಚೀನಾ ಕಾರ್ಮಿಕರ ಅಪಾರ ವ್ಯವಸ್ಥಿತ ದುಡಿಮೆ ಮತ್ತು ಪ್ರಾಥಮಿಕ ಅಕ್ಷರ ಜ್ಞಾನ ದೇಶವನ್ನು ದೃಢವಾಗಿಸಿದೆ ಎನ್ನಲಾಗಿದೆ. ಭ್ರಷ್ಟತೆ ಎರಡೂ ದೇಶಗಳ ಅಭಿವೃದ್ಧಿಯನ್ನು ಕುಂಟಿತಗೊಳಿಸುತ್ತಿದೆಯಾದರು, ಭಾರತದ ಭ್ರಷ್ಟತೆ ಸಮಾಜದ ಒಂದು ಅಂಗವಾಗಿ, ಆಳವಾಗಿ ಬೇರೂರಿಬಿಟ್ಟಿದೆ. ವಿದೇಶಿ ಕಂಪನಿಗಳು ಬಂಡವಾಳ ಹೂಡುವುದರಲ್ಲಿ ಚೀನಾ ಭಾರತಕ್ಕಿಂತ ಹೆಚ್ಚು ಸರಳ ಮತ್ತು ಒಳ್ಳೆ ಬಾಂಧವ್ಯವನ್ನು ಕಾಯ್ದುಕೊಂಡಿದೆ. ಜಾಗತೀಕರಣದ ವಿಷಯದಲ್ಲಿ ಡಬ್ಲೂಟಿಓ ಜೊತೆಗೆ ಹೆಚ್ಚು ಕರಾರುವಾಕ್ಕು ಒಪ್ಪಂದಗಳನ್ನು ಮಾಡಿಕೊಂಡಿದೆ. ಭಾರತದಲ್ಲಿ ೨೦೦೨ ರಲ್ಲಿ ೬೨ ಲಕ್ಷ ಜನರು ಕಾರ್ಖಾನೆಗಳಲ್ಲಿ ಉದ್ಯೋಗ ನಿರ್ವಹಿಸುತ್ತಿದ್ದರೆ, ಚೀನಾದಲ್ಲಿ ೧೬ ಕೋಟಿ ಜನರು ಕಾರ್ಖಾನೆಗಳಲ್ಲಿ ದುಡಿಯುತ್ತಿದಾರೆ. ಪ್ರಸ್ತುತ ಚೀನಾ ದೇಶವನ್ನು ಪ್ರಪಂಚದ ಕಾರ್ಯಾಗಾರ ಎಂದು ಕರೆಯಲಾಗುತ್ತಿದೆ.

ಭಾರತದಲ್ಲಿ ೨೮ ರಾಜ್ಯಗಳಿದ್ದು, ೩೩ ಭಾಷೆಗಳು ಮತ್ತು ೧೬೫೦ ಬುಡಕಟ್ಟು ಭಾಷೆಗಳಿವೆ. ಜೊತೆಗೆ ೬ ಮುಖ್ಯ ಧರ್ಮಗಳಿವೆ. ಇವುಗಳೆಲ್ಲವನ್ನು ನಿಭಾಯಿಸುತ್ತ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಬೇಕಿದೆ. ಆದರೆ ಚೀನಾ ಸ್ವಾತಂತ್ರ್ಯಕ್ಕಿಂತ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದೆ. ಚೀನಾ ದೇಶದ ಜನರು ತಮ್ಮ ದೇಶವನ್ನು ಪ್ರಪಂಚದಲ್ಲಿ ದೃಢರಾಷ್ಟ್ರವನ್ನಾಗಿ ಮಾಡಬೇಕು ಎಂಬ ದೃಢ ಹಂಬಲದಿಂದ ಶ್ರಮಿಸುತ್ತಿದ್ದಾರೆ.

ಚೀನಾ ತನ್ನನ್ನು ಅಮೆರಿಕಾದ ಜೊತೆಗೆ ಹೋಲಿಸಿಕೊಂಡು ಮುನ್ನುಗ್ಗುತ್ತಿದ್ದರೆ, ಭಾರತ ನೆರೆಯ ಪಾಕಿಸ್ಥಾನ, ಚೀನಾ ದೇಶಗಳ ಜೊತೆಗೆ ಹೋಲಿಸಿಕೊಳ್ಳುತ್ತಿದೆ. ಭಾರತ ಐಟಿ ಉದ್ದಿಮೆಯಲ್ಲಿ ಸಾಧಿಸಿರುವ ಪ್ರಗತಿಯನ್ನು ಚೀನಾ ಎಲ್ಲಿ ನುಂಗಿಹಾಕುತ್ತದೊ ಎನ್ನುವ ಭೀತಿಗೆ ಒಳಗಾಗಿದೆ. ಚೀನಾ ೧೯೯೯ರಿಂದ ದೇಶದಾದ್ಯಂತ ಪ್ರಾಥಮಿಕ ಮಟ್ಟದಿಂದ ಇಂಗ್ಲಿಷ್ ಭಾಷೆಯನ್ನು ಕಲಿಸಿಕೊಡುತ್ತಿರುವುದು ಭಾರತವು ಸೇರಿ ಅನೇಕ ದೇಶಗಳಿಗೆ ಕಳವಳವನ್ನು ಹುಟ್ಟಿಸಿದೆ. ಇನ್ನು ಕೇವಲ ಐದಾರು ವರ್ಷಗಳಲ್ಲಿ ಇಂಗ್ಲಿಷ್ ಮಾತನಾಡುವ ಎಂಜಿನಿಯರರು, ವೈದ್ಯರು ಮತ್ತು ಇತರ ವಿಷಯಗಳ ತಂತ್ರಜ್ಞರನ್ನು ಚೀನಾ ಪ್ರಪಂಚದ ಮೇಲೆ ಬಿಡುತ್ತದೆ. ಒಟ್ಟಿನಲ್ಲಿ ಚೀನಾ ತನ್ನ ಹಳೆ ವ್ಯವಸ್ಥೆಗಳನ್ನೆಲ್ಲ ಬಿಟ್ಟು ಹೊಸ ಜಾಗತೀಕರಣಕ್ಕೆ ತನ್ನನ್ನು ತಾನು ಪೂರ್ಣವಾಗಿ ತೆರೆದುಕೊಂಡು ಫೀನಿಕ್ಸ್‌ನಂತೆ ಮೈಕೊಡವಿ ಎದ್ದಿದೆ.

*   *   *

ರಾತ್ರಿ ೧:೩೦ಕ್ಕೆ ಬರಬೇಕಿದ್ದ ಸಿಎಕ್ಸ್ ೭೫೩ ಕ್ಯಾತೆ ಏರ್‌ವೇಸ್ ೧ ಗಂಟೆ ತಡವಾಗಿ ಬಂದಿತ್ತು. ಆ ವಿಮಾನದಲ್ಲಿ ಬಂದ ಪ್ರಯಾಣಿಕರಿಗಿಂತ ಮುಂಚೆಯೆ ನಾವು ಬ್ಯಾಗೇಜ್ ಬರುವ ಸ್ಥಳಕ್ಕೆ ಟ್ರ್ಯಾಲಿಗಳ ಜೊತೆಗೆ ಹೋಗಿ ನಿಂತುಕೊಂಡೆವು. ಯುನಿಫಾರಂನಲ್ಲಿದ್ದ ಇಬ್ಬರು ಮಹಿಳೆಯರು ಓಡಿ ಬಂದು "ಯಾರು ನೀವು? ಯಾವ ಫ್ಲೈಟ್‌ನಲ್ಲಿ ಬಂದಿರಿ?" ಎಂದು ಪ್ರಶ್ನಿಸಿದರು. ವಿಷಯವನ್ನು ವಿವರಿಸಿದಾಗ "ಓಕೆ ಫೈನ್" ಎಂದರು. ಕೊನೆಗೂ ನಮ್ಮ ಬ್ಯಾಗೇಜ್‌ಗಳು ಒಂದೊಂದಾಗಿ ಬಂದು ನಾವು ಅವುಗಳನ್ನು ಸಂಗ್ರಹ ಮಾಡಿಕೊಂಡು ತಪ್ಪಿಹೋಗಿದ್ದ ಬ್ಯಾಗೇಜ್ ಡೆಸ್ಕ್ ಹತ್ತಿರಕ್ಕೆ ಹೋಗಿ ತಿಳಿಸಿದೆವು. ಅವರು ಅಲ್ಲಿಂದ ಕಸ್ಟಮ್ಸ್ ಡೆಸ್ಕ್ ಹತ್ತಿರಕ್ಕೆ ಕಳುಹಿಸಿದರು.

ಅಲ್ಲಿ ಪ್ರತಿಯೊಂದನ್ನು ಸ್ಕ್ರೀನ್ ಮಾಡಿಸಿ ಬ್ಯಾಗೇಜನ್ನು ಕ್ಲಿಯರ್ ಮಾಡಿಕೊಂಡು ಎಲ್ಲವನ್ನು ತಳ್ಳಿಕೊಂಡು ವಿಮಾನ ನಿಲ್ದಾಣದಿಂದ ಹೊರಕ್ಕೆ ಬಂದಾಗ ಬೆಳಗಿನ ಜಾವ ೩:೧೫ ಗಂಟೆ. ಕರೋಲ್‌ಬಾಗ್‌ಗೆ ಪ್ರೀಪೇಯ್ಡ್ ಟ್ಯಾಕ್ಸಿ ಕೇಳಿದಾಗ ೩೦೦ ರೂ. ಎಂದರು. ೩೦೦ ರೂ. ಕೊಟ್ಟು ಕೂಪನ್ ತೆಗೆದುಕೊಂಡು ಬಂದು ಟ್ಯಾಕ್ಸಿಯನ್ನು ಹುಡುಕಿ ಲಗೇಜ್ ಇಡುವಾಗ, ಚಾಲಕ "ಕೂಪನ್‌ನಲ್ಲಿ ೩ ಸವಾರರು ೩ ಬ್ಯಾಗುಗಳಿವೆ. ಆದರೆ ಇಲ್ಲಿ ೩ ಸವಾರರು ೭ ಬ್ಯಾಗುಗಳಿವೆ? ಬ್ಯಾಗಿಗೊಂದರಂತೆ ೪೦ ರೂ. ಹೆಚ್ಚಾಗಿ ಕೊಡಿ" ಎಂದು ತಕರಾರು ತೆಗೆದ. ಕೂಪನ್ ತೆಗೆದುಕೊಂಡ ಕಡೆ ಕೇಳಿದಾಗ ನಮಗೆ ಗೊತ್ತಿಲ್ಲ ಎನ್ನುವ ಉತ್ತರ ಬಂದಿತು. ನಮ್ಮ ದಾಸ್ ಡೆಲ್ಲಿ ತಲುಪಿದ ಆವೇಶದಲ್ಲಿ "ಏ ಬಾಯ್ ಬದ್ಮಾಸಿ ಕ್ಯೂ ಕರ್‍ತಾಹೈ?" ಎಂದು ಗುಸ್ಸಾ ತೋರಿಸಿದ. "ಹಾಳಾಗೋಗ್ಲಿ ಬಿಡು ದಾಸ್" ಎಂದು ಸಮಾಧಾನ ಮಾಡಿ ಹಿಂದಕ್ಕೆ ಕರೆದುಕೊಂಡು ಬಂದು ಟ್ಯಾಕ್ಸಿಯಲ್ಲಿ ಕೂರಿಸಿದೆ.

ಅಲ್ಲಿಂದ ಕರೋಲ್‌ಬಾಗ್‌ನ ಹೋಟಲ್ ತಲುಪುವುದರಲ್ಲಿ ಬೆಳಗಿನ ಜಾವ ೪:೧೫ ಗಂಟೆ ಆಗಿತ್ತು. ಡೆಲ್ಲಿಯಿಂದ ಹೋಗುವಾಗ ಉಳಿದುಕೊಂಡಿದ್ದ ಹೋಟಲಿಗೆ ಹೋಗಿ ಅವರನ್ನು ಎಬ್ಬಿಸಿ ಕೋಣೆ ಸೇರಿಕೊಂಡೆವು. ದಾರಿಯಲ್ಲೆ ಜಯಪುರದ ಸಿಲ್ವರ್ ಲೈನ್‌ನ ಬಸ್ಸು ನೋಡಿದ ದಾಸ್ "ಸರ್ ಇಲ್ಲಿಂದಾನೆ ಹೊರಟು ಹೋಗ್ತೀನಿ" ಎಂದು ಟ್ಯಾಕ್ಸಿ ನಿಲ್ಲಿಸಿ ಬಸ್ಸಿಡಿದು ಹೊರಟುಹೋಗಿದ್ದ. ನಾನು ಮತ್ತು ಜಗಬಂಧು ರಾತ್ರಿ ಹೋಟಲ್‌ನಲ್ಲಿ ಉಳಿದುಕೊಂಡೆವು.



ಬೆಂಗಳೂರಿಗೆ

ಬೆಳಗ್ಗೆ ೭ ಗಂಟೆಗೆ ಎದ್ದು ಸ್ನಾನ ಮಾಡಿ, ಹೊರಗೆ ಹೋಗಿ ತಿಂಡಿ ತಿಂದು ೧೦ ಗಂಟೆಗೆ ಡೆಲ್ಲಿಯ ನಮ್ಮ ಕಛೇರಿ ತಲುಪಿದೆವು. ಕಛೇರಿಯಲ್ಲಿ ಬಳ್ಳಾ ಅವರನ್ನು ಸಂಧಿಸಿ ನಮ್ಮ ಚೀನಾ ಪ್ರವಾಸದ ಬಗ್ಗೆ ಮತ್ತು ಇತರ ಅಫಿಶಿಯಲ್ ವಿಷಯಗಳನ್ನು ತಿಳಿಸಿ ಚೀನಾಗೆ ಹೋಗುವ ಮುಂಚೆ ಡೆಲ್ಲಿಯಲ್ಲಿ ಸಹಕರಿಸಿದ್ದಕ್ಕೆ ವಂದನೆಗಳನ್ನು ತಿಳಿಸಿದೆವು. ಮಧ್ಯಾಹ್ನ ರಾವತ್ ಜೊತೆಗೆ ಊಟ ಮಾಡಿ ಅವರಿಗೂ ವಂದನೆಗಳನ್ನು ತಿಳಿಸಿ ಅವರಿಗಾಗಿ ತಂದಿದ್ದ ಒಂದು ಸಣ್ಣ ಗಿಫ್ಟ್ ಕೊಟ್ಟು ೩:೩೦ ಕ್ಕೆ ವಿಮಾನ ನಿಲ್ದಾಣದಲ್ಲಿ ಇಳಿದುಕೊಂಡೆ. ಟ್ಯಾಕ್ಸಿ ಚಾಲಕ ಚಂದ್ರಕಾಂತ್‌ಗೆ ತಂದಿದ್ದ ಒಂದು ಗಿಫ್ಟ್ ಕೊಟ್ಟೆವು. ಒಂದು ತಿಂಗಳ ಕಾಲ ನನ್ನ ಜೊತೆಗಿದ್ದ ಜಗಬಂಧು "ಹರೆ ಸ್ವಾಮಿ ಸಾಬ್ ಫಿರ್ ಮುಲ್ಲಕಾತ್ ಕರೇಂಗೆ ಎಂದು" ಕೈಯನ್ನು ಜೋರಾಗಿ ಕುಲುಕಿ ಹೊಸದೆಹಲಿ ರೈಲು ನಿಲ್ದಾಣದ ಕಡೆಗೆ ಹೊರಟರು. ನಾನು ವಿಮಾನ ನಿಲ್ದಾನದಲ್ಲಿನ ಫಾರ್ಮಾಲಿಟಿಸನ್ನು ಮುಗಿಸಿ ಬೆಂಗಳೂರಿಗೆ ಹೋಗುವ ವಿಮಾನಕ್ಕಾಗಿ ಕಾಯತೊಡಗಿದೆ.

ವಿಮಾನ ೩೦ ನಿಮಿಷ ತಡವಾಗಿ ಅಂದರೆ ೫ ಗಂಟೆಗೆ ಆಕಾಶಕ್ಕೆ ಹಾರಿ ದಕ್ಷಿಣ ದಿಕ್ಕಿಗೆ ಧಾವಿಸತ್ತಿತ್ತು. ಬಲಗಡೆ ಕಿಟಕಿಯಲ್ಲಿ ಕುಳಿತು ದಿಗಂತದ ಕಡೆಗೆ ನೋಡತೊಡಗಿದೆ. ಆಕಾಶದಲ್ಲಿ ಸೂರ್ಯನು ಕಿತ್ತಲೆ ಬಣ್ಣದ ಕಿರಣಗಳಿಂದ ನಿಗನಿಗನೆ ಹೊಳೆಯುತ್ತಿರುವುದು ಕಾಣಿಸುತ್ತಿತ್ತು. ವಿಮಾನ ರೈಟ್ ಸಹೋದರರ ಒಂದು ಅದ್ಭುತ ಕೊಡುಗೆ. ಆಕಾಶದಲ್ಲಿ ಹಾರುವ ಹಕ್ಕಿಗಳಿಗೆ ಮಾತ್ರವಿದ್ದ ಈ ಅವಕಾಶವನ್ನು ಮಾನವರಿಗೂ ಕೊಡುಗೆಯಾಗಿ ನೀಡಿದ ವಿಜ್ಞಾನ ನಿಗವಾಗಿಯೂ ಅದ್ಭುತ. ಕೇವಲ ಕೆಲವು ಗಂಟೆಗಳಲ್ಲಿ ಭೂಮಿಯ ದಿಕ್ಕು ದಿಕ್ಕುಗಳನ್ನೂ ಬೆಸೆದುಬಿಡುವ ಈ ವಿಮಾನಗಳ ಹಾರಾಟ ಮಾನವನ ಬುದ್ಧಿಗೆ ಒಂದು ಸಂಕೇತ. ವಿಜ್ಞಾನಕ್ಕೆ ಮುಖ್ಯವಾಗಿ ಎರಡು ಮುಖಗಳು. ಒಂದು ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದಿಂದ ದೊರಕುವ ಸವಲತ್ತುಗಳು, ಎರಡು ಮನುಷ್ಯ, ವಿಜ್ಞಾನ ಮತ್ತು ತಂತ್ರಜ್ಞಾನವನ್ನು ದುರುಪಯೋಗಿಸಿಕೊಳ್ಳುವುದರಿಂದ ಆಗುವ

ಅನಾಹುತಗಳು. ಉದಾ: ವಿಮಾನಗಳಿಂದ ಉಂಟಾದ ಹಿರೋಶೀಮ ನಾಗಾಸಾಕಿ ದುರಂತಗಳು. ೨೦೦೦, ಸೆಪ್ಟೆಂಬರ್ ೧೧ ರಂದು ಉರುಳಿಸಿದ ಡಬ್ಲೂಟಿಓ ಕಟ್ಟಡಗಳು ಇತ್ಯಾದಿ.

ವಿಮಾನ ನೆಲದಿಂದ ಏಳುವಾಗ ಮತ್ತು ಇಳಿಯುವಾಗ ಕೆಳಗಿನ ದೃಶ್ಯಗಳು ಸುಂದರವಾಗಿ ಪಕ್ಷಿ ನೋಟದಲ್ಲಿ ಕಾಣಿಸಿಕೊಳ್ಳುತ್ತವೆ. ಅದರಲ್ಲೂ ಬೆಟ್ಟಗುಡ್ಡ ಪರ್ವತ ಶ್ರೇಣಿಗಳು, ನದಿ ನಾಗರಗಳು, ಸಮುದ್ರಗಳು ಮತ್ತು ಮಾನವ ಸೃಷ್ಟಿ ಮಹಾನಗರಗಳು ಇತ್ಯಾದಿ. ಇದೆಲ್ಲಕ್ಕಿಂತ ಮುಖ್ಯವಾಗಿ ಸೂರ್ಯನು ಪೂರ್ವ ದಿಕ್ಕಿನಲ್ಲಿ ಉದಯಿಸುವಾಗ ಮತ್ತು ಪಶ್ಚಿಮ ದಿಕ್ಕಿನಲ್ಲಿ ಮುಳುಗುವ ಹೊತ್ತಿನಲ್ಲಿ ಪ್ರತಿ ಕ್ಷಣವು ಸೃಷ್ಟಿಯಾಗುವ ದೃಶ್ಯಗಳನ್ನು ವರ್ಣಿಸಲು ಅಸಾಧ್ಯ.

ಸಾಯಂಕಾಲ ೫:೩೦ ಆಗುತ್ತಿದ್ದಂತೆ ಪಶ್ಚಿಮ ದಿಕ್ಕಿನಲ್ಲಿ ಸೂರ್ಯನ ಪ್ರತಾಪ ಕಡಿಮೆಯಾಗುತ್ತಿತ್ತು. ಸೂರ್ಯನ ಕಡೆಗೆ ಕಣ್ಣು ನೆಟ್ಟು ಕುಳಿತುಕೊಂಡೆ. ವಿಮಾನ ಸರಾಸರಿ ೩೫ ಸಾವಿರ ಅಡಿಗಳ ಮೇಲೆ ಹಾರುತ್ತಿತ್ತು. ಸಾಮಾನ್ಯವಾಗಿ ಮೋಡಗಳು ಸಮತಟ್ಟು ಪ್ರದೇಶದಲ್ಲಿ ನೆಲಕ್ಕಿಂತ ೧೦೦೦ ಮೀಟರುಗಳ ಎತ್ತರದಲ್ಲಿದ್ದು, ಪರ್ವತ ಶ್ರೇಣಿ, ಕಣಿವೆಗಳನ್ನು ಅಪ್ಪಿಕೊಂಡಿರುತ್ತವೆ. ಇಲ್ಲ ಹಾರಾಡುತ್ತಿರುತ್ತವೆ. ಗಾಳಿಯ ಹಿಡಿತದಲ್ಲಿ ಪ್ರಾಣ ಹಿಡಿದುಕೊಂಡು ಹಾರಾಡುವ ಮೋಡಗಳನ್ನು ವಿಮಾನದಲ್ಲಿ ಕುಳಿತು ವೀಕ್ಷಿಸುವುದು ಒಂದು ಅದ್ಭುತ, ರಮಣೀಯ ಅನುಭವ. ಇಂಡಿಯನ್ ಏರ್‌ಲೈನ್ಸ್ ವಿಮಾನ ಐಸಿ-೪೦೩ ಅರ್ಧಗಂಟೆಯಲ್ಲಿ ಡೆಲ್ಲಿ ಬಿಟ್ಟು ಜಾನ್ಸಿ ನಗರದ ಮೇಲೆ ಹಾರುತ್ತಿತ್ತು. ಲಕ್ಷಾಂತರ ಸಂಖ್ಯೆಯಲ್ಲಿ ಮೋಡಗಳು ಗುಂಪು ಗುಂಪಾಗಿ ಸಾಗುವ ಬಿಳಿ ಕುರಿಗಳಂತೆ, ಆನೆಗಳಂತೆ, ದೋಣಿಗಳಂತೆ, ಹತ್ತಿಯ ಸಮುದ್ರಗಳಂತೆ ವಿಮಾನದ ಕೆಳಗೆ ಮೇಳೈಸಿವೆ. ಭೂಮಿಯ ಮೇಲಿರುವ ಸಮಸ್ಥ ವೃಕ್ಷ ಸಮೂಹಕ್ಕೆ, ಪ್ರಾಣಿ ಪ್ರಪಂಚಕ್ಕೆ ಮನುಷ್ಯನ ದಾಹಕ್ಕೆ ನೀರನ್ನೊತ್ತು ಎಲ್ಲಿಗೊ ಗಾಳಿಯ ಚಾಲಕನ ಮೇರೆಗೆ ಮೆರವಣಿಗೆ ಹೊರಟಿದ್ದವು. ವಿಮಾನ ಆಗಾಗ ತನ್ನ ದಿಕ್ಕನ್ನು ಬದಲಾಯಿಸಿಕೊಂಡಾಗ ವಿಮಾನದ ರೆಕ್ಕೆಗಳು ಹಾರುತ್ತಿರುವ ಹಕ್ಕಿಯ ರೆಕ್ಕೆಗಳಂತೆ ತುಸು ಪಲ್ಲಟಗೊಂಡಂತೆ ಕಾಣಿಸಿಕೊಂಡು ಮತ್ತೆ ನೇರವಾಗುತ್ತಿದ್ದವು.

ವಿಮಾನ ಹಾರುತ್ತಿದ್ದ ಎತ್ತರಕ್ಕಿಂತ ತುಸು ಕೆಳಗೆ ಸೂರ್ಯನು ಪಶ್ಚಿಮ ದಿಕ್ಕಿನಲ್ಲಿ ಜಾರಿದಂತೆ ತೋರುತ್ತಿದ್ದು ಬಣ್ಣಗಳು ಕ್ಷಣ ಕ್ಷಣಕ್ಕೂ ಬದಲಾಗುತ್ತಿದ್ದವು. ಮಕ್ಕಳು ತಮ್ಮ ಕೈಗಳಲ್ಲಿರುವ ಕುಂಚಗಳನ್ನು ಬಣ್ಣಗಳ ತೊಟ್ಟಿಗಳಲ್ಲಿ ಅದ್ದಿಕೊಂಡು ನೀಲಿ ಕ್ಯಾನ್‌ವಾಸಿನ ಮೇಲೆ ಮನಸಿಗೆ ತೋಚಿದಂತೆ ಗೀಚುತ್ತಿರುವಂತೆ ಬಣ್ಣಗಳು ಬದಲಾಗುತ್ತಿದ್ದವು. ಸಾಗರದಂತೆ ವಿಶಾಲವಾಗಿ ಬಿದ್ದುಕೊಂಡಿರುವ ಬಿಳಿ ಮೋಡಗಳ ಮಧ್ಯ ಮಧ್ಯ ಬಂಡಾಯ ಎದ್ದಂತೆ ತೋರುವ ಕಪ್ಪು ಮೋಡಗಳು ವಿಕಾರವಾಗಿ ಯಾವುದೊ ಹಳೆ ಕಾರ್ಖಾನೆಯ ಚಿಮಣಿಯಲ್ಲಿ ಹೊರಸೂಸುವ ಅನಿಲದಂತೆ, ಸಮುದ್ರದಲ್ಲಿ ಬಾಂಬ್ ಬಿದ್ದಾಗ ಎದ್ದು ನಿಲ್ಲುವ ಅಲೆಗಳಂತೆ, ಹಡಗುಗಳಂತೆ, ಹುತ್ತಗಳಂತೆ, ಲಕ್ಷಾಂತರ ಹತ್ತಿ

ಮೂಟೆಗಳಂತೆ ಸಾವಿರಾರು ರೂಪಗಳಲ್ಲಿ ಎದ್ದು ಹೊರಟಿದ್ದವು.

ದೂರದಲ್ಲಿ ಹಿಮಾಲಯ ಪರ್ವತದ ಮಧ್ಯ ಎದ್ದು ನಿಂತಿರುವ ಮೌಂಟ್ ಎವೆರೆಸ್ಟ್ ಶಿಖರದಂತಿರುವ ಒಂದು ದೈತ್ಯಾಕಾರದ ಕಪ್ಪು ಗುಹೆಯಿಂದ ಆಗಾಗ ಮಿಂಚುಗಳು ಫಳ ಫಳನೆ ಸಿಡಿಯುತ್ತಿವೆ. ಭೂಮಿಯ ಮೇಲಿಂದ ಮೋಡಗಳಲ್ಲಿ ಮಿಂಚುವುದನ್ನು ನೋಡಿದ್ದ ನನಗೆ ಈಗ ಆಕಾಶದ ಕೆಳಗೆ ಗುಂಪು ಗುಂಪು ಮೋಡಗಳಲ್ಲಿ ಮಿಂಚುವುದನ್ನು ನೋಡಿ ಆಶ್ಚರ್ಯವಾಯಿತು. ಪ್ರಕೃತಿಯ ಎಲ್ಲಾ ಆಶ್ಚರ್ಯಗಳ ನಡುವೆ ವಿಮಾನ ಬಿಮ್ಮನೆ ಸಾಗುತ್ತಿತ್ತು. ಈ ನಡುವೆ ವಿಮಾನ ಸಿಬ್ಬಂಧಿ ಕೊಟ್ಟಿದ್ದ ತಿಂಡಿಯನ್ನು ತಿಂದು ಮುಗಿಸಿದ್ದೆ. ತಾಯ್‌ಲ್ಯಾಂಡಿನ ತಾಯ್ ಏರ್‌ವೇಸ್, ಹಾಂಗ್‌ಕಾಂಗ್‌ನ ಡ್ರ್ಯಾಗನ್ ಏರ್‌ವೇಸ್‌ನಲ್ಲಿ ದೊಡ್ಡ ದೊಡ್ಡ ಸ್ಕ್ರೀನ್‌ಗಳ ಮೇಲೆ ತೋರಿಸಿದ ಸಿನಿಮಾಗಳು ಮತ್ತು ವಿಮಾನ ಹಾರಾಟದ ಮಾಹಿತಿಗಳು, ಒಳಗೆ ಅಳವಡಿಸಿದ್ದ ಮ್ಯೂಸಿಕ್ ಸಿಸ್ಟಮ್ ಅನುಭವಿಸಿದ್ದ ನನಗೆ ಇಂಡಿಯನ್ ಏರ್‌ವೇಸ್‌ನಲ್ಲಿದ್ದ ಸವಲತ್ತುಗಳನ್ನು ನೋಡಿ ಅಯ್ಯೋ ಎನಿಸಿತು. ಜೊತೆಗೆ ಪ್ರಯಾಣಿಕರು ಕೇಳಿದ ತಿಂಡಿಗಳನ್ನು, ಸಾಫ್ಟ್ ಮತ್ತು ಹಾರ್ಡ್ ಡ್ರಿಂಕ್ಸನ್ನು ವಿಮಾನದ ಸಿಬ್ಬಂದಿ ಪ್ರಯಾಣದ ಉದ್ದಕ್ಕೂ ಪೊರೈಸುತ್ತಲೆ ಇತ್ತು. ಹಾಂಗ್‌ಕಾಂಗ್‌ನಿಂದ ಡೆಲ್ಲಿ ಕಡೆಗೆ ಹಾರಿದ್ದ ಏರ್ ಇಂಡಿಯಾದಲ್ಲಿ ಊಟದ ಜೊತೆಗೆ ಒಂದು ರೌಂಡ್ ಸಾಫ್ಟ್ ಮತ್ತು ಹಾರ್ಡ್ ಡ್ರಿಂಕ್ಸ್ ಕೊಟ್ಟು ಅನಂತರ ಕೇಳಿದಾಗ ಎಲ್ಲಾ ಮುಗಿದು ಹೋಯಿತು ಎಂದು ಕೈ ತಿರುವಿಸಿದರು. ಕೆಲವು ಭಾರತೀಯ ಪ್ರಯಾಣಿಕರಂತೂ ವಿಮಾನ ಸಿಬ್ಬಂದಿಯ ಜೊತೆಗೆ ಜಗಳ ಕಾಯತೊಡಗಿದರು.



ಇನ್‌ಸ್ಟಿಟ್ಯೂಟ್ ಆವರಣದಲ್ಲಿ

ಇಲ್ಲಿ ಇಂಡಿಯನ್ ಏರ್‌ಲೈನ್ಸ್‌ನ ವಿಮಾನ ಐಸಿ–೪೦೩ ಯಲ್ಲಿ "ಆಲ್ಕೋಹಾಲ್ ತೆಗೆದುಕೊಳ್ಳುವುದನ್ನು ನಿಷೇಧಿಸಲಾಗಿದೆ" ಎಂದು ಬರೆಯಲಾಗಿತ್ತು. ಅಂತರಾಷ್ಟ್ರೀಯ ವಿಮಾನಗಳಲ್ಲಿನ ಸೌಲತ್ತುಗಳಿಗೂ ನಮ್ಮ ದೇಶದ (ಅಂತರಾಷ್ಟ್ರೀಯ) ಏರ್ ಇಂಡಿಯಾದಲ್ಲಿನ ಸೌಲತ್ತುಗಳಿಗೂ ಅಜಗಜಾಂತರ ವ್ಯತ್ಯಾಸಗಳಿದ್ದವು. ಇನ್ನೂ ಇಂಡಿಯನ್ ಏರ್‌ಲೈನ್ಸ್ ಬಗ್ಗೆ ವಿವರಿಸಬೇಕಾಗಿಲ್ಲ. ಇದೆಲ್ಲವನ್ನು ಯೋಚಿಸುತ್ತಿದ್ದಂತೆ ಬೆಂಗಳೂರು ಮಹಾನಗರ ಆಕಾಶದ ಕೆಳಗೆ ಕಾಣಿಸಿಕೊಂಡಿತು. ಆ ದಿನ (೧೨.೧೧.೨೦೦೪) ದೀಪಾವಳಿ ಹಬ್ಬವಾದರಿಂದ ಬೆಂಗಳೂರು ಮಹಾನಗರದ ವಿದ್ಯುತ್ ದೀಪಗಳ ನಡುವೆ ಬಣ್ಣ ಬಣ್ಣದ ಪಟಾಕಿಗಳು ಸಿಡಿಯುತ್ತಿದ್ದವು. ವಿಮಾನ ನಿಧಾನವಾಗಿ ಬೆಂಗಳೂರಿನ ಮೇಲೆ ಇಳಿಯುತ್ತಿತ್ತು.

ಅಲೆಮಾರಿಯ ಹೆಜ್ಜೆಗಳು ಪ್ರವಾಸ ಕಥನ – ಪ್ರತಿಕ್ರಿಯೆಗಳು

ಈ ಮಾಲೆಯಲ್ಲಿ ಇದೀಗ 'ಅಲೆಮಾರಿಯ ಹೆಜ್ಜೆಗಳು' ಎಂಬ ಪ್ರವಾಸ ಕಥನ ಪ್ರಕಟವಾಗುತ್ತಿರುವುದು ಹರ್ಷದ ಸಂಗತಿ. ಇದರ ಲೇಖಕರಾದ ಶ್ರೀ ಎಂ.ವೆಂಕಟಸ್ವಾಮಿ ಅವರು 'ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಸಂಸ್ಥೆ'ಯ ಭೂವಿಜ್ಞಾನಿಗಳಾಗಿ ದಶಕಗಳ ಕಾಲದಿಂದ ಕಾರ್ಯ ನಿರ್ವಹಿಸಿದ್ದಾರೆ. ಭಾರತದ ಹಲವಾರು ಕಡೆ ತಮ್ಮ ಪದನಿಮಿತ್ತ ಕಾರ್ಯ ನಿರ್ವಹಿಸಿರುವ ಇವರು ತಾವು ಪರಿಚಯಿಸಿದ ಮತ್ತು ಸಂದರ್ಶಿಸಿದ ಪ್ರದೇಶಗಳನ್ನು ಒಬ್ಬ ವಿಜ್ಞಾನಿ ಹಾಗೂ ಪ್ರವಾಸಿಯ ಕಣ್ಣಿನಿಂದ ಅವಲೋಕಿಸಿ ಅಲ್ಲಿನ ಸ್ವಾರಸ್ಯಗಳನ್ನು ಈ ಕೃತಿಯಲ್ಲಿ ಕುಂಚಿಸಿದ್ದಾರೆ. ನಮ್ಮಲ್ಲಿ ಹಲವಾರು ಶ್ರೇಷ್ಠ ಪ್ರವಾಸ ಕಥನಗಳು ಪ್ರಕಟವಾಗಿವೆ. ಆದರೆ ಈ ಪ್ರವಾಸ ಕಥನ ವಿಶಿಷ್ಟ ರೀತಿಯದು. ಬೇರೆ ಬೇರೆ ಪ್ರದೇಶಗಳ ಸೌಂದರ್ಯ ಮತ್ತು ಸಾಂಸ್ಕೃತಿಕ ವೀಕ್ಷಣೆಯ ಉದ್ದೇಶದಿಂದ ಈ ಲೇಖಕರು ಅಲ್ಲಿ ಪ್ರವಾಸ ಮಾಡಿಲ್ಲ. ಇವರ ಪ್ರವಾಸ ಸರಳ ಸುಲಭವಾದುದಲ್ಲ. ಶ್ರೇಷ್ಠ ಸಾಹಸಶೀಲತೆ, ಸಂಶೋಧನಾದೃಷ್ಟಿ, ವಾಸ್ತವ ಪರಿಶೀಲನೆಪ್ರಜ್ಞೆ ಹಾಗೂ ಅನುಭವ ಪ್ರಾಮಾಣ್ಯಗಳನ್ನು ಗರ್ಭೀಕರಿಸಿಕೊಂಡ ವಸ್ತುನಿಷ್ಠ ಬರವಣಿಗೆ. ಆದ್ದರಿಂದ ಈ ಕೃತಿಯಲ್ಲಿ ಇತಿಹಾಸಕಾರನ ವಾಸ್ತವಪ್ರಜ್ಞೆ, ವಿಜ್ಞಾನಿಯ ಅನ್ವೇಷಣೆ ದೃಷ್ಟಿ, ಜೀವನ ಕುತೂಹಲಿಯ ರಹಸ್ಯ, ಶೋಧಕ ಪ್ರವೃತ್ತಿ, ಸೌಂದರ್ಯಾರಾಧಕನ ಸೃಜನಶೀಲ ಪ್ರತಿಭೆ, ಚಿತ್ರಕಾರನ ಕುಶಲ ಕುಸರಿ ಮುಂತಾದವು ಇಲ್ಲಿ ಮೇಳವಿಸಿದೆ.

–ಡಾ.ಎಚ್.ಜೆ. ಲಕ್ಕಪ್ಪಗೌಡ
ಕೃತಿಯ ಮುನ್ನುಡಿಯಿಂದ

* * *

ಎಂ. ವೆಂಕಟಸ್ವಾಮಿಯವರ ಭಾರತ ಪರ್ಯಟನದ ಕತೆ, ಲೇಖಕರು ಭೂವಿಜ್ಞಾನಿ. ತಮ್ಮ ವೃತ್ತಿ ಸಂಬಂಧವಾಗಿ ಅವರು ದೇಶದ ಹಲವು ಪ್ರಾಂತಗಳಲ್ಲಿ ಕೆಲಸ ನಿರ್ವಹಿಸಿರುವರು. ಅವರು ಸುಮಾರು ಹತ್ತು ವರ್ಷಗಳ ಕಾಲ ಕರ್ನಾಟಕದ ಹೊರಗೆ ಉತ್ತರ ಭಾರತದಲ್ಲಿ ಅಂದರೆ ಉತ್ತರ ಈಶಾನ್ಯ ಭಾರತದ ಕೆಲವು ಪ್ರದೇಶಗಳಲ್ಲಿ ಕೆಲಸ ಮಾಡಿದ ಸಂದರ್ಭದಲ್ಲಿ ಸಂಚರಿಸಿದ ಹಾಗೂ ಸಂಶೋಧನೆ ನಡೆಸಿದ ಪ್ರದೇಶಗಳ ಸುತ್ತಲಿನ ಜನರನ್ನು, ಅವರ ಪ್ರಾದೇಶಿಕ, ಸಾಂಸ್ಕೃತಿಕ ಕಲೆಗಳನ್ನು, ಅವರ ಆಚಾರ ವಿಚಾರ, ನಂಬಿಕೆಗಳು ಮತ್ತು ಅವರ ಭಾಷೆ, ವೇಷಭೂಷಣಗಳನ್ನು ಗಮನಿಸಿರುವರು. ಕುತೂಹಲಕ್ಕಾಗಿ ಮಾಹಿತಿಗಾಗಿ ಕೆಲವರನ್ನು ಸಂಪರ್ಕಿಸಿರುವರು, ಪುಸ್ತಕಗಳನ್ನು ಓದಿರುವರು. ಹೀಗೆ ತಮ್ಮಲ್ಲಿ

ತುಡಿಯುತ್ತಿದ್ದ ಅನುಭವಗಳಿಗೆ ಲೇಖಕರು ಸ್ಪಂದಿಸಿದ ರೀತಿ ಈ ಪ್ರವಾಸ ಕಥನದಲ್ಲಿ ದಾಖಲಾಗಿದೆ. ಲಖ್ನೋ ನಗರ, ಉತ್ತರಪ್ರದೇಶ, ರಾಜಸ್ಥಾನ, ನಾಗಾಲ್ಯಾಂಡ್ ಪ್ರದೇಶಗಳ ಬಗ್ಗೆ ಈ ಪ್ರವಾಸ ಕಥನದಲ್ಲಿ ಹೆಚ್ಚಿನ ವಿವರಗಳಿವೆ. ಎಂ.ವೆಂಕಟಸ್ವಾಮಿಯವರ ನವಿರಾದ ಹಾಸ್ಯ ಶೈಲಿಯಿಂದಾಗಿ ಈ ಪ್ರವಾಸ ಕಥನ ಓದಿಸಿಕೊಂಡು ಹೋಗುತ್ತದೆ.

–ಡಾ.ಎಸ್. ವಿದ್ಯಾಶಂಕರ

ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ, ಕ.ಪು.ಪ್ರಾ, ಬೆಂಗಳೂರು

* * *

ನಮ್ಮ ರಾಜ್ಯ ಸರ್ಕಾರದ ಮತ್ತು ಭಾರತ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡಿ ನಿವೃತ್ತರಾದ ಅನೇಕ ಜನರು ತಮ್ಮ ವೃತ್ತಿ ಜೀವನದ ಅನುಭವಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಾ ಬಂದಿದ್ದು ಇದೇ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಬೆಳೆಯುತ್ತಿದೆ. ಇಂತಹ ಕೃತಿಗಳಲ್ಲಿ ಪ್ರಸ್ತುತ ಪ್ರವಾಸ ಕಥೆ ಎಂದು ಹೇಳಲಾಗಿರುವ ಎಂ.ವೆಂಕಟಸ್ವಾಮಿಯವರ 'ಅಲೆಮಾರಿಯ ಹೆಜ್ಜೆಗಳು' ಎಂಬ ಈ ಕೃತಿ ಕೂಡ ಜೀವನದ ಅನುಭವಗಳನ್ನೇ ಒಳಗೊಂಡಿದೆ. ಎಂ.ವೆಂಕಟಸ್ವಾಮಿಯವರು ಕಳೆದ ಹದಿನೈದು ವರ್ಷಗಳಿಂದ 'ಜಿಯಾಲಜಿಕಲ್ ಸರ್ವೇ ಆಫ್ ಇಂಡಿಯಾ' ಸಂಸ್ಥೆಯಲ್ಲಿ ಭೂವಿಜ್ಞಾನಿಯಾಗಿ ಕೆಲಸ ಮಾಡುತ್ತಿದ್ದಾರೆ. ಈ ಕೃತಿಯಲ್ಲಿ ಅವರು ವೃತ್ತಿಯ ಅಂಗವಾಗಿ ಭಾರತದ ವಿವಿಧ ಸ್ಥಳಗಳಲ್ಲಿ, ಮುಖ್ಯವಾಗಿ ಉತ್ತರ ಪ್ರದೇಶ ಮತ್ತು ನಾಗಾಲ್ಯಾಂಡ್‌ನಲ್ಲಿ ನೆಲೆಸಿದ್ದಾಗ ತಾವು ನೋಡಿದ ಪ್ರದೇಶಗಳು ಮತ್ತು ಒಡನಾಡಿದ ಜನರ ಬಗ್ಗೆ ಬರೆದಿದ್ದಾರೆ.

ಹತ್ತೊಂಬತ್ತು ಅಧ್ಯಾಯಗಳಲ್ಲಿ ರೂಪಿತವಾಗಿರುವ ಈ ಅನುಭವ ಕಥನವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲನೆ ಭಾಗದಲ್ಲಿ ಸ್ವಾಮಿಯವರು ತಾವು ವಾಸಿಸುತ್ತಿದ್ದ ಲಖನೌ ನಗರ ಮತ್ತು ತಮ್ಮ ತರಬೇತಿಯ ಅಂಗವಾಗಿ ಒಂದೆರಡು ತಿಂಗಳು ಇದ್ದ ಬಿಹಾರದ ಝರಿಯಾದ ಕಲ್ಲಿದ್ದಲು ಗಣಿಗಳು, ರಾಜಸ್ಥಾನದ ಜಾವರ್‌ನ ಸೀಸ ಮತ್ತು ಸತುವಿನ ಗಣಿಗಳು, ಕಾಶ್ಮೀರದ ಆಹಿಶ್‌ಮುಖಮ್ ಪ್ರದೇಶ ಮತ್ತು ಹೈದರಾಬಾದ್‌ನಗರ ಮತ್ತು ಈ ಎಲ್ಲಾ ಪ್ರದೇಶಗಳ ಸುತ್ತಲಿನ ಪ್ರೇಕ್ಷಣೀಯ ಸ್ಥಳಗಳನ್ನು ವರ್ಣಿಸಿದ್ದಾರೆ.

ಎರಡನೆ ಭಾಗದಲ್ಲಿ ಉತ್ತರ ಪ್ರದೇಶದ ಮಿರ್ಜಾಪುರ ಜಿಲ್ಲೆಯ ಛೋಪಾನ್ ಮತ್ತು ಗೋರಾವಲ್ ಎಂಬ ಹಳ್ಳಿಗಳಲ್ಲಿ ಹಲವಾರು ತಿಂಗಳುಗಳ ಕಾಲ ನೆಲೆಸಿ ಸುತ್ತಮುತ್ತಲಿನ ಕ್ಷೇತ್ರಗಳಲ್ಲಿ ಶೋಧನೆ ನಡೆಸುವಾಗ ಲೇಖಕರಿಗೆ ಒದಗಿ ಬಂದ ಅನುಭವಗಳನ್ನು ನಿರೂಪಿಸಿದ್ದಾರೆ. ಉತ್ತರ

ಬಾರತದ ಜನಜೀವನ ಮತ್ತು ಅಲ್ಲಿನ ಭಾಷೆಗಳ ಬಗ್ಗೆ ಲೇಖಕರ ವಿಚಾರಗಳು ಇಲ್ಲಿ ಮಂಡಿತವಾಗಿವೆ. ಕಾಶಿ ಪಟ್ಟಣ ಮತ್ತು ಅಲ್ಲಿನ ವಿಶ್ವನಾಥ ಮಂದಿರವನ್ನು ಸಂದರ್ಶಿಸಿದಾಗ ಎಲ್ಲಾ ಪ್ರವಾಸಿಗಳಿಗಾಗುವಂತೆ ಲೇಖಕರಿಗೂ, ಅಲ್ಲಿನ ಗಲೀಜು ಮತ್ತು ಪಂಡಾಗಳ ಸ್ವಾರ್ಥಪರ ನಡವಳಿಕೆ ಭ್ರಮನಿರಸನ ಉಂಟು ಮಾಡುತ್ತದೆ.

ಮೂರನೇ ಬಾಗದಲ್ಲಿ ನಾಗಾಲ್ಯಾಂಡ್‌ನ ದಿಮಾಪುರ ಪಟ್ಟಣದ ವಾಸ್ತವ್ಯ ಮತ್ತು ಕ್ಷೇತ್ರಾಧ್ಯಯನಕ್ಕಾಗಿ ಆ ರಾಜ್ಯದ ದುರ್ಗಮ ಬೆಟ್ಟಗಳಲ್ಲಿ ನಡೆಸಿದ ಪ್ರವಾಸದ ಅನುಭವಗಳನ್ನು ಹೇಳಲಾಗಿದೆ. ಜೊತೆಗೆ ನಾಗಾ ಜನರ ಹಿಂದಿನ ಸಾಂಸ್ಕೃತಿಕ ಇತಿಹಾಸ ಮತ್ತು ಅವರ ಊಟೋಪಚಾರಗಳ ವಿಶಿಷ್ಟತೆಯ ಬಗ್ಗೆಯೂ ಇಲ್ಲಿ ವಿವರಗಳಿವೆ.

ಭಾರತೀಯರು ತಮ್ಮ ಜಾತಿ, ಮತ, ಭಾಷೆ ಮತ್ತು ಪ್ರದೇಶಗಳ ಜನರ ಜೊತೆಗೆ ಮಾತ್ರ ಆತ್ಮೀಯವಾಗಿತ್ತಾರೆ ಮತ್ತು ಇತರರೊಡನೆ ಬೇಧ ಭಾವದಿಂದ ವರ್ತಿಸುತ್ತಾರೆ ಎಂಬುದು ಒಂದು ಜನಪ್ರಿಯವಾದ ಆಪಾಧನೆ. ಆದರೆ ವೆಂಕಟಸ್ವಾಮಿಯವರ ಈ ಕೃತಿಯಲ್ಲಿ ನಾಗಾಲ್ಯಾಂಡ್‌ನಲ್ಲಿ ಸ್ಥಳೀಯರು ಅಲ್ಲಿ ಹೊರಗಿನಿಂದ ಬಂದು ನೆಲೆಸಿರುವ ಬಾರತೀಯರ ಬಗ್ಗೆ ತೋರುವ ತೀವ್ರ ವಿರೂಧವನ್ನು ಬಿಟ್ಟರೆ ಇನ್ನೆಲ್ಲಾ ಕಡೆ ಜನರು ಸ್ನೇಹಭಾವದಿಂದಲೆ ವರ್ತಿಸುವುದನ್ನೇ ನೋಡುತ್ತೇವೆ. ಲಖನೌದಲ್ಲಿ ವೆಂಕಟಸ್ವಾಮಿಯವರು ತಮ್ಮ ಸಂಸ್ಥೆಗೆ ಕೆಲಸಕ್ಕೆ ರಿಪೋರ್ಟ್ ಮಾಡಿಕೊಳ್ಳಲು ಹೋದ ಮೊದಲ ದಿನ ಅವರ ಎಲ್ಲಾ ಸಹೋದ್ಯೋಗಿಗಳು ಆತ್ಮೀಯವಾಗಿ ನಡೆದುಕೊಳ್ಳುವುದನ್ನು ನೋಡುತ್ತೇವೆ.

ಭೋಪಾನ್ ಎಂಬ ಹಳ್ಳಿಯಲ್ಲಿದ್ದಾಗ ಅಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರಾಗಿದ್ದ ಡಾ.ದಶರತ್‌ಸಿಂಗ್ ಎಂಬ ವೈದ್ಯರು ಮತ್ತು ಅವರ ಕುಟುಂಬದವರು ಲೇಖಕರ ಕುಟುಂಬದವರೊಡನೆ ಬಹಳ ಅನ್ಯೋನ್ಯವಾದ ಸಂಬಂಧವನ್ನು ಬೆಳೆಸುತ್ತಾರೆ. ಅಲ್ಲಿಗೆ ಶೋಧನೆಗಾಗಿ ಬಂದ ಹಿರಿಯ ಭೂವಿಜ್ಞಾನಿ ಮಹೇಂದ್ರಸಿಂಗ್ ಅವರೂ ಇದೇ ರೀತಿಯ ಸ್ನೇಹಭಾವದಿಂದ ನಡೆದುಕೊಳ್ಳುತ್ತಾರೆ. ಲೇಖಕರಿಗೆ ಸಂಕುಚಿತ ಮನೋಭಾವದ ಜನರು ಎದುರಾಗುವುದೇ ಇಲ್ಲ ಎಂದಲ್ಲ. ಭಾರತೀಯ ಭೂಪಟ ಉತ್ತರದಿಂದ ದಕ್ಷಿಣಕ್ಕೆ ಹೋಗುತ್ತಾ ಸಂಕುಚಿತಗೊಳ್ಳುವಂತೆ ದಕ್ಷಿಣದ ಜನರ ಮನಸ್ಸು ಸಂಕುಚಿತವಾದದ್ದು ಎಂದು ಸ್ವಾಮಿಯವರಿಗೆ ನಂಬಿಯಾರ್ ಹೇಳುತ್ತಾರೆ. ಈ ನಂಬಿಯಾರ್ ಅವರ ತಂದೆ ದಕ್ಷಿಣದವರಾದರೆ ತಾಯಿ ಉತ್ತರದವರು.

ನಾಗಾಲ್ಯಾಂಡಿನಲ್ಲಿನ ನಾಗಾಗಳು ಅಲ್ಲಿ ನೆಲೆಸಿರುವ ಕೆಳವರ್ಗದ ಭಾರತೀಯರ ಮೇಲೆ ಯಾವ ರೀತಿಯಲ್ಲಿ ದಬ್ಬಾಳಿಕೆ ನಡೆಸುತ್ತಾರೆ

ಎಂಬುದನ್ನು ಲೇಖಕರು ಇಲ್ಲಿ ನಿರೂಪಿಸಿರುವ ಎರಡು ಪ್ರಸಂಗಗಳಲ್ಲಿ ಒಬ್ಬ ಲಾರಿ ಚಾಲಕ ಮತ್ತು ಒಬ್ಬ ಬಿಹಾರಿ ವ್ಯಾಪಾರಿಯನ್ನು ನಾಗಗಳು ವಿನಾ ಕಾರಣ ಥಳಿಸುವುದನ್ನು ನೋಡುತ್ತೇವೆ. ಒಮ್ಮೆ ಸ್ವಾಮಿಯವರು ಅವರ ಒರಿಯಾ ಸಹೋದ್ಯೋಗಿಯೊಂದಿಗೆ ಗೆಸ್ಟ್‌ಹೌಸ್ ಒಂದರಲ್ಲಿ ಮಲಗಿದ್ದಾಗ ಅಲ್ಲಿಗೆ ಒಬ್ಬ ಗಂಡಸಿನೊಡನೆ ಬಂದ ಇಬ್ಬರು ನಾಗಾ ಯುವತಿಯರು ನಯವಾಗಿಯೇ ಇವರಿಬ್ಬರಿಂದ ಹಣ ಕಸಿಯುವ ಘಟನೆಯೂ ಇಲ್ಲಿ ನಿರೂಪಿತವಾಗಿದೆ.

ಈ ಕೃತಿಯಲ್ಲಿ ನಡೆದಿರುವ ಘಟನೆಗಳೆಲ್ಲ ನಡೆದು ಹತ್ತು ಹದಿನಾಲ್ಕು ವರ್ಷಗಳೆ ಕಳೆದು ಹೋಗಿದ್ದರೂ ವೆಂಕಟಸ್ವಾಮಿಯವರು ಅವುಗಳನ್ನು ನೆನ್ನೆ ಮೊನ್ನೆ ನಡೆದ ಘಟನೆಗಳೇನೋ ಎಂಬಂತೆ ಸೂಕ್ಷ್ಮವಾದ ವಿವರಗಳ ಮೂಲಕ ಅನಾವರಣಗೊಳಿಸಿದ್ದಾರೆ. ತಾವು ಓಡಾಡಿದ ಪ್ರದೇಶಗಳ ಪರಿಸರ ಮತ್ತು ತಮ್ಮ ಒಡನಾಡಿಗಳ ನಡೆ ನುಡಿಗಳನ್ನು ಓದುಗರ ಕಣ್ಣಿಗೆ ಕಟ್ಟುವಂತೆ ವಿವರಿಸುವ ಲೇಖಕರ ಪ್ರತಿಭೆ ಮೆಚ್ಚುಗೆಯಾಗುತ್ತದೆ. ಕೃತಿಯುದ್ದಕ್ಕೂ ಲೇಖಕರ ನವಿರಾದ ಹಾಸ್ಯ ಪ್ರಜ್ಞೆ ಎದ್ದು ಕಾಣುತ್ತದೆ. ವಿವಾಹವಾಗಿ ಒಂದು ಮಗುವಿನ ತಂದೆಯಾಗಿದ್ದರೂ ಈ ಕೃತಿಯಲ್ಲಿ ಅವರ ವ್ಯಕ್ತಿತ್ವ ಜೀವನದ ಎಲ್ಲ ಅನುಭವಗಳಿಗೂ ಮುಕ್ತವಾಗಿ ತೆರೆದುಕೊಂಡ ಜೀವನೋತ್ಸಾಹಿ ಯುವಕನಂತೆ ಮೂಡಿಬಂದಿದೆ.

ಒಟ್ಟಿನಲ್ಲಿ ವೆಂಕಟಸ್ವಾಮಿಯವರು ತಮ್ಮ ಈ ಲವಲವಿಕೆಯಿಂದ ಕೂಡಿದ ಬರವಣಿಗೆಯ ಮೂಲಕ ನಮ್ಮ ದೇಶದ ಭೌಗೋಳಿಕ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಈ ಪುಸ್ತಕವನ್ನು ಓದಿದ ಮೇಲೆ ಅವರ ಮುಂದಿನ ಪ್ರಕಟಣೆಗಳಿಗಾಗಿ ನಿರೀಕ್ಷಿಸುವಂತಾಗುತ್ತದೆ.

– ಗಿರೀಶ್ ವಾಘ್
ಕನ್ನಡಪ್ರಭ ದಿನ ಪತ್ರಿಕೆ



ಎಂ.ವೆಂಕಟಸ್ವಾಮಿ ವೃತ್ತಿಯಿಂದ ಭೂವಿಜ್ಞಾನಿ.
ಇವರ ಹಲವು ಕತೆ, ಕಾದಂಬರಿ, ವಿಜ್ಞಾನ, ವೈಚಾರಿಕ,
ಕಾವ್ಯ ಮತ್ತು ಪ್ರವಾಸ ಕತೆಗಳು ಪ್ರಕಟವಾಗಿವೆ.
ಚೀನಾ ದೇಶ ಪ್ರವಾಸ ಮಾಡಿದ ಹಿನ್ನೆಲೆಯಲ್ಲಿ
"ಡ್ರ್ಯಾಗನ್ಸ್ ಮಹಾಗೋಡೆಯೊಳಗೆ"
ಪ್ರವಾಸ ಕಥನ ಪ್ರಕಟಗೊಂಡಿದೆ.

ಇಂದಿನ ಆಧುನಿಕ ಜಗತ್ತನ್ನು ಒಂದು ಜಾಗತಿಕ ಹಳ್ಳಿ ಎಂದು ಕರೆಯಲಾಗುತ್ತಿದೆ. ಆದರೂ ಕಣ್ಣು ಮತ್ತು ಹೃದಯ ತೆರೆದುಕೊಂಡು ಸೂಕ್ಷ್ಮವಾಗಿ ಗಮನಿಸಿದಾಗ ಮಾತ್ರ ವಾಸ್ತವ ಸಂಗತಿಗಳು ಅರ್ಥವಾಗುತ್ತವೆ. ಚೀನಾ ದೇಶ ಇತ್ತೀಚಿನವರೆಗೂ ಪ್ರಪಂಚಕ್ಕೆ ಬಲು ದೂರ ಮತ್ತು ನಿಗೂಢವಾಗಿ ಉಳಿದುಕೊಂಡಿತ್ತು. ಅಮೆರಿಕ, ರಷ್ಯಾ ಮತ್ತು ಯುರೋಪ್ ದೇಶಗಳ ಬಗ್ಗೆ ದೊರಕುವಷ್ಟು ಮಾಹಿತಿ ಚೀನಾ ಬಗ್ಗೆ ಕನ್ನಡದಲ್ಲಿ ದೊರಕುವುದಿಲ್ಲ.

ವೆಂಕಟಸ್ವಾಮಿಯವರಿಗೆ ಇರುವ ಅಪಾರ ಅನುಭವ, ಜೀವನಕುತೂಹಲ ರಹಸ್ಯ, ಸಂಶೋಧನಾ ದೃಷ್ಟಿ, ಪರಶೀಲನಾಶಕ್ತಿ ಮತ್ತು ವೈಜ್ಞಾನಿಕ ಹಿನ್ನೆಲೆಯಿಂದ ಈ ಕೃತಿಯನ್ನು ಅಪರೂಪವಾಗಿ ಅನಾವರಣಗೊಳಿಸಿದ್ದಾರೆ. ಒಟ್ಟಿನಲ್ಲಿ ಕನ್ನಡದಲ್ಲಿ ಚೀನಾ ಬಗ್ಗೆ ಇದೊಂದು ಮಹತ್ತರವಾದ ಪ್ರವಾಸ ಕಥನವಾಗಿದೆ.

– ನಿಡಸಾಲೆ ಪುಟ್ಟಸ್ವಾಮಯ್ಯ

ಜಾಗೃತಿ ಪ್ರಿಂಟರ್ಸ್
ನಂ.56/1-6, ನರಸಿಂಹಯ್ಯ ಗಾರ್ಡನ್
ಕೊಟ್ಟಿಗೆಪಾಳ್ಯ, ಮಾಗಡಿ ಮುಖ್ಯರಸ್ತೆ,
ಬೆಂಗಳೂರು – 560 091